compose.kerala.gov.in
egazette.kerala.gov.in
printing.kerala.gov.in

Regn.No. KERBIL/2012/45073
dated 2012-09-05 with RNI
Reg No.KL/TV(N)/634/2021-2023

കേരള സർക്കാർ
GOVERNMENT OF KERALA

കേരള ഗസറ്റ്
KERALA GAZETTE

ആധികാരികമായി പ്രസിദ്ധപ്പെടുത്തുന്നത്
PUBLISHED BY AUTHORITY

ചൊവ്വ, 2025 ഒക്ടോബർ 21
Tuesday, 21st October 2025

1201 തുലാം 4
4th Thulam 1201

1947 ആശ്വിനം 29
29th Aswina 1947

വാല്യം 14
Vol. XIV

നമ്പർ / **No.** **42**

Part I -Section (iii)

Law Department

©
കേരള സർക്കാർ
GOVERNMENT OF KERALA
2025

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 15(1)/ಲೆಗ್. ಎ2/2023/ಕಾನೂನು. ತಿರುವನಂತಪುರಂ, *2023 ಮಾರ್ಚ್ 28, 1198 ಮೀನಾ 14/ 1945 ಚೈತ್ರ 7.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2023 ಮಾರ್ಚ್ 27ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ವಿ. ಹರಿ ನಾಯರ್,

ಕಾನೂನು ಕಾರ್ಯದರ್ಶಿ.

2023ರ 17ನೇ ಅಧಿನಿಯಮ

2023ರ ಕೇರಳ ಆರ್ಥಿಕ ಅಧಿನಿಯಮ

2023-2024ನೇ ಆರ್ಥಿಕ ವರ್ಷಕ್ಕಿರುವ ಕೇರಳ ಸರಕಾರದ ಕೆಲವು ಆರ್ಥಿಕ ಪ್ರಸ್ತಾವನೆಗಳಿಗೆ ಪ್ರಾಬಲ್ಯ ನೀಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—2023-2024ನೇ ಆರ್ಥಿಕ ವರ್ಷಕ್ಕಿರುವ ಕೇರಳ ಸರಕಾರದ ಕೆಲವು ಆರ್ಥಿಕ ಪ್ರಸಾವನೆಗಳಿಗೆ ಪ್ರಾಬಲ್ಯ ನೀಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2023ರ ಕೇರಳ ಆರ್ಥಿಕ ಅಧಿನಿಯಮವೆಂದು ಕರೆಯಬಹುದು.

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನು ಹೊರತುಪಡಿಸಿ,—

(ಎ) ವಿಭಾಗ 11 ಅಧಿಕೃತ ಗಜೆಟ್ ಅಧಿಸೂಚನೆಯ ಮುಖೇನ ಸರಕಾರವು ಗೊತ್ತುಪಡಿಸುವ ದಿನಾಂಕದಂದು ಜಾರಿಗೆ ಬರುವುದಾಗಿದೆ:

ಆದರೆ ಈ ಖಂಡದ ವ್ಯತ್ಯಸ್ಥ ಉಪಬಂಧಗಳಿಗೆ ವ್ಯತ್ಯಸ್ಥವಾದ ದಿನಾಂಕಗಳನ್ನು ನಿಶ್ಚಯಿಸಬಹುದಾಗಿದೆ, ಹಾಗೂ ಈ ಅಧಿನಿಯಮದ ಪ್ರಾರಂಭಕ್ಕೆ ಸಂಬಂಧಿಸಿ ಅಂತಹ ಯಾವುದೇ ನಿಬಂಧನೆಗಳ ಯಾವುದೇ ಉಲ್ಲೇಖವು, ಪ್ರಸ್ತುತ ನಿಬಂಧನೆಯ ಪ್ರಾಭಲ್ಯಕ್ಕೆ ಸಂಬಂಧಿಸಿದ ಒಂದು ಉಲ್ಲೇಖವಾಗಿ ವ್ಯಾಖ್ಯಾನಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(ಬ) ಈ ಅಧಿನಿಯಮದ ಉಳಿದ ಉಪಬಂಧಗಳು 2023 ಎಪ್ರಿಲ್ 1ನೇ ದಿನಾಂಕದಂದು ಜಾರಿಗೆ ಬರುವುದಾಗಿದೆ.

2. 1955ರ XIIನೇ ಅಧಿನಿಯಮದ ತಿದ್ದುಪಡಿ.—1955ರ ತಿರುವಾಂಕೂರ್-ಕೊಚ್ಚಿನ್ ಸಾಹಿತ್ಯ ವೈಜ್ಞಾನಿಕ ಮತ್ತು ಧಾರ್ಮಿಕ ಸಂಘಗಳ ನೋಂದಣಿ (1955ರ XII) ಅಧಿನಿಯಮ,—

(1) ವಿಭಾಗ 5ರಲ್ಲಿ "ಒಂದು ಸಾವಿರ ರೂಪಾಯಿಗಳು" ಎಂಬ ಪದಗಳ ಬದಲು "ಒಂದು ಸಾವಿರದ ಐನೂರು ರೂಪಾಯಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(2) ವಿಭಾಗ 6ರ, ಉಪ-ವಿಭಾಗ (4)ರಲ್ಲಿ "ಐವತ್ತು ರೂಪಾಯಿಗಳು" ಎಂಬ ಪದಗಳ ಬದಲು "ಎಪ್ಪತ್ತೈದು ರೂಪಾಯಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(3) ವಿಭಾಗ 7ರ, ಉಪ-ವಿಭಾಗ (5)ರಲ್ಲಿ "ಇನ್ನೂರು ರೂಪಾಯಿಗಳು" ಎಂಬ ಪದಗಳ ಬದಲು "ಮುನ್ನೂರು ರೂಪಾಯಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(4) ವಿಭಾಗ 12ರ, ಉಪ-ವಿಭಾಗ (2)ರಲ್ಲಿ "ಇನ್ನೂರು ರೂಪಾಯಿಗಳು" ಎಂಬ ಪದಗಳ ಬದಲು "ಮುನ್ನೂರು ರೂಪಾಯಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(5) ವಿಭಾಗ 13ರ, ಉಪ-ವಿಭಾಗ (5)ರಲ್ಲಿ "ಇನ್ನೂರು ರೂಪಾಯಿಗಳು" ಎಂಬ ಪದಗಳ ಬದಲು "ಮುನ್ನೂರು ರೂಪಾಯಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(6) ವಿಭಾಗ 15ರ, ಉಪ-ವಿಭಾಗ (2)ರಲ್ಲಿ "ಇನ್ನೂರು ರೂಪಾಯಿಗಳು" ಎಂಬ ಪದಗಳ ಬದಲು "ಮುನ್ನೂರು ರೂಪಾಯಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(7) ವಿಭಾಗ 22ರ, ಉಪ-ವಿಭಾಗ (2)ರಲ್ಲಿ "ಇನ್ನೂರು ರೂಪಾಯಿಗಳು" ಎಂಬ ಪದಗಳ ಬದಲು "ಮುನ್ನೂರು ರೂಪಾಯಿಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(8) ವಿಭಾಗ 31ರಲ್ಲಿ, "ಹತ್ತು ರೂಪಾಯಿಗಳು" ಎಂಬ ಪದಗಳ ಬದಲು "ಹದಿನೈದು ರೂಪಾಯಿಗಳು" ಎಂಬ ಪದಗಳನ್ನೂ "ಐದು ರೂಪಾಯಿಗಳು" ಎಂಬ ಪದಗಳ ಬದಲು "ಹತ್ತು ರೂಪಾಯಿಗಳು" ಎಂಬ ಪದಗಳನ್ನೂ ಸೇರಿಸತಕ್ಕದ್ದು;

(9) ವಿಭಾಗ 31ಎ ಯ ಬದಲು ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"31ಎ. ಅಧಿನಿಯಮದ ಪ್ರಕಾರ ಬಾಕಿಯಾದ ಶುಲ್ಕಗಳ ಏಕಕಾಲ ತೀರ್ಪುಗೊಳಿಸುವಿಕೆ.—(1) ಒಂದು ಸಂಘದ ರಿಟರ್ನುಗಳ, ಫಾರಂಗಳ, ವಾರ್ಷಿಕ ವರದಿಗಳ, ಲೆಕ್ಕಗಳ, ಇತರ ವರದಿಗಳ ಇತ್ಯಾದಿಗಳ ಸಲ್ಲಿಕೆಯಲ್ಲಿ ಉಂಟಾಗುವ ಕಾಲವಿಳಂಬವನ್ನು ಮನ್ನಿಸಬಹುದಾಗಿದೆ ಮತ್ತು ಸರಕಾರವು ಕಾಲಾಕಾಲಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತಹ ಕಾಲಾವಧಿಯೊಳಗೆ ಕೆಳಗೆ ಸೂಚಿಸಿದ ದಂಡವನ್ನು ಪಾವತಿಸುತಾ ಪ್ರಸ್ತುತ ದಾಖಲೆಗಳ ಸಲ್ಲಿಸುವಿಕೆಯನ್ನು ಕ್ರಮಬದ್ಧಗೊಳಿಸಬಹುದಾಗಿದೆ.

(2) ಉಪ-ವಿಭಾಗ (1)ರ ಪ್ರಕಾರ ಪಾವತಿಸಬೇಕಾದ ದಂಡ ಮೊತ್ತವು ಈ ಕೆಳಗಿನಂತೆ ಆಗಿರುವುದು:—

(ಎ) ಒಂದು ವರ್ಷಕ್ಕಿಂತ ಮೀರದ ಕಾಲವಿಳಂಬಕ್ಕೆ : 200 ರೂ;

(ಬಿ) ಒಂದು ವರ್ಷಕ್ಕಿಂತ ಮೀರಿದ ಆದರೆ 2 ವರ್ಷಕ್ಕಿಂತ ಮೀರದ ಕಾಲವಿಳಂಬಕ್ಕೆ : ಪ್ರತಿವರ್ಷ 500 ರೂ;

(ಸಿ) ಎರಡು ವರ್ಷಕ್ಕಿಂತ ಮೀರಿದ ಆದರೆ 5 ವರ್ಷಕ್ಕಿಂತ ಮೀರದ ಕಾಲವಿಳಂಬಕ್ಕೆ : ಪ್ರತಿವರ್ಷ 750 ರೂ;

(ಡಿ) ಐದು ವರ್ಷಕ್ಕಿಂತ ಮೀರಿದ ಕಾಲವಿಳಂಬಕ್ಕೆ : ಪ್ರತಿವರ್ಷ 1000 ರೂ.".

3. 1959ರ 17ನೇ ಅಧಿನಿಯಮದ ತಿದ್ದುಪಡಿ.—1959ರ ಕೇರಳ ಸ್ಟ್ಯಾಂಪ್ ಅಧಿನಿಯಮ (1959ರ 17)ದ ಅನುಸೂಚಿಯಲ್ಲಿ,—

(ಎ) ಕ್ರಮನಂಬ್ರ 21ರ ಮತ್ತು ಅದರ ಎದುರಿನ (2) ಮತ್ತು (3)ನೇ ಕಾಲಂಗಳಲ್ಲಿನ ನಮೂದಿನ ಮತ್ತು ಅದರ ವಿವರಣೆಯ ಬದಲು ಈ ಕೆಳಗಿನ ಕ್ರಮ ನಂಬ್ರವನ್ನು ಹಾಗೂ ನಮೂದನ್ನು ಅನುಕ್ರಮವಾಗಿ ಸೇರಿಸತಕ್ಕದ್ದು:—

This is a digitally signed Gazette.
Authenticity may be verified through https://compose.kerala.gov.in/

"21. 22ನೇ ನಂಬ್ರದಲ್ಲಿ ಹೇಳಿರುವ ವರ್ಗಾವಣೆ ಪತ್ರ ಅಲ್ಲದ ಮತ್ತು 55ನೇ ನಂಬ್ರ ಪ್ರಕಾರ ಸ್ಟ್ಯಾಂಪು ಶುಲ್ಕ ವಿಧಿಸಿದುದೋ ಹೊರತುಪಡಿಸಿದುದೋ ಆದ ಒಂದು ವರ್ಗಾವಣೆ ಅಲ್ಲದ 2(ಡಿ) ವಿಭಾಗದಲ್ಲಿ ನಿರ್ವಚಿಸಿದಂತಹ ವರ್ಗಾವಣೆ ಪತ್ರ	ಅಂತಹ ವರ್ಗಾವಣೆ ಪತ್ರಕ್ಕೆ ಸಂಬಂಧಿಸಿದ ಭೂಮಿಯ ನ್ಯಾಯಯುತ ಬೆಲೆ ಅಥವಾ ಯುಕ್ತ ಬೆಲೆಯ ಮೊತ್ತವೋ ಮೌಲ್ಯವೋ ಇದರಲ್ಲಿ ಯಾವುದು ಹೆಚ್ಚೋ ಅದರ 100 ರೂಪಾಯಿಗೋ ಅದರ ಭಾಗಕ್ಕೋ ಎಂಟು ರೂಪಾಯಿ.";

(ಬ) ಕ್ರಮ ನಂಬ್ರ 22ರ ಮತ್ತು ಅದರ ಎದುರಿನ (2) ಮತ್ತು (3)ನೇ ಕಾಲಂಗಳ ನಮೂದಿನ ಮತ್ತು ಅದರ ವಿವರಣೆಯ ಬದಲು ಈ ಕೆಳಗಿನ ಕ್ರಮ ನಂಬ್ರವನ್ನು ಮತ್ತು ನಮೂದನ್ನು ಅನುಕ್ರಮವಾಗಿ ಸೇರಿಸತಕ್ಕದ್ದು, ಅದೇನೆಂದರೆ:—

"22. 55ನೇ ನಂಬ್ರ ಪ್ರಕಾರ ಸ್ಟಾಂಪು ಶುಲ್ಕ ವಿಧಿಸಿದುದೋ ಹೊರತುಪಡಿಸಿದುದೋ ಆದ ಒಂದು ವರ್ಗಾವಣೆ ಅಲ್ಲದ 2(ಡಿ) ವಿಭಾಗದಲ್ಲಿ ನಿರ್ವಚಿಸಿದಂತಹ ವರ್ಗಾವಣೆ ಪತ್ರದ ಸ್ಥಿರಾಸ್ತಿ ನೆಲೆಸಿರುವ,—	
(i) ಮುನಿಸಿಪಾಲಿಟಿಗಳು/ಟೌನ್‌ಶಿಪ್‌ಗಳು/ಕಾರ್ಪೋರೇಶನುಗಳು ಅಲ್ಲದ ಕಂಟೋನ್‌ಮೆಂಟ್‌ಗಳು ಇತ್ಯಾದಿಗಳೊಳಗಾಗಿದ್ದಲ್ಲಿ	ಅಂತಹ ವರ್ಗಾವಣೆ ಪತ್ರಕ್ಕೆ ಸಂಬಂಧಿಸಿದ ನ್ಯಾಯಯುತ ಬೆಲೆ ಅಥವಾ ಯುಕ್ತ ಬೆಲೆಯ ಮೊತ್ತವೋ ಮೌಲ್ಯವೋ ಇದರಲ್ಲಿ ಯಾವುದು ಹೆಚ್ಚೋ ಅದರ 100 ರೂಪಾಯಿಗೋ ಅದರ ಭಾಗಕ್ಕೋ ಎಂಟು ರೂಪಾಯಿ;
(ii) ಮುನಿಸಿಪಾಲಿಟಿಯ ಒಳಗೆ	ಅಂತಹ ವರ್ಗಾವಣೆ ಪತ್ರಕ್ಕೆ ಸಂಬಂಧಿಸಿದ ಭೂಮಿಯ ನ್ಯಾಯಯುತ ಬೆಲೆ ಅಥವಾ ಯುಕ್ತ ಬೆಲೆಯ ಮೊತ್ತವೋ ಮೌಲ್ಯವೋ ಇದರಲ್ಲಿ ಯಾವುದು ಹೆಚ್ಚೋ ಅದರ 100 ರೂಪಾಯಿಗೋ ಅದರ ಭಾಗಕ್ಕೋ ಎಂಟು ರೂಪಾಯಿ;".

(ಸಿ) ಕ್ರಮನಂಬ್ರ 44ರಲ್ಲಿ ಅಸ್ತಿತ್ವದಲ್ಲಿರುವ ಖಂಡ (ಜಿ)ಯನ್ನು (ಎಚ್) ಎಂದು ಪುನರಂಕಿತಗೊಳಿಸತಕ್ಕದ್ದು ಮತ್ತು ಆ ರೀತಿ (ಎಚ್) ಎಂದು ಪುನರಂಕಿತಗೊಳಿಸುವುದಕ್ಕಿಂತ ಮೊದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಜಿ) ಮೇಲಿನ (ಎಫ್) ಖಂಡದಲ್ಲಿ ಹೇಳಿರುವ ಮೊಖ್ತಾರುನಾಮೆ ಅಲ್ಲದ ಕೇರಳದಲ್ಲಿ ನೆಲೆಸಿರುವ ಯಾವುದೇ ಸ್ಥಿರಾಸ್ಥಿಯಲ್ಲಿ ನಿರ್ಮಿಸುತ್ತಿರುವ ಅಥವಾ ಅಭಿವೃದ್ಧಿಗೊಳಿಸುತ್ತಿರುವ (ಯಾವುದೇ ರೀತಿಯದ್ದಾದರೂ) ಒಂದು ಪ್ರೊಮೋಟರಿಗೋ ಡೆವಲಪರಿಗೋ ಯಾವುದೇ ಹೆಸರಿನಿಂದ ಕರೆಯಲ್ಪಟ್ಟರೂ ಪ್ರಾಧಿಕಾರ ಅಥವಾ ಅಧಿಕಾರ ನೀಡುವಾಗ	ಗರಿಷ್ಟ ಒಂದು ಲಕ್ಷ ರೂಪಾಯಿ ಎಂಬ ಪರಿಮಿತಿಗನುಸರಿಸಿ ಒಂದು ವರ್ಗಾವಣೆ ಪತ್ರಕ್ಕೆ (ಆಯಾಯ ವಿಷಯದಂತೆ 21 ಅಥವಾ 22 ನಂಬ್ರ) ನ್ಯಾಯಯುತ ಬೆಲೆಯೋ ಯುಕ್ತಬೆಲೆಯೋ ಇದರಲ್ಲಿ ಯಾವುದು ಹೆಚ್ಚೋ ಅದೇ ಸ್ಟಾಂಪ್ ಶುಲ್ಕ.

4. 1960ರ 10ನೇ ಅಧಿನಿಯಮದ ತಿದ್ದುಪಡಿ.—1959ರ ಕೇರಳ ನ್ಯಾಯಾಲಯ ಫೀಜುಗಳ ಮತ್ತು ದಾವೆಗಳ ಮೌಲ್ಯ ನಿಗದಿ (1960ರ 10)ಅಧಿನಿಯಮದಲ್ಲಿ,—

(1) ವಿಭಾಗ 3ರಲ್ಲಿ (ii)ನೇ ಖಂಡದ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(iiಎ) "ಇ-ಸ್ಟಾಂಪ್" ಎಂದರೆ ನ್ಯಾಯಿಕ ಸ್ಟಾಂಪು ಶುಲ್ಕ ಸಂದಾಯ ಮಾಡಿದುದಾಗಿ ಸೂಚಿಸುವುದಕ್ಕಾಗಿ ಕೇರಳ ಸರಕಾರ ಖಜಾನೆ ಅಲ್ಲದಿದ್ದಲ್ಲಿ ಕೇರಳ ಸರಕಾರವು ನೇಮಿಸಿದ ಇತರ ಯಾವುದೇ ಏಜೆನ್ಸಿ ನೀಡುವ ವಿದ್ಯಾನ್ಮಾನ ರಚಿತ ಮುದ್ರೆ ಅಥವಾ ಚಲನ್ ಎಂದರ್ಥ.";

(2) 76ನೇ ವಿಭಾಗದ ಉಪ-ವಿಭಾಗ (1)ರಲ್ಲಿ ಅಸ್ತಿತ್ವದಲ್ಲಿರುವ ಷರತ್ತಿನಲ್ಲಿರುವ "2017ರ ಕೇರಳ ರಾಜ್ಯ ಸರಕುಗಳ ಮತ್ತು ಸೇವೆಗಳ ಅಧಿನಿಯಮ (2017ರ 20)" ಎಂಬ ಪದಗಳ ಮತ್ತು ಅಂಕೆಗಳ ಬದಲು ಈ ಕೆಳಗಿನ ಪದಗಳನ್ನು ಮತ್ತು ಅಂಕೆಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

This is a digitally signed Gazette.
Authenticity may be verified through https://compose.kerala.gov.in/

"1963ರ ಕೇರಳ ಸಾಮಾನ್ಯ ಮಾರಾಟ ತೆರಿಗೆ ಅಧಿನಿಯಮ (1963ರ 15), 1976ರ ಕೇರಳ ಆಡಂಬರ ಮೇಲಿನ ತೆರಿಗೆ ಅಧಿನಿಯಮ (1976ರ 32) ಮತ್ತು 2003ರ ಕೇರಳ ಮೌಲ್ಯ ವರ್ದಿತ ತೆರಿಗೆ ಅಧಿನಿಯಮ (2004ರ 30)";

(3) 77ನೇ ವಿಭಾಗದ ಬದಲು, ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"77. ಸ್ಟಾಂಪ್ ಅಥವಾ ಇ-ಸ್ಟಾಂಪ್ ಆಗಿ ಶುಲ್ಕ ವಸೂಲಿ.—ಈ ಅಧಿನಿಯಮದ ಪ್ರಕಾರ ವಿಧಿಸಬಹುದಾದ ಎಲ್ಲಾ ಶುಲ್ಕಗಳನ್ನು ಸ್ಟಾಂಪ್ ಅಥವಾ ಇ-ಸ್ಟಾಂಪ್ ಆಗಿ ವಸೂಲಿ ಮಾಡತಕ್ಕದ್ದು.";

(4) ವಿಭಾಗ 78ರ ಬದಲು ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"78. ಸ್ಟಾಂಪ್‌ಗಳು ಅಂಟಿಕೊಳ್ಳುವ, ಛಾಪಾ ಅಥವಾ ಇ-ಸ್ಟಾಂಪ್ ಆಗಿರತಕ್ಕದ್ದೆಂದು.—ಈ ಅಧಿನಿಯಮದ ಪ್ರಕಾರ ವಿಧಿಸಬೇಕಾದ ಯಾವುದೇ ಶುಲ್ಕವನ್ನು ಸೂಚಿಸಲು ಬಳಸುವ ಸ್ಟಾಂಪ್‌ಗಳು ಕಾಲಾಕಾಲಗಳಲ್ಲಿ ಸರಕಾರವು ಗಜೆಟ್ ಅಧಿಸೂಚನೆಯ ಮುಖೇನ ನಿಗದಿಪಡಿಸಿದ ರೀತಿಯಲ್ಲಿ ಅಂಟಿಕೊಳ್ಳುವ, ಛಾಪಾ ಅಥವಾ ಇ-ಸ್ಟಾಂಪ್ ಅಲ್ಲದಿದ್ದಲ್ಲಿ ಭಾಗಶಃವಾಗಿ ಮುದ್ರಿಸಿದ ಅಥವಾ ಭಾಗಶಃವಾಗಿ ಅಂಟಿಕೊಳ್ಳುವುದು ಆಗಿರತಕ್ಕದ್ದು.".

(5) ವಿಭಾಗ 80ರ ನಂತರ, ಒಂದು ಹೊಸ ವಿಭಾಗವನ್ನು ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"80ಎ. ಇ-ಸ್ಟಾಂಪ್‌ನ ರೂಪಗೆಡಿಸುವಿಕೆ.—(1) ಒಂದು ಲಿಖಿತ ಪತ್ರದಲ್ಲಿರುವ ಯಾವುದೇ ಇ-ಸ್ಟಾಂಪನ್ನು ಆನ್‌ಲೈನ್ ಸತ್ಯಾಪನೆ ರೀತಿಯ ಮುಖಾಂತರ ನ್ಯಾಯಾಲಯವೋ ಆಫೀಸಿನ ಮೇಲಾಧಿಕಾರಿಯೋ ಕಾಲಾಕಾಲಕ್ಕೆ ನೇಮೀಸಲ್ಪಟ್ಟ ಒಬ್ಬ ಅಧಿಕಾರಿಯೋ ಆ ರೀತಿಯಲ್ಲಿ ನಿಗದಿಪಡಿಸಿದ ರೀತಿಯಲ್ಲಿ ರೂಪಗೆಡಿಸತಕ್ಕದ್ದು.

(2) ರೂಪಗೆಡಿಸಲ್ಪಡದ ಒಂದು ಇ-ಸ್ಟಾಂಪ್ ಇರುವ ಯಾವುದೇ ಲಿಖಿತ ಪತ್ರವು ಅಂತಹ ಸ್ಟಾಂಪ್‌ಗೆ ಸಂಬಂಧಿಸಿದಂತೆ ಸ್ಟಾಂಪ್ ಅಂಟಿಸಿದುದಲ್ಲದುದಾಗಿ ಭಾವಿಸತಕ್ಕದ್ದು.".

5. 1963ರ 15ನೇ ಅಧಿನಿಯಮದ ತಿದ್ದುಪಡಿ.—1963ರ ಕೇರಳ ಸಾಮಾನ್ಯ ಮಾರಾಟ ಅಧಿನಿಯಮ, (1963ರ 15)ದ

(1) ವಿಭಾಗ 2ರಲ್ಲಿ,—

(ಎ) (i) ಖಂಡದ ಬದಲು, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(i) "ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರು" ಎಂದರೆ, ಈ ಅಧಿನಿಯಮದ 3ನೇ ವಿಭಾಗದ ಪ್ರಕಾರ ನೇಮಿಸಲ್ಪಡುವ ಒಬ್ಬ ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರು ಎಂದರ್ಥ;";

(ಬ) (i) ಖಂಡದ ನಂತರ, ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(iಎ) "ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರು (ಅಪೀಲುಗಳು)" ಎಂದರೆ, ಈ ಅಧಿನಿಯಮದ 3ನೇ ವಿಭಾಗದ ಪ್ರಕಾರ ನೇಮಿಸಲ್ಪಡುವ ಒಬ್ಬ ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರು (ಅಪೀಲುಗಳು) ಎಂದರ್ಥ;

(iಬಿ) "ಅಪೀಲು ಪ್ರಾಧಿಕಾರ" ಎಂದರೆ, 34 ವಿಭಾಗದ ಪ್ರಕಾರ ಅಪೀಲುಗಳನ್ನು ಆಲಿಸುವುದಕ್ಕಾಗಿ ಅಧಿಕೃತಗೊಳಿಸಿದ ಒಂದು ಪ್ರಾಧಿಕಾರ ಎಂದರ್ಥ;

(iಸಿ) "ರಾಜ್ಯ ತೆರಿಗೆ ಸಹಾಯಕ ಆಯುಕ್ತರು" ಎಂದರೆ, ಈ ಅಧಿನಿಯಮದ 3ನೇ ವಿಭಾಗದ ಪ್ರಕಾರ ನೇಮಿಸಲ್ಪಡುವ ಒಬ್ಬ ರಾಜ್ಯ ತೆರಿಗೆ ಸಹಾಯಕ ಆಯುಕ್ತರು ಎಂದರ್ಥ;".

(ಸಿ) (v) ಖಂಡವನ್ನು ಬಿಟ್ಟುಬಿಡತಕ್ಕದ್ದು;

(ಡಿ) (viiಎ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(viiಎ) "ರಾಜ್ಯ ತೆರಿಗೆ ಆಯುಕ್ತರು" ಎಂದರೆ ಸರಕಾರವು ಆ ರೀತಿ ನೇಮಿಸಿದ ರಾಜ್ಯ ತೆರಿಗೆ ಆಯುಕ್ತರು ಎಂದರ್ಥ".

(ಇ) (x) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(x) "ರಾಜ್ಯ ತೆರಿಗೆ ಉಪ ಆಯುಕ್ತರು" ಎಂದರೆ ಈ ಅಧಿನಿಯಮದ 3ನೇ ವಿಭಾಗದ ಪ್ರಕಾರ ನೇಮಿಸಲ್ಪಟ್ಟ ರಾಜ್ಯ ತೆರಿಗೆ ಉಪ ಆಯುಕ್ತರು ಎಂದರ್ಥ;";

This is a digitally signed Gazette.
Authenticity may be verified through https://compose.kerala.gov.in/

(ಎಫ್) (xiii)ನೇ ಖಂಡವನ್ನು ಬಿಟ್ಟುಬಿಡತಕ್ಕದ್ದು;

(ಜಿ) (xiii ಎ) ಖಂಡದ ಬದಲು, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(xiii ಎ) "ರಾಜ್ಯ ತೆರಿಗೆ ಜಂಟಿ ಆಯುಕ್ತರು" ಎಂದರೆ, ವಿಭಾಗ 3ರ ಪ್ರಕಾರ ನೇಮಿಸಲ್ಪಡುವ ಒಬ್ಬ ರಾಜ್ಯ ತೆರಿಗೆ ಜಂಟಿ ಆಯುಕ್ತರು ಎಂದರ್ಥ;";

(ಎಚ್) (xiii ಎ) ಖಂಡದ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(xiii ಬಿ) "ರಾಜ್ಯ ತೆರಿಗೆ ಜಂಟಿ ಆಯುಕ್ತರು (ಅಪೀಲುಗಳು)" ಎಂದರೆ, ವಿಭಾಗ 3ರ ಪ್ರಕಾರ ನೇಮಿಸಲ್ಪಡುವ ಒಬ್ಬ ರಾಜ್ಯ ತೆರಿಗೆ ಜಂಟಿ ಆಯುಕ್ತರು (ಅಪೀಲುಗಳು) ಎಂದರ್ಥ;";

(ಐ) (xxii)ನೇ ಖಂಡವನ್ನು ಬಿಟ್ಟುಬಿಡತಕ್ಕದ್ದು;

(ಜೆ) (xxiiಬಿ) ಖಂಡದ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(xxiiಸಿ) "ರಾಜ್ಯ ತೆರಿಗೆ ವಿಶೇಷ ಆಯುಕ್ತರು" ಎಂದರೆ, ಈ ಅಧಿನಿಯಮ ವಿಭಾಗ 3ರ ಪ್ರಕಾರ ನೇಮಿಸಲ್ಪಡುವ ಒಬ್ಬ ರಾಜ್ಯ ತೆರಿಗೆ ವಿಶೇಷ ಆಯುಕ್ತರು ಎಂದರ್ಥ;";

(ಕೆ) (xxiii) ಖಂಡದ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(xxiii ಎ) "ರಾಜ್ಯ ತೆರಿಗೆ ಅಧಿಕಾರಿ" ಎಂದರೆ, ಈ ಅಧಿನಿಯಮದ ವಿಭಾಗ 3ರ ಪ್ರಕಾರ ನೇಮಿಸಲ್ಪಡುವ ಒಬ್ಬ ರಾಜ್ಯ ತೆರಿಗೆ ಅಧಿಕಾರಿ ಎಂದರ್ಥ;";

(2) ವಿಭಾಗ 3ರಲ್ಲಿ,—

(ಎ) ಉಪ-ವಿಭಾಗ (1)ರ ಬದಲು, ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(1) ರಾಜ್ಯ ತೆರಿಗೆ ಆಯುಕ್ತರಿಗೆ ಈ ಅಧಿನಿಯಮದ ಪ್ರಕಾರದ ಎಲ್ಲಾ ಅಧಿಕಾರಗಳು ಇರುವುದಾಗಿದೆ ಮತ್ತು ಅದನ್ನು ವಿನಿಯೋಗಿಸತಕ್ಕದ್ದಾಗಿದೆ ಹಾಗೂ ಅದರ ಪ್ರಕಾರ ಪ್ರಧಾನ ಮಾಡಿದ ಅಥವಾ ವಿಧಿಸಿದ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದಾಗಿದೆ.";

(ಬಿ) ಉಪ-ವಿಭಾಗ (1ಎ)ಯಲ್ಲಿ "ಕಂದಾಯ ಮಂಡಳಿ" ಎಂಬ ಪದಗಳು ಇರುವಲ್ಲೆಲ್ಲಾ "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (2)ರಲ್ಲಿ "ಸರಕಾರಕ್ಕೆ ಅಧಿನಿಯಮದ ಅಗತ್ಯಕ್ಕಾಗಿ ಜಂಟಿ ಆಯುಕ್ತರುಗಳನ್ನು, ಉಪ ಆಯುಕ್ತರುಗಳನ್ನು, ಅಪೀಲು ಸಹಾಯಕ ಆಯುಕ್ತರುಗಳನ್ನು, ತಪಾಸಣೆ ಸಹಾಯಕ ಆಯುಕ್ತರುಗಳನ್ನು, ಮಾರಾಟ ತೆರಿಗೆ ಅಧಿಕಾರಿಗಳನ್ನು ಮುಂತಾದವರನ್ನು ನೇಮಿಸಬಹುದಾಗಿದೆ" ಎಂಬ ಪದಗಳ ಮತ್ತು ಚಿಹ್ನೆಗಳ ಬದಲು, "ಸರಕಾರಕ್ಕೆ, ಅಧಿನಿಯಮದ ಅಗತ್ಯಕ್ಕಾಗಿ ಅಧಿಸೂಚನೆಯ ಮುಖೇನ ರಾಜ್ಯ ತೆರಿಗೆ ವಿಶೇಷ ಆಯುಕ್ತರನ್ನು, ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರುಗಳನ್ನು, ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರುಗಳನ್ನು (ಅಪೀಲುಗಳು), ರಾಜ್ಯ ತೆರಿಗೆ ಜಂಟಿ ಆಯುಕ್ತರುಗಳನ್ನು, ರಾಜ್ಯ ತೆರಿಗೆ ಜಂಟಿ ಆಯುಕ್ತರುಗಳನ್ನು (ಅಪೀಲುಗಳು), ರಾಜ್ಯ ತೆರಿಗೆ ಉಪ ಆಯುಕ್ತರುಗಳನ್ನು, ರಾಜ್ಯ ತೆರಿಗೆ ಸಹಾಯಕ ಆಯುಕ್ತರುಗಳನ್ನು ಮತ್ತು ರಾಜ್ಯ ತೆರಿಗೆ ಅಧಿಕಾರಿಗಳನ್ನು" ನೇಮಿಸಬಹುದಾಗಿದೆ, ಎಂಬ ಪದಗಳನ್ನು, ಚಿಹ್ನೆಗಳನ್ನು ಮತ್ತು ಆವರಣಗಳನ್ನು ಸೇರಿಸಬಹುದಾಗಿದೆ;

(ಡಿ) (3)ನೇ ಉಪ-ವಿಭಾಗದ ಷರತ್ತಿನಲ್ಲಿ "ಅಪೀಲು ಸಹಾಯಕ ಆಯುಕ್ತರು" ಎಂಬ ಪದಗಳ ಬದಲು "ಅಪೀಲು ಪ್ರಾಧಿಕಾರ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಇ) (4)ನೇ ಉಪ-ವಿಭಾಗದಲ್ಲಿ "ಕಂದಾಯ ಮಂಡಳಿ ಅಥವಾ ಉಪ ಆಯುಕ್ತರು" ಎಂಬ ಪದಗಳ ಬದಲು "ರಾಜ್ಯ ತೆರಿಗೆ ಆಯುಕ್ತರು ಅಥವಾ ರಾಜ್ಯ ತೆರಿಗೆ ಜಂಟಿ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(3) ವಿಭಾಗ (4)ರಲ್ಲಿ ಉಪ-ವಿಭಾಗ (3)ರ (ಬಿ) ಖಂಡದಲ್ಲಿ "ಮಾರಾಟ ತೆರಿಗೆ ಅಧಿಕಾರಿ" ಎಂಬ ಪದಗಳ ಬದಲು "ರಾಜ್ಯ ತೆರಿಗೆ ಸಹ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(4) ವಿಭಾಗ 7ಎಯಲ್ಲಿ, ಉಪ-ವಿಭಾಗ (2)ರಲ್ಲಿ "ಆಯುಕ್ತರು" ಎಂಬ ಪದಗಳ ಬದಲು "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(5) ವಿಭಾಗ 15ರಲ್ಲಿ, ಉಪ-ವಿಭಾಗ (3)ರಲ್ಲಿ ''ಮಾರಾಟ ತೆರಿಗೆ ಇಲಾಖೆ'' ಎಂಬ ಪದಗಳ ಬದಲು ''ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಇಲಾಖೆ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(6) ವಿಭಾಗ 16ರಲ್ಲಿ,—

(ಎ) ಉಪ-ವಿಭಾಗ (3)ರಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (4)ರಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(7) ವಿಭಾಗ 17ರಲ್ಲಿ,—

(ಎ) (4)ನೇ ಉಪ-ವಿಭಾಗದ ಪ್ರಥಮ ಷರತ್ತಿನಲ್ಲಿ,—

(i) ''ಉಪಯುಕ್ತರು'' ಎಂಬ, ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ''ಆಯುಕ್ತರು ನಿರ್ದಿಷ್ಟಪಡಿಸಿದಂತೆ'' ಎಂಬ ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು ನಿರ್ದಿಷ್ಟಪಡಿಸಿದಂತೆ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (6)ರಲ್ಲಿ, ಐದನೇ ಷರತ್ತಿನಲ್ಲಿ ''ಆಯುಕ್ತರು'' ಎಂಬ ಪದದ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (7)ರಲ್ಲಿ ''ಉಪ-ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (8ಎ)ಯಲ್ಲಿ ''ಆಯುಕ್ತರುಗಳು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(8) ವಿಭಾಗ 17ಡಿಯ, ಉಪ-ವಿಭಾಗ (2)ರಲ್ಲಿ,—

(ಎ) ಖಂಡ (ಎ)ಯ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(ಎ) ರಾಜ್ಯ ತೆರಿಗೆ ಆಯುಕ್ತರು ಒಂದು ಗುಂಪು ಅಧಿಕಾರಿಗಳನ್ನು ಒಳಗೊಂಡ ಒಂದು ಟೀಮನ್ನು ರಚಿಸತಕ್ಕದ್ದು ಹಾಗೂ ಆ 'ಟೀಮ್' ತೆರಿಗೆ ನಿರ್ಧರಣೆಯನ್ನು ಪೂರ್ತೀಕರಿಸತಕ್ಕದ್ದು ಒಬ್ಬ ರಾಜ್ಯ ತೆರಿಗೆ ಉಪ ಆಯುಕ್ತರು, ಇಬ್ಬರು ರಾಜ್ಯ ತೆರಿಗೆ ಸಹಾಯಕ ಆಯುಕ್ತರುಗಳು/ರಾಜ್ಯ ತೆರಿಗೆ ಅಧಿಕಾರಿಗಳು ಒಳಗೊಂಡ ಟೀಮ್‌ನ ಗುಂಪುಗಳ ಮುಂದಾಳುತ್ವವನ್ನು ಜಂಟಿ ಆಯುಕ್ತರು ವಹಿಸತಕ್ಕದ್ದು;'';

(ಬಿ) ಖಂಡ (ಬಿ)ಯನ್ನು ಬಿಟ್ಟುಬಿಡತಕ್ಕದ್ದು;

(ಸಿ) ಖಂಡ (ಡಿ) ಷರತ್ತಿನಲ್ಲಿ ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(9) ವಿಭಾಗ 18ರ ಉಪ-ವಿಭಾಗ (1)ರಲ್ಲಿ ''ಆಯುಕ್ತರಿಗೆ, ಒಬ್ಬ ಉಪ-ಆಯುಕ್ತರ ದರ್ಜೆಗಿಂತ ಕೆಳಗಲ್ಲದ ಯಾವುದೇ ಅಧಿಕಾರಿಯನ್ನು ನೇಮಿಸಬಹುದಾಗಿದೆ'' ಎಂಬ ಪದಗಳ ನಂತರ ''ರಾಜ್ಯ ತೆರಿಗೆ ಆಯುಕ್ತರು, ರಾಜ್ಯ ತೆರಿಗೆ ಜಂಟಿ ಆಯುಕ್ತರ ದರ್ಜೆಗಿಂತ ಕೆಳಗಲ್ಲದ ಯಾವುದೇ ಅಧಿಕಾರಿಯನ್ನು ನೇಮಿಸಬಹುದಾಗಿದೆ'' ಎಂಬ ಪದಗಳನ್ನು ಸೇರಿಸತಕ್ಕದ್ದಾಗಿದೆ;

(10) ವಿಭಾಗ (22)ರ ಉಪ-ವಿಭಾಗ (5)ರಲ್ಲಿ ''ವಾಣಿಜ್ಯ ತೆರಿಗೆಗಳ ಇಲಾಖೆ'' ಎಂಬ ಪದಗಳ ಬದಲು ''ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಇಲಾಖೆ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(11) ವಿಭಾಗ 23ಎಎ ಯಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ ''ತಪಾಸಣಾ ಸಹಾಯಕ ಆಯುಕ್ತರುಗಳು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಉಪ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(12) ವಿಭಾಗ 28ರಲ್ಲಿ,—

(ಎ) ಉಪ-ವಿಭಾಗ (2)ರ ಷರತ್ತಿನಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (3)ರ ಷರತ್ತಿನಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (7)ರ, (ಬಿ) ಖಂಡದಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(13) ವಿಭಾಗ 28ಎ ಯ ಉಪ-ವಿಭಾಗ (2)ರಲ್ಲಿ ''ಉಪ-ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(14) ವಿಭಾಗ 29ಎ ಯಲ್ಲಿ,—

(ಎ) ಉಪ-ವಿಭಾಗ (2ಎ)ಯಲ್ಲಿ, ''ಯಾವುದೇ ಚೆಕ್‌ಪೋಸ್ಟುಗಳಿಗೆ ಅಥವಾ ಕೃಷಿ ಆದಾಯ ತೆರಿಗೆ ಮತ್ತು ಮಾರಾಟ ತೆರಿಗೆ ಇಲಾಖೆಯ ಆಫೀಸಿಗೆ'' ಎಂಬ ಪದಗಳಿಗೆ ಬದಲು ''ರಾಜ್ಯ ಸರಕುಗಳ ಹಾಗೂ ಸೇವೆಗಳ ತೆರಿಗೆ ಇಲಾಖೆಯ ಯಾವುದೇ ಆಫೀಸಿಗೆ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (3)ರಲ್ಲಿ ''ಮಾರಾಟ ತೆರಿಗೆ ಅಧಿಕಾರಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಅಧಿಕಾರಿ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(15) ವಿಭಾಗ 30ಬಿ ಯನ್ನು ಬಿಟ್ಟುಬಿಡತಕ್ಕದ್ದು;

(16) ವಿಭಾಗ 30 ಇ ಯಲ್ಲಿ,—

(ಎ) ಉಪ-ವಿಭಾಗ (3)ರಲ್ಲಿ, ''ತಪಾಸಣಾ ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಉಪ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (8)ರಲ್ಲಿ ''ಉಪ-ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ಅದರ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (9)ರಲ್ಲಿ ''ಆಯುಕ್ತರು'' ಎಂಬ ಪದ ಬರುವಲ್ಲೆಲ್ಲಾ ಅದರ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(17) ವಿಭಾಗ 34ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1)ರಲ್ಲಿ,—

(i) ''ಅಂತಹ ಆದೇಶದ ವಿರುದ್ಧ ಅಪೀಲನ್ನು ಅಪೀಲು ಸಹಾಯಕ ಆಯುಕ್ತರಿಗೆ'' ಎಂಬ ಪದಗಳ ಮತ್ತು ಚಿಹ್ನೆಯ ಬದಲು ''ಅಂತಹ ಆದೇಶದ ವಿರುದ್ಧದ ಅಪೀಲನ್ನು,—

(ಎ) ಒಬ್ಬ ರಾಜ್ಯ ತೆರಿಗೆ ಉಪ-ಆಯುಕ್ತರೋ ಅವರಿಗಿಂತ ಕೆಳಗಿನ ದರ್ಜೆಯ ಯಾವುದೇ ಅಧಿಕಾರಿಯೋ ಜಾರಿಗೊಳಿಸಿದ ಅಂತಹ ತೀರ್ಮಾನ ಅಥವಾ ಆದೇಶದ ಮೇಲೆ ರಾಜ್ಯ ತೆರಿಗೆ ಜಂಟಿ ಆಯುಕ್ತರಿಗೆ (ಅಪೀಲುಗಳು);

(ಬಿ) ರಾಜ್ಯ ತೆರಿಗೆ ಜಂಟಿ ಆಯುಕ್ತರು ಜಾರಿಗೊಳಿಸಿದ ತೀರ್ಮಾನದ ಅಥವಾ ಆದೇಶದ ಮೇಲೆ ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರಿಗೆ (ಅಪೀಲುಗಳು)'' ಎಂಬ ಪದಗಳನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(ii) ಎರಡನೇ ಷರತ್ತಿನಲ್ಲಿ ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(iii) ಎರಡನೇ ಷರತ್ತಿನ ನಂತರ, ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು; ಅದೇನೆಂದರೆ:—

''ಮತ್ತೂ ಅಲ್ಲದೆ, ವಿವಾದಾಸ್ಪದ ಮೊತ್ತವನ್ನು ಪಾವತಿಸಿ ಮುಗಿಸಿರುವ ವಿಷಯಗಳ ಹೊರತಾದ ಕೇಸುಗಳಲ್ಲಿ, ಒಬ್ಬ ವ್ಯಾಪಾರಿಗೆ ಪ್ರಸ್ತುತ ಕಾಲಾವಧಿಯು ಮುಕ್ತಾಯವಾದ ನಂತರ, ಹಿಂದೆ ಫೈಲು ಮಾಡಿದ ಅಪೀಲುಗಳು ಯಾವುದೇ ಕಾರಣದಿಂದ ಅಂಗೀಕರಿಸದಿದ್ದಲ್ಲಿ 2023 ಸೆಪ್ಟಂಬರ್ 30ನೇ ದಿನಾಂಕದವರೆಗೆ ಅಪೀಲು ಪ್ರಾಧಿಕಾರದ ಸಮಕ್ಷದಲ್ಲಿ ಹೊಸ ಅಪೀಲನ್ನು ಫೈಲುಮಾಡಬಹುದಾಗಿದೆ:'';

(iv) ಅಸ್ತಿತ್ವದಲ್ಲಿರುವ ಷರತ್ತಿನ ಬದಲು ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

''ಮತ್ತೂ ಅಲ್ಲದೆ, 2005 ಮಾರ್ಚ್ 31ರ ತನಕದ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ಆದೇಶದ ವಿರುದ್ಧದ ಅಪೀಲುಗಳಲ್ಲಿ; ಅಪೀಲುದಾರನು ಗರಿಷ್ಠ 5 ಕೋಟಿ ರೂಪಾಯಿಗೆ ವಿಧೇಯಕವಾಗಿ ತರ್ಕ ಮೊತ್ತದ 10 ಶೇಕಡಾವನ್ನು ಪಾವತಿಸುವಾಗ, ವಸೂಲಿ ಪ್ರಕಾರದ ಮುಂದಿನ ಕ್ರಮಗಳನ್ನು ಅಪೀಲನ್ನು ತೀರ್ಪುಗೊಳಿಸುವವರೆಗೆ ತಡೆದಿಡಬಹುದಾಗಿದೆ:

ಮತ್ತೂ ಅಲ್ಲದೆ, ಈ ವಿಭಾಗ ಪ್ರಕಾರ 2023 ಏಪ್ರಿಲ್ 1ನೇ ದಿನಾಂಕದಂದು ಇತ್ಯರ್ಥವಾಗದೆ ಬಾಕಿಯಾಗಿರುವ ಅಪೀಲುಗಳು, ಈ ಅಧಿನಿಯಮ ಪ್ರಕಾರ ಅಧಿಕೃತಗೊಳಿಸಿದ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಹಸ್ತಾಂತರಿಸಲ್ಪಡುವುದು ಮತ್ತು ಪ್ರಾಧಿಕಾರ ಅಂತಹ ಅಪೀಲುಗಳನ್ನು ಆ ಪ್ರಾಧಿಕಾರದ ಸಮಕ್ಷಕ್ಕೆ ಸಲ್ಲಿಸಲ್ಪಟ್ಟ ಅಪೀಲು ಎಂಬಂತೆ ಪರಿಗಣಿಸತಕ್ಕದ್ದಾಗಿದೆ.'';

(ಸಿ) ಉಪ-ವಿಭಾಗ (3)ರಲ್ಲಿ ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (3ಎ)ಯಲ್ಲಿ ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಇ) ಉಪ-ವಿಭಾಗ (4)ರಲ್ಲಿ ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಎಫ್) ಉಪ-ವಿಭಾಗ (5)ರಲ್ಲಿ, ಷರತ್ತಿನಲ್ಲಿ ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(18) ವಿಭಾಗ 35ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1)ರಲ್ಲಿ,—

(i) ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (2)ರಲ್ಲಿ,—

(i) ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಖಂಡ (ಬಿ)ಯಲ್ಲಿ ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (2ಎ)ಯಲ್ಲಿ, ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(19) ವಿಭಾಗ 36ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (3)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (4)ರಲ್ಲಿ, ಷರತ್ತಿನಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(20) ವಿಭಾಗ 37ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1)ರಲ್ಲಿ,—

(i) ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (2)ರಲ್ಲಿ,—

(i) ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಖಂಡ (ಬಿ) ಯಲ್ಲಿ ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (2ಎ)ಯಲ್ಲಿ, ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(21) ವಿಭಾಗ 38ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1)ರಲ್ಲಿ,—

(i) ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (3)ರಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (4)ರ ಷರತ್ತಿನಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(22) ವಿಭಾಗ 39ರಲ್ಲಿ,—

(ಎ) ಉಪ-ವಿಭಾಗ (1)ರಲ್ಲಿ,—

(i) ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(iii) ಅಸ್ತಿತ್ವದಲ್ಲಿರುವ ಷರತ್ತಿನ ನಂತರ, ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

''ಮತ್ತೂ ಅಲ್ಲದೆ, ವಿವಾದಾಸ್ಪದ ಮೊತ್ತವನ್ನು ಪಾವತಿಸಿ ಮುಗಿಸಿರುವ ವಿಷಯಗಳ ಹೊರತಾದ ಕೇಸುಗಳಲ್ಲಿ, ಒಬ್ಬ ವ್ಯಾಪಾರಿಗೆ ಪ್ರಸ್ತುತ ಕಾಲಾವಧಿಯ ಮುಕ್ತಾಯವಾದ ನಂತರ, ಹಿಂದೆ ಫೈಲು ಮಾಡಿದ ಅಪೀಲುಗಳು ಯಾವುದೇ ಕಾರಣದಿಂದ ಅಂಗೀಕರಿಸದಿದ್ದಲ್ಲಿ 2023 ಸೆಪ್ಟೆಂಬರ್ 30ನೇ ದಿನಾಂಕದವರೆಗೆ ಅಪೀಲು ಪ್ರಾಧಿಕಾರದ ಸಮಕ್ಷದಲ್ಲಿ ಹೊಸ ಅಪೀಲನ್ನು ಫೈಲು ಮಾಡಬಹುದಾಗಿದೆ.'';

(ಬ) ಉಪ-ವಿಭಾಗ (2)ರಲ್ಲಿ ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ಅದರ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (2)ರ ನಂತರ, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(2ಎ) 2005 ಮಾರ್ಚ್ 31ರ ತನಕದ ಆರ್ಥಿಕ ವರ್ಷಕ್ಕೆ ಸಂಬಂಧಿಸಿದ ಆದೇಶದ ವಿರುದ್ಧದ ಅಪೀಲುಗಳಲ್ಲಿ, ಅಪೀಲುದಾರನು ಗರಿಷ್ಠ 5 ಕೋಟಿ ರೂಪಾಯಿಗೆ ವಿಧೇಯವಾಗಿ ತರ್ಕ ಮೊತ್ತದ 10 ಶೇಕಡಾವನ್ನು ಮಂಜೂರಾಗಿ ಪಾವತಿಸುವಾಗ, ವಸೂಲಿ ಪ್ರಕಾರದ ಮುಂದಿನ ಕ್ರಮಗಳನ್ನು ಅಪೀಲನ್ನು ತೀರ್ಪುಗೊಳಿಸುವವರೆಗೆ ತಡೆದಿಡಬಹುದಾಗಿದೆ:

ಆದರೆ, ವಿಭಾಗ 34ರ ಪ್ರಕಾರ ಯಾವುದೇ ಪೂರ್ವ ಠೇವಣಿ ಮೊತ್ತವನ್ನು ಪಾವತಿಸಿದಲ್ಲಿ, ಅದನ್ನು ಈ ವಿಭಾಗ ಪ್ರಕಾರ ಪಾವತಿಸಬೇಕಾದ ಮೊತ್ತಕ್ಕೆ ಹೊಂದಾಣಿಕೆ ಮಾಡತಕ್ಕದ್ದಾಗಿದೆ:

ಮತ್ತೂ ಆದರೆ, ಈ ಉಪ-ವಿಭಾಗ ಪ್ರಕಾರದ ಪೂರ್ವ ಠೇವಣಿ ಮೊತ್ತದಲ್ಲಿ ಅಧಿಕವಾಗಿ ಯಾವುದೇ ಮೊತ್ತವನ್ನು ಪಾವತಿಸಿದ್ದಲ್ಲಿ ಅಪೀಲು ತೀರ್ಪು ಆಗುವ ತನಕ ಮರುಪಾವತಿ ಮಾಡತಕ್ಕದ್ದಲ್ಲ;

(ಡಿ) ಉಪ-ವಿಭಾಗ (8)ರಲ್ಲಿ,—

(i) ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(23) ವಿಭಾಗ 39ಎಯಲ್ಲಿ,—

(ಎ) ಉಪ-ವಿಭಾಗ (4)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬ) ಉಪ-ವಿಭಾಗ (5)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (8)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (9)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಇ) ಉಪ-ವಿಭಾಗ (13)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(24) ವಿಭಾಗ 40ರಲ್ಲಿ,—

(ಎ) ಉಪ-ವಿಭಾಗ (4)ರಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (7)ರಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(25) ವಿಭಾಗ 42ಎಯಲ್ಲಿ,—

(ಎ) ಐಟಂ (ಎ)ಯಲ್ಲಿ ''ಅಪೀಲು ಸಹಾಯಕ ಆಯುಕ್ತರು ಅಥವಾ ಉಪ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ, ಅಥವಾ ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಐಟಂ (ಬಿ)ಯಲ್ಲಿ ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(26) ವಿಭಾಗ 45ಎ ಯಲ್ಲಿ,—

(ಎ) ಉಪ-ವಿಭಾಗ (1)ರಲ್ಲಿ ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1) ನಂತರ, ವಿವರಣೆ II ರಲ್ಲಿ ''ಮಾರಾಟ ತೆರಿಗೆ ಅಧಿಕಾರಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಅಧಿಕಾರಿ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (3) ರಲ್ಲಿ,—

(i) ''ಉಪ ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ''ಅಪೀಲು ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (4)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಇ) ಉಪ-ವಿಭಾಗ (5)ರಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಎಫ್) ಉಪ-ವಿಭಾಗ (6)ರಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(27) ವಿಭಾಗ 47ರಲ್ಲಿನ ಷರತ್ತಿನಲ್ಲಿ ''ಕಂದಾಯ ಮಂಡಳಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(28) ವಿಭಾಗ 54ರ ಉಪ-ವಿಭಾಗ (2)ರಲ್ಲಿ,—

(ಎ) ಖಂಡ (i)ರಲ್ಲಿ ''ರಾಜ್ಯ ಮಾರಾಟ ತೆರಿಗೆ ಇಲಾಖೆ'' ಎಂಬ ಪದಗಳ ಬದಲು ''ರಾಜ್ಯ ಸರಕು ಹಾಗೂ ಸೇವೆಗಳ ಇಲಾಖೆ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಖಂಡ (ix)ರಲ್ಲಿ ಉಪ-ಖಂಡ (ಎ) ಮತ್ತು (ಬಿ)ಯ ಬದಲು, ಈ ಕೆಳಗಿನ ಉಪ-ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(ಎ) ರಾಜ್ಯ ತೆರಿಗೆ ಜಂಟಿ ಆಯುಕ್ತರ ಕೆಳಗಣ ಅಧಿಕಾರಿಯು ಮೇಲೆ ಹೇಳಿದ ವಿವರಣೆಗಳನ್ನು ನೀಡಬೇಕಾದ ಸಂದರ್ಭದಲ್ಲಿ ರಾಜ್ಯ ತೆರಿಗೆ ಜಂಟಿ ಆಯುಕ್ತರ ಅನುಮತಿ; ಹಾಗೂ

This is a digitally signed Gazette.
Authenticity may be verified through https://compose.kerala.gov.in/

(ಬ) ರಾಜ್ಯ ತೆರಿಗೆ ಜಂಟಿ ಆಯುಕ್ತರ ದರ್ಜೆಗಿಂತ ಕೆಳಗಲ್ಲದ ಅಧಿಕಾರಿಯು ಮೇಲೆ ಹೇಳಿದ ವಿವರಣೆಗಳನ್ನು ನೀಡಬೇಕಾದ ಸಂದರ್ಭದಲ್ಲಿ ರಾಜ್ಯ ತೆರಿಗೆ ಆಯುಕ್ತರ ಅನುಮತಿ.";

(29) ವಿಭಾಗ 58ಎ ಯಲ್ಲಿ,—

(ಎ) ಉಪ-ವಿಭಾಗ (1)ರಲ್ಲಿ "ವಾಣಿಜ್ಯ ತೆರಿಗೆಗಳ ಇಲಾಖೆ" ಎಂಬ ಪದಗಳ ಬದಲು "ರಾಜ್ಯ ಸರಕುಗಳ ಹಾಗೂ ಸೇವೆಗಳ ತೆರಿಗೆ ಇಲಾಖೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬ) ಉಪ-ವಿಭಾಗ (2) ರಲ್ಲಿ,—

(i) "ಆಯುಕ್ತರು" ಎಂಬ ಪದಗಳು ಬರುವಲ್ಲೆಲ್ಲಾ "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) "ವಾಣಿಜ್ಯ ತೆರಿಗೆಗಳ ಇಲಾಖೆ" ಎಂಬ ಪದಗಳ ಬದಲು "ರಾಜ್ಯ ಸರಕುಗಳ ಹಾಗೂ ಸೇವೆಗಳ ತೆರಿಗೆ ಇಲಾಖೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(30) ವಿಭಾಗ 59ಎ ಯಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿನ "ವಾಣಿಜ್ಯ ತೆರಿಗೆಗಳ ಆಯುಕ್ತರು" ಎಂಬ ಪದಗಳ ಬದಲು "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬ) ಉಪ-ವಿಭಾಗ (1)ರ ಖಂಡ (ಇ)ಯಲ್ಲಿನ "ವಾಣಿಜ್ಯ ತೆರಿಗೆಗಳ ಆಯುಕ್ತರು" ಎಂಬ ಪದಗಳ ಬದಲು "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (2)ರಲ್ಲಿ "ವಾಣಿಜ್ಯ ತೆರಿಗೆಗಳ ಆಯುಕ್ತರು" ಎಂಬ ಪದಗಳ ಬದಲು "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (5)ರಲ್ಲಿ,—

(i) "ವಾಣಿಜ್ಯ ತೆರಿಗೆಗಳ ಆಯುಕ್ತರು" ಎಂಬ ಪದಗಳು ಬರುವಲ್ಲೆಲ್ಲಾ "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) "ಒಬ್ಬ ಅಪೀಲು ಸಹಾಯಕ ಆಯುಕ್ತರು ಒಳಗೊಂಡು ಆಯುಕ್ತರು" ಎಂಬ ಪದಗಳ ಬದಲು "ಒಂದು ಅಪೀಲು ಪ್ರಾಧಿಕಾರ ಒಳಗೊಂಡ ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಇ) ಉಪ-ವಿಭಾಗ (6)ರಲ್ಲಿ "ಆಯುಕ್ತರು" ಎಂಬ ಪದಗಳು ಬರುವಲ್ಲೆಲ್ಲಾ "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು.

6. 1963ರ 23ನೇ ಅಧಿನಿಯಮದ ತಿದ್ದುಪಡಿ.—1963ರ ಕೇರಳ ವಿದ್ಯುತ್ ಸುಂಕ ಅಧಿನಿಯಮ (1963ರ 23)ದ ಅನುಸೂಚಿಯಲ್ಲಿ, ಐಟಮ್ ನಂಬ್ರ 4ರಲ್ಲಿ, (3)ನೇ ಕಾಲಂನಲ್ಲಿನ "ಉಪಯೋಗಿಸುವ ವಿದ್ಯುತ್ತಿನ ಯೂನಿಟ್‌ಗೆ 10 ಪೈಸೆ" ಎಂಬ ಅಂಕೆಯ ಮತ್ತು ಪದಗಳ ಬದಲು "ಇನ್ವಾಯ್ಸ್‌ನಲ್ಲಿ ಸೂಚಿಸಿರುವ ವಿದ್ಯುತ್ತ್ ದರದ ಐದು ಶೇಕಡಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

7. 1976ರ 19ನೇ ಅಧಿನಿಯಮದ ತಿದ್ದುಪಡಿ.—1976ರ ಕೇರಳ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ ಅಧಿನಿಯಮ (1976ರ 19)ದಲ್ಲಿ,—

(1) ಅನುಸೂಚಿಯ ಕ್ರಮನಂಬ್ರ 7ರಲ್ಲಿ,—

(ಎ) ಐಟಮ್ ನಂಬ್ರ (i)ರ, ಉಪ-ಐಟಮ್ (ಡಿ)ಯಲ್ಲಿ,—

(i) (i)ನೇ ನಮೂದಿನಲ್ಲಿ, ಕಾಲಂ ನಂಬ್ರ (3)ರಲ್ಲಿನ "310" ಎಂಬ ಅಂಕೆಯ ಬದಲು "280" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(ii) (ii)ನೇ ನಮೂದಿನಲ್ಲಿ, ಕಾಲಂ ನಂಬ್ರ (3)ರಲ್ಲಿನ "530" ಎಂಬ ಅಂಕೆಯ ಬದಲು "480" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(iii) (iii)ನೇ ನಮೂದಿನಲ್ಲಿ, ಕಾಲಂ ನಂಬ್ರ (3)ರಲ್ಲಿನ "750" ಎಂಬ ಅಂಕೆಯ ಬದಲು "680" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(iv) (iv)ನೇ ನಮೂದಿನಲ್ಲಿ, ಕಾಲಂ ನಂಬ್ರ (3)ರಲ್ಲಿನ "500" ಎಂಬ ಅಂಕೆಯ ಬದಲು "450" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(v) (v)ನೇ ನಮೂದಿನಲ್ಲಿ, ಕಾಲಂ ನಂಬ್ರ (3)ರಲ್ಲಿನ "750" ಎಂಬ ಅಂಕೆಯ ಬದಲು "680" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(vi) (vi)ನೇ ನಮೂದಿನಲ್ಲಿ, ಕಾಲಂ ನಂಬ್ರ (3)ರಲ್ಲಿನ "1000" ಎಂಬ ಅಂಕೆಯ ಬದಲು "900" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(vii) (vii)ನೇ ನಮೂದಿನಲ್ಲಿ, ಕಾಲಂ ನಂಬ್ರ (3)ರಲ್ಲಿನ "1000" ಎಂಬ ಅಂಕೆಯ ಬದಲು "900" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(viii) (viii)ನೇ ನಮೂದಿನಲ್ಲಿ, ಕಾಲಂ ನಂಬ್ರ (3)ರಲ್ಲಿನ "1500" ಎಂಬ ಅಂಕೆಯ ಬದಲು "1350" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(ix) (ix)ನೇ ನಮೂದಿನಲ್ಲಿ, ಕಾಲಂ ನಂಬ್ರ (3)ರಲ್ಲಿನ "2000" ಎಂಬ ಅಂಕೆಯ ಬದಲು "1800" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(ಬ) ಐಟಮ್ ನಂಬ್ರ (iii)ರಲ್ಲಿ,—

(i) ಉಪ-ಐಟಮ್ (ಎ)ಯಲ್ಲಿ, ಕಾಲಂ ನಂಬ್ರ (3)ರಲ್ಲಿನ "600" ಎಂಬ ಅಂಕೆಯ ಬದಲು "540" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(ii) ಉಪ-ಐಟಮ್ (ಬ)ಯಲ್ಲಿ, ಕಾಲಂ ನಂಬ್ರ (3)ರಲ್ಲಿನ "690" ಎಂಬ ಅಂಕೆಯ ಬದಲು "620" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(iii) ಉಪ-ಐಟಮ್ (ಸಿ)ಯಲ್ಲಿ, ಕಾಲಂ ನಂಬ್ರ (3)ರಲ್ಲಿನ "210" ಎಂಬ ಅಂಕೆಯ ಬದಲು "190" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(iv) ಉಪ-ಐಟಮ್ (ಡಿ)ಯಲ್ಲಿ, ಕಾಲಂ ನಂಬ್ರ (3)ರಲ್ಲಿನ "150" ಎಂಬ ಅಂಕೆಯ ಬದಲು "140" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(ಸಿ) ಐಟಮ್ ನಂಬ್ರ (iv)ರಲ್ಲಿ,—

(i) ಉಪ-ಐಟಮ್ (ಎ)ಯಲ್ಲಿ, ಕಾಲಂ ನಂಬ್ರ (3)ದಲ್ಲಿನ "1170" ಎಂಬ ಅಂಕೆಯ ಬದಲು "1050" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(ii) ಉಪ-ಐಟಮ್ (ಬ)ಯಲ್ಲಿ, ಕಾಲಂ ನಂಬ್ರ (3)ದಲ್ಲಿನ "990" ಎಂಬ ಅಂಕೆಯ ಬದಲು "890" ಎಂಬ ಅಂಕೆಯನ್ನು ಸೇರಿಸತಕ್ಕದ್ದು;

(iii) ಉಪ-ಐಟಮ್ (ಸಿ)ಯಲ್ಲಿ, ಕಾಲಂ ನಂಬ್ರ (3)ದಲ್ಲಿನ "1260" ಎಂಬ ಅಂಕೆಯ ಬದಲು "1140" ಎಂಬ ಅಂಕೆಯನ್ನು ಸೇರಿಸತಕ್ಕದ್ದು.

(2) ಅನುಬಂಧ Iರ, ಕ್ರಮ ನಂಬ್ರ ಎ ಯಲ್ಲಿ,—

(ಎ) ಐಟಮ್ 1ರಲ್ಲಿ ಕಾಲಂ ನಂಬ್ರ (3)ರಲ್ಲಿನ "11%" ಎಂಬ ಅಂಕೆಯ ಮತ್ತು ಚಿಹ್ನೆಯ ಬದಲು "13%" ಎಂಬ ಅಂಕೆಯನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು;

(ಬ) ಐಟಮ್ 2ರಲ್ಲಿ, ಕಾಲಂ ನಂಬ್ರ (3)ರಲ್ಲಿನ "13%" ಎಂಬ ಅಂಕೆಯ ಮತ್ತು ಚಿಹ್ನೆಯ ಬದಲು "15%" ಎಂಬ ಅಂಕೆಯನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(സി) ഐടമ് 4ರಲ್ಲಿ, ಕಾಲಂ ನಂಬ್ರ (3)ರಲ್ಲಿನ "9%" ಎಂಬ ಅಂಕೆಯ ಮತ್ತು ಚಿಹ್ನೆಯ ಬದಲು "10%" ಎಂಬ ಅಂಕೆಯನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು;

(ಡಿ) ಐಟಮ್ 5ರಲ್ಲಿ, ಕಾಲಂ ನಂಬ್ರ (3)ರಲ್ಲಿನ "11%" ಎಂಬ ಅಂಕೆಯ ಮತ್ತು ಚಿಹ್ನೆಯ ಬದಲು "13%" ಎಂಬ ಅಂಕೆಯನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು;

(ಇ) ಐಟಮ್ 6ರಲ್ಲಿ, ಕಾಲಂ ನಂಬ್ರ (3)ರಲ್ಲಿನ "13%" ಎಂಬ ಅಂಕೆಯ ಮತ್ತು ಚಿಹ್ನೆಯ ಬದಲು "15%" ಎಂಬ ಅಂಕೆಯನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು;

(ಎಫ್) ಐಟಮ್ 7ರಲ್ಲಿ, ಕಾಲಂ ನಂಬ್ರ (3)ರಲ್ಲಿನ "16%" ಎಂಬ ಅಂಕೆಯ ಮತ್ತು ಚಿಹ್ನೆಯ ಬದಲು "17%" ಎಂಬ ಅಂಕೆಯನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು;

(ಜಿ) ಐಟಮ್ 7ಎ ಯಲ್ಲಿ, ಕಾಲಂ ನಂಬ್ರ (3)ರಲ್ಲಿನ "21%" ಎಂಬ ಅಂಕೆಯ ಮತ್ತು ಚಿಹ್ನೆಯ ಬದಲು "22%" ಎಂಬ ಅಂಕೆಯನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು;

(ಎಚ್) ಐಟಮ್ 8ರಲ್ಲಿ, ಕಾಲಂ ನಂಬ್ರ (2)ರಲ್ಲಿನ "ಇಪ್ಪತ್ತು ಲಕ್ಷ ರೂಪಾಯಿಗಳ ವರೆಗೆ" ಎಂಬ ಪದಗಳ ನಂತರ "(ವಿದ್ಯುತ್ತ್ ವಾಹನಗಳ ಹೊರತು)" ಎಂಬ ಪದಗಳನ್ನು ಮತ್ತು ಆವರಣಗಳನ್ನು ಸೇರಿಸತಕ್ಕದ್ದು;

(ಐ) ಐಟಮ್ 8ಎ ಯಲ್ಲಿ, ಕಾಲಂ (2)ರಲ್ಲಿ, "ಇಪ್ಪತ್ತು ಲಕ್ಷ ರೂಪಾಯಿಗಿಂತ ಹೆಚ್ಚು" ಎಂಬ ಪದಗಳ ಮತ್ತು ಆವರಣಗಳ ಬದಲು "(ವಿದ್ಯುತ್ತ್ ವಾಹನಗಳ ಹೊರತು)" ಎಂಬ ಪದಗಳನ್ನು ಮತ್ತು ಆವರಣಗಳನ್ನು ಸೇರಿಸತಕ್ಕದ್ದು;

(ಜೆ) ಐಟಮ್ 9ರಲ್ಲಿ ಕಾಲಂ (2)ರಲ್ಲಿ, "10 ಲಕ್ಷ ರೂಪಾಯಿವರೆಗೆ" ಎಂಬ ಪದಗಳ ಮತ್ತು ಆವರಣಗಳ ಬದಲು "(ವಿದ್ಯುತ್ತ್ ವಾಹನಗಳ ಹೊರತು)" ಎಂಬ ಪದಗಳನ್ನು ಮತ್ತು ಆವರಣಗಳನ್ನು ಸೇರಿಸತಕ್ಕದ್ದು;

(ಕೆ) ಐಟಮ್ 10ರಲ್ಲಿ ಕಾಲಂ (2)ರಲ್ಲಿ, "ಇಪ್ಪತ್ತು ಲಕ್ಷ ರೂಪಾಯಿವರೆಗೆ" ಎಂಬ ಪದಗಳ ಮತ್ತು ಆವರಣಗಳ ಬದಲು "(ವಿದ್ಯುತ್ತ್ ವಾಹನಗಳ ಹೊರತು)" ಎಂಬ ಪದಗಳನ್ನು ಮತ್ತು ಆವರಣಗಳನ್ನು ಸೇರಿಸತಕ್ಕದ್ದು;

(ಎಲ್) ಐಟಮ್ 10ಎಯಲ್ಲಿ "ಇಪ್ಪತ್ತು ಲಕ್ಷ ರೂಪಾಯಿಗಿಂತ ಹೆಚ್ಚು" ಎಂಬ ಪದಗಳ ಮತ್ತು ಆವರಣಗಳ ಬದಲು "(ವಿದ್ಯುತ್ತ್ ವಾಹನಗಳ ಹೊರತು)" ಎಂಬ ಪದಗಳನ್ನು ಮತ್ತು ಆವರಣಗಳನ್ನು ಸೇರಿಸತಕ್ಕದ್ದು;

(ಎಂ) ಐಟಮ್ 11ರಲ್ಲಿ ಕಾಲಂ (2)ರಲ್ಲಿ "15 ಲಕ್ಷ ರೂಪಾಯಿವರೆಗೆ" ಎಂಬ ಪದಗಳ ಮತ್ತು ಅಂಕೆಯ ಬದಲು "(ವಿದ್ಯುತ್ತ್ ವಾಹನಗಳ ಹೊರತು)" ಎಂಬ ಪದಗಳನ್ನು ಮತ್ತು ಆವರಣಗಳನ್ನು ಸೇರಿಸತಕ್ಕದ್ದು;

(ಎನ್) ಐಟಮ್ 12ರಲ್ಲಿ ಕಾಲಂ (2)ರಲ್ಲಿ "20 ಲಕ್ಷ ರೂಪಾಯಿವರೆಗೆ" ಎಂಬ ಪದಗಳ ಮತ್ತು ಅಂಕೆಗಳ ಬದಲು "(ವಿದ್ಯುತ್ತ್ ವಾಹನಗಳ ಹೊರತು)" ಎಂಬ ಪದಗಳನ್ನು ಮತ್ತು ಆವರಣಗಳನ್ನು ಸೇರಿಸತಕ್ಕದ್ದು;

(ಒ) ಐಟಮ್ 12ಎ ಯಲ್ಲಿ ಕಾಲಂ (2)ರಲ್ಲಿ "20 ಲಕ್ಷ ರೂಪಾಯಿಗಿಂತ ಹೆಚ್ಚು" ಎಂಬ ಪದಗಳ ಮತ್ತು ಅಂಕೆಗಳ ಬದಲು "(ವಿದ್ಯುತ್ತ್ ವಾಹನಗಳ ಹೊರತು)" ಎಂಬ ಪದಗಳನ್ನು ಮತ್ತು ಆವರಣಗಳನ್ನು ಸೇರಿಸತಕ್ಕದ್ದು;

(ಪಿ) ಐಟಮ್ 12ಎ ನಂತರ, ಮತ್ತು ಅದರ ಎದುರಿನ ಕಾಲಂ (1), (2) ಮತ್ತು (3) ನಮೂದಿನಲ್ಲಿ, ಈ ಕೆಳಗಿನ ಐಟಮ್ ಮತ್ತು ನಮೂದುಗಳನ್ನು ಅನುಕ್ರಮವಾಗಿ ಸೇರಿಸತಕ್ಕದ್ದು, ಅದೇನೆಂದರೆ:—

"12ಬಿ	ವಿದ್ಯುತ್ ಮೋಟಾರ್ ಕ್ಯಾಬ್‌ಗಳು ಮತ್ತು ವಿದ್ಯುತ್ತ್ ಟೂರಿಸ್ಟ್ ಮೋಟಾರ್ ಕ್ಯಾಬ್‌ಗಳು	ವಾಹನದ ಖರೀದಿ ಮೌಲ್ಯದ 5%."

8. 2004ರ 30ನೇ ಅಧಿನಿಯಮದ ತಿದ್ದುಪಡಿ.—2003ರ ಕೇರಳ ಮೌಲ್ಯವರ್ಧಿತ ತೆರಿಗೆ ಅಧಿನಿಯಮ (2004ರ 30)ದಲ್ಲಿ,—

(1) ವಿಭಾಗ 2ರಲ್ಲಿ,—

(ಎ) ಅಸ್ತಿತ್ವದಲ್ಲಿರುವ ಖಂಡ (i)ನ್ನು (iಬಿ) ಎಂದು ಪುನರಂಕಿತಗೊಳಿಸತಕ್ಕದ್ದು ಮತ್ತು ಆ ರೀತಿ ಪುನರಂಕಿತಗೊಳಿಸಿದ (iಬಿ) ಖಂಡಕ್ಕಿಂತ ಮೊದಲು ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(i) "ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರು" ಎಂದರೆ ಈ ಅಧಿನಿಯಮದ 3ನೇ ವಿಭಾಗದ ಉಪ-ವಿಭಾಗ (3)ರ ಪ್ರಕಾರ ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರಾಗಿ ನೇಮಿಸಲ್ಪಟ್ಟ ಯಾವನೇ ವ್ಯಕ್ತಿ ಎಂದರ್ಥ;

This is a digitally signed Gazette.
Authenticity may be verified through https://compose.kerala.gov.in/

(iಎ) ''ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರು (ಅಪೀಲುಗಳು)'' ಎಂದರೆ ಈ ಅಧಿನಿಯಮದ 3ನೇ ವಿಭಾಗದ ಉಪ-ವಿಭಾಗ (3)ರ ಪ್ರಕಾರ ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರಾಗಿ ನೇಮಿಸಲ್ಪಟ್ಟ ಯಾವನೇ ವ್ಯಕ್ತಿ ಎಂದರ್ಥ;'';

(ಬ) ಖಂಡ (ii)ರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(iiಎ) ''ಅಪೀಲು ಪ್ರಾಧಿಕಾರ'' ಎಂದರೆ 55ನೇ ವಿಭಾಗ ಪ್ರಕಾರ ಅಪೀಲನ್ನು ಆಲಿಸುವುದಕ್ಕಾಗಿ ಅಧಿಕೃತಗೊಳಿಸಿದ ಒಂದು ಪ್ರಾಧಿಕಾರ;'';

(ಸಿ) ಖಂಡ (v)ಯಲ್ಲಿ ''ಆಯುಕ್ತರು'' ಎಂಬ ಪದದ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಖಂಡ (vi)ಯ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(vi) ''ರಾಜ್ಯ ತೆರಿಗೆ ಸಹಾಯಕ ಆಯುಕ್ತರು'' ಎಂದರೆ, 3ನೇ ವಿಭಾಗದ ಉಪ-ವಿಭಾಗ (3)ರ ಪ್ರಕಾರ ರಾಜ್ಯ ತೆರಿಗೆ ಸಹಾಯಕ ಆಯುಕ್ತರಾಗಿ ನೇಮಿಸಲ್ಪಟ್ಟ ಯಾವನೇ ವ್ಯಕ್ತಿ;'';

(ಇ) ಖಂಡ (viಎ)ಯನ್ನು ಬಿಟ್ಟುಬಿಡತಕ್ಕದ್ದು;

(ಎಫ್) ಖಂಡ (xii)ಯ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(xii) ''ರಾಜ್ಯ ತೆರಿಗೆ ಆಯುಕ್ತರು'' ಎಂದರೆ, ಆ ರೀತಿಯಲ್ಲಿ ಸರಕಾರವು ನೇಮಿಸಿದ ರಾಜ್ಯ ತೆರಿಗೆ ಆಯುಕ್ತರು ಎಂದರ್ಥ;'';

(ಜಿ) ಖಂಡ (xiii)ವನ್ನು ಬಿಟ್ಟುಬಿಡತಕ್ಕದ್ದು;

(ಎಚ್) ಖಂಡ (xvi)ದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(xvi) ''ರಾಜ್ಯ ತೆರಿಗೆ ಉಪ ಆಯುಕ್ತರು'' ಎಂದರೆ, ವಿಭಾಗ 3ರ ಉಪ-ವಿಭಾಗ (3)ರ ಪ್ರಕಾರ ಒಬ್ಬ ರಾಜ್ಯ ತೆರಿಗೆ ಉಪ ಆಯುಕ್ತರಾಗಿ ನೇಮಿಸಲ್ಪಟ್ಟ ಯಾವನೇ ವ್ಯಕ್ತಿ ಎಂದರ್ಥ;'';

(ಐ) ಖಂಡ (xvii)ವನ್ನು ಬಿಟ್ಟುಬಿಡತಕ್ಕದ್ದು;

(ಜೆ) ಖಂಡ (xxiv)ದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(xxiv) ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂದರೆ, ವಿಭಾಗ 3ರ ಉಪ-ವಿಭಾಗ (3)ರ ಪ್ರಕಾರ ಒಬ್ಬ ರಾಜ್ಯ ತೆರಿಗೆ ಉಪ ಆಯುಕ್ತರಾಗಿ ನೇಮಿಸಲ್ಪಟ್ಟ ಯಾವನೇ ವ್ಯಕ್ತಿ ಎಂದರ್ಥ;'';

(ಕೆ) ಖಂಡ (xxivಎ)ದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(xxivಎ)'' ''ರಾಜ್ಯ ತೆರಿಗೆ ಜಂಟಿ ಆಯುಕ್ತರು (ಅಪೀಲುಗಳು)'' ಎಂದರೆ ವಿಭಾಗ 3ರ ಉಪ-ವಿಭಾಗ (3)ರ ಪ್ರಕಾರ ಒಬ್ಬ ರಾಜ್ಯ ತೆರಿಗೆ ಜಂಟಿ ಆಯುಕ್ತರು (ಅಪೀಲುಗಳು) ಆಗಿ ನೇಮಿಸಲ್ಪಟ್ಟ ಯಾವನೇ ವ್ಯಕ್ತಿ ಎಂದರ್ಥ;'';

(ಎಲ್) ಖಂಡ (xivi)ಯ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(xiviಎ) ''ರಾಜ್ಯ ತೆರಿಗೆ ವಿಶೇಷ ಆಯುಕ್ತರು'' ಎಂದರೆ, ಈ ಅಧಿನಿಯಮದ ವಿಭಾಗ 3ರ ಉಪ-ವಿಭಾಗ (3)ರ ಪ್ರಕಾರ ಒಬ್ಬ ರಾಜ್ಯ ತೆರಿಗೆ ವಿಶೇಷ ಆಯುಕ್ತರಾಗಿ ನೇಮಿಸಲ್ಪಟ್ಟ ಯಾವನೇ ವ್ಯಕ್ತಿ ಎಂದರ್ಥ;'';

(ಎಂ) ಖಂಡ (xivii)ದ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(xiviiಎ) ''ರಾಜ್ಯ ತೆರಿಗೆ ಅಧಿಕಾರಿ'' ಎಂದರೆ, ಈ ಅಧಿನಿಯಮದ ವಿಭಾಗ 3ರ ಉಪ-ವಿಭಾಗ (3)ರ ಪ್ರಕಾರ ಒಬ್ಬ ರಾಜ್ಯ ತೆರಿಗೆ ಅಧಿಕಾರಿಯಾಗಿ ನೇಮಿಸಲ್ಪಟ್ಟ ಯಾವನೇ ವ್ಯಕ್ತಿ ಎಂದರ್ಥ;'';

(2) ವಿಭಾಗ 3ರಲ್ಲಿ,—

(ಎ) ಉಪ-ವಿಭಾಗ (1)ರಲ್ಲಿ ''ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(ಬ) ಉಪ-ವಿಭಾಗ (2)ರಲ್ಲಿ ''ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (3)ರಲ್ಲಿ,—

(i) ''ಸರಕಾರಕ್ಕೆ, ಜಂಟಿ ಆಯುಕ್ತರುಗಳನ್ನು, ಸರಕಾರಕ್ಕೆ, ಜಂಟಿ ಆಯುಕ್ತರುಗಳನ್ನು (ಅಪೀಲುಗಳು), ಉಪ ಆಯುಕ್ತರುಗಳನ್ನು, ಉಪ ಆಯುಕ್ತರುಗಳನ್ನು (ಅಪೀಲುಗಳು) ಸಹಾಯಕ ಆಯುಕ್ತರುಗಳನ್ನು (ಅಪೀಲುಗಳು), ಸಹಾಯಕ ಆಯುಕ್ತರುಗಳನ್ನು, ವಾಣಿಜ್ಯ ತೆರಿಗೆ ಅಧಿಕಾರಿಗಳನ್ನು ಮುಂತಾದವರನ್ನು ನೇಮಿಸಬಹುದಾಗಿದೆ'' ಎಂಬ ಪದಗಳ, ಆವರಣಗಳ ಹಾಗೂ ಚಿಹ್ನೆಗಳ ಬದಲು ''ಸರಕಾರಕ್ಕೆ, ಅಗತ್ಯವಿರುವಷ್ಟು ರಾಜ್ಯ ತೆರಿಗೆ ವಿಶೇಷ ಆಯುಕ್ತರುಗಳನ್ನು, ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರುಗಳನ್ನು, ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರುಗಳನ್ನು (ಅಪೀಲುಗಳು), ರಾಜ್ಯ ತೆರಿಗೆ ಜಂಟಿ ಆಯುಕ್ತರುಗಳನ್ನು, ರಾಜ್ಯ ತೆರಿಗೆ ಜಂಟಿ ಆಯುಕ್ತರುಗಳನ್ನು (ಅಪೀಲುಗಳು), ರಾಜ್ಯ ತೆರಿಗೆ ಉಪ ಆಯುಕ್ತರುಗಳನ್ನು, ರಾಜ್ಯ ತೆರಿಗೆ ಸಹಾಯಕ ಆಯುಕ್ತರುಗಳನ್ನು, ರಾಜ್ಯ ತೆರಿಗೆ ಅಧಿಕಾರಗಳನ್ನು ಅಧಿಸೂಚನೆಯ ಮೂಲಕ ನೇಮಿಸಬಹುದಾಗಿದೆ'' ಎಂಬ ಪದಗಳನ್ನು ಚಿಹ್ನೆಗಳನ್ನು ಹಾಗೂ ಆವರಣಗಳನ್ನು ಸೇರಿಸತಕ್ಕದ್ದಾಗಿದೆ;

(ii) ''ಆಯುಕ್ತರಿಗೆ ನೇಮಿಸಬಹುದಾಗಿದೆ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರಿಗೆ ನೇಮಿಸಬಹುದಾಗಿದೆ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (4)ರಲ್ಲಿ, ಷರತ್ತಿನಲ್ಲಿ ''ಜಂಟಿ ಆಯುಕ್ತರು (ಅಪೀಲುಗಳು), ಉಪ ಆಯುಕ್ತರು (ಅಪೀಲುಗಳು) ಮತ್ತು ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ, ಆವರಣಗಳ ಹಾಗೂ ಚಿಹ್ನೆಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಇ) ಉಪ-ವಿಭಾಗ (5)ರಲ್ಲಿ, ''ಆಯುಕ್ತರು ಅಥವಾ ಉಪ-ಆಯುಕ್ತರು'' ಎಂಬ ಪದಗಳ ಹಾಗೂ ಚಿಹ್ನೆಗಳ ಬದಲು, ''ರಾಜ್ಯ ತೆರಿಗೆ ಆಯುಕ್ತರು ಅಥವಾ ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(3) ವಿಭಾಗ 4ರ ಉಪ-ವಿಭಾಗ (4)ರ ಖಂಡ (iv) ರಲ್ಲಿನ ''ವಾಣಿಜ್ಯ ತೆರಿಗೆ ಅಧಿಕಾರಿ'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಸಹಾಯಕ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(4) ವಿಭಾಗ 8ನ್ನು ಬಿಟ್ಟುಬಿಡತಕ್ಕದ್ದು;

(5) ವಿಭಾಗ 18ರ ಉಪ-ವಿಭಾಗ (1)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(6) ವಿಭಾಗ 18ಸಿ ಯನ್ನು ಬಿಟ್ಟುಬಿಡತಕ್ಕದ್ದು;

(7) ವಿಭಾಗ 20ರಲ್ಲಿ,—

(ಎ) ಉಪ-ವಿಭಾಗ (2ಎ)ಯಲ್ಲಿ, ಷರತ್ತಿನಲ್ಲಿ, ''ಆಯುಕ್ತರು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (3)ರಲ್ಲಿ, ''ಆಯುಕ್ತರು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (4)ರಲ್ಲಿ, ''ಆಯುಕ್ತರು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(8) ವಿಭಾಗ 20ಎ ಯಲ್ಲಿ, ಉಪ-ವಿಭಾಗ (1)ರಲ್ಲಿ ''ಉಪ-ಆಯುಕ್ತರುಗಳು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಜಂಟಿ ಆಯುಕ್ತರುಗಳು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(9) ವಿಭಾಗ 23ರಲ್ಲಿ, ಉಪ-ವಿಭಾಗ (1)ರಲ್ಲಿ ''ಉಪ-ಆಯುಕ್ತರುಗಳು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಜಂಟಿ ಆಯುಕ್ತರುಗಳು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(10) ವಿಭಾಗ 25ಬಿ ಯಲ್ಲಿ ''ಉಪ-ಆಯುಕ್ತರುಗಳು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಜಂಟಿ ಆಯುಕ್ತರುಗಳು'' ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(11) ವಿಭಾಗ 33ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ ''ಸಹಾಯಕ ಆಯುಕ್ತರುಗಳು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಉಪ-ಆಯುಕ್ತರುಗಳು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1)ರಲ್ಲಿ ''ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಉಪ-ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(12) ವಿಭಾಗ 42ರ ಉಪ-ವಿಭಾಗ (2)ರಲ್ಲಿ ನಾಲ್ಕನೇ ಷರತ್ತಿನಲ್ಲಿ ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(13) ವಿಭಾಗ 43ರ ಷರತ್ತಿನಲ್ಲಿನ ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(14) ವಿಭಾಗ 44ರಲ್ಲಿ,—

(ಎ) ಉಪ-ವಿಭಾಗ (3)ರ ಷರತ್ತಿನಲ್ಲಿ ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (7)ರ (ಬಿ) ಮತ್ತು (ಎಫ್) ಖಂಡಗಳಲ್ಲಿ ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(15) ವಿಭಾಗ 47ರಲ್ಲಿ,—

(ಎ) ಉಪ-ವಿಭಾಗ (3)ರಲ್ಲಿ ''ಅಥವಾ ಯಾವುದೇ ಚೆಕ್ ಪೋಸ್ಟುಗಳಿಗೆ'' ಅಥವಾ ವಾಣಿಜ್ಯ ತೆರಿಗೆ ಇಲಾಖೆಯ ಆಫೀಸಿಗೆ'' ಎಂಬ ಪದಗಳ ಬದಲು, ''ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಇಲಾಖೆಯ ಆಫೀಸಿಗೆ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (5)ರಲ್ಲಿ ''ವಾಣಿಜ್ಯ ತೆರಿಗೆ ಅಧಿಕಾರಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಅಧಿಕಾರಿ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (16ಎ)ಯಲ್ಲಿ ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(16) ವಿಭಾಗ 48ನ್ನು ಬಿಟ್ಟುಬಿಡತಕ್ಕದ್ದು;

(17) ವಿಭಾಗ 49ರಲ್ಲಿ,—

(ಎ) ಉಪ-ವಿಭಾಗ (1)ರಲ್ಲಿ, ''ವಾಣಿಜ್ಯ ತೆರಿಗೆ ಅಧಿಕಾರಿ'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಅಧಿಕಾರಿ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (2)ರಲ್ಲಿ, ''ಸಹಾಯಕ ಆಯುಕ್ತರು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಉಪ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (6)ರಲ್ಲಿ, ''ಉಪ ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (7)ರಲ್ಲಿ, ''ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಇ) ಉಪ-ವಿಭಾಗ (8ಎ)ಯಲ್ಲಿ, ''ಆಯುಕ್ತರು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(18) ವಿಭಾಗ 54ರ ಷರತ್ತಿನಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(19) ವಿಭಾಗ 55ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ ''ಜಂಟಿ ಆಯುಕ್ತರು (ಅಪೀಲುಗಳು), ಉಪ ಆಯುಕ್ತರು (ಅಪೀಲುಗಳು) ಮತ್ತು ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ, ಚಿಹ್ನೆಗಳ ಮತ್ತು ಆವರಣಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬ) ಉಪ-ವಿಭಾಗ (1)ರಲ್ಲಿ,—

(1) ''ಒಬ್ಬ ಸಹಾಯಕ ಆಯುಕ್ತರ ದರ್ಜೆಗಿಂತ ಮೇಲಿನ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರ ದರ್ಜೆಗಿಂತ ಮೇಲಿನ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(2) ಖಂಡ (i) ಮತ್ತು (ii)ರ ಬದಲು, ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(i) ರಾಜ್ಯ ತೆರಿಗೆ ಜಂಟಿ ಆಯುಕ್ತರು ಅಥವಾ ಅವರಿಗಿಂತ ಕೆಳಗಿನ ದರ್ಜೆಯಲ್ಲಿರುವ ಅಧಿಕಾರಿ ಜಾರಿಗೊಳಿಸಿದ ತೀರ್ಪು ಅಥವಾ ಆದೇಶಗಳ ಮೇಲೆ ರಾಜ್ಯ ತೆರಿಗೆ ಜಂಟಿ ಆಯುಕ್ತರು (ಅಪೀಲುಗಳು);

(ii) ರಾಜ್ಯ ತೆರಿಗೆ ಜಂಟಿ ಆಯುಕ್ತರು ಜಾರಿಗೊಳಿಸಿದ ತೀರ್ಪು ಅಥವಾ ಆದೇಶದ ಮೇಲೆ ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರು (ಅಪೀಲುಗಳು)'';

(3) ಎರಡನೇ ಮತ್ತು ಮೂರನೇ ಷರತ್ತಿನ ಬದಲು, ಈ ಕೆಳಗಿನ ಷರತ್ತುಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

''ಅಲ್ಲದೆ, ಪ್ರಸ್ತುತ ಕಾಲಾವಧಿಯೊಳಗೆ ಅಪೀಲು ಸಲ್ಲಿಸದಿರಲು, ಅರ್ಜಿದಾರನಿಗೆ ತಕ್ಕ ಕಾರಣವಿದೆಯೆಂದು ಅಪೀಲು ಪ್ರಾಧಿಕಾರಕ್ಕೆ ಮನವರಿಕೆಯಾದಲ್ಲಿ, ಪ್ರಸ್ತುತ ಕಾಲಾವಧಿಯು ಕಳೆದು ಸಲ್ಲಿಸುವ ಅಪೀಲನ್ನು ಸ್ವೀಕರಿಸಬಹುದಾಗಿದೆ:

ಮತ್ತೂ ಅಲ್ಲದೆ, ವಿವಾದಾತ್ಮಕ ಮೊತ್ತವನ್ನು ಪಾವತಿಸಿಮುಗಿಸಿದ ಕೇಸುಗಳ ಹೊರತಾದ ಒಬ್ಬ ವ್ಯಾಪಾರಿಗೆ, ಪ್ರಸ್ತುತ ಕಾಲಾವಧಿಯ ನಂತರವೂ, ಹಿಂದೆ ಫೈಲು ಮಾಡಿದ ಅಪೀಲುಗಳು ಯಾವುದೇ ಕಾರಣದಿಂದ ಸ್ವೀಕರಿಸದಿದ್ದಲ್ಲಿ, 2023 ಸೆಪ್ಟೆಂಬರ್ 30ರ ವರೆಗೆ ಅಪೀಲು ಪ್ರಾಧಿಕಾರದ ಸಮಕ್ಷದಲ್ಲಿ ಹೊಸ ಅಪೀಲನ್ನು ಸಲ್ಲಿಸಬಹುದಾಗಿದೆ.'';

(4) ಅಸ್ತಿತ್ವದಲ್ಲಿರುವ ನಾಲ್ಕನೆ ಷರತ್ತಿನ ಮೊದಲು, ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

''ಮತ್ತೂ ಅಲ್ಲದೆ, ಈ ವಿಭಾಗ ಪ್ರಕಾರ ಸಲ್ಲಿಸಿದ ಅಪೀಲುಗಳಲ್ಲಿ 2023 ಎಪ್ರೀಲ್ 1ನೇ ದಿನಾಂಕದಂದು ಇತ್ಯರ್ಥಗೊಳ್ಳದೆ ಬಾಕಿಯಾದ ಅಂತಹ ಅಪೀಲುಗಳು, ಈ ಅಧಿನಿಯಮದ ಪ್ರಕಾರ ಅಧಿಕೃತಗೊಳಿಸಿದ ಸಂಬಂಧಪಟ್ಟ ಪ್ರಾಧಿಕಾರಕ್ಕೆ ಹಸ್ತಾಂತರಿಸುವುದು ಮತ್ತು ಪ್ರಾಧಿಕಾರವು ಅದನ್ನು ಅದರ ಸಮಕ್ಷಕ್ಕೆ ಫೈಲು ಮಾಡಿದ ಅಪೀಲು ಎಂಬ ರೀತಿಯಲ್ಲಿ ಪರಿಗಣಿಸತಕ್ಕದ್ದು:'';

(ಸಿ) ಉಪ-ವಿಭಾಗ (4)ರಲ್ಲಿ,—

(i) ಒಂದನೇ ಷರತ್ತಿನಲ್ಲಿ, ''ಜಂಟಿ ಆಯುಕ್ತರು (ಅಪೀಲುಗಳು), ಉಪ ಆಯುಕ್ತರು (ಅಪೀಲುಗಳು) ಮತ್ತು ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ, ಚಿಹ್ನೆಗಳ ಮತ್ತು ಆವರಣಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಎರಡನೇ ಷರತ್ತಿನಲ್ಲಿ, ''ವಿವಾದಾತ್ಮಕ ತೆರಿಗೆ ಮೊತ್ತದ 20%'' ಎಂಬ ಪದಗಳ, ಚಿಹ್ನೆಗಳ ಮತ್ತು ಆವರಣಗಳ ಬದಲು ''ಗರಿಷ್ಠ 5 ಕೋಟಿ ರೂಪಾಯಿಗೆ ವಿಧೇಯವಾಗಿ, ವಿವಾದಾತ್ಮಕ ಮೊತ್ತ 10 ಶೇಕಡಾ ಮುಂಗಡ ಠೇವಣಿ'' ಎಂಬ ಪದಗಳನ್ನು ಚಿಹ್ನೆಗಳನ್ನು ಮತ್ತು ಅಂಕೆಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (5)ರಲ್ಲಿ,—

(i) ''ಜಂಟಿ ಆಯುಕ್ತರು (ಅಪೀಲುಗಳು), ಉಪ ಆಯುಕ್ತರು (ಅಪೀಲುಗಳು) ಮತ್ತು ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ, ಚಿಹ್ನೆಗಳ ಮತ್ತು ಆವರಣಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಒಂದನೇ ಷರತ್ತಿನಲ್ಲಿ, ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(iii) ಎರಡನೇ ಷರತ್ತಿನಲ್ಲಿ ''ಉಪ ಆಯುಕ್ತರು (ಅಪೀಲುಗಳು)'' ಎಂಬ ಪದಗಳ ಮತ್ತು ಆವರಣಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(ಇ) ಉಪ-ವಿಭಾಗ (6)ರಲ್ಲಿ, ಷರತ್ತಿನಲ್ಲಿ ''ಜಂಟಿ ಆಯುಕ್ತರು (ಅಪೀಲುಗಳು), ಉಪ ಆಯುಕ್ತರು (ಅಪೀಲುಗಳು) ಮತ್ತು ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ, ಚಿಹ್ನೆಯ ಮತ್ತು ಆವರಣಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಎಫ್) ಉಪ-ವಿಭಾಗ (7)ರಲ್ಲಿ, ''ಜಂಟಿ ಆಯುಕ್ತರು (ಅಪೀಲುಗಳು), ಉಪ ಆಯುಕ್ತರು (ಅಪೀಲುಗಳು) ಮತ್ತು ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ, ಚಿಹ್ನೆಗಳ ಮತ್ತು ಆವರಣಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(20) ವಿಭಾಗ 56ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (2)ರಲ್ಲಿ,—

(i) ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಖಂಡ (ಬಿ) ಯಲ್ಲಿ ''ಉಪ ಆಯುಕ್ತರು (ಅಪೀಲುಗಳು) ಅಥವಾ ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ ಮತ್ತು ಆವರಣಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (3)ರ ಷರತ್ತಿನಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(21) ವಿಭಾಗ 57ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1)ರಲ್ಲಿ,—

(i) ''ಉಪ ಆಯುಕ್ತರ ಪ್ರಕ್ರಿಯೆಗೆ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರ ಪ್ರಕ್ರಿಯೆಗೆ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಒಂದನೇ ಷರತ್ತಿನಲ್ಲಿ ''ಅಲ್ಲದೆ ಉಪ ಆಯುಕ್ತರು'' ಎಂಬ ಪದಗಳ ಬದಲು ''ಅಲ್ಲದೆ ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(iii) ಎರಡನೇ ಷರತ್ತಿನಲ್ಲಿ ''ಉಪ ಆಯುಕ್ತರು (ಅಪೀಲುಗಳು) ಅಥವಾ ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (3)ರಲ್ಲಿ,—

(i) ''ಉಪ ಆಯುಕ್ತರಿಗೆ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರಿಗೆ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಷರತ್ತಿನಲ್ಲಿ ''ಉಪ ಆಯುಕ್ತರು (ಅಪೀಲುಗಳು)'' ಎಂಬ ಪದಗಳ ಮತ್ತು ಆವರಣಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (4)ರ ಷರತ್ತಿನಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(22) ವಿಭಾಗ 58ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1)ರಲ್ಲಿ,—

(i) ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ''ಜಂಟಿ ಆಯುಕ್ತರು (ಅಪೀಲುಗಳು), ಉಪ ಆಯುಕ್ತರು (ಅಪೀಲುಗಳು) ಅಥವಾ ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ, ಚಿಹ್ನೆಗಳ ಹಾಗೂ ಆವರಣಗಳ ಬದಲು, ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (2)ರಲ್ಲಿ,—

(i) ''ಆಯುಕ್ತರು'' ಎಂಬ ಪದದ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಖಂಡ (ಬಿ)ಯಲ್ಲಿ ''ಜಂಟಿ ಆಯುಕ್ತರು (ಅಪೀಲುಗಳು), ಉಪ ಆಯುಕ್ತರು (ಅಪೀಲುಗಳು) ಅಥವಾ ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ, ಚಿಹ್ನೆಗಳ ಹಾಗೂ ಆವರಣಗಳ ಬದಲು, ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (3)ರಲ್ಲಿ ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(23) ವಿಭಾಗ 58ಎ ಯಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ, ''ಉಪ ಆಯುಕ್ತರರ (ಅಪೀಲುಗಳು) ಆದೇಶದ ಮೇಲೆ ಆಯುಕ್ತರು ಸ್ವತಃ'' ಎಂಬ ಪದಗಳ ಹಾಗೂ ಆವರಣಗಳ ಬದಲು ''ಅಪೀಲು ಪ್ರಾಧಿಕಾರದ ಆದೇಶದ ಮೇಲೆ ರಾಜ್ಯ ತೆರಿಗೆ ಆಯುಕ್ತರರು ಸ್ವತಃ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1)ರಲ್ಲಿ,—

(i) ''ಆಯುಕ್ತರು ಅಥವಾ ಯಾವುದೇ ಜಂಟಿ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು ಅಥವಾ ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ''ಉಪ ಆಯುಕ್ತರು (ಅಪೀಲುಗಳು) ಅಥವಾ ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ ಮತ್ತು ಆವರಣಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (2)ರಲ್ಲಿ ''ಆಯುಕ್ತರು ಅಥವಾ ಜಂಟಿ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು ಅಥವಾ ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (3)ರಲ್ಲಿ ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(24) ವಿಭಾಗ 59ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ ''ಆಯುಕ್ತರು'' ಎಂಬ ಪದದ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1)ರಲ್ಲಿ,—

(i) ''ಜಂಟಿ ಆಯುಕ್ತರರ (ಅಪೀಲುಗಳು) ಉಪ ಆಯುಕ್ತರರ (ಅಪೀಲುಗಳು) ಅಥವಾ ಸಹಾಯಕ ಆಯುಕ್ತರರ (ಅಪೀಲುಗಳು) ಆದೇಶದ ಹೊರತು ಉಪ ಆಯುಕ್ತರರು'' ಎಂಬ ಪದಗಳ ಹಾಗೂ ಆವರಣಗಳ ಬದಲು ''ಅಪೀಲು ಪ್ರಾಧಿಕಾರದ ಆದೇಶದ ಹೊರತು ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(ii) ''ಅಂತಹ ಆದೇಶವನ್ನು ಆಯುಕ್ತರ ಸಮಕ್ಷದಲ್ಲಿ'' ಎಂಬ ಪದಗಳ ಬದಲು ''ಅಂತಹ ಆದೇಶವನ್ನು ರಾಜ್ಯ ತೆರಿಗೆ ಆಯುಕ್ತರ ಸಮಕ್ಷದಲ್ಲಿ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(iii) ಷರತ್ತಿನಲ್ಲಿ ''ಆಯುಕ್ತರು'' ಎಂಬ ಪದದ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (3)ರ ಷರತ್ತಿನಲ್ಲಿ ''ಆಯುಕ್ತರು'' ಎಂಬ ಪದದ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (4)ರಲ್ಲಿ ''ಆಯುಕ್ತರು'' ಎಂಬ ಪದದ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(25) ವಿಭಾಗ 60ರಲ್ಲಿ,—

(ಎ) ಉಪ-ವಿಭಾಗ (1)ರಲ್ಲಿ,—

(i) ''ಜಂಟಿ ಆಯುಕ್ತರು (ಅಪೀಲುಗಳು), ಉಪ ಆಯುಕ್ತರು (ಅಪೀಲುಗಳು) ಮತ್ತು ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ, ಚಿಹ್ನೆಗಳ ಹಾಗೂ ಆವರಣಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) ಒಂದನೇ ಷರತ್ತಿನ ನಂತರ ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

''ಮತ್ತೂ ಅಲ್ಲದೆ, ವಿವಾದಾತ್ಮಕ ಮೊತ್ತವನ್ನು ಪಾವತಿಸಿ ಮುಗಿಸಿದುದರ ಹೊರತಾದ ಕೇಸುಗಳಲ್ಲಿ ಒಬ್ಬ ವ್ಯಾಪಾರಿಗೆ ಪ್ರಸ್ತುತ ಕಾಲಾವಧಿಯ ನಂತರವೂ ಹಿಂದೆ ಫೈಲು ಮಾಡಿದ ಅಪೀಲುಗಳನ್ನು ಯಾವುದೇ ಕಾರಣದಿಂದ ಸ್ವೀಕರಿಸದಿದ್ದಲ್ಲಿ 2023 ಸೆಪ್ಟೆಂಬರ್ 30ರ ವರೆಗೆ ಅಪೀಲು ಪ್ರಾಧಿಕಾರದ ಸಮಕ್ಷದಲ್ಲಿ ಹೊಸ ಅಪೀಲನ್ನು ಫೈಲುಮಾಡಬಹುದಾಗಿದೆ.'';

(iii) ಅಸ್ತಿತ್ವದಲ್ಲಿರುವ ಎರಡನೇ ಷರತ್ತಿನಲ್ಲಿ ''ಮತ್ತೂ ಅಲ್ಲದೆ'' ಎಂಬ ಪದಗಳ ಬದಲು ''ಅಲ್ಲದೆ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(iv) ಅಸ್ತಿತ್ವದಲ್ಲಿರುವ ಮೂರನೇ ಷರತ್ತಿನಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (1)ರ ನಂತರ, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(1ಎ) ಗರಿಷ್ಟ ಐದು ಕೋಟಿ ರೂಪಾಯಿಗೆ ವಿಧೇಯವಾಗಿ ವಿವಾದಾತ್ಮಕ ತೆರಿಗೆಯ 10 ಶೇಕಡಾವನ್ನು ಮುಂಗಡ ಠೇವಣಿಯಾಗಿ ಅಪೀಲು ಅರ್ಜಿದಾರನು ಪಾವತಿಸುವುದಾದಲ್ಲಿ ಬಾಕಿ ಮೊತ್ತಕ್ಕಿರುವ ಕ್ರಮಗಳನ್ನು ಅಪೀಲು ಇತ್ಯರ್ಥಗೊಳಿಸುವ ತನಕ ತಡೆದಿರುವುದಾಗಿ ಭಾವಿಸತಕ್ಕದ್ದು:

ಅಲ್ಲದೆ, 55ನೇ ವಿಭಾಗ ಪ್ರಕಾರ ಯಾವುದೇ ಮುಂಗಡ ಠೇವಣಿಯನ್ನು ಪಾವತಿಸಿದ್ದಲ್ಲಿ ಅದನ್ನು ಈ ಉಪ-ವಿಭಾಗ ಪ್ರಕಾರ ಪಾವತಿಸಬೇಕಾದ ಮೊತ್ತಕ್ಕೆ ಹೊಂದಾಣಿಕೆ ಮಾಡತಕ್ಕದ್ದು:

ಮತ್ತೂ ಅಲ್ಲದೆ, ಈ ಉಪ-ವಿಭಾಗ ಪ್ರಕಾರದ ಮುಂಗಡ ಠೇವಣಿ ಮೊತ್ತದಲ್ಲಿ ಅಧಿಕವಾಗಿ ಯಾವುದೇ ಪಾವತಿಸಿದ್ದಲ್ಲಿ ಅಪೀಲು ಇತ್ಯರ್ಥವಾಗುವ ತನಕ ಮರುಪಾವತಿಸತಕ್ಕದ್ದಲ್ಲ:'';

(ಸಿ) ಉಪ-ವಿಭಾಗ (2)ರಲ್ಲಿ ''ಜಂಟಿ ಆಯುಕ್ತರು (ಅಪೀಲುಗಳು), ಉಪ ಆಯುಕ್ತರು (ಅಪೀಲುಗಳು) ಮತ್ತು ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳು, ಚಿಹ್ನೆಗಳು ಮತ್ತು ಆವರಣಗಳು ಬರುವಲ್ಲೆಲ್ಲಾ ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (9)ರಲ್ಲಿ, ''ಸಂಬಂಧಪಟ್ಟ ಉಪ ಆಯುಕ್ತರು ಮತ್ತು ಆಯುಕ್ತರು'' ಎಂಬ ಪದಗಳ ಮತ್ತು ಚಿಹ್ನೆಗಳ ಬದಲು ''ಸಂಬಂಧಪಟ್ಟ ರಾಜ್ಯ ತೆರಿಗೆ ಜಂಟಿ ಆಯುಕ್ತರು ಮತ್ತು ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಮತ್ತು ಚಿಹ್ನೆಯನ್ನು ಸೇರಿಸತಕ್ಕದ್ದು;

(26) ವಿಭಾಗ 61 ರಲ್ಲಿ,—

(ಎ) ಉಪ-ವಿಭಾಗ (4)ರಲ್ಲಿ, ''ಉಪ ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

(ಬ) ಉಪ-ವಿಭಾಗ (5)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು, ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (8)ರಲ್ಲಿ, ''ಉಪ ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (9)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಇ) ಉಪ-ವಿಭಾಗ (13)ರಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(27) ವಿಭಾಗ 62 ರಲ್ಲಿ,—

(ಎ) ಉಪ-ವಿಭಾಗ (4)ರಲ್ಲಿ, ''ಆಯುಕ್ತರು'' ಎಂಬ ಪದದ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬ) ಉಪ-ವಿಭಾಗ (7)ರಲ್ಲಿ ''ಆಯುಕ್ತರು'' ಎಂಬ ಪದದ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (8)ರಲ್ಲಿ, ''ಆಯುಕ್ತರು'' ಎಂಬ ಪದದ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(28) ವಿಭಾಗ 63ರಲ್ಲಿ, (1)ನೇ ಉಪ-ವಿಭಾಗದಲ್ಲಿ ''ಆಯುಕ್ತರು'' ಎಂಬ ಪದವು ಬರುವಲ್ಲೆಲ್ಲಾ ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(29) ವಿಭಾಗ 65 ರಲ್ಲಿ,—

(ಎ) ''ಜಂಟಿ ಆಯುಕ್ತರು (ಅಪೀಲುಗಳು), ಉಪ ಆಯುಕ್ತರು (ಅಪೀಲುಗಳು), ಸಹಾಯಕ ಆಯುಕ್ತರು (ಅಪೀಲುಗಳು)'' ಎಂಬ ಪದಗಳ, ಚಿಹ್ನೆಗಳ ಮತ್ತು ಆವರಣಗಳ ಬದಲು ''ಅಪೀಲು ಪ್ರಾಧಿಕಾರ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬ) ''ಆಯುಕ್ತರ ಸಮಕ್ಷದಲ್ಲಿ'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರ ಸಮಕ್ಷದಲ್ಲಿ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(30) ವಿಭಾಗ 74ರ ಉಪ-ವಿಭಾಗ (1)ರಲ್ಲಿ ಖಂಡ (ಬ)ದಲ್ಲಿನ ಷರತ್ತಿನಲ್ಲಿ ''ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(31) ವಿಭಾಗ 82ರ ಷರತ್ತಿನಲ್ಲಿ ''ಉಪ ಆಯುಕ್ತರು'' ಎಂಬ ಪದಗಳ ಬದಲು ''ರಾಜ್ಯ ತೆರಿಗೆ ಜಂಟಿ ಆಯುಕ್ತರು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(32) ವಿಭಾಗ 85ರಲ್ಲಿ,—

(ಎ) ಉಪ-ವಿಭಾಗ (2)ರ ಖಂಡ (i)ಯಲ್ಲಿ ''ರಾಜ್ಯದ ವಾಣಿಜ್ಯ ತೆರಿಗೆ ಇಲಾಖೆ'' ಎಂಬ ಪದಗಳ ಬದಲು, ''ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಇಲಾಖೆ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬ) ಖಂಡ (x)ರಲ್ಲಿ, (ಎ) ಮತ್ತು (ಬ) ಉಪ-ಖಂಡಗಳ ಬದಲು ಈ ಕೆಳಗಿನ ಉಪ-ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

''(ಎ) ಅಂತಹ ವಿವರಣೆಗಳು ನೀಡಬೇಕಾದ ಅಧಿಕಾರಿಯು, ರಾಜ್ಯ ತೆರಿಗೆ ಜಂಟಿ ಆಯುಕ್ತರ ಅಧೀನ ಅಧಿಕಾರಿಯಾಗಿದ್ದಲ್ಲಿ, ರಾಜ್ಯ ತೆರಿಗೆ ಜಂಟಿ ಆಯುಕ್ತರರ ಅಂಗೀಕಾರ;

(ಬ) ಅಂತಹ ವಿವರಣೆಗಳನ್ನು ನೀಡಬೇಕಾದ ಅಧಿಕಾರಿಯು, ರಾಜ್ಯ ತೆರಿಗೆ ಜಂಟಿ ಆಯುಕ್ತರ ದರ್ಜೆಗಿಂತ ಕಡಿಮೆಯಲ್ಲದ ಅಧಿಕಾರಿಯಾಗಿದ್ದಲ್ಲಿ ರಾಜ್ಯ ತೆರಿಗೆ ಆಯುಕ್ತರು:'';

This is a digitally signed Gazette.
Authenticity may be verified through https://compose.kerala.gov.in/

(ಸಿ) ಉಪ-ವಿಭಾಗ (3)ರಲ್ಲಿ "ಆಯುಕ್ತರು" ಎಂಬ ಪದದ ಬದಲು "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(33) ವಿಭಾಗ 93ಎ ಯಲ್ಲಿ,—

(ಎ) ಉಪ-ವಿಭಾಗ (1)ರಲ್ಲಿ "ವಾಣಿಜ್ಯ ತೆರಿಗೆಗಳ ಇಲಾಖೆ" ಎಂಬ ಪದಗಳ ಬದಲು "ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಇಲಾಖೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (2)ರಲ್ಲಿ,—

(i) "ಆಯುಕ್ತರು" ಎಂಬ ಪದ ಬರುವಲ್ಲೆಲ್ಲಾ "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) "ವಾಣಿಜ್ಯ ತೆರಿಗೆಗಳ ಇಲಾಖೆ" ಎಂಬ ಪದಗಳ ಬದಲು "ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ ಇಲಾಖೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(34) ವಿಭಾಗ 94ರಲ್ಲಿ,—

(ಎ) ಉಪ-ವಿಭಾಗ (1)ರ ಖಂಡ (ಇ)ಯಲ್ಲಿ "ಆಯುಕ್ತರು ನಾಮನಿರ್ದೇಶಿಸುವ ಜಂಟಿ ಆಯುಕ್ತರು ಅಥವಾ ಉಪ ಆಯುಕ್ತರು" ಎಂಬ ಪದಗಳ ಬದಲು "ರಾಜ್ಯ ತೆರಿಗೆ ಆಯುಕ್ತರು ನಾಮನಿರ್ದೇಶಿಸುವ ರಾಜ್ಯ ತೆರಿಗೆ ಹೆಚ್ಚುವರಿ ಆಯುಕ್ತರು ಅಥವಾ ರಾಜ್ಯ ತೆರಿಗೆ ಜಂಟಿ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಉಪ-ವಿಭಾಗ (2)ರಲ್ಲಿ "ಆಯುಕ್ತರು" ಎಂಬ ಪದವು ಬರುವಲ್ಲೆಲ್ಲಾ "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಉಪ-ವಿಭಾಗ (5)ರಲ್ಲಿ "ಜಂಟಿ ಆಯುಕ್ತರು (ಅಪೀಲುಗಳು) ಉಪ-ಆಯುಕ್ತರು (ಅಪೀಲುಗಳು) ಮತ್ತು ಸಹಾಯಕ ಆಯುಕ್ತರು (ಅಪೀಲುಗಳು)" ಎಂಬ ಪದಗಳ, ಚಿಹ್ನೆಗಳ ಹಾಗೂ ಆವರಣಗಳ ಬದಲು "ಅಪೀಲು ಪ್ರಾಧಿಕಾರ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಉಪ-ವಿಭಾಗ (6)ರಲ್ಲಿ "ಆಯುಕ್ತರು" ಎಂಬ ಪದಗಳ ಬದಲು "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಇ) ಉಪ-ವಿಭಾಗ (7)ರಲ್ಲಿ "ಆಯುಕ್ತರು" ಎಂಬ ಪದದ ಬದಲು "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಎಫ್) ಉಪ-ವಿಭಾಗ (8)ರಲ್ಲಿ "ಆಯುಕ್ತರು" ಎಂಬ ಪದವು ಬರುವಲ್ಲೆಲ್ಲಾ "ರಾಜ್ಯ ತೆರಿಗೆ ಆಯುಕ್ತರು" ಎಂಬ ಪದಗಳನ್ನು ಸೇರಿಸತಕ್ಕದ್ದು.

9. 2007ರ 8ನೇ ಅಧಿನಿಯಮದ ತಿದ್ದುಪಡಿ.—2007ರ ಕೇರಳ ರಸ್ತೆ ಸುರಕ್ಷೆ ಪ್ರಾಧಿಕಾರ ಅಧಿನಿಯಮ (2007ರ 8),—

ಅಸ್ತಿತ್ವದಲ್ಲಿರುವ ಅನುಸೂಚಿಯ ಬದಲು, ಈ ಕೆಳಗಿನ ಅನುಸೂಚಿಯನ್ನು ಸೇರಿಸತಕ್ಕದ್ದು;

"ಅನುಸೂಚಿ

(ವಿಭಾಗ 10 ನೋಡಿರಿ)

ಕ್ರಮ ನಂಬ್ರ	ಮೋಟಾರು ವಾಹನಗಳ ವರ್ಗ	ಸೆಸ್ ದರ (ರೂಪಾಯಿ)
1	ಭಾರದ ಮೋಟಾರು ವಾಹನ	500
2	ಮಧ್ಯಮ ಮೋಟಾರು ವಾಹನ	300
3	ಲಘು ಮೋಟಾರು ವಾಹನ	200
4	ದ್ವಿ ಚಕ್ರವಾಹನ	100"

This is a digitally signed Gazette.
Authenticity may be verified through https://compose.kerala.gov.in/

10. 2008ರ 21ನೇ ಅಧಿನಿಯಮದ ತಿದ್ದುಪಡಿ.—2008ರ ಕೇರಳ ಹಣಕಾಸು ಅಧಿನಿಯಮದ (2008ರ 21) ವಿಭಾಗ 6ರಲ್ಲಿ ಉಪ-ವಿಭಾಗ (2)ರ ನಂತರ, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2ಎ) (1) ಸೆಸ್ಸನ್ನು ತೆರಿಗೆ ಪಾವತಿಸಲು ಬಾದ್ಯಸ್ಥರಾದ ವ್ಯಾಪಾರಿಗಳಿಂದ ವಸೂಲಿ ಮಾಡತಕ್ಕದ್ದು ಹಾಗೂ ಸಂಗ್ರಹಿಸತಕ್ಕದ್ದು,—

(i) 1963ರ ಕೇರಳ ಸಾಮಾನ್ಯ ಮಾರಾಟ ತೆರಿಗೆ ಅಧಿನಿಯಮ (1963ರ 15)ದ ವಿಭಾಗ 5ರ ಉಪ-ವಿಭಾಗ (1)ರ ಖಂಡ (ಎ)ಯ ಪ್ರಕಾರ, 1963ರ ಕೇರಳ ಸಾಮಾನ್ಯ ಮಾರಾಟ ತೆರಿಗೆ ಅಧಿನಿಯಮ (1963ರ 15)ದ ಅನುಸೂಚಿಯ ಕ್ರಮನಂಬ್ರ 1ರ (ii) ಮತ್ತು (iii) ಉಪ-ನಮೂದಿನಲ್ಲಿರುವ ಹೈಸ್ಪೀಡ್ ಡೀಸಲ್ ಆಯಿಲ್ ಮತ್ತು ಪೆಟ್ರೋಲಿಗೆ ಲೀಟರಿಗೆ ಎರಡು ರೂಪಾಯಿ ದರದಲ್ಲಿ;

(ii) 1963ರ ಕೇರಳ ಸಾಮಾನ್ಯ ಮಾರಾಟ ತೆರಿಗೆ ಅಧಿನಿಯಮದ (1963ರ 15) ವಿಭಾಗ 5ರ ಉಪ-ವಿಭಾಗ (1)ರ ಖಂಡ (ಬಿ)ಯ ಕೆಳಗಿನ,—

(ಎ) 1963ರ ಕೇರಳ ಸಾಮಾನ್ಯ ಮಾರಾಟ ತೆರಿಗೆ ಅಧಿನಿಯಮ (1963ರ 15)ದ ಅನುಸೂಚಿಯ ಕ್ರಮನಂಬ್ರ 2ರ ಕೆಳಗಿರುವ ಒಂದು ಬಾಟ್ಲಿ ವಿದೇಶ ಮದ್ಯಕ್ಕೆ ಗರಿಷ್ಠ ಚಿಲ್ಲರೆ ಬೆಲೆ 500 ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಾಗಿ ಆದರೆ 999 ರೂಪಾಯಿಗಿಂತ ಹೆಚ್ಚಳವಲ್ಲದ ವಿದೇಶಮದ್ಯಕ್ಕೆ ಪ್ರತಿ ಬಾಟ್ಲಿಗೆ ಇಪ್ಪತ್ತು ರೂಪಾಯಿ ದರದಲ್ಲಿ;

(ಬಿ) 1963ರ ಕೇರಳ ಸಾಮಾನ್ಯ ಮಾರಾಟ ತೆರಿಗೆ ಅಧಿನಿಯಮ (1963ರ 15)ದ ಅನುಸೂಚಿಯ ಕ್ರಮನಂಬ್ರ 2ರ ಕೆಳಗಿರುವ ಒಂದು ಬಾಟ್ಲಿ ವಿದೇಶ ಮದ್ಯಕ್ಕೆ ಗರಿಷ್ಠ ಚಿಲ್ಲರೆ ಬೆಲೆ 1000 ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಾದ ವಿದೇಶಮದ್ಯಕ್ಕೆ ಒಂದು ಬಾಟ್ಲಿಗೆ ನಲ್ವತ್ತು ರೂಪಾಯಿ ದರದಲ್ಲಿ; ಸೆಸ್ಸ್ ಹೊರಿಸಿ ವಸೂಲಿಮಾಡತಕ್ಕದ್ದು;

(2) ಆ ರೀತಿ ವಸೂಲಿಮಾಡಿದ ಸೆಸ್ಸ್ (1)ನೇ ಉಪ-ವಿಭಾಗ ಪ್ರಕಾರ ವಸೂಲಿ ಮಾಡಿದ ಯಾವುದಾದರೂ ಸೆಸ್ಸ್‌ನ ಹೊರತಾಗಿರುವುದಾಗಿದೆ;

(3) 2008ರ ಕೇರಳ ಹಣಕಾಸು ಅಧಿನಿಯಮ (2008ರ 21)ದ 6ನೇ ವಿಭಾಗದ ಉಪ-ವಿಭಾಗ (4)ರಲ್ಲಿ "ಉಪ-ವಿಭಾಗ (1) ಎಂಬ ಪದಗಳ, ಆವರಣಗಳ ಮತ್ತು ಅಂಕೆಯ ನಂತರ "ಮತ್ತು ಉಪ-ವಿಭಾಗ (2ಎ)" ಎಂಬ ಪದಗಳನ್ನು, ಆವರಣಗಳನ್ನು ಮತ್ತು ಅಂಕೆಯನ್ನು ಸೇರಿಸತಕ್ಕದ್ದು.".

11. 2017ರ 20ನೇ ಅಧಿನಿಯಮದ ತಿದ್ದುಪಡಿ.—2017ರ ಕೇರಳ ರಾಜ್ಯ ಸರಕುಗಳ ಮತ್ತು ಸೇವೆಗಳ ಅಧಿನಿಯಮ (2017ರ 20) ದಲ್ಲಿ,—

(1) ವಿಭಾಗ 10ರಲ್ಲಿ,—

(ಎ) ಉಪ-ವಿಭಾಗ (2)ರ ಖಂಡ (ಡಿ)ಯಲ್ಲಿ "ಸರಕು ಅಥವಾ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(ಬಿ) ಉಪ-ವಿಭಾಗ (2ಎ)ಯ ಖಂಡ (ಸಿ)ಯಲ್ಲಿ "ಸರಕು ಅಥವಾ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(2) ವಿಭಾಗ 16ರ ಉಪ-ವಿಭಾಗ (2)ರಲ್ಲಿ,—

(i) ಎರಡನೇ ಷರತ್ತಿನಲ್ಲಿ "ಆತನ ಹೂಡುವಳಿ ತೆರಿಗೆ ಬಾದ್ಯತೆಯು ಅದರ ಮೇಲಿನ ಬಡ್ಡಿಯೊಂದಿಗೆ" ಎಂಬ ಪದಗಳ ಹಾಗೂ ಸಂಖ್ಯೆಯ ಬದಲು 50ನೇ ವಿಭಾಗದ ಪ್ರಕಾರ ಪಾವತಿಸಬೇಕಾದ ಬಡ್ಡಿಯೊಂದಿಗೆ ಆತನು ಪಾವತಿಸತಕ್ಕದ್ದು" ಎಂಬುವುದನ್ನು ಬದಲಿಸತಕ್ಕದ್ದು;

(ii) ಮೂರನೇ ಷರತ್ತಿನಲ್ಲಿ "ಆತನು ಸಂದಾಯ ಮಾಡಿದ" ಎಂಬ ಪದಗಳ ನಂತರ "ಪೂರೈಕೆದಾರನಿಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(3) ವಿಭಾಗ 17ರಲ್ಲಿ,—

(ಎ) ಉಪ-ವಿಭಾಗ (3)ರಲ್ಲಿ ವಿವರಣೆಯಲ್ಲಿ, "5ನೇ ಖಂಡಿಕೆಯಲ್ಲಿ ನಿರ್ದಿಷ್ಟಪಡಿಸಿದುವುಗಳನ್ನು ಹೊರತುಪಡಿಸಿ" ಎಂಬ ಪದಗಳ ಮತ್ತು ಸಂಖ್ಯೆಯ ಬದಲು ಈ ಕೆಳಗಿನ ಪದಗಳನ್ನು ಮತ್ತು ಅಂಕೆಯನ್ನು ಸೇರಿಸತಕ್ಕದ್ದು:—

"ಈ ಕೆಳಗೆ ಹೇಳಿದುದರ ಹೊರತು,—

(i) ಪ್ರಸ್ತುತ ಅನುಸೂಚಿಯ 5ನೇ ಖಂಡಿಕೆಯಲ್ಲಿ ನಿರ್ದಿಷ್ಟಪಡಿಸಿರುವ ಕಾರ್ಯಗಳ ಹಾಗೂ ವ್ಯವಹಾರಗಳ ಮೌಲ್ಯ; ಹಾಗೂ

This is a digitally signed Gazette.
Authenticity may be verified through https://compose.kerala.gov.in/

(ii) ಪ್ರಸ್ತುತ ಅನುಸೂಚಿಯ 8ನೇ ಖಂಡಿಕೆಯ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ಕಾರ್ಯಗಳ ಹಾಗೂ ವ್ಯವಹಾರಗಳ ಮೌಲ್ಯ";

(ಬ) ಉಪ-ವಿಭಾಗ (5)ರ ಖಂಡ (ಎಫ್)ದ ನಂತರ, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು; ಅದೇನೆಂದರೆ:—

"(ಎಫ್ ಎ) ತೆರಿಗೆದಾಯಕ ವ್ಯಕ್ತಿಯು ಸರಕುಗಳನ್ನೋ ಸೇವೆಗಳನ್ನೋ ಅವೆರಡನ್ನೋ ಸ್ವೀಕರಿಸಿರುವುದು 2013 ಕಂಪೆನಿಗಳ ಅಧಿನಿಯಮದ 135ನೇ ವಿಭಾಗ ಪ್ರಕಾರದ ಕೋರ್ಪರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ ಎಂಬ ಆತನ ಬಾಧ್ಯತೆಯಾಗಿ ಸಂಬಂಧಪಟ್ಟ ವ್ಯವಹಾರಗಳಿಗೆ ಉಪಯೋಗಿಸುವುದೋ ಉಪಯೋಗಿಸಲು ಉದ್ದೇಶಿಸಿದ್ದಲ್ಲಿ.";

(4) ವಿಭಾಗ 23ರ ಬದಲು ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು ಮತ್ತು ಅದನ್ನು 2017 ಜುಲೈ 1ನೇ ದಿನಾಂಕದಿಂದ ಬದಲಿಯಾಗಿ ಸೇರಿಸಲ್ಪಟ್ಟಿರುವುದಾಗಿ ಭಾವಿಸತಕ್ಕದ್ದು, ಅದೇನೆಂದರೆ:—

"23. ನೋಂದಣಿಗೆ ಹೊಣೆಗಾರರಲ್ಲದ ವ್ಯಕ್ತಿಗಳು.—(1) ಈ ಕೆಳಗಿನ ವ್ಯಕ್ತಿಗಳು ನೋಂದಣಿ ಮಾಡಲು ಹೊಣೆಗಾರರಾಗಿರುವುದಿಲ್ಲ, ಅದೇನೆಂದರೆ:—

(i) ಈ ಅಧಿನಿಯಮದ ಕೆಳಗೆ ಅಥವಾ 2017ರ ಏಕೀಕೃತ ಸರಕುಗಳ ಮತ್ತು ಸೇವೆಗಳ ತೆರಿಗೆ ಅಧಿನಿಯಮ ಕೆಳಗೆ ತೆರಿಗೆ ಪಾವತಿಸಲು ಹೊಣೆಗಾರರಲ್ಲದ ಅಥವಾ ತೆರಿಗೆ ಪಾವತಿಸುವುದರಿಂದ ಪೂರ್ಣವಾಗಿ ಹೊರತುಪಡಿಸಿದ ಸರಕುಗಳೋ ಸೇವೆಗಳೋ ಅವೆರಡನ್ನೋ ಪೂರೈಕೆ ಮಾಡುವ ವ್ಯಾಪಾರದಲ್ಲಿ ಏರ್ಪಟ್ಟಿರುವ ಯಾವನೇ ಒಬ್ಬ ವ್ಯಕ್ತಿ;

(ii) ಭೂಮಿಯಲ್ಲಿ ಕೃಷಿ ಮಾಡುವ ಉತ್ಪನ್ನಗಳನ್ನು ವಿತರಣೆ ಮಾಡುವಲ್ಲಿ, ಒಬ್ಬ ಕೃಷಿಕನು;

(2) ವಿಭಾಗ 22 ಮತ್ತು ವಿಭಾಗ 24ರ ಉಪ-ವಿಭಾಗ (1)ರ ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ಸರಕಾರಕ್ಕೆ ಕೌನ್ಸಿಲಿನ ಶಿಫಾರಸಿನ ಪ್ರಕಾರ, ಅಧಿಸೂಚನೆಯ ಮುಖೇನ ಅದರಲ್ಲಿ ನಿರ್ದಿಷ್ಟಪಡಿಸಿದಂತಹ ಷರತ್ತುಗಳಿಗೆ ಮತ್ತು ನಿಬಂಧನೆಗಳಿಗೆ ವಿಧೇಯವಾಗಿ, ಈ ಅಧಿನಿಯಮದ ಪ್ರಕಾರದ ನೋಂದಣಿ ಮಾಡುವುದರಿಂದ ಹೊರತುಪಡಿಸಬೇಕಾದ ವ್ಯಕ್ತಿಗಳ ವರ್ಗಗಳನ್ನು ನಿರ್ದಿಷ್ಟಪಡಿಸಬಹುದಾಗಿದೆ.";

(5) ವಿಭಾಗ 37ರ ಉಪ-ವಿಭಾಗ (4)ರಲ್ಲಿ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(5) ಉಪ-ವಿಭಾಗ (1)ರ ಪ್ರಕಾರ ಪ್ರತಿಯೊಂದು ತೆರಿಗೆ ಕಾಲಾವಧಿಯಲ್ಲಿ ಪಾವತಿಸಬೇಕಾದ ಹೊರಮುಖ ಪೂರೈಕೆಗಳ ವಿವರಣೆಗಳನ್ನು ಆಯಾಯ ಕಾಲಾವಧಿಯಲ್ಲಿ ಪಾವತಿಸಬೇಕಾದ ಕೊನೆಯ ದಿನಾಂಕದಿಂದ ಮೂರು ವರ್ಷ ಕೊನೆಗೊಂಡಲ್ಲಿ ಅದರ ವಿವರಣೆಗಳನ್ನು ನೀಡುವುದಕ್ಕೆ ನೋಂದಾಯಿತ ವ್ಯಕ್ತಿಯನ್ನು ಅನುಮತಿಸತಕ್ಕದ್ದಲ್ಲ:

ಮತ್ತೂ ಅಲ್ಲದೆ ಸರಕಾರಕ್ಕೆ, ಕೌನ್ಸಿಲಿನ ಶಿಫಾರಸಿನ ಪ್ರಕಾರ, ಅಧಿಸೂಚನೆಯ ಮುಖೇನ, ಅದರಲ್ಲಿ ನಿರ್ದಿಷ್ಟಪಡಿಸಿದ ಕೆಲವು ಷರತ್ತುಗಳಿಗೆ ಮತ್ತು ನಿರ್ಬಂದಗಳಿಗೆ ವಿಧೇಯವಾಗಿ, ನೋಂದಾಯಿತ ಒಬ್ಬ ವ್ಯಕ್ತಿಯನ್ನು ನೋಂದಾಯಿತ ಒಂದು ವಿಭಾಗದ ವ್ಯಕ್ತಿಗಳನ್ನು (1)ನೇ ಉಪ-ವಿಭಾಗ ಪ್ರಕಾರ ಪ್ರತಿಯೊಂದು ತೆರಿಗೆ ಕಾಲಾವಧಿಯಲ್ಲೂ ಸಲ್ಲಿಸಬೇಕಾದ ಹೊರಮುಖ ಪೂರೈಕೆಯ ವಿವರಣೆಗಳನ್ನು ಆಯಾಯ ಕಾಲಾವಧಿಯಲ್ಲಿ ಸಲ್ಲಿಸಬೇಕಾದ ಕೊನೆಯ ದಿನಾಂಕದಿಂದ ಮೂರು ವರ್ಷ ಕೊನೆಗೊಂಡಿದ್ದರೂ ಅನುಮತಿಸಬಹುದಾಗಿದೆ.";

(6) ವಿಭಾಗ 39ರಲ್ಲಿ, ಉಪ-ವಿಭಾಗ (10) ನಂತರ, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು ಅದೇನೆಂದರೆ:—

"(11) ಪ್ರತಿಯೊಂದು ತೆರಿಗೆಯ ಕಾಲಾವಧಿಯಲ್ಲೂ ಸಲ್ಲಿಸಬೇಕಾದ ಒಂದು ರಿಟರ್ನ್ ಸಲ್ಲಿಸುವುದಕ್ಕಿರುವ ಕೊನೆಯ ದಿನಾಂಕದಿಂದ ಮೂರು ವರ್ಷ ಕೊನೆಗೊಂಡಿದ್ದಲ್ಲಿ ಆ ರಿಟರ್ನ್ನನ್ನು ಸಲ್ಲಿಸಲು ನೋಂದಣಿ ಮಾಡಿದ ವ್ಯಕ್ತಿಯನ್ನು ಅನುಮತಿಸತಕ್ಕದ್ದಲ್ಲ:

ಮತ್ತೂ ಅಲ್ಲದೆ ಸರಕಾರಕ್ಕೆ, ಕೌನ್ಸಿಲಿನ ಶಿಫಾರಸ್ನ ಮೇಲೆ ಅಧಿಸೂಚನೆಯ ಮುಖೇನ, ನಿರ್ದಿಷ್ಟವಾದ ಕೆಲವು ಷರತ್ತುಗಳ ಮತ್ತು ನಿರ್ಬಂಧಗಳಿಗೆ ವಿಧೇಯವಾಗಿ, ನೋಂದಾಯಿತ ಒಬ್ಬ ವ್ಯಕ್ತಿಯನ್ನೋ, ನೋಂದಾಯಿತ ಒಂದು ವಿಭಾಗ ವ್ಯಕ್ತಿಗಳನ್ನೋ ಪ್ರತಿಯೊಂದು ತೆರಿಗೆ ಕಾಲಾವಧಿಯಲ್ಲೂ ರಿಟರ್ನ್ ಸಲ್ಲಿಸುವುದಕ್ಕಿರುವ ಕೊನೆಯ ದಿನಾಂಕದಿಂದ ಮೂರು ವರ್ಷ ಕೊನೆಗೊಂಡಿದ್ದರೂ ಅನುಮತಿಸಬಹುದಾಗಿದೆ.";

(7) ವಿಭಾಗ 44ರಲ್ಲಿ, ಅಸ್ತಿತ್ವದಲ್ಲಿರುವ ಉಪಬಂಧವನ್ನು ಉಪ-ವಿಭಾಗ (1) ಪುನರಂಕಿತಗೊಳಿಸತಕ್ಕದ್ದು ಮತ್ತು ಆ ರೀತಿ ಪುನರಂಕಿತಗೊಳಿಸಿದ (1)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2) ಆರ್ಥಿಕ ವರ್ಷದ ತಳಹದಿಯಲ್ಲಿ (1)ನೇ ಉಪ-ವಿಭಾಗ ಪ್ರಕಾರ ಸಲ್ಲಿಸಬೇಕಾದ ರಿಟರ್ನ್ ಕೊನೆಯ ದಿನಾಂಕದಿಂದ ಮೂರು ವರ್ಷ ಕೊನೆಗೊಂಡಿದ್ದಲ್ಲಿ ಆ ವಾರ್ಷಿಕ ರಿಟರ್ನ್ನನ್ನು ಸಲ್ಲಿಸಲು ನೋಂದಣಿ ಮಾಡಿದ ವ್ಯಕ್ತಿಯನ್ನು ಅನುಮತಿಸತಕ್ಕದ್ದಲ್ಲ:

This is a digitally signed Gazette.
Authenticity may be verified through https://compose.kerala.gov.in/

ಮತ್ತೂ ಅಲ್ಲದೆ ಸರಕಾರಕ್ಕೆ, ಕೌನ್ಸಿಲಿನ ಶಿಫಾರಸಿನ ಮೇರೆಗೆ ಅಧಿಸೂಚನೆಯ ಮುಖೇನ, ಅದರಲ್ಲಿ ನಿರ್ದಿಷ್ಟ ಷರತ್ತುಗಳಿಗೆ ಹಾಗೂ ನಿರ್ಬಂದಗಳಿಗೆ ವಿಧೇಯವಾಗಿ, ನೋಂದಾಯಿತ ಒಬ್ಬ ವ್ಯಕ್ತಿಯನ್ನೋ, ನೋಂದಾಯಿತ ಒಂದು ವಿಭಾಗ ವ್ಯಕ್ತಿಗಳನ್ನೋ (1)ನೇ ಉಪ-ವಿಭಾಗ ಪ್ರಕಾರ ಪ್ರತಿಯೊಂದು ಆರ್ಥಿಕ ವರ್ಷದಲ್ಲೂ ಸಲ್ಲಿಸಬೇಕಾದ ಒಂದು ವಾರ್ಷಿಕ ರಿಟರ್ನ್ಸ್‌ನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕದಿಂದ ಮೂರು ವರ್ಷ ಕೊನೆಗೊಂಡಿದ್ದರೂ ಅನುಮತಿಸಬಹುದಾಗಿದೆ.";

(8) ವಿಭಾಗ 52ರಲ್ಲಿ, ಉಪ-ವಿಭಾಗ (14)ರ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(15) ಉಪ-ವಿಭಾಗ (4)ರ ಪ್ರಕಾರ ಸಲ್ಲಿಸಬೇಕಾದ ವಿವರಣೆಯನ್ನು ಅದನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕದಿಂದ ಮೂರು ವರ್ಷ ಕೊನೆಗೊಂಡಿದ್ದಲ್ಲಿ ಆ ವಿವರಣೆಯನ್ನು ಸಲ್ಲಿಸಲು ಒಬ್ಬ ಆಪರೇಟರನ್ನು ಅನುಮತಿಸುವಂತದ್ದಲ್ಲ:

ಮತ್ತೂ ಅಲ್ಲದೆ ಸರಕಾರಕ್ಕೆ, ಕೌನ್ಸಿಲಿನ ಶಿಫಾರಸಿನ ಮೇರೆಗೆ, ಅಧಿಸೂಚನೆಯ ಮುಖೇನ, ಅದರಲ್ಲಿ ನಿರ್ದಿಷ್ಟಪಡಿಸಿದ ಕೆಲವು ಷರತ್ತುಗಳಿಗೆ ಮತ್ತು ನಿರ್ಬಂದಗಳಿಗೆ ವಿಧೇಯವಾಗಿ ಒಬ್ಬ ಆಪರೇಟರನ್ನೋ ಒಂದು ವಿಭಾಗ ಆಪರೇಟರುಗಳನ್ನೋ (4)ನೇ ಉಪ-ವಿಭಾಗ ಪ್ರಕಾರ ಸಲ್ಲಿಸಬೇಕಾದ ವಿವರಣೆಯನ್ನು ಅದನ್ನು ಸಲ್ಲಿಸಬೇಕಾದ ಕೊನೆಯ ದಿನಾಂಕದಿಂದ ಮೂರು ವರ್ಷ ಕೊನೆಗೊಂಡಿದ್ದರೂ ಅನುಮತಿಸಬಹುದಾಗಿದೆ.";

(9) ವಿಭಾಗ 54ರ ಉಪ-ವಿಭಾಗ (6)ರಲ್ಲಿ "ತಾತ್ಕಾಲಿಕವಾಗಿ ಅಂಗೀಕರಿಸಿದ ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಹೊರತುಪಡಿಸಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(10) ವಿಭಾಗ 56ರಲ್ಲಿ "ಪ್ರಸ್ತುತ ಉಪ-ವಿಭಾಗದ ಕೆಳಗೆ ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರುವತ್ತು ದಿವಸಗಳು ಮುಕ್ತಾಯಗೊಂಡ ನಂತರದ ನಿಕಟಾನಂತರದ ದಿನಾಂಕದಿಂದ ಅಂತಹ ತೆರಿಗೆಯು ಮರುಪಾವತಿಯಾಗುವವರೆಗೆ" ಎಂಬ ಪದಗಳ ಬದಲು "ಅರ್ಜಿಯನ್ನು ಸ್ವೀಕರಿಸಿದ ದಿನಾಂಕದಿಂದ ಅರುವತ್ತು ದಿವಸಗಳಿಗಿಂತಲೂ ಹೆಚ್ಚು ತೆರಿಗೆ ಮರುಪಾವತಿ ನೀಡುವತನಕದ ಕಾಲವಿಳಂಬಕ್ಕೆ ನಿಗದಿಪಡಿಸಬಹುದಾದ ರೀತಿಯಲ್ಲಿ ಕೆಲವು ಷರತ್ತುಗಳಿಗೆ ಮತ್ತು ನಿರ್ಬಂದಗಳಿಗೆ ವಿಧೇಯವಾಗಿ ಆ ರೀತಿ ಲೆಕ್ಕಮಾಡಿ" ಎಂಬ ಪದಗಳನ್ನು ಸೇರಿಸತಕ್ಕದ್ದು;

(11) ವಿಭಾಗ 73ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ, "ಉದ್ದೇಶ ಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು" ಎಂಬ ಪದಗಳ ಬದಲು "ಉದ್ದೇಶ ಪೂರ್ವಕವಾಗಿ—ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು" ಎಂಬ ಪದಗಳನ್ನು ಹಾಗೂ ಚಿಹ್ನೆಗಳನ್ನು ಸೇರಿಸತಕ್ಕದ್ದು;

(ಬ) ಉಪ-ವಿಭಾಗ (1)ರಲ್ಲಿ "ಉದ್ದೇಶ ಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು" ಎಂಬ ಪದಗಳ ಬದಲು "ಉದ್ದೇಶ ಪೂರ್ವಕವಾಗಿ—ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು" ಎಂಬ ಪದಗಳನ್ನು ಹಾಗೂ ಚಿಹ್ನೆಗಳನ್ನು ಸೇರಿಸತಕ್ಕದ್ದು;

(12) ವಿಭಾಗ 74ರಲ್ಲಿ,—

(ಎ) ಪಾರ್ಶ್ವ ಶೀರ್ಷಿಕೆಯಲ್ಲಿ, "ಉದ್ದೇಶ ಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು" ಎಂಬ ಪದಗಳ ಬದಲು "ಉದ್ದೇಶ ಪೂರ್ವಕವಾಗಿ—ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು" ಎಂಬ ಪದಗಳನ್ನು ಹಾಗೂ ಚಿಹ್ನೆಗಳನ್ನು ಸೇರಿಸತಕ್ಕದ್ದು;

(ಬ) ಉಪ-ವಿಭಾಗ (1)ರಲ್ಲಿ "ಉದ್ದೇಶ ಪೂರ್ವಕವಾಗಿ ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು" ಎಂಬ ಪದಗಳ ಬದಲು "ಉದ್ದೇಶ ಪೂರ್ವಕವಾಗಿ-ಯಾವುದೇ ಸಂಗತಿಗಳನ್ನು ತಪ್ಪಾಗಿ ಹೇಳುವುದು" ಎಂಬ ಪದಗಳನ್ನು ಹಾಗೂ ಚಿಹ್ನೆಗಳನ್ನು ಸೇರಿಸತಕ್ಕದ್ದು;

(13) ವಿಭಾಗ 122ರ ಉಪ-ವಿಭಾಗ (1ಎ)ಯ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(1ಬಿ) ಯಾವುದೇ ವಿದ್ಯುನ್ಮಾನ ವಾಣಿಜ್ಯ ನಿರ್ವಾಹಕ,—

(i) ಈ ಅಧಿನಿಯಮದ ಕೆಳಗೆ ಜಾರಿಗೊಳಿಸಿದ ಒಂದು ಅಧಿಸೂಚನೆಯ ಮುಖೇನ ರಜಿಸ್ಟ್ರೇಶನ್‌ನಿಂದ ಹೊರತುಪಡಿಸಲ್ಪಟ್ಟ ಒಬ್ಬ ವ್ಯಕ್ತಿಯಲ್ಲದೆ, ರಿಜಿಸ್ಟರ್, ಮಾಡದ ಒಬ್ಬ ವ್ಯಕ್ತಿಗೆ ಸರಕುಗಳ, ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯನ್ನು ಈ ಮೂಲಕ ಮಾಡಲು ಅನುಮತಿಸಿದಲ್ಲಿ;

(ii) ಅಂತಹ ಅಂತರ ರಾಜ್ಯ ಪೂರೈಕೆ ಮಾಡಲು ಅರ್ಹನಲ್ಲದ ಒಬ್ಬ ವ್ಯಕ್ತಿಗೆ ಸರಕು, ಸೇವೆಗಳ ಅಥವಾ ಅವುಗಳೆರಡರ ಅಂತರ ರಾಜ್ಯ ಪೂರೈಕೆಯನ್ನು ಈ ಮೂಲಕ ಮಾಡಲು ಅನುಮತಿಸಿದಲ್ಲಿ; ಅಲ್ಲದಿದ್ದಲ್ಲಿ

This is a digitally signed Gazette.
Authenticity may be verified through https://compose.kerala.gov.in/

(iii) ಈ ಅಧಿನಿಯಮದ ಪ್ರಕಾರ ರಿಜಿಸ್ಟ್ರೇಶನ್ ಪಡೆಯುವುದರಿಂದ ಹೊರತುಪಡಿಸಲ್ಪಟ್ಟ ಒಬ್ಬ ವ್ಯಕ್ತಿಯೂ ಈ ಮೂಲಕ ನಡೆಸಿದ ಸರಕುಗಳಿಗೆ ಸಂಬಂಧಿಸಿದ ಯಾವುದೇ ಒಂದು ಹೊರಮುಖ ಪೂರೈಕೆಯ ವಿವರಣೆಗಳನ್ನು 52ನೇ ವಿಭಾಗದ (4)ನೇ ಉಪ-ವಿಭಾಗ ಪ್ರಕಾರ ನೀಡಬೇಕಾದ ವಿವರಣೆಯಲ್ಲಿ ಸರಿಯಾಗಿ ನೀಡುವುದರಲ್ಲಿ ನ್ಯೂನತೆಮಾಡಿದ್ದಲ್ಲಿ;

ಇತ್ಯಾದಿಗಳನ್ನು ಮಾಡಿದ್ದಲ್ಲಿ ದಂಡವಾಗಿ, ಹತ್ತು ಸಾವಿರ ರೂಪಾಯಿ ಅಥವಾ 10ನೇ ವಿಭಾಗ ಪ್ರಕಾರ ತೆರಿಗೆ ಪಾವತಿಸುವ ಒಬ್ಬ ವ್ಯಕ್ತಿ ಆಲ್ಲದ ರಿಜಿಸ್ಟ್ರೇಶನಿರುವ ಒಬ್ಬ ವ್ಯಕ್ತಿಯು ಇಂತಹ ಪೂರೈಕೆಯನ್ನು ಮಾಡಿದ್ದಲ್ಲಿ ಅನ್ವಯವಾಗುವ ತೆರಿಗೆಗೆ ಸಮಾನವಾದ ಮೊತ್ತ ಇದರಲ್ಲಿ ಯಾವುದು ಹೆಚ್ಚೋ ಅದನ್ನು ಪಾವತಿಸಲು ಹೊಣೆಗಾರನಾಗಿರುವನು.";

(14) ವಿಭಾಗ 132, ಉಪ-ವಿಭಾಗ (1)ರಲ್ಲಿ,—

(ಎ) ಖಂಡಗಳಾದ (ಜಿ), (ಜೆ) ಮತ್ತು (ಕೆ)ಯನ್ನು ಬಿಟ್ಟುಬಿಡತಕ್ಕದ್ದು;

(ಬಿ) ಖಂಡ (ಎಲ್)ದಲ್ಲಿದ್ದ "ಖಂಡಗಳಾದ (ಎ) ಯಿಂದ (ಕೆ) ಗಳಲ್ಲಿ" ಎಂಬ ಪದಗಳ, ಆವರಣಗಳ ಹಾಗೂ ಅಕ್ಷರಗಳ ಬದಲು "ಖಂಡಗಳಾದ (ಎ) ಯಿಂದ (ಎಫ್) ಮತ್ತು ಖಂಡಗಳಾದ (ಎಚ್) ಮತ್ತು (ಐ) ಗಳಲ್ಲಿ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಸಿ) ಖಂಡ (iii)ರಲ್ಲಿ "ಯಾವುದೇ ಇತರ ಅಪರಾಧದ" ಎಂಬ ಪದಗಳ, ಆವರಣಗಳ ಮತ್ತು ಅಕ್ಷರಗಳ ಬದಲು "ಖಂಡ (ಬಿ)ಯಲ್ಲಿ ನಿರ್ದಿಷ್ಟಪಡಿಸಿದ ಒಂದು ಅಪರಾಧ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಡಿ) ಖಂಡ (iv)ರಲ್ಲಿ "ಖಂಡ (ಜಿ) ಅಥವಾ ಖಂಡ (ಜೆ) ಯಲ್ಲಿ" ಎಂಬ ಪದಗಳನ್ನು, ಆವರಣಗಳನ್ನು ಹಾಗೂ ಅಕ್ಷರಗಳನ್ನು ಬಿಟ್ಟುಬಿಡತಕ್ಕದ್ದು;

(15) ವಿಭಾಗ 138ರಲ್ಲಿ,—

(ಎ) ಉಪ-ವಿಭಾಗ (1)ರ ಪ್ರಥಮ ಷರತ್ತಿನಲ್ಲಿ,—

(i) ಖಂಡ (ಎ)ಯ ಬದಲು, ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎ) 132ನೇ ವಿಭಾಗದಲ್ಲಿ ಉಪ-ವಿಭಾಗ (1)ರಲ್ಲಿ, (ಎ) ಯಿಂದ (ಎಫ್) ವರೆಗಿನ ಮತ್ತು (ಎಚ್), (ಡಿ) ಮತ್ತು (ಎಲ್) ಎಂಬೀ ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಯಾವುದೇ ಅಪರಾಧಗಳಿಗೆ ಸಂಬಂಧಿಸಿ ಒಬ್ಬ ವ್ಯಕ್ತಿಯನ್ನು ಒಂದು ಬಾರಿ ರಾಜಿ ಮಾಡಲು ಅನುಮತಿಸಬಹುದಾಗಿದೆ;";

(ii) ಖಂಡ (ಬಿ)ಯನ್ನು ಬಿಟ್ಟುಬಿಡತಕ್ಕದ್ದು;

(iii) ಖಂಡ (ಸಿ)ಯ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಸಿ) 132ನೇ ವಿಭಾಗದ ಉಪ-ವಿಭಾಗ (1)ರ ಖಂಡ (ಬಿ) ಪ್ರಕಾರದ ಒಂದು ಅಪರಾಧ ಮಾಡಿದುದಾಗಿ ಆಪಾದಿಸಲ್ಪಡುವ ವ್ಯಕ್ತಿ;";

(iv) ಖಂಡ (ಇ)ಯನ್ನು ಬಿಟ್ಟುಬಿಡತಕ್ಕದ್ದು;

(ಬಿ) ಉಪ-ವಿಭಾಗ (2)ರಲ್ಲಿ "ಹತ್ತು ಸಾವಿರ ರೂಪಾಯಿ ಅಥವಾ ಒಳಗೊಂಡಿರುವ ತೆರಿಗೆಯ ಶೇಕಡಾ ಐವತ್ತರಷ್ಟು, ಇವುಗಳಲ್ಲಿ ಯಾವುದು ಹೆಚ್ಚೋ ಅದು, ಮೊತ್ತ ಗರಿಷ್ಟ ಮೂವತ್ತು ಸಾವಿರ ರೂಪಾಯಿ ಅಥವಾ ಒಳಗೊಂಡಿರುವ ತೆರಿಗೆಯ ಶೇಕಡಾ ನೂರ ಐವತ್ತರಷ್ಟು, ಇವುಗಳಲ್ಲಿ ಯಾವುದು ಹೆಚ್ಚೋ" ಎಂಬ ಪದಗಳ ಬದಲು "ಒಳಗೊಂಡಿರುವ ತೆರಿಗೆಯ ಇಪ್ಪತ್ತೈದು ಶೇಕಡಾ ಮತ್ತು ಗರಿಷ್ಟ ಮೊತ್ತವು ಒಳಗೊಂಡಿರುವ ತೆರಿಗೆಯ ನೂರು ಶೇಕಡಾಕ್ಕಿಂತ ಹೆಚ್ಚಳವಲ್ಲದ" ಎಂಬ ಪದಗಳನ್ನು ಸೇರಿಸತಕ್ಕದ್ದು;

(16) 158ನೇ ವಿಭಾಗದ ನಂತರ, ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು; ಅದೇನೆಂದರೆ:—

"158ಎ. ತೆರಿಗೆದಾಯಕ ವ್ಯಕ್ತಿಯು ಸಲ್ಲಿಸಿದ ಮಾಹಿತಿಯನ್ನು ಸಮ್ಮತಿಯಿಂದ ಹಂಚಿಕೊಳ್ಳುವಿಕೆ.—(1) 133, 152, 158 ಎಂಬೀ ವಿಭಾಗಗಲ್ಲಿ ಏನೇ ಒಳಗೊಂಡಿದ್ದರೂ, ಒಬ್ಬ ನೋಂದಾಯಿತ ವ್ಯಕ್ತಿಯು ನೀಡಿದ ಈ ಕೆಳಗಿನ ಮಾಹಿತಿಗಳು (2)ನೇ ಉಪ-ವಿಭಾಗದ ಉಪಬಂಧಗಳಿಗೆ ಅನುಸಾರವಾಗಿ ಮತ್ತು ಕೌನ್ಸಿಲಿನ ಶಿಫಾರಸಿನಿಂದ ಸಾಮಾನ್ಯ ಪೋರ್ಟಲ್‌ನಿಂದ ಸರಕಾರವು ಅಧಿಸೂಚಿಸುವ ಇತರ ವ್ಯವಸ್ಥೆಗೆ ಅಂತಹ ರೀತಿಯಲ್ಲಿ ಮತ್ತು ಅಂತಹ ಷರತ್ತುಗಳಿಗನುಸಾರವಾಗಿ ಹಂಚಿಕೊಳ್ಳಬಹುದಾಗಿದೆ, ಅದೇನೆಂದರೆ:—

This is a digitally signed Gazette.
Authenticity may be verified through https://compose.kerala.gov.in/

(ಎ) 25ನೇ ವಿಭಾಗದ ಪ್ರಕಾರ ನೀಡಿದ ನೋಂದಣಿಗಿರುವ ಅರ್ಜಿಯಲ್ಲಿನ ಅಥವಾ 39ನೇ ವಿಭಾಗ ಪ್ರಕಾರ ಅಥವಾ 44ನೇ ವಿಭಾಗ ಪ್ರಕಾರ ನೀಡಿದ ರಿಟರ್ನ್ನಲ್ಲಿ ಅಡಕವಾದ ವಿಶದಾಂಶಗಳು;

(ಬ) ಇನ್ವಾಯ್ಸ್ ಸಿದ್ಧಪಡಿಸುವುದಕ್ಕಾಗಿ ಸಾಮಾನ್ಯ ಪೋರ್ಟಲ್ನಲ್ಲಿ ನೀಡಿದ ವಿಶದಾಂಶಗಳು, 37ನೇ ವಿಭಾಗ ಪ್ರಕಾರ ನೀಡಿರುವ ಹೊರಮುಖ ಪೂರೈಕೆಯ ವಿಶದಾಂಶಗಳು ಮತ್ತು 68ನೇ ವಿಭಾಗಕ್ಕೆ ಸಂಬಂಧಿಸಿದ ದಾಖಲೆಗಳನ್ನು ಸಿದ್ಧಪಡಿಸುವುದಕ್ಕಾಗಿ ಸಾಮಾನ್ಯ ಪೋರ್ಟಲ್ನಲ್ಲಿ ನೀಡಿದ ವಿಶದಾಂಶಗಳು;

(ಸಿ) ಅಪ್ರಕಾರ ನಿರ್ದಿಷ್ಟಪಡಿಸಬಹುದಾದ ಇತರ ವಿಶದಾಂಶಗಳು.

(2) (1)ನೇ ಉಪ-ವಿಭಾಗದ ಪ್ರಕಾರವಿರುವ ವಿಶದಾಂಶಗಳನ್ನು ಹಂಚಿಕೊಳ್ಳುವ ಅಗತ್ಯಕ್ಕಾಗಿ ಈ ಕೆಳಗಿನ ರೀತಿಯಲ್ಲಿ ಸಮ್ಮತಿಯನ್ನು ಪಡೆಯತಕ್ಕದ್ದು—

(ಎ) (1)ನೇ ಉಪ-ವಿಭಾಗದ (ಎ), (ಬ) ಹಾಗೂ (ಸಿ) ಖಂಡಗಳ ಪ್ರಕಾರ ನೀಡಿದ ವಿಶದಾಂಶಗಳಿಗೆ ಸಂಬಂಧಿಸಿ ಪೂರೈಕೆದಾರನು, ಹಾಗೂ

(ಬ) (1)ನೇ ಉಪ-ವಿಭಾಗದ (ಬ) ಖಂಡದ ಪ್ರಕಾರ ನೀಡಿದ ವಿಶದಾಂಶಗಳಿಗೆ ಸಂಬಂಧಿಸಿ, ಅದೂ ಅಲ್ಲದೆ (1)ನೇ ಉಪ-ವಿಭಾಗದ (ಸಿ) ಖಂಡದ ಪ್ರಕಾರ ಅಂತಹ ವಿಶದಾಂಶಗಳಲ್ಲಿ ಸ್ವೀಕರಿಸುವವನ ಗುರುತು ವಿವರಣೆಗಳನ್ನು ಒಳಪಡಿಸಿದರೆ ಮಾತ್ರ ಅಂತಹ ರೂಪದಲ್ಲೂ ಅಂತಹ ರೀತಿಯಲ್ಲೂ ಸ್ವೀಕರಿಸುವವನ ಸಮ್ಮತವನ್ನು ಗಳಿಸತಕ್ಕದ್ದು;

(ಸಿ) ಅಪ್ರಕಾರ ನಿರ್ದಿಷ್ಟಪಡಿಸಬಹುದಾದ ಇತರ ವಿಶದಾಂಶಗಳು.

(3) ಅಸ್ತಿತ್ವದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ವಿಭಾಗದ ಅಡಿಯಲ್ಲಿ ಹಂಚಿಕೊಳ್ಳುವ ಮಾಹಿತಿಗಳಿಂದಾಗಿ ಉಂಟಾಗುವ ಯಾವುದೇ ಹೊಣೆಗಾರಿಕೆಗೆ ಸಂಬಂಧಿಸಿ ಸರಕಾರಕ್ಕೋ ಸಾಮಾನ್ಯ ಪೋರ್ಟಲ್ಗೋ ವಿರುದ್ಧವಾಗಿ ಯಾವುದೇ ಕ್ರಮ ಕೈಗೊಳ್ಳುವಂತದ್ದಲ್ಲ ಮತ್ತು ಪ್ರಸ್ತುತ ಪೂರೈಕೆಗೆ ಅಥವಾ ತೆರಿಗೆ ಸಂಬಂಧಿಸಿ ತೆರಿಗೆ ವಸೂಲಿಮಾಡುವುದಕ್ಕಿರುವ ಹೊಣೆಗಾರಿಕೆಯ ಮೇಲೆ ಯಾವುದೇ ರೀತಿಯ ಪರಿಣಾಮವುಂಟಾಗುವುದಲ್ಲ.".

(17) ಅನುಸೂಚಿ IIIರ ಚಟುವಟಿಕೆಗಳಿಗೆ ಮತ್ತು ವಹಿವಾಟುಗಳಿಗೆ ಪೂರ್ವಾನ್ವಯ ವಿನಾಯಿತಿ,—

(1) ಅನುಸೂಸೂಚಿ IIIರ 7 ಮತ್ತು 8 ಖಂಡಗಳು ಮತ್ತು ಅದರ ವಿವರಣೆ 2 (2018ರ ಕೇರಳ ರಾಜ್ಯ ಸರಕುಗಳ ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ (2018ರ 36)ನ 31ನೇ ವಿಭಾಗದಲ್ಲಿ ಸೇರಿಸಿರುವಂತೆ)ನ್ನು 2017 ಜುಲೈ 1ನೇ ದಿನಾಂಕದಿಂದ ಸೇರಿಸಲ್ಪಟ್ಟಿರುವುದಾಗಿ ಭಾವಿಸತಕ್ಕದ್ದು;

(2) ಅವಶ್ಯವಿರುವ ಎಲ್ಲಾ ಸಮಯದಲ್ಲೂ (1)ನೇ ಉಪ-ವಿಭಾಗವು ಪ್ರಾಬಲ್ಯದಲ್ಲಿದ್ದರೂ, ಆ ರೀತಿ ತೆರಿಗೆ ವಸೂಲಿಮಾಡತಕ್ಕದ್ದಲ್ಲದಾಗಿದ್ದರೂ ತೆರಿಗೆಯನ್ನು ವಸೂಲಿ ಮಾಡಿದ್ದಲ್ಲಿ ಅದನ್ನು ರೀಫಂಡ್ ನೀಡುವಂತದ್ದಲ್ಲ.

12. ಅಪೀಲು ಫೈಲು ಮಾಡುವುದಕ್ಕಿರುವ ವಿಶೇಷ ಉಪಬಂಧ.—2017ರ ಕೇರಳ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ (2017ರ 20)ದ 174ನೇ ವಿಭಾಗದ ಉಪ-ವಿಭಾಗ (1)ರಲ್ಲಿ ಮತ್ತು 1976ರ ಕೇರಳ ಆಡಂಭರಗಳ ಮೇಲಿನ ತೆರಿಗೆ ಅಧಿನಿಯಮ (1976ರ 32)ದಲ್ಲಿ (ಇನ್ನು ಮುಂದೆ ರದ್ದತಿ ಅಧಿನಿಯಮ ಎಂದು ಕರೆಯಲ್ಪಡುವ) ಮತ್ತು ಅದರ ಅಡಿಯಲ್ಲಿ ರಚಿಸಲ್ಪಟ್ಟ ನಿಯಮಗಳಲ್ಲಿ ಅಥವಾ ಯಾವುದೇ ನ್ಯಾಯಾಲಯದ, ನ್ಯಾಯಾಧಿಕರಣದ ಅಥವಾ ಅಪೀಲು ಪ್ರಾಧಿಕಾರದ ಯಾವುದೇ ತೀರ್ಪಿನಲ್ಲಿ, ಡಿಕ್ರಿಯಲ್ಲಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ,—

(ಎ) (1) ವಿವಾದಾಸ್ಪದ ಮೊತ್ತವನ್ನು ಪಾವತಿಸಿ ಮುಗಿಸಿದುದರ ಹೊರತು ಇರುವ ವಿಷಯಗಳಲ್ಲಿ ಒಬ್ಬ ವ್ಯಾಪಾರಿಗೆ ರದ್ದುಗೊಳಿಸಲ್ಪಟ್ಟ ಅಧಿನಿಯಮದ 7ನೇ ವಿಭಾಗದ ಉಪ-ವಿಭಾಗ (1) ಪ್ರಕಾರ ಸೂಚಿಸಿದ ಕಾಲಾವಧಿಯು ಮುಗಿದ ನಂತರವೂ ರದ್ದುಗೊಳಿಸಲ್ಪಟ್ಟ ಅಧಿನಿಯಮದ 7ನೇ ವಿಭಾಗದ (1)ನೇ ಉಪ-ವಿಭಾಗದ ಪ್ರಕಾರ ಸಮರ್ಪಿಸಿದ ಅಪೀಲು ಯಾವುದೇ ಕಾರಣದಿಂದ ಮೊದಲು ಸ್ವೀಕರಿಸಿರದಿದ್ದಲ್ಲಿ 2023 ಸೆಪ್ಟೆಂಬರ್ 30ನೇ ದಿನಾಂಕಕ್ಕಿಂತ ಮುಂಚಿತವಾಗಿ ಅಪೀಲು ಪ್ರಾಧಿಕಾರದ ಸಮಕ್ಷದಲ್ಲಿ ಹೊಸತಾಗಿ ಅಪೀಲು ಸಲ್ಲಿಸಬಹುದಾಗಿದೆ:

This is a digitally signed Gazette.
Authenticity may be verified through https://compose.kerala.gov.in/

ಮತ್ತೂ ಅಲ್ಲದೆ, ಈ ಉಪ-ವಿಭಾಗದ ಅಡಿಯಲ್ಲಿ ಸಲ್ಲಿಸಿದ ಅಪೀಲು ರದ್ದುಗೊಳಿಸಲ್ಪಟ್ಟ ಅಧಿನಿಯಮದ 7ನೇ ವಿಭಾಗದ (1)ನೇ ಉಪ-ವಿಭಾಗದ ಅಡಿಯಲ್ಲಿ ಫೈಲು ಮಾಡಿದ ಅಪೀಲು ಎಂಬಂತೆ ಅಪೀಲು ಪ್ರಾಧಿಕಾರವು ಪರಿಗಣಿಸತಕ್ಕದ್ದು.

(2) ಅಪೀಲುದಾರನು ಕನಿಷ್ಠ 5 ಕೋಟಿ ರೂಪಾಯಿಗೆ ಒಳಪಟ್ಟು ವಿವಾದಾಸ್ಪದ ತೆರಿಗೆ ಮೊತ್ತ 10 ಶೇಕಡಾವನ್ನು ಮುಂಗಡ ಠೇವಣಿಯಾಗಿ ಪಾವತಿಸಿದಲ್ಲಿ, ರದ್ದುಗೊಳಿಸಿದ ಕಾನೂನು ಪ್ರಕಾರ ಪಾವತಿಸಬೇಕಾದ ಬಾಕಿ ಮೊತ್ತವನ್ನು ವಸೂಲಿ ಮಾಡುವುದರ ವಿರುದ್ಧದ ಮುಂದುವರಿದ ಕ್ರಮಗಳನ್ನು ತೀರ್ಪುಗೊಳಿಸುವವರೆಗೆ ತಡೆದಿಡಬಹುದಾಗಿದೆ.

(ಬ) (1) ವಿವಾದಾಸ್ಪದ ಮೊತ್ತವನ್ನು ಪಾವತಿಸಿ ಮುಗಿಸಿದುದರ ಹೊರತು ಇರುವ ವಿಷಯಗಳಲ್ಲಿ, ಒಬ್ಬ ವ್ಯಾಪಾರಿಗೆ ರದ್ದುಗೊಳಿಸಲ್ಪಟ್ಟ ಅಧಿನಿಯಮದ 7ಎ ವಿಭಾಗದ ಉಪ-ವಿಭಾಗ (1)ರ ಪ್ರಕಾರ ಸೂಚಿಸಿದ ಕಾಲಾವಧಿಯು ಕೊನೆಗೊಂಡ ನಂತರ ಮತ್ತು ರದ್ದುಗೊಳಿಸಲ್ಪಟ್ಟ ಅಧಿನಿಯಮದ 7ಎ ವಿಭಾಗದ (1)ನೇ ಉಪ-ವಿಭಾಗ ಪ್ರಕಾರ ಸಲ್ಲಿಸಿದ ಅಪೀಲು ಯಾವುದೇ ಕಾರಣದಿಂದ ಮೊದಲು ಸ್ವೀಕರಿಸದಿದ್ದಲ್ಲಿ 2023 ಸೆಪ್ಟೆಂಬರ್ 30ನೇ ದಿನಾಂಕಕ್ಕಿಂತ ಮುಂಚಿತವಾಗಿ ಅಪೀಲು ನ್ಯಾಯಾಧೀಕರಣದ ಸಮಕ್ಷದಲ್ಲಿ ಹೊಸತಾಗಿ ಅಪೀಲು ಸಲ್ಲಿಸಬಹುದಾಗಿದೆ:

ಮತ್ತೂ ಅಲ್ಲದೆ, ಈ ಉಪ-ವಿಭಾಗದ ಅಡಿಯಲ್ಲಿ ಸಲ್ಲಿಸಿದ ಅಪೀಲು ರದ್ದುಗೊಳಿಸಲ್ಪಟ್ಟ ಅಧಿನಿಯಮದ 7ಎ ವಿಭಾಗದ (1)ನೇ ಉಪ-ವಿಭಾಗದ ಅಡಿಯಲ್ಲಿ ಫೈಲು ಮಾಡಿದ ಅಪೀಲು ಎಂಬಂತೆ ಅಪೀಲು ನ್ಯಾಯಾಧೀಕರಣವು ಪರಿಗಣಿಸತಕ್ಕದ್ದು.

(2) ಅಪೀಲುದಾರನು ರದ್ದತಿ ಅಧಿನಿಯಮದ ಅಡಿಯಲ್ಲಿ ಗರಿಷ್ಠ 5 ಕೋಟಿ ರೂಪಾಯಿಗೆ ಒಳಪಟ್ಟು ವಿವಾದಾಸ್ಪದ ತೆರಿಗೆ ಮೊತ್ತ 10 ಶೇಕಡಾವನ್ನು ಮುಂಗಡ ಠೇವಣಿಯಾಗಿ ಪಾವತಿಸಿದಲ್ಲಿ, ರದ್ದುಗೊಳಿಸಿದ ಕಾನೂನು ಪ್ರಕಾರ ಪಾವತಿಸಬೇಕಾದ ಬಾಕಿ ಮೊತ್ತವನ್ನು ವಸೂಲಿ ಮಾಡುವುದರ ವಿರುದ್ಧ ಮುಂದುವರಿದ ಕ್ರಮಗಳನ್ನು ಅಪೀಲು ತೀರ್ಪುಗೊಳಿಸುವವರೆಗೆ ತಡೆದಿಡಬಹುದಾಗಿದೆ:

ಮತ್ತೂ ಅಲ್ಲದೆ, (ಎ) ಖಂಡದ (2)ನೇ ಉಪ-ಖಂಡದಲ್ಲಿನ ಷರತ್ತಿನ ಪ್ರಕಾರ ಪಾವತಿಸಿರುವ ಮುಂಗಡ ಠೇವಣಿ ಮೊತ್ತ ಯಾವುದಾದರು ಇದ್ದಲ್ಲಿ, ಈ ಉಪ-ಖಂಡದ ಅಡಿಯಲ್ಲಿ ಪಾವತಿಸಬೇಕಾದ ಮೊತ್ತಕ್ಕೆ ಹೊಂದಾಣಿಕೆ ಮಾಡತಕ್ಕದ್ದು:

ಅಲ್ಲದೆ, ಈ ಉಪ-ಖಂಡದಲ್ಲಿ ಉಲ್ಲೇಖಿಸಿರುವ ಮೊತ್ತಕ್ಕಿಂತ ಹೆಚ್ಚಾಗಿ ಪಾವತಿಸಿರುವ ಮುಂಗಡ ಠೇವಣಿ ಮೊತ್ತವನ್ನು ಅಪೀಲು ತೀರ್ಪುಗೊಳಿಸುವವರೆಗೆ ಮರಳಿ ನೀಡುವಂತದ್ದಲ್ಲ.

———————

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 15(2)/ಲೆಗ್. ಎ2/2023/ಕಾನೂನು. ತಿರುವನಂತಪುರಂ, *2023 ಮಾರ್ಚ್ 28, 1198 ಮೀನಾ 14/ 1945 ಚೈತ್ರ 7.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2023 ಮಾರ್ಚ್ 27ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ವಿ. ಹರಿ ನಾಯರ್,

ಕಾನೂನು ಕಾರ್ಯದರ್ಶಿ.

2023ರ 18ನೇ ಅಧಿನಿಯಮ

2023ರ ಕೇರಳ ಆರ್ಥಿಕ (2ನೇ ನಂಬ್ರ) ಅಧಿನಿಯಮ

2023-2024ನೇ ಆರ್ಥಿಕ ವರ್ಷಕ್ಕಿರುವ ಕೇರಳ ಸರಕಾರದ ಕೆಲವು ಆರ್ಥಿಕ ಪ್ರಸ್ತಾವನೆಗಳಿಗೆ ಪ್ರಾಬಲ್ಯ ನೀಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—2023-2024ನೇ ಆರ್ಥಿಕ ವರ್ಷಕ್ಕಿರುವ ಕೇರಳ ಸರಕಾರದ ಕೆಲವು ಆರ್ಥಿಕ ಪ್ರಸ್ತಾವನೆಗಳಿಗೆ ಪ್ರಾಬಲ್ಯ ನೀಡುವುದಕ್ಕಾಗಿ 1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮ (1994ರ 13) ಹಾಗು 1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮ (1994ರ 20)ವನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2023ರ ಕೇರಳ ಆರ್ಥಿಕ (2ನೇ ನಂಬ್ರ) ಅಧಿನಿಯಮವೆಂದು ಕರೆಯಬಹುದು.

(2) ಇದು 2023 ಏಪ್ರಿಲ್ 1ನೇ ದಿನಾಂಕದಂದು ಜಾರಿಗೆ ಬರುವುದಾಗಿದೆ.

2. 1994ರ 13ನೇ ಅಧಿನಿಯಮದ ತಿದ್ದುಪಡಿ.—1994ರ ಕೇರಳ ಪಂಚಾಯ್ ರಾಜ್ ಅಧಿನಿಯಮ (1994ರ 13)ದ,—

(1) 198ನೇ ವಿಭಾಗದ (3)ನೇ ಉಪ-ವಿಭಾಗದ ನಂತರ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(4) ಈ ಅಧಿನಿಯಮದ ಅಥವಾ ಅಧಿನಿಯಮ ಪ್ರಕಾರ ರಚಿಸಿದಂತಹ ಅಥವಾ ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರವು ಹೊರಡಿಸಿದಂತಹ ಯಾವುದೇ ಕಾನೂನುಗಳಲ್ಲಿ ಅಥವಾ ನಿಯಮಗಳಲ್ಲಿ ಅಥವಾ ಪಂಚಾಯತ್ ರಚಿಸಿದ ಯಾವುದೇ ಬೈಲಾಗಳಲ್ಲಿ ಉಪಬಂಧಿಸಿದಂತಹ ಯಾವುದೇ ಲೈಸೆನ್ಸನ್ನು ಪರ್ಮಿಟನ್ನು, ಅನುಮತಿಯನ್ನು, ನೋಂದಣಿಯನ್ನು ಅಥವಾ ಸೇವೆಯನ್ನು ಒದಗಿಸುವುದಕ್ಕಾಗಿ ಪಂಚಾಯತ್ತಿಗೆ ಶುಲ್ಕಗಳನ್ನು ವಸೂಲಿ ಮಾಡಬಹುದಾಗಿದೆ."

G. 2/2024/GPC.

This is a digitally signed Gazette.
Authenticity may be verified through https://compose.kerala.gov.in/

2

(2) 203ನೇ ವಿಭಾಗದಲ್ಲಿ,—

(ಎ) (2)ನೇ ಉಪ-ವಿಭಾಗದಲ್ಲಿ,—

(i) (ಬಿ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಬಿ) ಮೇಲೆ (i) ರಿಂದ (vii)ರ ವರೆಗಿನ ಪ್ರತಿಯೊಂದು ವಿಧದ ಕಟ್ಟಡದ ಮತ್ತು ಅದರ ಉಪ-ವಿಭಾಗಗಳ ಹಾಗೂ ಅವುಗಳಿಗೆ ಅನ್ವಯವಾದ ಮೂಲ ಆಸ್ತಿ ತೆರಿಗೆ ದರಗಳ ಕನಿಷ್ಟ ಮತ್ತು ಗರಿಷ್ಠ ಮಿತಿಗಳನ್ನು ಅಧಿಸೂಚನೆಯ ಮೂಲಕ ಸರಕಾರಕ್ಕೆ ಪ್ರತಿ ಐದು ವರ್ಷಗಳಿಗೆ ನಿರ್ಧರಿಸಬಹುದಾಗಿದೆ.";

(ii) (ಬಿ) ಖಂಡದ ನಂತರ ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಸಿ) ಪ್ರತಿ ಐದು ವರ್ಷಗಳಿಗೆ (2)ನೇ ಉಪ-ವಿಭಾಗ ಪ್ರಕಾರ ಸರಕಾರ ಮತ್ತು (3)ನೇ ಉಪ-ವಿಭಾಗ ಪ್ರಕಾರ ಗ್ರಾಮಪಂಚಾಯತ್ ನಿರ್ಧರಿಸುವ ಆಸ್ತಿ ತೆರಿಗೆ ದರಗಳು ಅದಕ್ಕೆ ಹಿಂದಿನ ವರ್ಷದಲ್ಲಿ ಆಸ್ತಿತ್ವದಲ್ಲಿದ್ದ ದರದೊಂದಿಗೆ ಐದು ಶೇಕಡಾ ಹೆಚ್ಚಳದೊಂದಿಗಿನ ಮೊತ್ತಕ್ಕಿಂತ ಕಡಿಮೆಯಾಗಿರತಕ್ಕದ್ದಲ್ಲ.

(ಡಿ) ಸರಕಾರಕ್ಕೆ, ನಿಗದಿಪಡಿಸಿದಂತೆ ತೆರಿಗೆ ನಿರ್ಧರಣೆ ಲೆಕ್ಕಹಾಕುವಿಕೆಯಿಂದ ಒಂದು ಕಟ್ಟಡದ ಮೇಲ್ಛಾವಣಿಯಿರುಂತಹ ಯಾವುದೇ ಭಾಗವನ್ನು ಹೊರತುಪಡಿಸುವುದೋ, ಮೇಲ್ಛಾವಣಿಯಿರುವಂತಹ ಮತ್ತು ಗೋಡೆಯಿಲ್ಲದಿರುವಂತಹ ಯಾವುದೇ ಭಾಗವನ್ನು ಒಳಪಡಿಸುವುದೋ, ಮೇಲ್ಛಾವಣಿಯಿಲ್ಲದಂತಹ ಯಾವುದೇ ಭಾಗವನ್ನು ಒಳಪಡಿಸುವುದೋ ಮಾಡಬಹುದಾಗಿದೆ.

(ಇ) ಸರಕಾರಕ್ಕೆ, ಯಾವುದೇ ಬಳಕೆಗಿರುವ ಕಟ್ಟಡಗಳ ಆಸ್ತಿ ತೆರಿಗೆಯನ್ನು, ಪ್ಲಿಂಥ್ ವಿಸ್ತೀರ್ಣದ ತಳಹದಿಯಲ್ಲಿ ಅಥವಾ ಭೂಮಿಯ ನ್ಯಾಯಬೆಲೆ ಒಳಗೊಂಡು ಯಾವುದೇ ಅಂಶಗಳ ತಳಹದಿಯಲ್ಲಿ ದರಗಳನ್ನು ಅಧಿಸೂಚಿಸಬಹುದಾಗಿದೆ.";

(ಬಿ) (4)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(4) (2)ನೇ ಉಪ-ವಿಭಾಗ ಪ್ರಕಾರ ಸರಕಾರವು ನಿರ್ಧರಿಸುವ ಮೂಲ ಆಸ್ತಿ ತೆರಿಗೆ ದರಗಳ ಮಿತಿಗಳಿಗೆ ಮತ್ತು ಅದಕ್ಕೆ ಒಳಪಟ್ಟು (3)ನೇ ಉಪ-ವಿಭಾಗ ಪ್ರಕಾರ ಗ್ರಾಮಪಂಚಾಯತ್ ಒಮ್ಮೆ ನಿರ್ಧರಿಸುವ ಮೂಲ ಆಸ್ತಿ ತೆರಿಗೆ ದರಗಳಿಗೆ, ಅದು ಜಾರಿಗೆ ಬರುವ ದಿನಾಂಕದಿಂದ ಐದು ವರ್ಷದ ಕಾಲಾವಧಿಯವರೆಗೆ ಪ್ರಾಬಲ್ಯವಿರುವುದಾಗಿದೆ, ಆದರೆ ಆ ರೀತಿ ಮೊದಲನೇ ವರ್ಷ ಜಾರಿಗೆ ಬರುವ ತೆರಿಗೆ ದರದ ಐದು ಶೇಕಡಾವನ್ನು ಮತ್ತು ಎರಡನೇ ವರ್ಷ ಮತ್ತು ತದನಂತರದ ಪ್ರತಿಯೊಂದು ವರ್ಷಕ್ಕಿರುವ ಹೆಚ್ಚಳವನ್ನು ಅದರ ನಿಕಟಪೂರ್ವದ ವರ್ಷದ ತೆರಿಗೆ ದರದ ಐದು ಶೇಕಡಾದಷ್ಟು ಹೆಚ್ಚಳವನ್ನುಂಟುಮಾಡಿ ಗ್ರಾಮ ಪಂಚಾಯತ್ ನಿರ್ಧರಿಸತಕ್ಕದ್ದು, ಮೇಲೆ ಹೇಳಿದಂತೆ ದರವನ್ನು ಪರಿಷ್ಕರಿಸಿ ನಿರ್ಧರಿಸುವುದಕ್ಕನುಗುಣವಾಗಿ ತೆರಿಗೆಯನ್ನು ನಿರ್ಧರಿಸುವಾಗ,—

(ಎ) ನೂತನವಾದ, ಜೀರ್ಣೋದ್ಧಾರಗೊಳಿಸಿದ ಹಾಗೂ ಬಳಕೆಯಲ್ಲಿ ಬದಲಾವಣೆ ಮಾಡಿದಂತಹ ಕಟ್ಟಡಗಳ ವಿಷಯದಲ್ಲಿ ಕಾರ್ಯದರ್ಶಿಯವರು, ನಿಗದಿಪಡಿಸಿದ ರೀತಿಯಲ್ಲಿ ತೆರಿಗೆಯನ್ನು ನಿರ್ಧರಿಸತಕ್ಕದ್ದು ಹಾಗೂ ಮುಂದುವರಿದ ಕ್ರಮವನ್ನು ಕೈಗೊಳ್ಳತಕ್ಕದ್ದು ಹಾಗೂ ಆ ರೀತಿ ನಿಗದಿಪಡಿಸುವ ವಾರ್ಷಿಕ ಆಸ್ತಿ ತೆರಿಗೆಯೊಂದಿಗೆ ತದನಂತರದ ಪ್ರತಿಯೊಂದು ವರ್ಷ ಮತ್ತು ಅದರ ನಿಕಟಪೂರ್ವ ವರ್ಷದ ತೆರಿಗೆಯ ಐದು ಶೇಕಡಾದಷ್ಟು ಹೆಚ್ಚಳವನ್ನುಂಟು ಮಾಡತಕ್ಕದ್ದು ಹಾಗೂ ಈ ಉಪಬಂಧವನ್ನು ತೆರಿಗೆ ನಿರ್ಧರಿಸಿ ನೀಡುವಂತಹ ಡಿಮ್ಯಾಂಡ್ ನೋಟೀಸಿನಲ್ಲಿ ಒಳಪಡಿಸತಕ್ಕದ್ದು.

(ಬಿ) (ಎ) ಖಂಡದಲ್ಲಿ ಹೇಳಿದಂತಹ ವರ್ಗಕ್ಕೊಳಪಡದ ಹಾಗೂ ಒಮ್ಮೆ ವಾರ್ಷಿಕ ಆಸ್ತಿ ತೆರಿಗೆಯು ನಿರ್ಧರಿಸಲ್ಪಟ್ಟಿರುವಂತಹ ಕಟ್ಟಡಗಳ ವಿಷಯದಲ್ಲಿ, ಆಸ್ತಿತ್ವದಲ್ಲಿರುವ ವಾರ್ಷಿಕ ಆಸ್ತಿ ತೆರಿಗೆಯೊಂದಿಗೆ ಪ್ರತಿಯೊಂದು ವರ್ಷ ನಿಕಟಪೂರ್ವ ವರ್ಷದ ತೆರಿಗೆಯ ಐದು ಶೇಕಡಾ ಎಂಬ ದರದಲ್ಲಿ ಹೆಚ್ಚಳವನ್ನುಂಟು ಮಾಡತಕ್ಕದ್ದು ಹಾಗೂ ಈ ಉಪಬಂಧವನ್ನು ಪರಿಷ್ಕರಣೆ ಮಾಡಿ ನಿರ್ಧರಿಸಿ ನೀಡುವಂತಹ ಡಿಮ್ಯಾಂಡ್ ನೋಟೀಸಿನಲ್ಲಿ ಒಳಪಡಿಸತಕ್ಕದ್ದು:

ಆದರೆ, ಅಂತಹ ವಾರ್ಷೀಕ ಆಸ್ತಿ ತೆರಿಗೆಯನ್ನು ಪರಿಷ್ಕರಿಸಿ ನಿರ್ಧರಿಸುವಾಗ, (7)ನೇ ಉಪ-ವಿಭಾಗ ಪ್ರಕಾರದ ವಿನಾಯಿತಿಗಳು ಅಥವಾ ಹೆಚ್ಚಳಗಳು ಅನ್ವಯವಾಗುವುದಲ್ಲ.";

(ಸಿ) (6)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(6) ಒಂದು ಕಟ್ಟಡದ ಮೂಲ ಆಸ್ತಿ ತೆರಿಗೆಯನ್ನು,—

This is a digitally signed Gazette.
Authenticity may be verified through https://compose.kerala.gov.in/

3

(i) ಒಂದು ಕಟ್ಟಡದ ಪ್ಲಿಂಥ್ ವಿಸ್ತೀರ್ಣವನ್ನು ಪ್ರಸ್ತುತ ಕಟ್ಟಡಕ್ಕೆ ಅನ್ವಯವಾದ ಮೂಲ ಆಸ್ತಿ ತೆರಿಗೆ ದರದಿಂದ ಗುಣಿಸಿದಾಗ ಲಭಿಸುವ ಮೊತ್ತವನ್ನು, ಅದರ ನಿಕಟಾನಂತರದ ಅತೀ ಹೆಚ್ಚಿನ ಪೂರ್ಣಸಂಖ್ಯೆಗೆ ಕ್ರಮೀಕರಿಸಿದ ಪ್ರಕಾರ;

(ii) ಯಾವುದೇ ವರ್ಗದ ಕಟ್ಟಡಗಳ ಅಥವಾ ಅದರ ಉಪವರ್ಗಗಳ ವಿಷಯದಲ್ಲಿ, ನಿಗದಿಪಡಿಸಿದ ಪ್ರಕಾರ, ಪ್ಲಿಂಥ್ ವಿಸ್ತೀರ್ಣದ ಅಥವಾ ಭೂಮಿಯ ನ್ಯಾಯಬೆಲೆಯ ಅಥವಾ ನಿರ್ಮಾಣದ ಯಾವುದೇ ಅಂಶದ ಅಥವಾ ಅದರಲ್ಲಿ ಯಾವುದೇ ಅಥವಾ ಎಲ್ಲದರ ಆಧಾರದಲ್ಲಿ;

ಲೆಕ್ಕ ಹಾಕಬಹುದಾಗಿದೆ.";

(ಡಿ) (7)ನೇ ಉಪ-ವಿಭಾಗದಲ್ಲಿ,—

(i) (ii)ನೇ ಐಟಮ್‌ನ ನಂತರ ಈ ಕೆಳಗಿನ ಐಟಮ್ ಅನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(iii) ಕಟ್ಟಡದ ಪ್ಲಿಂಥ್ ವಿಸ್ತೀರ್ಣದಲ್ಲಿನ ಮಾರ್ಪಾಟು;";

(ii) (vi)ನೇ ಐಟಮ್‌ನ ನಂತರ ಈ ಕೆಳಗಿನ ಐಟಮ್ ಅನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(vii) ಕಟ್ಟಡ ಅಥವಾ ನಿರ್ಮಾಣವು ನಡೆಯುತ್ತಿರುವ ಭೂಮಿಯ ನ್ಯಾಯ ಬೆಲೆ.";

(3) 207ನೇ ವಿಭಾಗದಲ್ಲಿ,—

(ಎ) (1)ನೇ ಉಪ-ವಿಭಾಗದಲ್ಲಿ (ಬ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಬ) ಕೇಂದ್ರ ಸರಕಾರದ ಅಥವಾ ರಾಜ್ಯ ಸರಕಾರದ ಮಾಲಿಕತ್ವದಲ್ಲಿರುವ ಅಥವಾ ಅನುದಾನಿತ ಅಥವಾ ಕೇಂದ್ರ ಸರಕಾರದ ಅಥವಾ ರಾಜ್ಯ ಸರಕಾರದ ಆರ್ಥಿಕ ನೆರವಿನಿಂದ ಕಾರ್ಯವೆಸಗುತ್ತಿರುವಂತಹ ಶೈಕ್ಷಣಿಕ ಸಂಸ್ಥೆಗಳ ಮಾಲಿಕತ್ವದಲ್ಲಿರುವ ಶೈಕ್ಷಣಿಕ ಅಗತ್ಯತೆಗಳಿಗೆ ಅಥವಾ ಶೈಕ್ಷಣಿಕ ಅನುಬಂಧಿತ ಅಗತ್ಯತೆಗಳಿಗೆ ಮಾತ್ರವಾಗಿ ಬಳಸುವ ಕಟ್ಟಡಗಳು ಮತ್ತು ಪ್ರಸ್ತುತ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳು ವಾಸಿಸುವಂತಹ ಹಾಸ್ಟೆಲು ಕಟ್ಟಡಗಳು;";

(ಬ) (ಬಿಎ) ಖಂಡವನ್ನು ಬಿಟ್ಟುಬಿಡತಕ್ಕದ್ದು;

(ಸಿ) (ಇ) ಖಂಡದಲ್ಲಿ "ಆಟದ ಮೈದಾನಗಳು" ಎಂಬ ಪದದ ಬದಲು "ಉಚಿತವಾಗಿ ಬಳಸಬಹುದಾದ ಆಟದ ಮೈದಾನಗಳು" ಎಂಬ ಪದವನ್ನು ಸೇರಿಸತಕ್ಕದ್ದು;

(ಡಿ) (ಐ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಐ) ಮಾಲಿಕನು ಸ್ವಂತ ವಾಸಗೃಹವಾಗಿ ಬಳಸುವ ಮತ್ತು ಪ್ಲಿಂಥ್ ವಿಸ್ತೀರ್ಣ ಅರುವತ್ತು ಚದರ ಮೀಟರ್‌ಗಿಂತ ಹೆಚ್ಚಲ್ಲದ ಕಟ್ಟಡಗಳು.";

(4) 209ಇ ವಿಭಾಗದಲ್ಲಿ "ಪ್ರತಿ ತಿಂಗಳು ಒಂದು ಶೇಕಡಾ ದರದ ದಂಡ" ಎಂಬ ಪದಗಳ ಬದಲು "ಪ್ರತಿ ತಿಂಗಳು ಎರಡು ಶೇಕಡಾ ದರದ ದಂಡ" ಎಂಬ ಪದಗಳನ್ನು ಸೇರಿಸತಕ್ಕದ್ದು;

(5) 210ನೇ ವಿಭಾಗದ ಬದಲು ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"210. ತೆರಿಗೆ, ಉಪತೆರಿಗೆ, ಶುಲ್ಕ, ಬಾಡಿಗೆ ಇತ್ಯಾದಿಯ ಬಾಕಿ ವಸೂಲಿ.—ಈ ಅಧಿನಿಯಮದ ಪ್ರಕಾರ ಅಥವಾ ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರವು ಹೊರಡಿಸಿರುವ ಯಾವುದೇ ಕಾನೂನುಗಳ ಅಥವಾ ನಿಯಮಗಳ ಪ್ರಕಾರ ವಿಧಿಸಿದ ತೆರಿಗೆಯ, ಉಪ ತೆರಿಗೆಯ, ಕರದ, ಸರ್‌ಚಾರ್ಜ್‌ನ, ಶುಲ್ಕದ ಅಥವಾ ಬಾಡಿಗೆಯ ಯಾವುದೇ ಬಾಕಿಯನ್ನು ಸರಕಾರವು ಸಾರ್ವಜನಿಕ ತೆರಿಗೆ ಬಾಕಿಯನ್ನು ವಸೂಲಿ ಮಾಡುವುದಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಪ್ರಕಾರ ಸಾರ್ವಜನಿಕ ತೆರಿಗೆ ಬಾಕಿಯೆಂಬಂತೆ ವಸೂಲಿ ಮಾಡತಕ್ಕದ್ದು:

ಆದರೆ, ಕಾರ್ಯದರ್ಶಿಯವರಿಗೆ ನಿಗದಿಪಡಿಸಬಹುದಾದ ನಿಯಮಗಳಿಗೆ ಒಳಪಟ್ಟು, ತನ್ನ ವಾರಂಟ್‌ನ ಮೇರೆಗೆ ಸುಸ್ತಿದಾರರ, ಚರ ಆಸ್ತಿಗಳನ್ನು ಜಪ್ತಿ ಮಾಡಿ ಮಾರಿ ನೇರವಾಗಿ ವಸೂಲಿ ಮಾಡಬಹುದಾಗಿದೆ:

This is a digitally signed Gazette.
Authenticity may be verified through https://compose.kerala.gov.in/

ಅದೂ ಅಲ್ಲದೆ, ಯಾವುದೇ ಕಾರಣದಿಂದ ಸುಸ್ತಿದಾರರ ಆಸ್ತಿಯನ್ನು ಜಪ್ತಿ ಮಾಡುವುದೋ, ಆಸ್ತಿಯನ್ನು ಸಾಕಾಗುವಷ್ಟರ ಮಟ್ಟಿಗೆ ಜಪ್ತಿ ಮಾಡುವುದೋ ಅಪ್ರಾಯೋಗಿಕವಾಗಿದ್ದಲ್ಲಿ, ಕಾರ್ಯದರ್ಶಿಯವರಿಗೆ ಸುಸ್ತಿದಾರರನ್ನು ಮ್ಯಾಜಿಸ್ಟ್ರೇಟ್‌ರವರ ಸಮಕ್ಷದಲ್ಲಿ ಪ್ರಾಸಿಕ್ಯೂಟ್ ಮಾಡಬಹುದಾಗಿದೆ.

3. 1994ರ 20ನೇ ಅಧಿನಿಯಮದ ತಿದ್ದುಪಡಿ.—1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮ (1994ರ 20)ದ,—

(1) 233ನೇ ವಿಭಾಗದಲ್ಲಿ,—

(ಎ) (2)ನೇ ಉಪ-ವಿಭಾಗದಲ್ಲಿ,—

(i) (ಬಿ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಬಿ) ಮೇಲೆ (i) ರಿಂದ (vii)ರ ವರೆಗಿನ ಪ್ರತಿಯೊಂದು ವಿಧದ ಕಟ್ಟಡದ ಮತ್ತು ಅದರ ಉಪ-ವಿಭಾಗಗಳ ಹಾಗೂ ಅವುಗಳಿಗೆ ಅನ್ವಯವಾದ ಮೂಲ ಆಸ್ತಿ ತೆರಿಗೆ ದರಗಳ ಕನಿಷ್ಠ ಮತ್ತು ಗರಿಷ್ಠ ಮಿತಿಗಳನ್ನು ಅಧಿಸೂಚನೆಯ ಮೂಲಕ ಸರಕಾರಕ್ಕೆ ಪ್ರತಿ ಐದು ವರ್ಷಗಳಿಗೆ ನಿರ್ಧರಿಸಬಹುದಾಗಿದೆ.";

(ii) (ಬಿ) ಖಂಡದ ನಂತರ ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಸಿ) ಪ್ರತಿ ಐದು ವರ್ಷಗಳಿಗೆ (2)ನೇ ಉಪ-ವಿಭಾಗ ಪ್ರಕಾರ ಸರಕಾರ ಮತ್ತು (3)ನೇ ಉಪ-ವಿಭಾಗ ಪ್ರಕಾರ ಕೌನ್ಸಿಲ್ ನಿರ್ಧರಿಸುವ ಆಸ್ತಿ ತೆರಿಗೆ ದರಗಳು ಅದಕ್ಕೆ ಹಿಂದಿನ ವರ್ಷದಲ್ಲಿ ಆಸ್ತಿತ್ವದಲ್ಲಿದ್ದ ದರದೊಂದಿಗೆ ಐದು ಶೇಕಡಾ ಹೆಚ್ಚಳದೊಂದಿಗಿನ ಮೊತ್ತಕ್ಕಿಂತ ಕಡಿಮೆಯಾಗಿರತಕ್ಕದ್ದಲ್ಲ.

(ಡಿ) ಸರಕಾರಕ್ಕೆ ನಿಗದಿಪಡಿಸಿದಂತೆ ತೆರಿಗೆ ನಿರ್ಧರಣೆ ಲೆಕ್ಕಹಾಕುವಿಕೆಯಿಂದ ಒಂದು ಕಟ್ಟಡದ ಮೇಲ್ಛಾವಣಿಯಿರುವಂತಹ ಯಾವುದೇ ಭಾಗವನ್ನು ಹೊರತುಪಡಿಸುವುದೋ, ಮೇಲ್ಛಾವಣಿಯಿರುವಂತಹ ಮತ್ತು ಗೋಡೆಯಿಲ್ಲದಿರುವಂತಹ ಯಾವುದೇ ಭಾಗವನ್ನು ಒಳಪಡಿಸುವುದೋ, ಮೇಲ್ಛಾವಣಿಯಿಲ್ಲದಂತಹ ಯಾವುದೇ ಭಾಗವನ್ನು ಒಳಪಡಿಸುವುದೋ ಮಾಡಬಹುದಾಗಿದೆ.

(ಇ) ಸರಕಾರಕ್ಕೆ, ಯಾವುದೇ ಬಳಕೆಗಿರುವ ಕಟ್ಟಡಗಳ ಆಸ್ತಿ ತೆರಿಗೆಯನ್ನು ಪ್ಲಿಂಥ್ ವಿಸ್ತೀರ್ಣದ ತಳಹದಿಯಲ್ಲಿ ಅಥವಾ ಭೂಮಿಯ ನ್ಯಾಯಬೆಲೆ ಒಳಗೊಂಡು ಯಾವುದೇ ಅಂಶಗಳ ತಳಹದಿಯಲ್ಲಿ ದರಗಳನ್ನು ಅಧಿಸೂಚಿಸಬಹುದಾಗಿದೆ.";

(ಬಿ) (4)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(4) (2)ನೇ ಉಪ-ವಿಭಾಗ ಪ್ರಕಾರ ಸರಕಾರವು ನಿರ್ಧರಿಸುವ ಮೂಲ ಆಸ್ತಿ ತೆರಿಗೆ ದರಗಳ ಮಿತಿಗಳಿಗೆ ಮತ್ತು ಅದಕ್ಕೆ ಒಳಪಟ್ಟು (3)ನೇ ಉಪ-ವಿಭಾಗ ಪ್ರಕಾರ ಮುನಿಸಿಪಾಲಿಟಿ ಒಮ್ಮೆ ನಿರ್ಧರಿಸುವ ಮೂಲ ಆಸ್ತಿ ತೆರಿಗೆ ದರಗಳಿಗೆ, ಅದು ಜಾರಿಗೆ ಬರುವ ದಿನಾಂಕದಿಂದ ಐದು ವರ್ಷದ ಕಾಲಾವಧಿಯವರೆಗೆ ಪ್ರಾಬಲ್ಯವಿರುವುದಾಗಿದೆ, ಆದರೆ ಆ ರೀತಿ ಮೊದಲನೇ ವರ್ಷ ಜಾರಿಗೆ ಬರುವ ತೆರಿಗೆ ದರದ ಐದು ಶೇಕಡಾವನ್ನು ಮತ್ತು ಎರಡನೇ ವರ್ಷ ಮತ್ತು ತದನಂತರದ ಪ್ರತಿಯೊಂದು ವರ್ಷಕ್ಕಿರುವ ಹೆಚ್ಚಳವನ್ನು ಅದರ ನಿಕಟಪೂರ್ವದ ವರ್ಷದ ತೆರಿಗೆ ದರದ ಐದು ಶೇಕಡಾದಷ್ಟು ಹೆಚ್ಚಳವನ್ನುಂಟುಮಾಡಿ ಮುನಿಸಿಪಾಲಿಟಿ ನಿರ್ಧರಿಸತಕ್ಕದ್ದು, ಮೇಲೆ ಹೇಳಿದಂತೆ ದರವನ್ನು ಪರಿಷ್ಕರಿಸಿ ನಿರ್ಧರಿಸುವುದಕ್ಕನುಗುಣವಾಗಿ ತೆರಿಗೆಯನ್ನು ನಿರ್ಧರಿಸುವಾಗ,—

(ಎ) ನೂತನವಾದ, ಜೀರ್ಣೋದ್ಧಾರಗೊಳಿಸಿದ ಹಾಗೂ ಬಳಕೆಯಲ್ಲಿ ಬದಲಾವಣೆ ಮಾಡಿದಂತಹ ಕಟ್ಟಡಗಳ ವಿಷಯದಲ್ಲಿ ಕಾರ್ಯದರ್ಶಿಯವರು, ನಿಗದಿಪಡಿಸಿದ ರೀತಿಯಲ್ಲಿ ತೆರಿಗೆಯನ್ನು ನಿರ್ಧರಿಸತಕ್ಕದ್ದು ಹಾಗೂ ಮುಂದುವರಿದ ಕ್ರಮವನ್ನು ಕೈಗೊಳ್ಳತಕ್ಕದ್ದು ಹಾಗೂ ಆ ರೀತಿ ನಿಗದಿಪಡಿಸುವ ವಾರ್ಷಿಕ ಆಸ್ತಿ ತೆರಿಗೆಯೊಂದಿಗೆ ತದನಂತರದ ಪ್ರತಿಯೊಂದು ವರ್ಷ ಮತ್ತು ಅದರ ನಿಕಟಪೂರ್ವ ವರ್ಷದ ತೆರಿಗೆಯ ಐದು ಶೇಕಡಾದಷ್ಟು ಹೆಚ್ಚಳವನ್ನುಂಟು ಮಾಡತಕ್ಕದ್ದು ಹಾಗೂ ಈ ಉಪಬಂಧವನ್ನು ತೆರಿಗೆ ನಿರ್ಧರಿಸಿ ನೀಡುವಂತಹ ಡಿಮ್ಯಾಂಡ್ ನೋಟೀಸಿನಲ್ಲಿ ಒಳಪಡಿಸತಕ್ಕದ್ದು.

(ಬಿ) (ಎ) ಖಂಡದಲ್ಲಿ ಹೇಳಿದಂತಹ ವರ್ಗಕ್ಕೊಳಪಡದ ಹಾಗೂ ಒಮ್ಮೆ ವಾರ್ಷಿಕ ಆಸ್ತಿ ತೆರಿಗೆಯು ನಿರ್ಧರಿಸಲ್ಪಟ್ಟಿರುವಂತಹ ಕಟ್ಟಡಗಳ ವಿಷಯದಲ್ಲಿ, ಆಸ್ತಿತ್ವದಲ್ಲಿರುವ ವಾರ್ಷಿಕ ಆಸ್ತಿ ತೆರಿಗೆಯೊಂದಿಗೆ ಪ್ರತಿಯೊಂದು ವರ್ಷ ನಿಕಟಪೂರ್ವ ವರ್ಷದ ತೆರಿಗೆಯ ಐದು ಶೇಕಡಾ ಎಂಬ ದರದಲ್ಲಿ ಹೆಚ್ಚಳವನ್ನುಂಟು ಮಾಡತಕ್ಕದ್ದು ಹಾಗೂ ಈ ಉಪಬಂಧವನ್ನು ಪರಿಷ್ಕರಣೆ ಮಾಡಿ ನಿರ್ಧರಿಸಿ ನೀಡುವಂತಹ ಡಿಮ್ಯಾಂಡ್ ನೋಟೀಸಿನಲ್ಲಿ ಒಳಪಡಿಸತಕ್ಕದ್ದು:

ಆದರೆ, ಅಂತಹ ವಾರ್ಷೀಕ ಆಸ್ತಿ ತೆರಿಗೆಯನ್ನು ಪರಿಷ್ಕರಿಸಿ ನಿರ್ಧರಿಸುವಾಗ, (7)ನೇ ಉಪ-ವಿಭಾಗ ಪ್ರಕಾರದ ವಿನಾಯಿತಿಗಳು ಅಥವಾ ಹೆಚ್ಚಳಗಳು ಅನ್ವಯವಾಗುವುದಲ್ಲ.";

This is a digitally signed Gazette.
Authenticity may be verified through https://compose.kerala.gov.in/

5

(ಸಿ) (6)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(6) ಒಂದು ಕಟ್ಟಡದ ಮೂಲ ಆಸ್ತಿ ತೆರಿಗೆಯನ್ನು,—

(i) ಒಂದು ಕಟ್ಟಡದ ಪ್ಲಿಂಥ್ ವಿಸ್ತೀರ್ಣವನ್ನು ಪ್ರಸ್ತುತ ಕಟ್ಟಡಕ್ಕೆ ಅನ್ವಯವಾದ ಮೂಲ ಆಸ್ತಿ ತೆರಿಗೆ ದರದಿಂದ ಗುಣಿಸಿದಾಗ ಲಭಿಸುವ ಮೊತ್ತವನ್ನು, ಅದರ ನಿಕಟಾನಂತರದ ಅತೀ ಹೆಚ್ಚಿನ ಪೂರ್ಣಸಂಖ್ಯೆಗೆ ಕ್ರಮೀಕರಿಸಿದ ಪ್ರಕಾರ;

(ii) ಯಾವುದೇ ವರ್ಗದ ಕಟ್ಟಡಗಳ ಅಥವಾ ಅದರ ಉಪವರ್ಗಗಳ ವಿಷಯದಲ್ಲಿ, ನಿಗದಿಪಡಿಸಿದ ಪ್ರಕಾರ, ಪ್ಲಿಂಥ್ ವಿಸ್ತೀರ್ಣದ ಅಥವಾ ಭೂಮಿಯ ನ್ಯಾಯಬೆಲೆಯ ಅಥವಾ ನಿರ್ಮಾಣದ ಯಾವುದೇ ಅಂಶದ ಅಥವಾ ಅದರಲ್ಲಿ ಯಾವುದೇ ಅಥವಾ ಎಲ್ಲದರ ಆಧಾರದಲ್ಲಿ;

ಲೆಕ್ಕ ಹಾಕಬಹುದಾಗಿದೆ.";

(ಡಿ) (7)ನೇ ಉಪ-ವಿಭಾಗದಲ್ಲಿ,—

(i) (ii)ನೇ ಐಟಮ್‌ನ ನಂತರ ಈ ಕೆಳಗಿನ ಐಟಮ್ ಅನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(iii) ಕಟ್ಟಡದ ಪ್ಲಿಂಥ್ ವಿಸ್ತೀರ್ಣದಲ್ಲಿನ ಮಾರ್ಪಾಟು;";

(ii) (vi)ನೇ ಐಟಮ್‌ನ ನಂತರ ಈ ಕೆಳಗಿನ ಐಟಮ್ ಅನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(vii) ಕಟ್ಟಡದ ಅಥವಾ ನಿರ್ಮಾಣವು ನಡೆಯುತ್ತಿರುವ ಭೂಮಿಯ ನ್ಯಾಯ ಬೆಲೆ.";

(2) 235ನೇ ವಿಭಾಗದಲ್ಲಿ,—

(ಎ) (ಬ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಬ) ಕೇಂದ್ರ ಸರಕಾರದ ಅಥವಾ ರಾಜ್ಯ ಸರಕಾರದ ಮಾಲಿಕತ್ವದಲ್ಲಿರುವ ಅಥವಾ ಅನುದಾನಿತ ಅಥವಾ ಕೇಂದ್ರ ಸರಕಾರದ ಅಥವಾ ರಾಜ್ಯ ಸರಕಾರದ ಆರ್ಥಿಕ ನೆರವಿನಿಂದ ಕಾರ್ಯವೆಸಗುತ್ತಿರುವಂತಹ ಶೈಕ್ಷಣಿಕ ಸಂಸ್ಥೆಗಳ ಮಾಲಿಕತ್ವದಲ್ಲಿರುವ ಶೈಕ್ಷಣಿಕ ಅಗತ್ಯತೆಗಳಿಗೆ ಅಥವಾ ಶೈಕ್ಷಣಿಕ ಅನುಬಂಧಿತ ಅಗತ್ಯತೆಗಳಿಗೆ ಮಾತ್ರವಾಗಿ ಬಳಸುವ ಕಟ್ಟಡಗಳು ಮತ್ತು ಪ್ರಸ್ತುತ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳು ವಾಸಿಸುವಂತಹ ಹಾಸ್ಟೆಲು ಕಟ್ಟಡಗಳು;";

(ಬ) (ಬಎ) ಖಂಡವನ್ನು ಬಿಟ್ಟುಬಿಡತಕ್ಕದ್ದು;

(ಸಿ) (ಇ) ಖಂಡದಲ್ಲಿ "ಆಟದ ಮೈದಾನಗಳು" ಎಂಬ ಪದದ ಬದಲು "ಉಚಿತವಾಗಿ ಬಳಸಬಹುದಾದ ಆಟದ ಮೈದಾನಗಳು" ಎಂಬ ಪದವನ್ನು ಸೇರಿಸತಕ್ಕದ್ದು;

(ಡಿ) (ಐ) ಖಂಡದ ಬದಲು ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಐ) ಮಾಲಿಕನು ಸ್ವಂತ ವಾಸಗೃಹವಾಗಿ ಬಳಸುವ ಮತ್ತು ಪ್ಲಿಂಥ್ ವಿಸ್ತೀರ್ಣ ಅರುವತ್ತು ಚದರ ಮೀಟರ್‌ಗಿಂತ ಹೆಚ್ಚಲ್ಲದ ಕಟ್ಟಡಗಳು.";

(3) 280ನೇ ವಿಭಾಗದ ನಂತರ 280ಎ ಎಂಬ ಹೊಸ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"280ಎ. <u>ನಿಗದಿತ ಶುಲ್ಕವನ್ನು ಸಂಗ್ರಹಿಸುವುದಕ್ಕಿರುವ ಮುನಿಸಿಪಾಲಿಟಿಯ ಅಧಿಕಾರ.</u>—(1) ಒಂದು ಮುನಿಸಿಪಾಲಿಟಿಯು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಅದು ನಡೆಸುವಂತಹ ಅಥವಾ ಅದರ ಆರ್ಥಿಕ ನೆರವಿನೊಂದಿಗೆ ನಡೆಸಲ್ಪಡುವಂತಹ ಸಂಸ್ಥೆಗಳ ಫಲಾನುಭವಿಗಳಿಂದ ಮುನಿಸಿಪಾಲಿಟಿಯು ನಿರ್ಧರಿಸಿದ ಪ್ರಕಾರದ ದರಗಳಲ್ಲಿ ಈ ಉದ್ದೇಶಕ್ಕಾಗಿ ಸರಕಾರ ರಚಿಸುವ ನಿಯಮಗಳಿಗೆ ವಿಧೇಯವಾಗಿ ಶುಲ್ಕವನ್ನು ಸಂಗ್ರಹಿಸಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

6

(2) ಮುನಿಸಿಪಾಲಿಟಿಯು ಏರ್ಪಡಿಸಿರುವ ಶೌಚಾಲಯ ಸೌಲಭ್ಯ ಅಥವಾ ಇತರ ಯಾವುದೇ ಸೌಕರ್ಯ ಅಥವಾ ಸೇವೆಯನ್ನು ಉಪಯೋಗಿಸುವ ಫಲಾನುಭವಿಗಳಿಂದ ಅದು ನಿರ್ಧರಿಸಿದ ದರದಲ್ಲಿ ಸೇವಾ ಶುಲ್ಕವನ್ನು ವಸೂಲಿ ಮಾಡಬಹುದಾಗಿದೆ.

(3) ಸೇವಾ ಶುಲ್ಕವಾಗಿ ಸಂಗ್ರಹಿಸಿದ ಮೊತ್ತವನ್ನು ಅಂತಹ ಸೌಲಭ್ಯಗಳ ಅಥವಾ ಸೇವೆಗಳ ಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಬಳಸತಕ್ಕದ್ದು.

(4) ಈ ಅಧಿನಿಯಮದ ಅಥವಾ ಅಧಿನಿಯಮದ ಪ್ರಕಾರ ರಚಿಸಿದ ಅಥವಾ ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರವು ಹೊರಡಿಸಿದ ಯಾವುದೇ ಕಾನೂನುಗಳಲ್ಲಿ ಅಥವಾ ಕೌನ್ಸಿಲ್ ರಚಿಸಿದ ಯಾವುದೇ ಬೈಲಾಗಳಲ್ಲಿ ಉಪಬಂಧಿಸಿದಂತಹ ಯಾವುದೇ ಲೈಸೆನ್ಸನ್ನು, ಪರ್ಮಿಟನ್ನು, ಅನುಮತಿಯನ್ನು, ನೋಂದಣಿಯನ್ನು ಅಥವಾ ಸೇವೆಯನ್ನು ಒದಗಿಸುವುದಕ್ಕಾಗಿ ಮುನಿಸಿಪಾಲಿಟಿಗೆ ಶುಲ್ಕಗಳನ್ನು ವಸೂಲಿ ಮಾಡಬಹುದಾಗಿದೆ.";

(4) 538ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ "ಪ್ರತಿ ತಿಂಗಳು ಒಂದು ಶೇಕಡಾ ದರದ ದಂಡ" ಎಂಬ ಪದಗಳ ಬದಲು "ಪ್ರತಿ ತಿಂಗಳು ಎರಡು ಶೇಕಡಾ ದರದ ದಂಡ" ಎಂಬ ಪದಗಳನ್ನು ಸೇರಿಸತಕ್ಕದ್ದು;

(5) 538ಎ ವಿಭಾಗದ ನಂತರ 538ಬಿ ಎಂಬ ಹೊಸ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"538ಬಿ. ತೆರಿಗೆ, ಉಪತೆರಿಗೆ, ಶುಲ್ಕ, ಬಾಡಿಗೆ ಇತ್ಯಾದಿಯ ಬಾಕಿ ವಸೂಲಿ.—ಈ ಅಧಿನಿಯಮದ ಪ್ರಕಾರ ಅಥವಾ ಕೇಂದ್ರ ಸರಕಾರ ಅಥವಾ ರಾಜ್ಯ ಸರಕಾರವು ಹೊರಡಿಸಿರುವ ಯಾವುದೇ ಕಾನೂನುಗಳ ಅಥವಾ ನಿಯಮಗಳ ಪ್ರಕಾರ ವಿಧಿಸಿದ ತೆರಿಗೆಯ, ಉಪತೆರಿಗೆಯ, ಕರದ, ಸರ್‌ಚಾರ್ಜ್‌ನ, ಶುಲ್ಕದ ಅಥವಾ ಬಾಡಿಗೆಯ ಯಾವುದೇ ಬಾಕಿಯನ್ನು ಸರಕಾರವು ಸಾರ್ವಜನಿಕ ತೆರಿಗೆ ಬಾಕಿಯನ್ನು ವಸೂಲಿ ಮಾಡುವುದಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಪ್ರಕಾರ ಸಾರ್ವಜನಿಕ ತೆರಿಗೆ ಬಾಕಿಯೆಂಬಂತೆ ವಸೂಲಿ ಮಾಡತಕ್ಕದ್ದು:

ಆದರೆ, ಒಂದು ಮುನಿಸಿಪಾಲಿಟಿಯ ಕಾರ್ಯದರ್ಶಿಯವರಿಗೆ ನಿಗದಿಪಡಿಸಬಹುದಾದ ನಿಯಮಗಳಿಗೆ ಒಳಪಟ್ಟು, ತನ್ನ ವಾರಂಟ್‌ನ ಮೇರೆಗೆ ಸುಸ್ತಿದಾರರ, ಚರ ಆಸ್ತಿಗಳನ್ನು ಜಪ್ತಿ ಮಾಡಿ ಮಾರಿ ನೇರವಾಗಿ ವಸೂಲಿ ಮಾಡಬಹುದಾಗಿದೆ:

ಅದೂ ಅಲ್ಲದೆ, ಯಾವುದೇ ಕಾರಣದಿಂದ ಸುಸ್ತಿದಾರರ ಆಸ್ತಿಯನ್ನು ಜಪ್ತಿ ಮಾಡುವುದೋ, ಆಸ್ತಿಯನ್ನು ಸಾಕಾಗುವಷ್ಟರ ಮಟ್ಟಿಗೆ ಜಪ್ತಿ ಮಾಡುವುದೋ ಅಪ್ರಾಯೋಗಿಕವಾಗಿದ್ದಲ್ಲಿ, ಕಾರ್ಯದರ್ಶಿಯವರಿಗೆ ಸುಸ್ತಿದಾರರನ್ನು ಮ್ಯಾಜಿಸ್ಟ್ರೇಟ್‌ರವರ ಸಮಕ್ಷದಲ್ಲಿ ಪ್ರಾಸಿಕ್ಯೂಟ್ ಮಾಡಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎಚ್) ಇಲಾಖೆ

ಅಧಿಸೂಚನೆ

ನಂಬ್ರ ಲೆಗ್.ಎಚ್1/72/2023/ಕಾನೂನು. ತಿರುವನಂತಪುರಂ, *2023 ಸೆಪ್ಟೆಂಬರ್ 18,* *1199 ಕನ್ಯಾ 1/* *1945 ಭಾದ್ರಪದ 27.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2023 ಸೆಪ್ಟೆಂಬರ್ 18ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2023ರ 22ನೇ ಅಧಿನಿಯಮ

2023ರ ಕೇರಳ ಆರೋಗ್ಯಪಾಲನೆ ಸೇವಾ ಪ್ರವರ್ತಕರು ಮತ್ತು ಆರೋಗ್ಯಪಾಲನೆ ಸೇವಾ ಸಂಸ್ಥೆಗಳು (ಹಿಂಸಾಚಾರ ಹಾಗು ಆಸ್ತಿಯನ್ನು ಹಾನಿಗೊಳಿಸುವುದು ತಡೆಯುವಿಕೆ) ತಿದ್ದುಪಡಿ ಅಧಿನಿಯಮ

2012ರ ಕೇರಳ ಆರೋಗ್ಯಪಾಲನೆ ಸೇವಾ ಪ್ರವರ್ತಕರು ಮತ್ತು ಆರೋಗ್ಯಪಾಲನೆ ಸೇವಾ ಸಂಸ್ಥೆಗಳು (ಹಿಂಸಾಚಾರ ಹಾಗು ಆಸ್ತಿಯನ್ನು ಹಾನಿಗೊಳಿಸುವುದು ತಡೆಯುವಿಕೆ) ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ—2012ರ ಕೇರಳ ಆರೋಗ್ಯಪಾಲನೆ ಸೇವಾ ಪ್ರವರ್ತಕರು ಮತ್ತು ಆರೋಗ್ಯಪಾಲನೆ ಸೇವಾ ಸಂಸ್ಥೆಗಳು (ಹಿಂಸಾಚಾರ ಹಾಗು ಆಸ್ತಿಯನ್ನು ಹಾನಿಗೊಳಿಸುವುದು ತಡೆಯುವಿಕೆ) ಅಧಿನಿಯಮ (2012ರ 14ನೇ ಅಧಿನಿಯಮ)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯವನ್ನು 2023ರ ಕೇರಳ ಆರೋಗ್ಯಪಾಲನೆ ಸೇವಾ ಪ್ರವರ್ತಕರು ಮತ್ತು ಆರೋಗ್ಯಪಾಲನೆ ಸೇವಾ ಸಂಸ್ಥೆಗಳು (ಹಿಂಸಾಚಾರ ಹಾಗು ಆಸ್ತಿಯನ್ನು ಹಾನಿಗೊಳಿಸುವುದು ತಡೆಯುವಿಕೆ) ತಿದ್ದುಪಡಿ ಅಧಿನಿಯಮವೆಂದು ಕರೆಯಬಹುದು.

(2) ಇದು 2023 ಮೇ 24ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

G. 3/2024/GPC.

This is a digitally signed Gazette.
Authenticity may be verified through https://compose.kerala.gov.in/

2

2. 2ನೇ ವಿಭಾಗದ ತಿದ್ದುಪಡಿ.—2012ರ ಕೇರಳ ಆರೋಗ್ಯಪಾಲನೆ ಸೇವಾ ಪ್ರವರ್ತಕರು ಮತ್ತು ಆರೋಗ್ಯಪಾಲನೆ ಸೇವಾ ಸಂಸ್ಥೆಗಳು (ಹಿಂಸಾಚಾರ ಹಾಗು ಆಸ್ತಿಯನ್ನು ಹಾನಿಗೊಳಿಸುವುದು ತಡೆಯುವಿಕೆ) ಅಧಿನಿಯಮ (2012ರ 14ನೇ ಅಧಿನಿಯಮ) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 2ನೇ ವಿಭಾಗದಲ್ಲಿ,—

(ಎ) ಆಸ್ತಿತ್ವದಲ್ಲಿರುವ ಉಪಬಂಧವನ್ನು (1)ನೇ ಉಪ-ವಿಭಾಗವಾಗಿ ಅಂಕಿತಗೊಳಿಸತಕ್ಕದ್ದು;

(ಬಿ) ಆ ರೀತಿ ಅಂಕಿತಗೊಳಿಸಿದ (1)ನೇ ಉಪ-ವಿಭಾಗದ (ಬಿ) ಖಂಡದಲ್ಲಿ,—

(i) ಐಟಮ್ (iv)ರಲ್ಲಿ "ನರ್ಸಿಂಗ್ ವಿದ್ಯಾರ್ಥಿಗಳು;" ಎಂಬ ಪದಗಳ ಹಾಗೂ ಚಿಹ್ನೆಯ ಬದಲು "ನರ್ಸಿಂಗ್ ವಿದ್ಯಾರ್ಥಿಗಳು ಹಾಗೂ ಪ್ಯಾರಾಮೆಡಿಕಲ್ ವಿದ್ಯಾರ್ಥಿಗಳು;" ಎಂಬ ಪದಗಳನ್ನು ಹಾಗೂ ಚಿಹ್ನೆಯನ್ನು ಸೇರಿಸತಕ್ಕದ್ದು;

(ii) ಐಟಮ್ (v)ರ ಬದಲು ಈ ಕೆಳಗಿನ ಐಟಮ್ ಅನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(v) ಆರೋಗ್ಯಪಾಲನೆ ಸೇವಾ ಸಂಸ್ಥೆಗಳಲ್ಲಿ ನೇಮಿಸಲ್ಪಟ್ಟಿರುವ ಹಾಗೂ ಕೆಲಸ ಮಾಡುತ್ತಿರುವ ಪ್ಯಾರಾಮೆಡಿಕಲ್ ಉದ್ಯೋಗಸ್ಥರು, ಭದ್ರತಾ ಸಿಬ್ಬಂದಿಗಳು, ವ್ಯವಸ್ಥಾಪಕ ಸಿಬ್ಬಂದಿಗಳು, ಮಿನಿಸ್ಟೀರಿಯಲ್ ಸಿಬ್ಬಂದಿಗಳು, ಆಂಬುಲೆನ್ಸ್ ಚಾಲಕರು ಹಾಗೂ ಸಹಾಯಕರು; ಅಲ್ಲದೆ".

(iii) ಐಟಮ್ (v)ರ ನಂತರ ಈ ಕೆಳಗಿನ ಐಟಮ್ ಅನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(vi) ಕಾಲಾಕಾಲಗಳಲ್ಲಿ ಸರಕಾರವು ಅಧಿಕೃತ ಗಜೆಟಿನಲ್ಲಿ ಅಧಿಸೂಚಿಸುವ ಇತರ ಯಾವುದೇ ವ್ಯಕ್ತಿ.";

(ಸಿ) (ಸಿ) ಖಂಡದ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಸಿಎ) "ನಿಗದಿಪಡಿಸಿದ" ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಪ್ರಕಾರ ನಿಗದಿಪಡಿಸಿದ ಎಂದರ್ಥ;";

(ಡಿ) (1)ನೇ ಉಪ-ವಿಭಾಗದ ನಂತರ, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2) ಈ ಅಧಿನಿಯಮದಲ್ಲಿ ಬಳಸಲಾದ ಆದರೆ ವ್ಯಾಖ್ಯಾನಿಸದಂತಹ ಮತ್ತು 1860ರ ಭಾರತ ದಂಡ ಸಂಹಿತೆ (1860ರ 45ನೇ ಕೇಂದ್ರ ಅಧಿನಿಯಮ)ಯಲ್ಲಿ ಅಥವಾ 1973ರ ದಂಡ ಪ್ರಕ್ರಿಯಾ ಸಂಹಿತೆ (1974ರ 2ನೇ ಕೇಂದ್ರ ಅಧಿನಿಯಮ)ಯಲ್ಲಿ ವ್ಯಾಖ್ಯಾನಿಸಲ್ಪಟ್ಟಿರುವಂತಹ ಪದಗಳಿಗೆ ಮತ್ತು ಪದ ಪ್ರಯೋಗಗಳಿಗೆ, ಆಯಾಯ ವಿಷಯದಂತೆ, ಪ್ರಸ್ತುತ ಸಂಹಿತೆಗಳಲ್ಲಿ ಅವುಗಳಿಗೆ ಅನುಕ್ರಮವಾಗಿ ನೀಡಲ್ಪಟ್ಟಿರುವ ಅರ್ಥ ಇರುವುದಾಗಿದೆ.".

4. 4ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 4ನೇ ವಿಭಾಗದಲ್ಲಿ,—

(ಎ) (1)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(1) ಯಾವನೇ ವ್ಯಕ್ತಿಯು,—

(i) 2ನೇ ವಿಭಾಗದ (1)ನೇ ಉಪ-ವಿಭಾಗದ (ಇ) ಖಂಡದಲ್ಲಿ ವ್ಯಾಖ್ಯಾನಿಸಲ್ಪಟ್ಟಿರುವಂತಹ ಒಂದು ಹಿಂಸಾ ಕೃತ್ಯವನ್ನು ಎಸಗುವುದೋ ಎಸಗಲು ಪ್ರಯತ್ನಿಸುವುದೋ ಪ್ರೇರೇಪಿಸುವುದೋ ಪ್ರಚೋದಿಸುವುದೋ ಮಾಡುವುದಾದಲ್ಲಿ, ಅಪರಾಧ ನಿರ್ಣಯದ ಮೇರೆಗೆ ಆರು ತಿಂಗಳಿಗಿಂತ ಕಡಿಮೆಯಲ್ಲದ ಆದರೆ ಐದು ವರ್ಷದವರೆಗೆ ವಿಸ್ತರಿಸಬಹುದಾದ ಜೈಲುಶಿಕ್ಷೆ ಹಾಗೂ ಐವತ್ತು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಆದರೆ ಎರಡು ಲಕ್ಷ ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ವಿಧಿಸಿ ದಂಡಿತನಾಗತಕ್ಕದ್ದು;

(iii) ಆರೋಗ್ಯಪಾಲನೆ ಸೇವಾ ಪ್ರವರ್ತಕನ ಮೇಲೆ ಒಂದು ಹಿಂಸಾ ಕೃತ್ಯವನ್ನು ಎಸಗುವಾಗ, 1860ರ ಭಾರತ ದಂಡ ಸಂಹಿತೆಯ 320ನೇ ವಿಭಾಗದಲ್ಲಿ ವ್ಯಾಖ್ಯಾನಿಸಲ್ಪಟ್ಟಿರುವ ಪ್ರಕಾರದ ತೀವ್ರ ದೈಹಿಕ ಗಾಯವನ್ನು ಆತನಿಗೆ ಉಂಟು ಮಾಡಿದ್ದಲ್ಲಿ, ಅಪರಾಧ ನಿರ್ಣಯದ ಮೇರೆಗೆ ಒಂದು ವರ್ಷಕ್ಕಿಂತ ಕಡಿಮೆಯಲ್ಲದ ಆದರೆ ಏಳು ವರ್ಷದವರೆಗೆ ವಿಸ್ತರಿಸಬಹುದಾದ ಜೈಲುಶಿಕ್ಷೆ ಮತ್ತು ಒಂದು ಲಕ್ಷ ರೂಪಾಯಿಗಿಂತ ಕಡಿಮೆಯಲ್ಲದ ಆದರೆ ಐದು ಲಕ್ಷ ರೂಪಾಯಿಯವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ವಿಧಿಸಿ ದಂಡಿತನಾಗತಕ್ಕದ್ದು.".

This is a digitally signed Gazette.
Authenticity may be verified through https://compose.kerala.gov.in/

3

(ಬ) (2)ನೇ ಉಪ-ವಿಭಾಗದಲ್ಲಿ "ಆರೋಗ್ಯಪಾಲನೆ ಸೇವಾ ಸಂಸ್ಥೆಗೆ" ಎಂಬ ಪದಗಳ ಬದಲು "ಆರೋಗ್ಯಪಾಲನೆ ಸೇವಾ ಸಂಸ್ಥೆಗೆ ಅಥವಾ ಆರೋಗ್ಯಪಾಲನೆ ಸೇವಾ ಪ್ರವರ್ತಕನಿಗೆ, ಆಯಾಯ ವಿಷಯದಂತೆ," ಎಂಬ ಪದಗಳನ್ನು ಹಾಗೂ ಚಿಹ್ನೆಗಳನ್ನು ಸೇರಿಸತಕ್ಕದ್ದು;

(ಸಿ) (4)ನೇ ಉಪ-ವಿಭಾಗದ ಬದಲು ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(4) (1)ನೇ ಉಪ-ವಿಭಾಗದಲ್ಲಿನ ಯಾವುದೇ ಅಪರಾಧವು ಸಂಜ್ಞೇಯ ಹಾಗೂ ಜಾಮೀನು ರಹಿತವಾಗಿರುವುದಾಗಿದೆ.".

4. 4ಎ ಎಂಬ ಹೊಸ ವಿಭಾಗದ ಸೇರ್ಪಡೆ.—ಪ್ರಧಾನ ಅಧಿನಿಯಮದ 4ನೇ ವಿಭಾಗದ ನಂತರ ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"4ಎ. ತನಿಖೆ ಇತ್ಯಾದಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು.—1973ರ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಏನೇ ಒಳಗೊಂಡಿದ್ದರೂ,—

(i) ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಲ್ಪಡುವ ಯಾವುದೇ ಪ್ರಕರಣವನ್ನು, ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಪೋಲೀಸ್ ಅಧಿಕಾರಿಯು ತನಿಖೆ ನಡೆಸತಕ್ಕದ್ದು ಹಾಗೂ ಅಂತಹ ಪ್ರಕರಣಗಳ ತನಿಖೆಯನ್ನು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸುವ ದಿನಾಂಕದಿಂದ ಅರುವತ್ತು ದಿವಸಗಳೊಳಗೆ ಪೂರ್ಣಗೊಳಿಸತಕ್ಕದ್ದು;

(ii) ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಪ್ರಕರಣದ ತನಿಖಾ ವಿಚಾರಣೆಯ ಅಥವಾ ನ್ಯಾಯಾಲಯ ವಿಚಾರಣೆಯ ನಡವಳಿಗಳನ್ನು ಸಾಧ್ಯವಾದಷ್ಟು ತ್ವರಿತವಾಗಿ ನಡೆಸತಕ್ಕದ್ದು ಹಾಗೂ ವಿಶಿಷ್ಟವಾಗಿ ಸಾಕ್ಷಿಗಳ ವಿಚಾರಣೆಯು ಒಮ್ಮೆ ಪ್ರಾರಂಭಿಸಿದರೆ, ಅದನ್ನು ತದನಂತರದ ದಿನಗಳನ್ನು ಮೀರಿ ಮುಂದಕ್ಕೆ ಹಾಕುವುದು ಅಗತ್ಯವೆಂದು ದಾಖಲುಪಡಿಸಿದ ಕಾರಣಗಳಿಂದ ನ್ಯಾಯಾಲಯಕ್ಕೆ ಮನವರಿಕೆಯಾಗದಿದ್ದಲ್ಲಿ, ಹಾಜರಾದ ಎಲ್ಲಾ ಸಾಕ್ಷಿಗಳನ್ನು ವಿಚಾರಣೆ ನಡೆಸುವವರೆಗೆ ಅದನ್ನು ದಿನನಿತ್ಯ ಮುಂದುವರಿಸತಕ್ಕದ್ದು ಹಾಗೂ ತನಿಖಾ ವಿಚಾರಣೆ ಮತ್ತು ನ್ಯಾಯಾಲಯ ವಿಚಾರಣೆಯನ್ನು ಒಂದು ವರ್ಷದೊಳಗೆ ಪೂರ್ತೀಕರಿಸುವುದಕ್ಕಿರುವ ಪ್ರಯತ್ನವನ್ನು ನಡೆಸತಕ್ಕದ್ದು:

ಆದರೆ ಪ್ರಸ್ತುತ ಕಾಲಾವಧಿಯೊಳಗೆ ವಿಚಾರಣೆಯನ್ನು ಪೂರ್ತೀಕರಿಸದ ವಿಷಯದಲ್ಲಿ, ಆ ರೀತಿ ಪೂರ್ತೀಕರಿಸದಿರುವುದಕ್ಕಿರುವ ಕಾರಣಗಳನ್ನು ನ್ಯಾಯಾಲಯವು ದಾಖಲುಪಡಿಸತಕ್ಕದ್ದು:

ಅದೂ ಅಲ್ಲದೆ, ಅಂತಹ ಕಾಲಮಿತಿಯನ್ನು, ಲಿಖಿತ ದಾಖಲಾತಿಯ ಕಾರಣಗಳಿಂದ, ಅಂತಹ ಅಧಿಕ ಕಾಲಾವಧಿಗೆ ವಿಸ್ತರಿಸಬಹುದಾಗಿದೆ ಆದರೆ ಒಂದು ಬಾರಿ ಅದನ್ನು ಆರು ತಿಂಗಳಿಗಿಂತ ಅಧಿಕವಾಗಿ ವಿಸ್ತರಿಸತಕ್ಕದ್ದಲ್ಲ.

(iii) ತ್ವರಿತ ವಿಚಾರಣೆಯನ್ನು ಏರ್ಪಡಿಸುವ ಅಗತ್ಯಕ್ಕಾಗಿ, ರಾಜ್ಯ ಸರಕಾರವು ಉಚ್ಚನ್ಯಾಯಾಲಯದ ಒಪ್ಪಿಗೆಯೊಂದಿಗೆ, ಅಧಿಕೃತ ಗಜೆಟಿನಲ್ಲಿ ಅಧಿಸೂಚನೆ ಮುಖೇನ, ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳ ವಿಚಾರಣೆಯನ್ನು ನಡೆಸುವುದಕ್ಕಾಗಿ ಪ್ರತಿಯೊಂದು ಜಿಲ್ಲೆಗೆ ಒಂದು ಸೆಷನ್ಸ್ ನ್ಯಾಯಾಲಯವನ್ನು ವಿಶೇಷ ನ್ಯಾಯಾಲಯವಾಗಿ ನಿಯೋಜಿಸತಕ್ಕದ್ದು;

(iv) ರಾಜ್ಯ ಸರಕಾರಕ್ಕೆ, ಅಧಿಕೃತ ಗಜೆಟಿನಲ್ಲಿ ಅಧಿಸೂಚನೆ ಮುಖೇನ ಪ್ರತಿಯೊಂದು ವಿಶೇಷ ನ್ಯಾಯಾಲಯಕ್ಕೆ ಪ್ರಸ್ತುತ ನ್ಯಾಯಾಲಯದಲ್ಲಿನ ಪ್ರಕರಣಗಳ ನಿರ್ವಹಣೆಗಾಗಿ ಸ್ಪೆಷ್ಯಲ್ ಪ್ರಾಸಿಕ್ಯೂಟರ್ ಅನ್ನು ನಿಯೋಜಿಸಬಹುದಾಗಿದೆ.".

5. 7ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 7ನೇ ವಿಭಾಗದಲ್ಲಿ, (2)ನೇ ಉಪ-ವಿಭಾಗವನ್ನು (3)ನೇ ಉಪ-ವಿಭಾಗವಾಗಿ ಪುನರಂಕಿತಗೊಳಿಸತಕ್ಕದ್ದು ಹಾಗೂ ಆ ರೀತಿ ಪುನರಂಕಿತಗೊಳಿಸಿದ ಉಪ-ವಿಭಾಗಕ್ಕಿಂತ ಮುಂಚಿತವಾಗಿ ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(2) ವಿಶಿಷ್ಟವಾಗಿ ಹಾಗೂ ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯತ್ವಯಕ್ಕೆ ಭಂಗವಾಗದಂತೆಯೂ ಅಂತಹ ನಿಯಮಗಳನ್ನು ಈ ಕೆಳಗಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧಿಸಬಹುದಾಗಿದೆ, ಅದೇನೆಂದರೆ:—

(ಎ) ಸಾಕಷ್ಟು ಭದ್ರತಾ ಸಿಬಂದಿ ಮುಂತಾದವರ ನಿಯೋಜನೆ;

(ಬ) ಸಿ.ಸಿ.ಟಿ.ವಿ. ಕ್ಯಾಮೆರಾ ಮತ್ತು ಇತರ ಭದ್ರತಾ ಸಾಧನಗಳು/ಉಪಕರಣಗಳ ಸ್ಥಾಪನೆ;

(ಸಿ) ಕಂಟ್ರೋಲ್ ರೂಮ್‌ಗಳು, ಅಲಾರಂ ವ್ಯವಸ್ಥೆಗಳು ಇತ್ಯಾದಿಗಳ ಏರ್ಪಾಟು ಮಾಡುವಿಕೆ;

(ಡಿ) ಹಿತಾಸಕ್ತಿದಾರರಿಗೆ ತಿಳಿಸಬೇಕಾದ ಮುಖ್ಯ ಮಾಹಿತಿಗಳ ಪ್ರದರ್ಶಿಸುವಿಕೆ;

This is a digitally signed Gazette.
Authenticity may be verified through https://compose.kerala.gov.in/

(ಇ) ಆರೋಗ್ಯಪಾಲನೆ ಸೇವಾ ಸಂಸ್ಥೆಗೆ ಸಂಬಂಧಿಸಿದಂತೆ ಆರೋಗ್ಯಪಾಲನೆ ಸೇವಾ ಪ್ರವರ್ತಕರು ಯಾವ ರೀತಿಯಲ್ಲಿ ಸಂರಕ್ಷಿಸಲ್ಪಡಬೇಕು ಮತ್ತು ವರ್ತಿಸಬೇಕು ಎಂಬುವುದಕ್ಕೆ ಸಂಬಂಧಿಸಿದ ಪ್ರೋಟೋಕಾಲ್ ರೂಪಿಸುವಿಕೆ; ಮತ್ತು

(ಎಫ್) ಅಧಿನಿಯಮದ ಅಡಿಯಲ್ಲಿ ನಿಗದಿಪಡಿಸಬೇಕಾದುದೋ ನಿಗದಿಪಡಿಸಬಹುದಾದುದೋ ಆದಂತಹ ಇತರ ಯಾವುದೇ ವಿಷಯ.".

6. ರದ್ದತಿ ಮತ್ತು ರಕ್ಷಣೆ.—(1) 2023ರ ಕೇರಳ ಆರೋಗ್ಯಪಾಲನೆ ಸೇವಾ ಪ್ರವರ್ತಕರು ಮತ್ತು ಆರೋಗ್ಯಪಾಲನೆ ಸೇವಾ ಸಂಸ್ಥೆಗಳು (ಹಿಂಸಾಚಾರ ಹಾಗು ಆಸ್ತಿಯನ್ನು ಹಾನಿಗೊಳಿಸುವುದು ತಡೆಯುವಿಕೆ) ತಿದ್ದುಪಡಿ ಅಧ್ಯಾದೇಶ (2023ರ 1)ವು ಈ ಮೂಲಕ ರದ್ದುಗೊಂಡಿರುವುದು.

(2) ಆ ರೀತಿ ರದ್ದುಗೊಳಿಸಿದ್ದರೂ, ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಿದ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು ಈ ಅಧಿನಿಯಮದ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎಚ್) ಇಲಾಖೆ

ಅಧಿಸೂಚನೆ

ನಂಬ್ರ ಲೆಗ್. ಎಚ್.1/65/2023/ಕಾನೂನು. ತಿರುವನಂತಪುರಂ, *2023 ಅಕ್ಟೋಬರ್ 6, 1199 ಕನ್ಯಾ 19/ 1945 ಅಶ್ವಯುಜ 14.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2023 ಅಕ್ಟೋಬರ್ 5ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2023ರ 25ನೇ ಅಧಿನಿಯಮ

2023ರ ಕೇರಳ ವೈದ್ಯಕೀಯ ಶಿಕ್ಷಣ (ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಪ್ರವೇಶಾತಿಯ ಮೇಲೆ ನಿಬಂಧನೆ ಹಾಗೂ ನಿಯಂತ್ರಣೆ) ತಿದ್ದುಪಡಿ ಅಧಿನಿಯಮ

2017ರ ಕೇರಳ ವೈದ್ಯಕೀಯ ಶಿಕ್ಷಣ (ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಪ್ರವೇಶಾತಿಯ ಮೇಲೆ ನಿಬಂಧನೆ ಹಾಗೂ ನಿಯಂತ್ರಣೆ) ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು
ಅಧಿನಿಯಮ

ಪೀಠಿಕೆ—2017ರ ಕೇರಳ ವೈದ್ಯಕೀಯ ಶಿಕ್ಷಣ (ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಪ್ರವೇಶಾತಿಯ ಮೇಲೆ ನಿಬಂಧನೆ ಹಾಗೂ ನಿಯಂತ್ರಣೆ) ಅಧಿನಿಯಮ (2017ರ 15)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮವನ್ನು ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2023ರ ಕೇರಳ ವೈದ್ಯಕೀಯ ಶಿಕ್ಷಣ (ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಪ್ರವೇಶಾತಿಯ ಮೇಲೆ ನಿಬಂಧನೆ ಹಾಗೂ ನಿಯಂತ್ರಣೆ) ತಿದ್ದುಪಡಿ ಅಧಿನಿಯಮವೆಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. 3ನೇ ವಿಭಾಗದ ತಿದ್ದುಪಡಿ.—2017ರ ಕೇರಳ ವೈದ್ಯಕೀಯ ಶಿಕ್ಷಣ (ಖಾಸಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಪ್ರವೇಶಾತಿಯ ಮೇಲೆ ನಿಬಂಧನೆ ಹಾಗೂ ನಿಯಂತ್ರಣೆ) ಅಧಿನಿಯಮ (2017ರ 15) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 3ನೇ ವಿಭಾಗದ ಐಟಂ (ಡಿ)ಯಲ್ಲಿ "ಭಾರತ ವೈದ್ಯಶಾಸ್ತ್ರ ಕೌನ್ಸಿಲಿನ" ಎಂಬ ಪದಗಳ ಬದಲು "ರಾಷ್ಟ್ರೀಯ ವೈದ್ಯಕೀಯ ಆಯೋಗದ" ಎಂಬ ಪದಗಳನ್ನು ಸೇರಿಸತಕ್ಕದ್ದು.

G. 4/2024/GPC.

This is a digitally signed Gazette.
Authenticity may be verified through https://compose.kerala.gov.in/

2

3. 3ಎ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 3ಎ ವಿಭಾಗದ ಐಟಂ (ಸಿ)ಯಲ್ಲಿ ''ಭಾರತ ವೈದ್ಯಶಾಸ್ತ್ರ ಕೌನ್ಸಿಲಿನ'' ಎಂಬ ಪದಗಳ ಬದಲು ''ರಾಷ್ಟ್ರೀಯ ವೈದ್ಯಕೀಯ ಆಯೋಗದ'' ಎಂಬ ಪದಗಳನ್ನು ಸೇರಿಸತಕ್ಕದ್ದು.

4. 3ಬ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 3ಬ ವಿಭಾಗದ ''ಭಾರತ ವೈದ್ಯಶಾಸ್ತ್ರ ಕೌನ್ಸಿಲಿನಲ್ಲಿ'' ಎಂಬ ಪದಗಳ ಬದಲು ''ರಾಷ್ಟ್ರೀಯ ವೈದ್ಯಕೀಯ ಆಯೋಗದಲ್ಲಿ'' ಎಂಬ ಪದಗಳನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಬ) ಇಲಾಖೆ

ಅಧಿಸೂಚನೆ

2023 ಡಿಸೆಂಬರ್ 1,

ನಂಬ್ರ 28/ಲೆಗ್. ಬ1/2023/ಕಾನೂನು. *ತಿರುವನಂತಪುರಂ, 1199 ವೃಶ್ಚಿಕ 15/*

1945 ಅಗ್ರಹಾಯನ 10.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2023 ನವೆಂಬರ್ 30ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2023ರ 29ನೇ ಅಧಿನಿಯಮ

2023ರ ಕೇರಳ ಲೋಕ ಸೇವಾ ಆಯೋಗ (ಕೆಲವು ನಿಗಮಗಳ ಹಾಗೂ ಕಂಪನಿಗಳ ಹೆಚ್ಚುವರಿ ಕರ್ತವ್ಯಗಳು) ತಿದ್ದುಪಡಿ ಅಧಿನಿಯಮ

1970ರ ಕೇರಳ ಲೋಕ ಸೇವಾ ಆಯೋಗ (ಕೆಲವು ನಿಗಮಗಳ ಹಾಗೂ ಕಂಪನಿಗಳ ಹೆಚ್ಚುವರಿ ಕರ್ತವ್ಯಗಳು) ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು
ಅಧಿನಿಯಮ

ಪೀಠಿಕೆ.—1970ರ ಕೇರಳ ಲೋಕ ಸೇವಾ ಆಯೋಗ (ಕೆಲವು ನಿಗಮಗಳ ಹಾಗೂ ಕಂಪನಿಗಳ ಹೆಚ್ಚುವರಿ ಕರ್ತವ್ಯಗಳು) ಅಧಿನಿಯಮ (1970ರ 19)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಪುನಃ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2023ರ ಕೇರಳ ಲೋಕ ಸೇವಾ ಆಯೋಗ (ಕೆಲವು ನಿಗಮಗಳ ಹಾಗೂ ಕಂಪನಿಗಳ ಹೆಚ್ಚುವರಿ ಕರ್ತವ್ಯಗಳು) ತಿದ್ದುಪಡಿ ಅಧಿನಿಯಮ ಎಂದು ಕರೆಯಬಹುದು.

(2) ಇದು ಕೂಡಲೇ ಜಾರಿಗೆ ಬರುವುದಾಗಿದೆ.

2. ವಿಭಾಗ 2ರ ತಿದ್ದುಪಡಿ.—1970ರ ಕೇರಳ ಲೋಕ ಸೇವಾ ಆಯೋಗ (ಕೆಲವು ನಿಗಮಗಳ ಹಾಗೂ ಕಂಪನಿಗಳ ಹೆಚ್ಚುವರಿ ಕರ್ತವ್ಯಗಳು) ಅಧಿನಿಯಮದ (1970ರ 19) 2ನೇ ವಿಭಾಗ, (ಎ) ಖಂಡದಲ್ಲಿ, "ಎಂದರ್ಥ;" ಎಂಬ ಪದಗಳ ಹಾಗೂ ಚಿಹ್ನೆಯ ಮುಂಚಿತವಾಗಿ "ಅಥವಾ 1974ರ ಕೇರಳ ಕೃಷಿ ಕಾರ್ಮಿಕ ಅಧಿನಿಯಮ (1974ರ 18)ದ ವಿಭಾಗ 11ರ ಪ್ರಕಾರ ರಚಿಸಲಾದ ಕೇರಳ

This is a digitally signed Gazette.
Authenticity may be verified through https://compose.kerala.gov.in/

2

ಕೃಷಿ ಕಾರ್ಮಿಕರ ಕ್ಷೇಮನಿಧಿ ಮಂಡಳಿ ಅಥವಾ 1996ರ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ (ಉದ್ಯೋಗ ಮತ್ತು ಸೇವಾ ವ್ಯವಸ್ಥೆಗಳ ನಿಯಂತ್ರಣೆ) ಅಧಿನಿಯಮದ (1996ರ 27ನೇ ಕೇಂದ್ರ ಅಧಿನಿಯಮ)ದ 18ನೇ ವಿಭಾಗದ (1)ನೇ ಉಪ-ವಿಭಾಗದ ಪ್ರಕಾರ ರಚಿಸಲಾದ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕ್ಷೇಮ ಮಂಡಳಿ ಅಥವಾ 2006ರ ಕೇರಳ ಅಂಗಡಿಗಳ ಹಾಗೂ ವಾಣಿಜ್ಯ ಸಂಸ್ಥೆಗಳ ಕಾರ್ಮಿಕರ ಕ್ಷೇಮನಿಧಿ ಅಧಿನಿಯಮದ (2006ರ 24)ದ 6ನೇ ವಿಭಾಗದ ಪ್ರಕಾರ ರಚಿಸಲಾದ ಕೇರಳ ಅಂಗಡಿಗಳ ಹಾಗೂ ವಾಣಿಜ್ಯ ಸಂಸ್ಥೆಗಳ ಕಾರ್ಮಿಕರ ಕ್ಷೇಮನಿಧಿ ಮಂಡಳಿ ಅಥವಾ 1989ರ ಕೇರಳ ಆಬಕಾರಿ ಕಾರ್ಮಿಕ ಕಲ್ಯಾಣನಿಧಿ ಅಧಿನಿಯಮದ (1989ರ 19)ದ 6ನೇ ವಿಭಾಗದ ಪ್ರಕಾರ ರಚಿಸಲಾದ ಕೇರಳ ಆಬಕಾರಿ ಕಾರ್ಮಿಕ ಕಲ್ಯಾಣನಿಧಿ ಮಂಡಳಿ, 1985ರ ಕೇರಳ ಮತ್ಸ್ಯ ಕಾರ್ಮಿಕರ ಕ್ಷೇಮನಿಧಿ ಅಧಿನಿಯಮ (1985ರ 30)ದ 7ನೇ ವಿಭಾಗದ ಪ್ರಕಾರ ರಚಿಸಲಾದ ಕೇರಳ ಮತ್ಸ್ಯ ಕಾರ್ಮಿಕರ ಕ್ಷೇಮನಿಧಿ ಮಂಡಳಿ'' ಎಂಬ ಪದಗಳನ್ನು, ಅಂಕೆಗಳನ್ನು, ಚಿಹ್ನೆಗಳನ್ನು ಹಾಗೂ ಆವರಣಗಳನ್ನು ಸೇರಿಸತಕ್ಕದ್ದು.

———————

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 66/ಲೆಗ್. ಎ2/2023/ಕಾನೂನು. ತಿರುವನಂತಪುರಂ, *2023 ಜುಲೈ 22, 1198 ಕರ್ಕಾಟಕ 6/ 1945 ಆಷಾಢ 31.*

2023 ಜುಲೈ 21ನೇ ದಿನಾಂಕದಂದು ಕೇರಳ ರಾಜ್ಯಪಾಲರು ಪ್ರಖ್ಯಾಪಿಸಿದಂತಹ ಈ ಕೆಳಗಿನ ಅಧ್ಯಾದೇಶವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ.

ರಾಜ್ಯಪಾಲರ ಆಜ್ಞಾಪ್ರಕಾರ,

ವಿ. ಹರಿ ನಾಯರ್,
ಕಾನೂನು ಕಾರ್ಯದರ್ಶಿ.

2023ರ 2ನೇ ನಂಬ್ರ ಅಧ್ಯಾದೇಶ

2023ರ ಕೇರಳ ತೆರಿಗೆ ನಿರ್ಧರಣೆ ಕಾನೂನುಗಳು (ತಿದ್ದುಪಡಿ) ಅಧ್ಯಾದೇಶ

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಕೇರಳ ರಾಜ್ಯಪಾಲರಿಂದ ಪ್ರಖ್ಯಾಪಿಸಲ್ಪಟ್ಟಿತು.

2017ರ ಕೇರಳ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮವನ್ನು ಮತ್ತು 2023ರ ಕೇರಳ ಆರ್ಥಿಕ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧ್ಯಾದೇಶ

ಪೀಠಿಕೆ—2017ರ ಕೇರಳ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ ಮತ್ತು 2023ರ ಕೇರಳ ಆರ್ಥಿಕ ಅಧಿನಿಯಮವನ್ನು ಇನ್ನು ಮುಂದಿನ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಕೇರಳ ರಾಜ್ಯ ವಿಧಾನಸಭೆಯು ಅಧಿವೇಶನದಲ್ಲಿಲ್ಲದಿರುವುದರಿಂದಲೂ ಮತ್ತು ತಾನು ತ್ವರಿತ ಕ್ರಮವನ್ನು ಕೈಗೊಳ್ಳಲು ಅಗತ್ಯವಾದ ಸನ್ನಿವೇಶವು ಅಸ್ತಿತ್ವದಲ್ಲಿದೆಯೆಂದು ಕೇರಳ ರಾಜ್ಯಪಾಲರಿಗೆ ಮನವರಿಕೆಯಾಗಿರುವುದರಿಂದಲೂ;

ಈಗ ಆದುದರಿಂದ, ಭಾರತ ಸಂವಿಧಾನದ 213ನೇ ಅನುಚ್ಛೇದದ ಖಂಡ (1)ರ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ವಿನಿಯೋಗಿಸಿ, ಕೇರಳ ರಾಜ್ಯಪಾಲರು ಈ ಕೆಳಗಿನ ಅಧ್ಯಾದೇಶವನ್ನು ಪ್ರಖ್ಯಾಪಿಸಲು ಇಚ್ಛಿಸುವರು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧ್ಯಾದೇಶವನ್ನು 2023ರ ಕೇರಳ ತೆರಿಗೆ ನಿರ್ಧರಣೆ (ತಿದ್ದುಪಡಿ) ಅಧ್ಯಾದೇಶವೆಂದು ಕರೆಯಬಹುದು.

G. 8/2024/GPC.

This is a digitally signed Gazette.
Authenticity may be verified through https://compose.kerala.gov.in/

(2) ಈ ಅಧ್ಯಾದೇಶದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಇದು ಸರಕಾರವು ಅಧಿಕೃತ ಗಜೆಟಿನಲ್ಲಿ ಅಧಿಸೂಚನೆಯ ಮುಖೇನ ಗೊತ್ತುಪಡಿಸಬಹುದಾದ ಅಂತಹ ದಿನಾಂಕದಿಂದ ಜಾರಿಗೆ ಬರುವುದಾಗಿದೆ.

2. ತಾತ್ಕಾಲಿಕವಾಗಿ ತಿದ್ದುಪಡಿ ಮಾಡಬೇಕಾದ 2017ರ 20 ಮತ್ತು 2023ರ 17ನೇ ಅಧಿನಿಯಮ.—ಈ ಅಧ್ಯಾದೇಶವು ಕಾರ್ಯಾಚರಣೆಯಲ್ಲಿರುವಾಗ, 2017ರ ಕೇರಳ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ (2017ರ 20) ಮತ್ತು 2023ರ ಕೇರಳ ಆರ್ಥಿಕ ಅಧಿನಿಯಮ (2023ರ 17)ಕ್ಕೆ ಅನುಕ್ರಮವಾಗಿ 3 ಮತ್ತು 4ನೇ ವಿಭಾಗಗಳಲ್ಲಿ ನಿರ್ದಿಷ್ಟಪಡಿಸಿರುವ ತಿದ್ದುಪಡಿಗಳಿಗೆ ವಿಧೇಯವಾಗಿ ಪರಿಣಾಮವಿರುವುದಾಗಿದೆ.

3. 2017ರ 20ನೇ ಅಧಿನಿಯಮದ ತಿದ್ದುಪಡಿ.—2017ರ ಕೇರಳ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ (2017ರ 20)ದಲ್ಲಿ,—

(1) 30ನೇ ವಿಭಾಗದ, (1)ನೇ ಉಪ-ವಿಭಾಗದಲ್ಲಿ,—

(ಎ) ''ರದ್ಧತಿ ಆದೇಶವನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ನಿಗದಿಪಡಿಸಲಾದ ವಿಧಾನದಲ್ಲಿ'' ಎಂಬ ಪದಗಳ ಬದಲು ''ನಿಗದಿಪಡಿಸಬಹುದಾದ ಅಂತಹ ವಿಧಾನದಲ್ಲಿ ಮತ್ತು ಅಂತಹ ಅವಧಿಯ ಒಳಗಾಗಿ ಮತ್ತು ಅಂತಹ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಷರತ್ತನ್ನು ಬಿಟ್ಟುಬಿಡತಕ್ಕದ್ದು.

(2) 62ನೇ ವಿಭಾಗದಲ್ಲಿ,—

(ಎ) (2)ನೇ ಉಪ-ವಿಭಾಗದಲ್ಲಿ, ''ಮೂವತ್ತು ದಿನಗಳ ಒಳಗಾಗಿ'' ಎಂಬ ಪದಗಳ ಬದಲು ''ಆರುವತ್ತು ದಿನಗಳ ಒಳಗಾಗಿ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

''ಆದರೆ, (1)ನೇ ಉಪ-ವಿಭಾಗದ ಕೆಳಗೆ ಕರ ನಿರ್ಧರಣಾ ಆದೇಶವನ್ನು ನೀಡಿದ ಆರವತ್ತು ದಿನಗಳ ಒಳಗಾಗಿ ನೋಂದಾಯಿತ ವ್ಯಕ್ತಿಯು ಒಂದು ಸಿಂಧುವಾದ ರಿಟರ್ನ್ ಅನ್ನು ಒದಗಿಸಲು ವಿಫಲನಾದಲ್ಲಿ, ಆತನು ಪ್ರಸ್ತುತ ಕರ ನಿರ್ಧರಣಾ ಆದೇಶವನ್ನು ಸ್ವೀಕರಿಸಿದ ಆರವತ್ತು ದಿನಗಳ ಒಳಗಾಗಿ ಪ್ರತಿಯೊಂದು ದಿನಕ್ಕೆ ನೂರು ರೂಪಾಯಿಯಂತೆ ಹೆಚ್ಚುವರಿ ವಿಳಂಬ ಶುಲ್ಕವನ್ನು ಸಂದಾಯ ಮಾಡಿದ ನಂತರ ಮುಂದಿನ ಆರವತ್ತು ದಿನಗಳ ಒಳಗಾಗಿ ಪ್ರಸ್ತುತ ರಿಟರ್ನ್ ಅನ್ನು ಒದಗಿಸಬಹುದು ಮತ್ತು ಒಂದು ವೇಳೆ ಅಂತಹ ವಿಸ್ತರಿಸಿದ ಅವಧಿಯೊಳಗೆ ಆತನು ಒಂದು ಸಿಂಧುವಾದ ರಿಟರ್ನ್ ಅನ್ನು ಒದಗಿಸಿದ್ದಲ್ಲಿ, ಪ್ರಸ್ತುತ ಕರ ನಿರ್ಧರಣಾ ಆದೇಶವನ್ನು ಹಿಂಪಡೆಯಲಾಗಿದೆ ಎಂದು ಭಾವಿಸತಕ್ಕದ್ದು. ಆದರೆ 50ನೇ ವಿಭಾಗದ (1)ನೇ ಉಪ-ವಿಭಾಗದ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ ಅಥವಾ 47ನೇ ವಿಭಾಗದ ಅಡಿಯಲ್ಲಿ ಸಂದಾಯ ಮಾಡಬೇಕಾದ ವಿಳಂಬ ಶುಲ್ಕ ಬಾಧ್ಯತೆಯು ಮುಂದುವರಿಯತಕ್ಕದ್ದು.''.

(3) 109ನೇ ವಿಭಾಗದ ಬದಲು ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

''109. ಅಪೀಲು ನ್ಯಾಯಾಧಿಕರಣದ ರಚನೆ ಮತ್ತು ಅದರ ನ್ಯಾಯಪೀಠಗಳು.—ಈ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, 2017ರ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ (2017ರ 12ನೇ ಕೇಂದ್ರ ಅಧಿನಿಯಮ)ದ ಅಡಿಯಲ್ಲಿ ರಚಿಸಿದ ಸರಕು ಮತ್ತು ಸೇವೆಗಳ ತೆರಿಗೆ ನ್ಯಾಯಾಧಿಕರಣವು ಈ ಅಧಿನಿಯಮದ ಅಡಿಯಲ್ಲಿ ಅಪೀಲು ಪ್ರಾಧಿಕಾರ ಅಥವಾ ಪುನರೀಕ್ಷಣಾ ಪ್ರಾಧಿಕಾರದಿಂದ ಹೊರಡಿಸಿದ ಆದೇಶಗಳ ವಿರುದ್ಧವಾದ ಅಪೀಲುಗಳನ್ನು ಅಹವಾಲು ನಡೆಸುವುದಕ್ಕಾಗಿ ಅಪೀಲು ಪ್ರಾಧಿಕಾರವಾಗಿರತಕ್ಕದ್ದು.'';

(4) 110ನೇ ವಿಭಾಗವನ್ನು ಬಿಟ್ಟುಬಿಡತಕ್ಕದ್ದು;

(5) 114ನೇ ವಿಭಾಗವನ್ನು ಬಿಟ್ಟುಬಿಡತಕ್ಕದ್ದು;

(6) 117ನೇ ವಿಭಾಗದಲ್ಲಿ,—

(ಎ) (1)ನೇ ಉಪ-ವಿಭಾಗದಲ್ಲಿ, ''ರಾಜ್ಯ ನ್ಯಾಯಪೀಠ ಅಥವಾ ಕ್ಷೇತ್ರ ನ್ಯಾಯಪೀಠದಿಂದ'' ಎಂಬ ಪದಗಳ ಬದಲು ''ರಾಜ್ಯ ನ್ಯಾಯಪೀಠಗಳು'' ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

3

(ಬ) (5)ನೇ ಉಪ-ವಿಭಾಗದಲ್ಲಿ, (ಎ) ಮತ್ತು (ಬ) ಖಂಡಗಳಲ್ಲಿ "ರಾಜ್ಯ ನ್ಯಾಯಪೀಠ ಅಥವಾ ಕ್ಷೇತ್ರ ನ್ಯಾಯಪೀಠಗಳಿಂದ" ಎಂಬ ಪದಗಳ ಬದಲು "ರಾಜ್ಯ ನ್ಯಾಯಪೀಠಗಳಿಂದ" ಎಂಬ ಪದಗಳನ್ನು ಸೇರಿಸತಕ್ಕದ್ದು;

(7) 118ನೇ ವಿಭಾಗದ, (1)ನೇ ಉಪ-ವಿಭಾಗದ, (ಎ) ಖಂಡದಲ್ಲಿ "ರಾಷ್ಟ್ರೀಯ ನ್ಯಾಯಪೀಠ ಅಥವಾ ಪ್ರಾದೇಶಿಕ ನ್ಯಾಯಪೀಠಗಳಿಂದ" ಎಂಬ ಪದಗಳ ಬದಲು "ಪ್ರಧಾನ ನ್ಯಾಯಪೀಠದಿಂದ" ಎಂಬ ಪದಗಳನ್ನು ಸೇರಿಸತಕ್ಕದ್ದು;

(8) 119ನೇ ವಿಭಾಗದಲ್ಲಿ,—

(ಎ) "ರಾಷ್ಟ್ರೀಯ ಅಥವಾ ಪ್ರಾದೇಶಿಕ ನ್ಯಾಯಪೀಠಗಳಿಂದ" ಎಂಬ ಪದಗಳ ಬದಲು "ಪ್ರಧಾನ ನ್ಯಾಯಪೀಠದಿಂದ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬ) "ರಾಜ್ಯ ನ್ಯಾಯಪೀಠ ಅಥವಾ ಕ್ಷೇತ್ರ ನ್ಯಾಯಪೀಠಗಳಿಂದ" ಎಂಬ ಪದಗಳ ಬದಲು "ರಾಜ್ಯ ನ್ಯಾಯಪೀಠಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

4. 2023ರ 17ನೇ ಅಧಿನಿಯಮದ ತಿದ್ದುಪಡಿ.—2023ರ ಕೇರಳ ಆರ್ಥಿಕ ಅಧಿನಿಯಮ (2023ರ 17)ದ 11ನೇ ವಿಭಾಗದ (4)ನೇ ಉಪ-ವಿಭಾಗದಲ್ಲಿ, "ವಿಭಾಗ 22ರ ಮತ್ತು ವಿಭಾಗ 24ರ", ಎಂಬ ಪದಗಳ ಬದಲು, "ವಿಭಾಗ 22ರ ಅಥವಾ ವಿಭಾಗ 24ರ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಆರಿಫ್ ಮೊಹಮ್ಮದ್ ಖಾನ್,

ರಾಜ್ಯಪಾಲರು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 66/ಲೆಗ್. ಎ2/2023/ಕಾನೂನು. ತಿರುವನಂತಪುರಂ, *2023 ಸೆಪ್ಟೆಂಬರ್ 18, 1199 ಕನ್ಯಾ 1/ 1945 ಭಾದ್ರಪದ 27.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2023 ಸೆಪ್ಟೆಂಬರ್ 18ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಸಿ. ವಿಜಯಲಕ್ಷ್ಮಿ,
ವಿಶೇಷ ಕಾರ್ಯದರ್ಶಿ (ಕಾನೂನು).

2023ರ 23ನೇ ಅಧಿನಿಯಮ

2023ರ ಕೇರಳ ತೆರಿಗೆ ನಿರ್ಧರಣೆ ಕಾನೂನುಗಳು (ತಿದ್ದುಪಡಿ) ಅಧಿನಿಯಮ

2017ರ ಕೇರಳ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮವನ್ನು ಮತ್ತು 2023ರ ಕೇರಳ ಆರ್ಥಿಕ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—2017ರ ಕೇರಳ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮವನ್ನು ಮತ್ತು 2023ರ ಕೇರಳ ಆರ್ಥಿಕ ಅಧಿನಿಯಮವನ್ನು ಇನ್ನು ಮುಂದಿನ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮವನ್ನು ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2023ರ ಕೇರಳ ತೆರಿಗೆ ನಿರ್ಧರಣೆ ಕಾನೂನುಗಳು (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಇದು ಸರಕಾರವು ಅಧಿಕೃತ ಗಜೆಟಿನಲ್ಲಿ ಅಧಿಸೂಚನೆಯ ಮುಖೇನ ಗೊತ್ತುಪಡಿಸಬಹುದಾದ ಅಂತಹ ದಿನಾಂಕದಿಂದ ಜಾರಿಗೆ ಬರುವುದಾಗಿದೆ.

G. 9/2024/GPC.

This is a digitally signed Gazette.
Authenticity may be verified through https://compose.kerala.gov.in/

2

2. 2017ರ 20ನೇ ಅಧಿನಿಯಮದ ತಿದ್ದುಪಡಿ.—2017ರ ಕೇರಳ ರಾಜ್ಯ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ (2017ರ 20)ದಲ್ಲಿ,—

(1) 30ನೇ ವಿಭಾಗದ, (1)ನೇ ಉಪ-ವಿಭಾಗದಲ್ಲಿ,—

(ಎ) "ರದ್ದತಿ ಆದೇಶವನ್ನು ಜಾರಿ ಮಾಡಿದ ದಿನಾಂಕದಿಂದ ಮೂವತ್ತು ದಿನಗಳ ಒಳಗಾಗಿ ನಿಗದಿಪಡಿಸಲಾದ ವಿಧಾನದಲ್ಲಿ" ಎಂಬ ಪದಗಳ ಮತ್ತು ಚಿಹ್ನೆಯ ಬದಲು "ನಿಗದಿಪಡಿಸಬಹುದಾದ ಅಂತಹ ವಿಧಾನದಲ್ಲಿ ಮತ್ತು ಅಂತಹ ಅವಧಿಯ ಒಳಗಾಗಿ ಮತ್ತು ಅಂತಹ ಷರತ್ತುಗಳು ಮತ್ತು ನಿರ್ಬಂಧಗಳಿಗೆ ಒಳಪಟ್ಟು" ಎಂಬ ಪದಗಳನ್ನು ಮತ್ತು ಚಿಹ್ನೆಗಳನ್ನು ಸೇರಿಸತಕ್ಕದ್ದು;

(ಬ) ಷರತ್ತನ್ನು ಬಿಟ್ಟುಬಿಡತಕ್ಕದ್ದು.

(2) 62ನೇ ವಿಭಾಗದ, (2)ನೇ ಉಪ-ವಿಭಾಗದಲ್ಲಿ,—

(ಎ) "ಮೂವತ್ತು ದಿನಗಳ ಒಳಗಾಗಿ" ಎಂಬ ಪದಗಳ ಬದಲು "ಆರುವತ್ತು ದಿನಗಳ ಒಳಗಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬ) ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

"ಆದರೆ, (1)ನೇ ಉಪ-ವಿಭಾಗದ ಕೆಳಗೆ ಕರ ನಿರ್ಧರಣಾ ಆದೇಶವನ್ನು ನೀಡಿದ ಅರವತ್ತು ದಿನಗಳ ಒಳಗಾಗಿ ನೋಂದಾಯಿತ ವ್ಯಕ್ತಿಯು ಒಂದು ಸಿಂಧುವಾದ ರಿಟರ್ನ್ ಅನ್ನು ಒದಗಿಸಲು ವಿಫಲನಾದಲ್ಲಿ, ಆತನು ಪ್ರಸ್ತುತ ಕರ ನಿರ್ಧರಣಾ ಆದೇಶವನ್ನು ಸ್ವೀಕರಿಸಿದ ಅರವತ್ತು ದಿನಗಳ ಒಳಗಾಗಿ ಪ್ರತಿಯೊಂದು ದಿನಕ್ಕೆ ನೂರು ರೂಪಾಯಿಯಂತೆ ಹೆಚ್ಚುವರಿ ವಿಳಂಬ ಶುಲ್ಕವನ್ನು ಸಂದಾಯ ಮಾಡಿದ ನಂತರ ಮುಂದಿನ ಅರವತ್ತು ದಿನಗಳ ಒಳಗಾಗಿ ಪ್ರಸ್ತುತ ರಿಟರ್ನ್ ಅನ್ನು ಒದಗಿಸಬಹುದು ಮತ್ತು ಒಂದು ವೇಳೆ ಅಂತಹ ವಿಸ್ತರಿಸಿದ ಅವಧಿಯೊಳಗೆ ಆತನು ಒಂದು ಸಿಂಧುವಾದ ರಿಟರ್ನ್ ಅನ್ನು ಒದಗಿಸಿದ್ದಲ್ಲಿ, ಪ್ರಸ್ತುತ ಕರ ನಿರ್ಧರಣಾ ಆದೇಶವನ್ನು ಹಿಂಪಡೆಯಲಾಗಿದೆ ಎಂದು ಭಾವಿಸತಕ್ಕದ್ದು. ಆದರೆ 50ನೇ ವಿಭಾಗದ (1)ನೇ ಉಪ-ವಿಭಾಗದ ಅಡಿಯಲ್ಲಿ ಸಂದಾಯ ಮಾಡಬೇಕಾದ ಬಡ್ಡಿ ಅಥವಾ 47ನೇ ವಿಭಾಗದ ಅಡಿಯಲ್ಲಿ, ಸಂದಾಯ ಮಾಡಬೇಕಾದ ವಿಳಂಬ ಶುಲ್ಕ ಬಾಧ್ಯತೆಯು ಮುಂದುವರಿಯತಕ್ಕದ್ದು.".

(3) 109ನೇ ವಿಭಾಗದ ಬದಲು ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"109. ಅಪೀಲು ನ್ಯಾಯಾಧಿಕರಣದ ರಚನೆ ಮತ್ತು ಅದರ ನ್ಯಾಯಪೀಠಗಳು.—ಈ ಅಧ್ಯಾಯದ ಉಪಬಂಧಗಳಿಗೆ ಒಳಪಟ್ಟು, 2017ರ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ (2017ರ 12ನೇ ಕೇಂದ್ರ ಅಧಿನಿಯಮ)ದ ಅಡಿಯಲ್ಲಿ ರಚಿಸಿದ ಸರಕು ಮತ್ತು ಸೇವೆಗಳ ತೆರಿಗೆ ಅಪೀಲು ನ್ಯಾಯಾಧಿಕರಣವು ಈ ಅಧಿನಿಯಮದ ಅಡಿಯಲ್ಲಿ ಅಪೀಲು ಪ್ರಾಧಿಕಾರ ಅಥವಾ ಪುನರೀಕ್ಷಣಾ ಪ್ರಾಧಿಕಾರದಿಂದ ಹೊರಡಿಸಿದ ಆದೇಶಗಳ ವಿರುದ್ಧವಾದ ಅಪೀಲುಗಳನ್ನು ಅಹವಾಲು ನಡೆಸುವುದಕ್ಕಾಗಿ ಅಪೀಲು ನ್ಯಾಯಾಧಿಕರಣವಾಗಿರತಕ್ಕದ್ದು.";

(4) 110ನೇ ವಿಭಾಗವನ್ನು ಬಿಟ್ಟುಬಿಡತಕ್ಕದ್ದು;

(5) 114ನೇ ವಿಭಾಗವನ್ನು ಬಿಟ್ಟುಬಿಡತಕ್ಕದ್ದು;

(6) 117ನೇ ವಿಭಾಗದಲ್ಲಿ,—

(ಎ) (1)ನೇ ಉಪ-ವಿಭಾಗದಲ್ಲಿ, "ರಾಜ್ಯ ನ್ಯಾಯಪೀಠ ಅಥವಾ ಕ್ಷೇತ್ರ ನ್ಯಾಯಪೀಠದಿಂದ" ಎಂಬ ಪದಗಳ ಬದಲು "ರಾಜ್ಯ ನ್ಯಾಯಪೀಠಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬ) (5)ನೇ ಉಪ-ವಿಭಾಗದಲ್ಲಿ, (ಎ) ಮತ್ತು (ಬ) ಖಂಡಗಳಲ್ಲಿ "ರಾಜ್ಯ ನ್ಯಾಯಪೀಠ ಅಥವಾ ಕ್ಷೇತ್ರ ನ್ಯಾಯಪೀಠಗಳಿಂದ" ಎಂಬ ಪದಗಳ ಬದಲು, "ರಾಜ್ಯ ನ್ಯಾಯಪೀಠಗಳಿಂದ" ಎಂಬ ಪದಗಳನ್ನು ಸೇರಿಸತಕ್ಕದ್ದು;

(7) 118ನೇ ವಿಭಾಗದ, (1)ನೇ ಉಪ-ವಿಭಾಗದ, (ಎ) ಖಂಡದಲ್ಲಿ "ರಾಷ್ಟ್ರೀಯ ನ್ಯಾಯಪೀಠ ಅಥವಾ ಪ್ರಾದೇಶಿಕ ನ್ಯಾಯಪೀಠಗಳಿಂದ" ಎಂಬ ಪದಗಳ ಬದಲು "ಪ್ರಧಾನ ನ್ಯಾಯಪೀಠದಿಂದ" ಎಂಬ ಪದಗಳನ್ನು ಸೇರಿಸತಕ್ಕದ್ದು;

This is a digitally signed Gazette.
Authenticity may be verified through https://compose.kerala.gov.in/

3

(8) 119ನೇ ವಿಭಾಗದಲ್ಲಿ,—

(ಎ) ''ರಾಷ್ಟ್ರೀಯ ಅಥವಾ ಪ್ರಾದೇಶಿಕ ನ್ಯಾಯಪೀಠಗಳಿಂದ'' ಎಂಬ ಪದಗಳ ಬದಲು ''ಪ್ರಧಾನ ನ್ಯಾಯಪೀಠದಿಂದ'' ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬ) ''ರಾಜ್ಯ ನ್ಯಾಯಪೀಠ ಅಥವಾ ಕ್ಷೇತ್ರ ನ್ಯಾಯಪೀಠಗಳಿಂದ'' ಎಂಬ ಪದಗಳ ಬದಲು ''ರಾಜ್ಯ ನ್ಯಾಯಪೀಠಗಳು'' ಎಂಬ ಪದಗಳನ್ನು ಸೇರಿಸತಕ್ಕದ್ದು;

3. 2023ರ 17ನೇ ಅಧಿನಿಯಮದ ತಿದ್ದುಪಡಿ.—2023ರ ಕೇರಳ ಆರ್ಥಿಕ ಅಧಿನಿಯಮ (2023ರ 17)ದ 11ನೇ ವಿಭಾಗದ (4)ನೇ ಉಪ-ವಿಭಾಗದಲ್ಲಿ, ''ವಿಭಾಗ 22ರ ಮತ್ತು ವಿಭಾಗ 24ರ'', ಎಂಬ ಪದಗಳ ಬದಲು, ''ವಿಭಾಗ 22ರ ಅಥವಾ ವಿಭಾಗ 24ರ'' ಎಂಬ ಪದಗಳನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-೫) ೫ಲಾಖೆ

ಅಧಿಸೂಚನೆ

2024 ಮಾರ್ಚ್ 2,

ನಂಬ್ರ 1482/ಲೆಗ್. ೫2/2022/ಕಾನೂನು. *ತಿರುವನಂತಪುರಂ, 1199 ಕುಂಭ 18/*

1945 ಫಾಲ್ಗುಣ 12.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಫೆಬ್ರವರಿ 9ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಸಿ. ವಿಜಯಲಕ್ಷ್ಮಿ,

ವಿಶೇಷ ಕಾರ್ಯದರ್ಶಿ (ಕಾನೂನು).

2024ರ 7ನೇ ಅಧಿನಿಯಮ

2022ರ ಕೇರಳ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ

1999ರ ಕೇರಳ ಲೋಕಾಯುಕ್ತ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ
ಒಂದು
ಅಧಿನಿಯಮ

ಪೀಠಿಕೆ.—1999ರ ಕೇರಳ ಲೋಕಾಯುಕ್ತ ಅಧಿನಿಯಮ (1999ರ 8)ವನ್ನು ಈ ಕೆಳಗಿನ ಉದ್ದೇಶಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತಮೂರನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2022ರ ಕೇರಳ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಈ ಅಧಿನಿಯಮದಲ್ಲಿ 2, 3 (iii), 5, 6(i), 6(ii) ಮತ್ತು 7ನೇ ವಿಭಾಗಗಳು ಕೂಡಲೇ ಜಾರಿಗೆ ಬರುವುದಾಗಿದೆ ಮತ್ತು ಉಳಿದ ವಿಭಾಗಗಳು 2022 ಫೆಬ್ರವರಿ 7ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. 2ನೇ ವಿಭಾಗದ ತಿದ್ದುಪಡಿ.—1999ರ ಕೇರಳ ಲೋಕಾಯುಕ್ತ ಅಧಿನಿಯಮ (1999ರ 8) (೫ನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 2ನೇ ವಿಭಾಗದ (ಡಿ) ಖಂಡದಲ್ಲಿ,—

(ಎ) ಅಸ್ತಿತ್ವದಲ್ಲಿರುವ ಐಟಂ (i)ರ ಬದಲು ಈ ಕೆಳಗಿನ ಐಟಂ ಅನ್ನು ಸೇರಿಸತಕ್ಕದ್ದು, ಅದೇನೆಂದರೆ:—

This is a digitally signed Gazette.
Authenticity may be verified through https://compose.kerala.gov.in/

"(i) ಮುಖ್ಯಮಂತ್ರಿಯವರ ಸಂದರ್ಭದಲ್ಲಿ, ರಾಜ್ಯ ವಿಧಾನಸಭೆ;";

(ಬ) ಐಟಂ (i)ರ ನಂತರ ಈ ಕೆಳಗಿನ ಐಟಂ ಅನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(iಎ) ರಾಜ್ಯ ವಿಧಾನಸಭೆಯ ಒಬ್ಬ ಸದಸ್ಯನ ಸಂದರ್ಭದಲ್ಲಿ, ರಾಜ್ಯ ವಿಧಾನಸಭೆಯ ಸ್ಪೀಕರ್;".

3. 3ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 3ನೇ ವಿಭಾಗದಲ್ಲಿ,—

(i) (2)ನೇ ಉಪ-ವಿಭಾಗದಲ್ಲಿ "ಅಥವಾ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ" ಎಂಬ ಪದಗಳ ನಂತರ "ಅಥವಾ ಉಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶರಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (3)ನೇ ಉಪ-ವಿಭಾಗದಲ್ಲಿ "ವಹಿಸುವ ಅಥವಾ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(iii) (3)ನೇ ಉಪ-ವಿಭಾಗದ ಷರತ್ತನ್ನು ಬಿಟ್ಟುಬಿಡತಕ್ಕದ್ದು.

4. 5ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 5ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ,—

(ಎ) "ಐದು ವರ್ಷಗಳ ಕಾಲಾವಧಿಯವರೆಗೆ" ಎಂಬ ಪದಗಳ ನಂತರ "ಅಥವಾ ಆತನಿಗೆ ಎಪ್ಪತ್ತು ವರ್ಷ ವಯಸ್ಸು ಪೂರ್ತಿಯಾಗುವವರೆಗೆ, ಯಾವುದು ಮೊದಲೋ" ಎಂಬ ಪದಗಳನ್ನು, ಚಿಹ್ನೆಗಳನ್ನು ಸೇರಿಸತಕ್ಕದ್ದು;

(ಬ) ಅಸ್ತಿತ್ವದಲ್ಲಿರುವ ಷರತ್ತಿನ ಮೊದಲು ಈ ಕೆಳಗಿನ ಷರತ್ತನ್ನು ಸೇರಿಸತಕ್ಕದ್ದು, ಅದೇನೆಂದರೆ:—

ಆದರೆ, 2022ರ ಕೇರಳ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ (2024ರ 7)ವು ಜಾರಿಗೆ ಬರುವುದಕ್ಕಿಂತ ಮೊದಲು ನೇಮಕಗೊಂಡ ಲೋಕಾಯುಕ್ತ ಮತ್ತು ಉಪ-ಲೋಕಾಯುಕ್ತವು 2022ರ ಕೇರಳ ಲೋಕಾಯುಕ್ತ (ತಿದ್ದುಪಡಿ) ಅಧಿನಿಯಮ (2024ರ 7)ವು, ಜಾರಿಗೆ ಬಂದಿಲ್ಲ ಎಂಬಂತೆ ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಲ್ಪಟ್ಟ ನಿಯಮಗಳ ಉಪಬಂಧಗಳ ಪ್ರಕಾರ ಕಾರ್ಯನಿರ್ವಹಣೆಯನ್ನು ಮುಂದುವರಿಸತಕ್ಕದ್ದು;";

(ಸಿ) ಅಸ್ತಿತ್ವದಲ್ಲಿರುವ ಷರತ್ತಿನಲ್ಲಿ, "ಆದರೆ" ಎಂಬ ಪದಗಳ ಬದಲು "ಅದೂ ಅಲ್ಲದೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

5. 6ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 6ನೇ ವಿಭಾಗದಲ್ಲಿ, (3)ನೇ ಉಪ-ವಿಭಾಗವನ್ನು ಬಿಟ್ಟುಬಿಡತಕ್ಕದ್ದು.

6. 7ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ, 7ನೇ ವಿಭಾಗದಲ್ಲಿ,—

(i) (1)ನೇ ಉಪ-ವಿಭಾಗದ ಐಟಮ್ (v) ಅನ್ನು ಬಿಟ್ಟುಬಿಟತಕ್ಕದ್ದು;

(ii) (2)ನೇ ಉಪ-ವಿಭಾಗದಲ್ಲಿ, "ಅಥವಾ ರಾಜ್ಯ ಮಟ್ಟದಲ್ಲಿ ರಾಜಕೀಯ ಪಕ್ಷದ ಪದಾಧಿಕಾರಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

(iii) (5)ನೇ ಉಪ-ವಿಭಾಗದ ನಂತರ, ಈ ಕೆಳಗಿನ ಉಪ-ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(5ಎ) ಆತನ ಮರಣ, ರಾಜೀನಾಮೆ ಅಥವಾ ಇತರ ಯಾವುದೇ ಕಾರಣದಿಂದ ಲೋಕಾಯುಕ್ತ ಪದವಿಯಲ್ಲಿ ಯಾವುದೇ ತೆರವು ಕಂಡು ಬರುವ ಸಂದರ್ಭದಲ್ಲಿ ಅಂತಹ ತೆರವನ್ನು ಭರ್ತಿ ಮಾಡಲು ಒಬ್ಬ ಹೊಸ ಲೋಕಾಯುಕ್ತರನ್ನು ನೇಮಕಾತಿ ಮಾಡುವವರೆಗೆ ರಾಜ್ಯಪಾಲರಿಗೆ ಅಧಿಸೂಚನೆಯ ಮೂಲಕ, ಅತ್ಯಂತ ಹಿರಿಯ ಉಪ-ಲೋಕಾಯುಕ್ತರನ್ನು ಲೋಕಾಯುಕ್ತರಾಗಿ ಕಾರ್ಯನಿರ್ವಹಿಸುವಂತೆ ಅಧಿಕೃತಗೊಳಿಸಬಹುದಾಗಿದೆ.

(5ಬ) ರಜೆಯಿಂದುಂಟಾದ ಗೈರುಹಾಜರಿ ಅಥವಾ ಇತರ ಯಾವುದೇ ಕಾರಣಗಳಿಂದಾಗಿ ಲೋಕಾಯುಕ್ತನು ತನ್ನ ಕಾರ್ಯಗಳನ್ನು ನಿರ್ವಹಿಸಲು ಅಸಮರ್ಥನಾದಲ್ಲಿ, ಲೋಕಾಯುಕ್ತರು ತಮ್ಮ ಕರ್ತವ್ಯಗಳನ್ನು ಪುನರಾರಂಭಿಸುವ ದಿನಾಂಕದವರೆಗೆ, ರಾಜ್ಯಪಾಲರಿಗೆ ಇದಕ್ಕೆ ಸಂಬಂಧಿಸಿದ ಅಧಿಸೂಚನೆಯ ಮೂಲಕ, ಲಭ್ಯವಿರುವ ಅತ್ಯಂತ ಹಿರಿಯ ಉಪ-ಲೋಕಾಯುಕ್ತರನ್ನು ಲೋಕಾಯುಕ್ತದ ಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಅಧಿಕೃತಗೊಳಿಸಬಹುದಾಗಿದೆ.".

7. 14ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 14ನೇ ವಿಭಾಗದ ಬದಲು ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

This is a digitally signed Gazette.
Authenticity may be verified through https://compose.kerala.gov.in/

3

"14. ಲೋಕಾಯುಕ್ತ ಮತ್ತು ಉಪಲೋಕಾಯುಕ್ತದ ಶಿಫಾರಸು ಮತ್ತು ಅದರ ಮೇಲಿನ ಕ್ರಮ.—(1) ಒಂದು ದೂರಿನ ಮೇಲಿನ ತನಿಖೆಯ ನಂತರ, ಸಾರ್ವಜನಿಕ ನೌಕರನ ವಿರುದ್ಧದ ಆರೋಪವನ್ನು ಒಳಗೊಳ್ಳುವ ದೂರು ರುಜುವಾತಾಗಿದೆಯೆಂದು ಮತ್ತು ಸಂಬಂಧಪಟ್ಟ ಸಾರ್ವಜನಿಕ ನೌಕರನು ಅವನು ಇರುವ ಹುದ್ದೆಯಲ್ಲಿ ಮುಂದುವರಿಯತಕ್ಕದ್ದಲ್ಲೆಂದು, ಆಯಾಯ ವಿಷಯದಂತೆ, ಲೋಕಾಯುಕ್ತನಿಗೆ ಅಥವಾ ಉಪಲೋಕಾಯುಕ್ತನಿಗೆ ಮನದಟ್ಟಾದಲ್ಲಿ, 12ನೇ ವಿಭಾಗದ (3)ನೇ ಉಪ-ವಿಭಾಗದ ಮೇರೆಗಿನ ತನ್ನ ವರದಿಯಲ್ಲಿ, ಲೋಕಾಯುಕ್ತ ಅಥವಾ ಉಪಲೋಕಾಯುಕ್ತನು ಸಮಕ್ಷ ಪ್ರಾಧಿಕಾರಕ್ಕೆ ಆ ಕುರಿತು ಒಂದು ಶಿಫಾರಸನ್ನು ಮಾಡತಕ್ಕದ್ದು.

(2) ಸಕ್ಷಮ ಪ್ರಾಧಿಕಾರವು, ಆಯಾಯ ವಿಷಯದಂತೆ, ಲೋಕಾಯುಕ್ತ ಮತ್ತು ಉಪಲೋಕಾಯುಕ್ತದಿಂದ ಮಾಡಲ್ಪಟ್ಟ ಶಿಫಾರಸನ್ನು ಪರಿಶೀಲಿಸತಕ್ಕದ್ದು ಮತ್ತು ಆಯಾಯ ವಿಷಯದಂತೆ, ವರದಿಯನ್ನು ಸ್ವೀಕರಿಸಿದ ತೊಂಭತ್ತು ದಿವಸಗಳ ಕಾಲಾವಧಿಯೊಳಗೆ, ಶಿಫಾರಸಿನ ತಳಹದಿಯಲ್ಲಿ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸುವ ಕ್ರಮ ಅಥವಾ ಪ್ರಸ್ತುತ ಶಿಫಾರಸಿನ ಮೇರೆಗೆ ಕ್ರಮ ಕೈಗೊಳ್ಳದಿರುವುದಕ್ಕಿರುವ ಕಾರಣಗಳನ್ನು ಲೋಕಾಯುಕ್ತ ಅಥವಾ ಉಪಲೋಕಾಯುಕ್ತನಿಗೆ ತಿಳಿಸತಕ್ಕದ್ದು.

ಆದರೆ, ಸಕ್ಷಮ ಪ್ರಾಧಿಕಾರವು ರಾಜ್ಯ ವಿಧಾನಸಭೆ ಆಗಿದ್ದಲ್ಲಿ, ತೊಂಭತ್ತು ದಿವಸಗಳ ಕಾಲಾವಧಿಯನ್ನು ಲೆಕ್ಕ ಹಾಕುವಾಗ, ರಾಜ್ಯ ವಿಧಾನಸಭೆಯು ಅಧಿವೇಶದಲ್ಲಿಲ್ಲದ ಯಾವುದೇ ಕಾಲಾವಧಿಯನ್ನು ಹೊರತುಪಡಿಸತಕ್ಕದ್ದು.

(3) (2)ನೇ ವಿಭಾಗದ (ಬ) ಖಂಡದ (iv)ರಿಂದ (vii)ರ ವರೆಗಿನ ಐಟಮ್‌ಗಳ ಅಡಿಯಲ್ಲಿ ಬರುವ ಒಬ್ಬ ಸಾರ್ವಜನಿಕ ನೌಕರನ ವಿಷಯದಲ್ಲಿ, ನೇಮಕ ಪ್ರಾಧಿಕಾರಿಯು ಅಂತಹ ಸಾರ್ವಜನಿಕ ನೌಕರರಿಗೆ ಅನ್ವಯವಾಗತಕ್ಕ ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಅನುಸಾರವಾಗಿ, ಸೂಕ್ತ ಕ್ರಮ ಪ್ರಾರಂಭಿಸತಕ್ಕದ್ದು.

(4) ಸಾರ್ವಜನಿಕ ನೌಕರನು 1951ರ ಅಖಿಲ ಭಾರತ ಸೇವಾ ಅಧಿನಿಯಮ (1951ರ 61ನೇ ಕೇಂದ್ರ ಅಧಿನಿಯಮ)ದ 2ನೇ ವಿಭಾಗದಲ್ಲಿ ಪರಿಭಾಷಿಸಲಾದ ಅಖಿಲ ಭಾರತ ಸೇವೆಯ ಸದಸ್ಯನಾಗಿದ್ದಲ್ಲಿ, ಸರಕಾರವು, ಅವನ ಸೇವೆಗಳಿಗೆ ಅನ್ವಯವಾಗತಕ್ಕ ನಿಯಮಗಳಿಗೆ ಮತ್ತು ವಿನಿಯಮಗಳಿಗೆ ಅನುಸಾರವಾಗಿ ಸೂಕ್ತ ಕ್ರಮ ಕೈಗೊಳ್ಳತಕ್ಕದ್ದು.".

8. 15ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 15ನೇ ವಿಭಾಗದ "14ನೇ ವಿಭಾಗದಲ್ಲಿ ಏನೇ ಒಳಗೊಂಡಿದ್ದರೂ," ಎಂಬ ಅಂಕೆಗಳನ್ನು ಮತ್ತು ಚಿಹ್ನೆಗಳನ್ನು ಬಿಟ್ಟುಬಿಡತಕ್ಕದ್ದು.

9. ಸಿಂಧುತ್ವ.—2022ರ ಕೇರಳ ಲೋಕಾಯುಕ್ತ ಅಧಿನಿಯಮ (2022ರ 8) ಅಧ್ಯಾದೇಶ (ಇನ್ನು ಮುಂದೆ ಪ್ರಸ್ತುತ ಅಧ್ಯಾದೇಶವೆಂದು ಉಲ್ಲೇಖಿಸಲ್ಪಡುವುದು)ದ ಕಾರ್ಯಾಚರಣೆಯು ಮುಕ್ತಾಯಗೊಂಡಿದ್ದರೂ,— .

(ಎ) ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವು ಈ ಅಧಿನಿಯಮದ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

(ಬ) ಪ್ರಸ್ತುತ ಅಧ್ಯಾದೇಶದ ಕಾರ್ಯಾಚರಣೆಯು ಮುಕ್ತಾಯಗೊಂಡ ನಂತರ ಮತ್ತು ಈ ಅಧಿನಿಯಮವನ್ನು ಗಜೆಟಿನಲ್ಲಿ ಪ್ರಕಟಿಸುವುದಕ್ಕಿಂತ ಮೊದಲು ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು, ಪ್ರಸ್ತುತ ಅಧ್ಯಾದೇಶದ ಕಾರ್ಯಾಚರಣೆಯು ಮುಕ್ತಾಯವಾಗದಿರುತ್ತಿದ್ದಲ್ಲಿ ಪ್ರಸ್ತುತ ಅಧ್ಯಾದೇಶದ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದೋ ಅಥವಾ ಕೈಗೊಂಡಿರುವುದೋ ಎಂಬಂತೆ, ಈ ಅಧಿನಿಯಮದ ಪ್ರಕಾರ ತಿದ್ದುಪಡಿ ಮಾಡಿದಂತಹ ಪ್ರಧಾನ ಅಧಿನಿಯಮದ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

2024 ಫೆಬ್ರವರಿ *27,*

ನಂಬ್ರ 14/ಲೆಗ್. ಎ1/2024/ಕಾನೂನು. *ತಿರುವನಂತಪುರಂ,* *1199* ಕುಂಭ *14/*

1945 ಫಾಲ್ಗುಣ *8.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಫೆಬ್ರವರಿ 24ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,

ಕಾನೂನು ಕಾರ್ಯದರ್ಶಿ.

2024ರ 1ನೇ ಅಧಿನಿಯಮ

2024ರ ಕೇರಳ ಧನವಿನಿಯೋಗ (ಲೇಖಾನುದಾನ) ಅಧಿನಿಯಮ

2024 ಏಪ್ರಿಲ್ 1ನೇ ದಿನಾಂಕದಂದು ಆರಂಭಿಸುವ ಆರ್ಥಿಕ ವರ್ಷದ ಒಂದು ಭಾಗದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಕೆಲವು ಮೊತ್ತಗಳನ್ನು ಹಿಂತೆಗೆಯುವುದಕ್ಕಾಗಿ ಉಪಬಂಧಿಸುವುದಕ್ಕಿರುವ ಒಂದು

ಅಧಿನಿಯಮ

ಪೀಠಿಕೆ.—2024 ಏಪ್ರಿಲ್ 1ನೇ ದಿನಾಂಕದಂದು ಆರಂಭಿಸುವ ಆರ್ಥಿಕ ವರ್ಷದ ಒಂದು ಭಾಗದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಕೆಲವು ಮೊತ್ತಗಳನ್ನು ಹಿಂತೆಗೆಯುವುದಕ್ಕಾಗಿ ಉಪಬಂಧಿಸುವುದು ಅಗತ್ಯವಾದುದರಿಂದ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು.—ಈ ಅಧಿನಿಯಮವನ್ನು 2024ರ ಕೇರಳ ಧನವಿನಿಯೋಗ (ಲೇಖಾನುದಾನ) ಅಧಿನಿಯಮ ಎಂದು ಕರೆಯಬಹುದು.

2. 2024 ಏಪ್ರಿಲ್ 1ನೇ ದಿನಾಂಕದಂದು ಆರಂಭಿಸುವ ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ 85732,34,21,000 ರೂಪಾಯಿಗಳ ಹಿಂತೆಗೆಯುವಿಕೆ.—2024 ಏಪ್ರಿಲ್ ಒಂದನೇ ದಿನಾಂಕದಂದು ಆರಂಭಿಸುವ ಆರ್ಥಿಕ ವರ್ಷದಲ್ಲಿ, ಅನುಸೂಚಿಯ (2)ನೇ ಕಾಲಂನಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗೆ ಸಂಬಂಧಿಸಿ ಉಂಟಾಗುವ ವಿವಿಧ ಖರ್ಚುಗಳನ್ನು ಭರಿಸುವುದಕ್ಕಾಗಿ, ಅನುಸೂಚಿಯ (3)ನೇ ಕಾಲಂನಲ್ಲಿ ಹೇಳಿರುವುದಕ್ಕಿಂತ ಮಿರದ ಹಾಗೂ ಒಟ್ಟು ಎಂಭತ್ತೈದು ಸಾವಿರದ ಏಳುನೂರ ಮೂವತ್ತೆರಡು ಕೋಟಿ ಮೂವತ್ತನಾಲ್ಕು ಲಕ್ಷದ ಇಪ್ಪತ್ತೊಂದು ಸಾವಿರ ರೂಪಾಯಿಗಳಷ್ಟಾಗುವ ಮೊತ್ತಗಳನ್ನು ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡಬಹುದಾಗಿದೆ ಹಾಗೂ ವಿನಿಯೋಗಿಸಬಹುದಾಗಿದೆ.

3. ಧನವಿನಿಯೋಗ.—ಈ ಅಧಿನಿಯಮದ ಪ್ರಕಾರ ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಿರುವ ಮೊತ್ತಗಳನ್ನು ಪ್ರಸ್ತುತ ವರ್ಷಕ್ಕೆ ಸಂಬಂಧಿಸಿದ ಅನುಸೂಚಿಯಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗೆ ವಿನಿಯೋಗಿಸತಕ್ಕದ್ದಾಗಿದೆ.

G.11/2024/GPC.

This is a digitally signed Gazette.
Authenticity may be verified through https://compose.kerala.gov.in/

2

ಅನುಸೂಚಿ

(2 ಮತ್ತು 3ನೇ ವಿಭಾಗಗಳನ್ನು ನೋಡಿರಿ)

(1)	(2)		(3)		
			ಮೊರಬಾರದ ಮೊತ್ತಗಳು		
ಕ್ರಮ ನಂಬ್ರ	ಧನ ಬೇಡಿಕೆ ನಂಬ್ರ	ಸೇವೆಗಳು ಮತ್ತು ಉದ್ದೇಶಗಳು		ವಿಧಾನ ಸಭೆ ಮತ ನೀಡಿದ್ದು (₹)	ಸಂಚಿತ ನಿಧಿಯ ಮೇಲೆ ಹೊರಿಸಿದ್ದು (₹)	ಒಟ್ಟು (₹)
1.	I	**ರಾಜ್ಯ ವಿಧಾನಸಭೆ**	**ಕಂದಾಯ**	**45,67,39,000**	**25,68,000**	**45,93,07,000**
2.	II	**ರಾಜ್ಯದ ಆಡಳಿತ ಮುಖ್ಯಸ್ಥರು, ಸಚಿವರುಗಳು ಹಾಗೂ ಪ್ರಧಾನ ಕಚೇರಿ ಸಿಬ್ಬಂದಿಗಳು**	**ಕಂದಾಯ**	**206,59,68,000**	**78,88,92,000**	**285,48,60,000**
3.	III	**ನ್ಯಾಯಪರಿಪಾಲನೆ**	**ಕಂದಾಯ**	**359,56,99,000**	**65,80,81,000**	**425,37,80,000**
4.	IV	**ಚುನಾವಣೆಗಳು**	**ಕಂದಾಯ**	**195,65,16,000**	**1,000**	**195,65,17,000**
5.	V	**ಸರಕು ಸೇವಾ ತೆರಿಗೆ, ಕೃಷಿ ಆದಾಯ ತೆರಿಗೆ, ಮಾರಾಟ ತೆರಿಗೆ**	**ಕಂದಾಯ**	**136,97,72,000**	**21,66,000**	**137,19,38,000**
6.	VI	**ಭೂ ತೆರಿಗೆ**	**ಕಂದಾಯ**	**273,51,05,000**	**48,000**	**273,51,53,000**
7.	VII	**ಸ್ಟಾಂಪುಗಳು ಹಾಗೂ ನೋಂದಣಿ**	**ಕಂದಾಯ**	**105,97,12,000**	..	**105,97,12,000**
8.	VIII	ಅಬಕಾರಿ	ಕಂದಾಯ	123,86,76,000	1,66,000	123,88,42,000
9.	IX	ವಾಹನ ತೆರಿಗೆಗಳು	ಕಂದಾಯ	75,32,88,000	..	75,32,88,000
10.		ಸಾಲ ಬಾಧ್ಯತೆಗಳು	ಕಂದಾಯ	..	9604,74,65,000	9604,74,65,000
11.	X	ಖಜಾನೆಗಳು, ಲೆಕ್ಕಪತ್ರಗಳು	ಕಂದಾಯ	125,21,90,000	..	125,21,90,000
12.	XI	ಜಿಲ್ಲಾಡಳಿತ ಹಾಗೂ ವಿವಿಧೋದ್ದೇಶಗಳು	ಕಂದಾಯ	303,32,01,000	52,93,000	303,84,94,000
13.	XII	ಪೋಲೀಸು	ಕಂದಾಯ	1567,12,30,000	3,01,14,000	1570,13,44,000
			ಬಂಡವಾಳ	18,09,67,000	..	18,09,67,000
14.	XIII	ಜೈಲುಗಳು	ಕಂದಾಯ	69,30,18,000	..	69,30,18,000
15.	XIV	ಸ್ಟೇಷನರಿ, ಮುದ್ರಣ ಹಾಗೂ ಇತರ ಆಡಳಿತ ಸೇವೆಗಳು	ಕಂದಾಯ	212,69,11,000	1,000	212,69,12,000
			ಬಂಡವಾಳ	2,82,67,000	..	2,82,67,000
16.	XV	ಸಾರ್ವಜನಿಕ ಕಾಮಗಾರಿ	ಕಂದಾಯ	661,20,54,000	97,17,000	662,17,71,000
			ಬಂಡವಾಳ	1013,22,32,000	13,49,99,000	1026,72,31,000
17.	XVI	ಪಿಂಚಣಿ ಹಾಗೂ ವಿವಿಧೋದ್ದೇಶ	ಕಂದಾಯ	13794,89,69,000	3,19,58,000	13798,09,27,000
18.	XVII	ಶಿಕ್ಷಣ, ಕ್ರೀಡೆ, ಕಲೆ ಹಾಗೂ ಸಂಸ್ಕೃತಿ	ಕಂದಾಯ	7986,13,23,000	7,00,000	7986,20,23,000
			ಬಂಡವಾಳ	148,21,34,000	..	148,21,34,000

This is a digitally signed Gazette.
Authenticity may be verified through https://compose.kerala.gov.in/

3

(1)		(2)		(3)		
19.	XVIII	ವೈದ್ಯಕೀಯ ಹಾಗೂ	ಕಂದಾಯ	3113,48,40,000	2,27,000	3113,50,67,000
		ಸಾರ್ವಜನಿಕ ಆರೋಗ್ಯ	ಬಂಡವಾಳ	82,80,02,000	1,000	82,80,03,000
20.	XIX	ಕುಟುಂಬ ಕಲ್ಯಾಣ	ಕಂದಾಯ	141,49,65,000	1,000	141,49,66,000
21.	XX	ನೀರು ಸರಬರಾಜು	ಕಂದಾಯ	147,46,65,000	..	147,46,65,000
		ಹಾಗೂ ಶುಚೀಕರಣ	ಬಂಡವಾಳ	289,43,67,000	..	289,43,67,000
22.	XXI	ಗೃಹ ನಿರ್ಮಾಣ	ಕಂದಾಯ	25,65,12,000	5,00,000	25,70,12,000
			ಬಂಡವಾಳ	18,23,00,000	..	18,23,00,000
23.	XXII	ನಗರಾಭಿವೃದ್ಧಿ	ಕಂದಾಯ	508,18,78,000	1,000	508,18,79,000
			ಬಂಡವಾಳ	65,33,34,000	..	65,33,34,000
24.	XXIII	ವಾರ್ತಾಪ್ರಸಾರ ಹಾಗೂ	ಕಂದಾಯ	35,57,78,000	..	35,57,78,000
		ಪ್ರಚಾರ	ಬಂಡವಾಳ	70,00,000	..	70,00,000
25.	XXIV	ಕಾರ್ಮಿಕತೆ, ಕಾರ್ಮಿಕ ಕಲ್ಯಾಣ	ಕಂದಾಯ	350,25,35,000	..	350,25,35,000
		ಹಾಗೂ ಅನಿವಾಸಿ ಕಲ್ಯಾಣ	ಬಂಡವಾಳ	63,00,01,000	..	63,00,01,000
26.	XXV	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/	ಕಂದಾಯ	784,94,06,000	1,000	784,94,07,000
		ಇತರ ಹಿಂದುಳಿದ ವರ್ಗಗಳು/	ಬಂಡವಾಳ	309,80,07,000	1,000	309,80,08,000
		ಅಲ್ಪಸಂಖ್ಯಾತರ ವಿಭಾಗಗಳು				
		ಮೊದಲಾದವರ ಕಲ್ಯಾಣ				
27.	XXVI	ಪ್ರಕೃತಿ ವಿಕೋಪದಿಂದ ಉಂಟಾಗುವ	ಕಂದಾಯ	539,01,06,000	..	539,01,06,000
		ನಷ್ಟ ಪರಿಹಾರಕ್ಕೆ				
28.	XXVII	ಸಹಕಾರ	ಕಂದಾಯ	154,60,99,000	..	154,60,99,000
			ಬಂಡವಾಳ	28,95,33,000	..	28,95,33,000
29.	XXVIII	ವಿವಿಧ ಆರ್ಥಿಕ ಸೇವೆಗಳು	ಕಂದಾಯ	81,92,81,000	..	81,92,81,000
			ಬಂಡವಾಳ	1536,03,04,000	..	1536,03,04,000
30.	XXIX	ಕೃಷಿ	ಕಂದಾಯ	1007,68,67,000	1,83,000	1007,70,50,000
			ಬಂಡವಾಳ	126,46,16,000	1,000	126,46,17,000
31.	XXX	ಆಹಾರ	ಕಂದಾಯ	631,96,31,000	1,000	631,96,32,000
			ಬಂಡವಾಳ	12,44,00,000	..	12,44,00,000
32.	XXXI	ಮೃಗಸಂರಕ್ಷಣೆ	ಕಂದಾಯ	316,05,95,000	..	316,05,95,000
			ಬಂಡವಾಳ	6,78,33,000	..	6,78,33,000
33.	XXXII	ಹೈನುಗಾರಿಕೆ	ಕಂದಾಯ	56,04,53,000	..	56,04,53,000
			ಬಂಡವಾಳ	10,23,33,000	..	10,23,33,000
34.	XXXIII	ಮೀನುಗಾರಿಕೆ	ಕಂದಾಯ	139,60,68,000	..	139,60,68,000
			ಬಂಡವಾಳ	83,40,67,000	1,000	83,40,68,000

This is a digitally signed Gazette.
Authenticity may be verified through https://compose.kerala.gov.in/

4

(1)	(2)		(3)		
35. XXXIV	ಅರಣ್ಯ	ಕಂದಾಯ	248,75,96,000	1,00,000	248,76,96,000
		ಬಂಡವಾಳ	31,93,34,000	..	31,93,34,000
36. XXXV	ಪಂಚಾಯತು	ಕಂದಾಯ	202,98,68,000	..	202,98,68,000
		ಬಂಡವಾಳ	181,70,00,000	1,000	181,70,01,000
37. XXXVI	ಗ್ರಾಮಾಭಿವೃದ್ಧಿ	ಕಂದಾಯ	1599,86,34,000	1,000	1599,86,35,000
		ಬಂಡವಾಳ	485,80,00,000	..	485,80,00,000
38. XXXVII	ಕೈಗಾರಿಕೆಗಳು	ಕಂದಾಯ	265,12,78,000	..	265,12,78,000
		ಬಂಡವಾಳ	387,62,01,000	1,000	387,62,02,000
39. XXXVIII	ನೀರಾವರಿ	ಕಂದಾಯ	148,09,77,000	78,000	148,10,55,000
		ಬಂಡವಾಳ	140,92,96,000	31,37,000	141,24,33,000
40. XXXIX	ವಿದ್ಯುಚ್ಛಕ್ತಿ ಯೋಜನೆಗಳು	ಕಂದಾಯ	31,73,55,000	..	31,73,55,000
		ಬಂಡವಾಳ	6,60,00,000	..	6,60,00,000
41. XL	ಬಂದರುಗಳು	ಕಂದಾಯ	24,36,83,000	..	24,36,83,000
		ಬಂಡವಾಳ	21,73,00,000	..	21,73,00,000
42. XLI	ಸಾರಿಗೆ	ಕಂದಾಯ	34,20,12,000	21,87,25,000	56,07,37,000
		ಬಂಡವಾಳ	557,42,97,000	1,000	557,42,98,000
43. XLII	ಪ್ರವಾಸೋದ್ಯಮ	ಕಂದಾಯ	77,98,73,000	..	77,98,73,000
		ಬಂಡವಾಳ	62,43,67,000	..	62,43,67,000
44. XLIII	ನಷ್ಟ ಪರಿಹಾರ ಹಾಗೂ ಹಕ್ಕು ವರ್ಗಾವಣೆ	ಕಂದಾಯ	5068,48,73,000	..	5068,48,73,000
45.	ಸಾರ್ವಜನಿಕ ಸಾಲ ಮರುಪಾವತಿ	ಬಂಡವಾಳ	..	236,86,09,97,000	236,86,09,97,000
46. XLV	ವಿವಿಧ ಸಾಲಗಳು ಹಾಗೂ ಮುಂಗಡಗಳು	ಬಂಡವಾಳ	222,20,64,000	..	222,20,64,000
47. XLVI	ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ	ಕಂದಾಯ	4345,88,44,000	..	4345,88,44,000
		ಬಂಡವಾಳ	13,86,94,000	..	13,86,94,000
	ಒಟ್ಟು		**52252,72,93,000**	**33479,61,28,000**	**85732,34,21,000**

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 17/ಲೆಗ್. ಎ1/2024/ಕಾನೂನು. ತಿರುವನಂತಪುರಂ, *2024 ಫೆಬ್ರವರಿ 27, 1199 ಕುಂಭ 14/ 1945 ಫಾಲ್ಗುಣ 8.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2024 ಫೆಬ್ರುವರಿ 24ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ ಜಿ. ಸನಲ್ ಕುಮಾರ್,

ಕಾನೂನು ಕಾರ್ಯದರ್ಶಿ.

2024ರ 2ನೇ ಅಧಿನಿಯಮ

2024ರ ಕೇರಳ ಧನವಿನಿಯೋಗ ಅಧಿನಿಯಮ

2023-2024 ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಕೆಲವು ಮೊತ್ತಗಳನ್ನು ಮತ್ತೂ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸುವ ಒಂದು ಅಧಿನಿಯಮ

ಪೀಠಿಕೆ.—2023-2024 ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಕೆಲವು ಮೊತ್ತಗಳನ್ನು ಮತ್ತೂ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸುವುದು ಅಗತ್ಯವಾದುದರಿಂದ;

ಭಾರತ ಗಣರಾಜ್ಯದ ಎಪ್ಪತ್ತೈದನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು.—ಈ ಅಧಿನಿಯಮವನ್ನು 2024ರ ಕೇರಳ ಧನವಿನಿಯೋಗ ಅಧಿನಿಯಮ ಎಂದು ಕರೆಯಬಹುದು.

2. 2023-2024 ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ 40775,61,20,000 ರೂಪಾಯಿಗಳ ನೀಡುವಿಕೆ.—2023-2024 ಆರ್ಥಿಕ ವರ್ಷದಲ್ಲಿ ಉಂಟಾಗುವ ವಿವಿಧ ಖರ್ಚುಗಳನ್ನು ಭರಿಸುವುದಕ್ಕಾಗಿ, ಅನುಸೂಚಿಯ (2)ನೇ ಕಾಲಂನಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗೆ ಸಂಬಂಧಿಸಿ ಅನುಸೂಚಿಯ (3)ನೇ ಕಾಲಂನಲ್ಲಿ ಹೇಳಿರುವುದಕ್ಕಿಂತ ಮೀರದ ಹಾಗೂ ಒಟ್ಟು ನಲವತ್ತು ಸಾವಿರದ ಏಳುನೂರ ಎಪ್ಪತ್ತೈದು ಕೋಟಿ ಅರವತ್ತೊಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳಷ್ಟಾಗುವ ಮೊತ್ತಗಳನ್ನು ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡಬಹುದಾಗಿದೆ ಹಾಗೂ ವಿನಿಯೋಗಿಸಬಹುದಾಗಿದೆ.

3. ಧನವಿನಿಯೋಗ.—ಈ ಅಧಿನಿಯಮದ ಪ್ರಕಾರ ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಿರುವ ಮೊತ್ತಗಳನ್ನು 2023-2024 ಆರ್ಥಿಕ ವರ್ಷಕ್ಕೆ ಸಂಬಂಧಿಸಿ ಅನುಸೂಚಿಯಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

G. 12/2024/GPC.

This is a digitally signed Gazette.
Authenticity may be verified through https://compose.kerala.gov.in/

2

ಅನುಸೂಚಿ

(2 ಮತ್ತು 3ನೇ ವಿಭಾಗಗಳನ್ನು ನೋಡಿರಿ)

(1)		(2)		(3)		
ಕ್ರಮ ನಂಬ್ರ	ಧನ ಬೇಡಿಕೆ ನಂಬ್ರ	ಸೇವೆಗಳು ಮತ್ತು ಉದ್ದೇಶಗಳು		ಮೊರಬಾರದ ಮೊತ್ತಗಳು		ಒಟ್ಟು (₹)
				ವಿಧಾನ ಸಭೆ ಮತ ನೀಡಿದ್ದು (₹)	ಸಂಚಿತ ನಿಧಿಯ ಮೇಲೆ ಹೊರಿಸಿದ್ದು (₹)	
1.	I	**ರಾಜ್ಯ ವಿಧಾನಸಭೆ**	**ಕಂದಾಯ**	**8,57,95,000**	**20,00,000**	**8,77,95,000**
2.	II	**ರಾಜ್ಯದ ಆಡಳಿತ ಮುಖ್ಯಸ್ಥರು, ಸಚಿವರುಗಳು ಹಾಗೂ ಪ್ರಧಾನ ಕಚೇರಿ ಸಿಬ್ಬಂದಿಗಳು**	**ಕಂದಾಯ**	**15,00,00,000**	..	**15,00,00,000**
3.	III	**ನ್ಯಾಯಪರಿಪಾಲನೆ**	**ಕಂದಾಯ**	**81,83,61,000**	**4,15,83,000**	**85,99,44,000**
4.	IV	**ಚುನಾವಣೆಗಳು**	**ಕಂದಾಯ**	**56,31,64,000**	..	**56,31,64,000**
5.	V	**ಭೂ ತೆರಿಗೆ**	**ಕಂದಾಯ**	..	**32,000**	**32,000**
6.	IX	ವಾಹನ ತೆರಿಗೆಗಳು	ಕಂದಾಯ	14,24,66,000	..	14,24,66,000
7.		ಸಾಲ ಬಾಧ್ಯತೆಗಳು	ಕಂದಾಯ	..	678,66,40,000	678,66,40,000
8.	X	ಖಜಾನೆಗಳು, ಲೆಕ್ಕಪತ್ರಗಳು	ಕಂದಾಯ	14,28,99,000	..	14,28,99,000
9.	XI	ಜಿಲ್ಲಾಡಳಿತ ಹಾಗೂ ವಿವಿಧೋದ್ದೇಶಗಳು	ಕಂದಾಯ	22,78,44,000	..	22,78,44,000
10.	XII	ಪೋಲೀಸು	ಕಂದಾಯ	..	33,15,000	33,15,000
11.	XIII	ಜೈಲುಗಳು	ಕಂದಾಯ	29,88,46,000	..	29,88,46,000
12.	XIV	ಸ್ಟೇಷನರಿ, ಮುದ್ರಣ ಹಾಗೂ ಇತರ ಆಡಳಿತ ಸೇವೆಗಳು	ಕಂದಾಯ	..	1,19,96,000	1,19,96,000
13.	XV	ಸಾರ್ವಜನಿಕ ಕಾಮಗಾರಿ	ಕಂದಾಯ	196,84,22,000	1,41,44,000	198,25,66,000
			ಬಂಡವಾಳ	450,33,75,000	20,94,00,000	471,27,75,000
14.	XVI	ಪಿಂಚಣಿ ಹಾಗೂ ವಿವಿಧೋದ್ದೇಶ	ಕಂದಾಯ	5200,02,00,000	..	5200,02,00,000
15.	XVII	ಶಿಕ್ಷಣ, ಕ್ರೀಡೆ, ಕಲೆ ಹಾಗೂ ಸಂಸ್ಕೃತಿ	ಕಂದಾಯ	..	20,19,000	20,19,000
			ಬಂಡವಾಳ	276,88,16,000	1,63,08,000	278,51,24,000
16.	XVIII	ವೈದ್ಯಕೀಯ ಹಾಗೂ ಸಾರ್ವಜನಿಕ ಆರೋಗ್ಯ	ಕಂದಾಯ	288,88,34,000	11,47,000	288,99,81,000
			ಬಂಡವಾಳ	136,13,69,000	13,89,39,000	150,03,08,000
17.	XIX	ಕುಟುಂಬ ಕಲ್ಯಾಣ	ಕಂದಾಯ	78,00,00,000	..	78,00,00,000

This is a digitally signed Gazette.
Authenticity may be verified through https://compose.kerala.gov.in/

3

(1)	(2)		(3)		
18. XX	ನೀರು ಸರಬರಾಜು ಹಾಗೂ ಶುಚೀಕರಣ	ಬಂಡವಾಳ	1362,67,51,000	..	1362,67,51,000
19. XXI	ಗೃಹ ನಿರ್ಮಾಣ	ಕಂದಾಯ	21,00,00,000	..	21,00,00,000
20. XXII	ನಗರಾಭಿವೃದ್ಧಿ	ಕಂದಾಯ	1,000	..	1,000
		ಬಂಡವಾಳ	1,000	10,31,12,000	10,31,13,000
21. XXIII	ವಾರ್ತಾಪ್ರಸಾರ ಹಾಗೂ ಪ್ರಚಾರ	ಬಂಡವಾಳ	1,05,20,000	..	1,05,20,000
22. XXIV	ಕಾರ್ಮಿಕತೆ, ಕಾರ್ಮಿಕ ಕಲ್ಯಾಣ	ಕಂದಾಯ	1,000	3,33,75,000	3,33,76,000
	ಹಾಗೂ ಅನಿವಾಸಿ ಕಲ್ಯಾಣ	ಬಂಡವಾಳ	2,000	..	2,000
23. XXV	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/	ಕಂದಾಯ	82,19,02,000	24,000	82,19,26,000
	ಇತರ ಹಿಂದುಳಿದ ವರ್ಗಗಳು/	ಬಂಡವಾಳ	1,000	..	1,000
	ಅಲ್ಪಸಂಖ್ಯಾತರ ವಿಭಾಗಗಳು ಮೊದಲಾದವರ ಕಲ್ಯಾಣ				
24. XXVIII	ವಿವಿಧ ಆರ್ಥಿಕ ಸೇವೆಗಳು	ಕಂದಾಯ	55,00,000	..	55,00,000
		ಬಂಡವಾಳ	671,25,00,000	..	671,25,00,000
25. XXIX	ಕೃಷಿ	ಕಂದಾಯ	..	85,000	85,000
		ಬಂಡವಾಳ	46,63,10,000	3,01,35,000	49,64,45,000
26. XXX	ಆಹಾರ	ಕಂದಾಯ	..	1,02,000	1,02,000
27. XXXI	ಮೃಗಸಂರಕ್ಷಣೆ	ಬಂಡವಾಳ	2,50,00,000	..	2,50,00,000
28. XXXII	ಹೈನುಗಾರಿಕೆ	ಬಂಡವಾಳ	29,53,55,000	5,07,61,000	34,61,16,000
29. XXXIII	ಮೀನುಗಾರಿಕೆ	ಕಂದಾಯ	1,000	7,50,000	7,51,000
		ಬಂಡವಾಳ	45,16,62,000	11,94,000	45,28,56,000
30. XXXIV	ಅರಣ್ಯ	ಕಂದಾಯ	..	1,74,000	1,74,000
31. XXXV	ಪಂಚಾಯತು	ಬಂಡವಾಳ	11,21,31,000	51,61,000	11,72,92,000
32.XXXVII	ಕೈಗಾರಿಕೆಗಳು	ಬಂಡವಾಳ	1,000	..	1,000
33.XXXVIII	ನೀರಾವರಿ	ಕಂದಾಯ	1,32,22,000	28,18,000	1,60,40,000
		ಬಂಡವಾಳ	32,28,07,000	7,10,02,000	39,38,09,000
34. XXXIX	ವಿದ್ಯುಚ್ಛಕ್ತಿ ಯೋಜನೆಗಳು	ಕಂದಾಯ	767,71,50,000	..	767,71,50,000
		ಬಂಡವಾಳ	70,52,19,000	..	70,52,19,000

This is a digitally signed Gazette.
Authenticity may be verified through https://compose.kerala.gov.in/

4

(1)		(2)		(3)		
35.	XL	ಬಂದರುಗಳು	ಬಂಡವಾಳ	114,03,39,000	..	114,03,39,000
36.	XLI	ಸಾರಿಗೆ	ಕಂದಾಯ	5,00,00,000	..	5,00,00,000
			ಬಂಡವಾಳ	899,60,19,000	25,04,61,000	924,64,80,000
37.	XLII	ಪ್ರವಾಸೋದ್ಯಮ	ಕಂದಾಯ	4,63,00,000	..	4,63,00,000
38.		ಸಾರ್ವಜನಿಕ ಸಾಲ ಮರುಪಾವತಿ	ಬಂಡವಾಳ	..	28625,54,22,000	28625,54,22,000
39.	XLVI	ಸಾಮಾಜಿಕ ಭದ್ರತೆ ಹಾಗೂ ಕಲ್ಯಾಣ	ಕಂದಾಯ	332,21,85,000	1,27,50,000	333,49,35,000
		ಒಟ್ಟು		**11371,12,71,000**	**29404,48,49,000**	**40,775,61,20,000**

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎಚ್) ಇಲಾಖೆ

ಅಧಿಸೂಚನೆ

ನಂಬ್ರ 354/ಲೆಗ್. ಎಚ್1/2021/ಕಾನೂನು. ತಿರುವನಂತಪುರಂ, *2023 ನವೆಂಬರ್ 28,* / *1199 ವೃಶ್ಚಿಕ 12/* 1945 ಅಗ್ರಹಾಯನ 7.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2023 ನವೆಂಬರ್ 28ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,
ಕಾನೂನು ಕಾರ್ಯದರ್ಶಿ.

2023ರ 28ನೇ ಅಧಿನಿಯಮ

2023ರ ಕೇರಳ ಸಾರ್ವಜನಿಕಾರೋಗ್ಯ ಅಧಿನಿಯಮ

ಕೇರಳ ರಾಜ್ಯದಲ್ಲಿ ಸಾರ್ವಜನಿಕಾರೋಗ್ಯಕ್ಕೆ ಸಂಬಂಧಿಸಿ ಅಸ್ತಿತ್ವದಲ್ಲಿರುವ ಕಾನೂನುಗಳಿಗೆ ಬದಲು ನಿಯತಕಾಲಿಕ ಬದಲಾವಣೆಗಳನ್ನು ಮತ್ತು ಅವಶ್ಯಕತೆಗಳನ್ನು ಒಳಗೊಳ್ಳಿಸಿರುವ ಉಪಬಂಧಗಳನ್ನು ತರುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—ಸಾರ್ವಜನಿಕಾರೋಗ್ಯ ಸಂರಕ್ಷಣೆಗೆ ಏಕ ಆರೋಗ್ಯವೆಂಬ ನಿಲುವನ್ನು ಅಳವಡಿಸಿಕೊಳ್ಳಬೇಕಾಗಿರುವುದರಿಂದಲೂ;

ರೋಗ ನಿರ್ಣಯ ಮತ್ತು ಚಿಕಿತ್ಸೆ ಎಂಬವುಗಳ ಹೊರತಾಗಿ ಆರೋಗ್ಯವನ್ನು ಒದಗಿಸುವಂತಹ ಸಾಮಾಜಿಕ ವ್ಯವಸ್ಥೆಗಳನ್ನು ಸಶಕ್ತಗೊಳಿಸಲು ಮತ್ತು ರೋಗಗಳಿಗೆ ಕಾರಣವಾಗುವಂತಹ ಪರಿಸ್ಥಿತಿಗಳನ್ನು ದುರ್ಬಲಗೊಳಿಸುವುದೋ ಅಥವಾ ಇಲ್ಲದಾಗಿಸುವುದೋ ಮಾಡಬೇಕಾಗಿರುವುದರಿಂದಲೂ;

ಹವಾಮಾನ ಬದಲಾವಣೆ, ಮನುಷ್ಯ-ಮೃಗ ಸಂಪರ್ಕ ಇತ್ಯಾದಿಯ ಭಾಗವಾಗಿ ಹೊರಹೊಮ್ಮಬಹುದಾದ ಹೊಸ ವೈರಸ್‌ಗಳನ್ನು, ರೋಗಾಣುಗಳನ್ನು, ಸೋಂಕುರೋಗಗಳನ್ನು ಮತ್ತು ಮಹಾಮಾರಿಗಳನ್ನು ಎದುರಿಸುವುದು ಅಗತ್ಯವಾಗಿರುವುದರಿಂದಲೂ ಹೆಚ್ಚುತ್ತಿರುವ ಜೀವನಶೈಲಿ ರೋಗಗಳನ್ನು ತಡೆಗಟ್ಟುವುದು ಮತ್ತು ನಿಯಂತ್ರಿಸುವುದು ಅನಿವಾರ್ಯವಾಗಿರುವುದರಿಂದಲೂ;

ರಾಜ್ಯದಾದ್ಯಂತ ನಗರ-ಗ್ರಾಮ ವ್ಯತ್ಯಾಸವಿಲ್ಲದೆ ಜನಸಾಂದ್ರತೆಯು ಅಧಿಕವಾಗಿರುವುದರಿಂದಲೂ ವೃದ್ಧರು ಮತ್ತು ವಿಕಲಚೇತನರನ್ನು ಒಳಗೊಂಡವರ ಆರೋಗ್ಯ ಸಂರಕ್ಷಣೆಗೆ ಕೇರಳವು ವಿಶೇಷ ಪರಿಗಣನೆಯನ್ನು ನೀಡುವುದರಿಂದಲೂ;

This is a digitally signed Gazette.
Authenticity may be verified through https://compose.kerala.gov.in/

2

ಕೇರಳ ರಾಜ್ಯದಲ್ಲಿ ಸಾರ್ವಜನಿಕಾರೋಗ್ಯಕ್ಕೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿದ್ದ, ತಿರುವಾಂಕೂರು-ಕೊಚ್ಚಿ ವಲಯಕ್ಕೆ ಅನ್ವಯವಾದ 1955ರ ತಿರುವಾಂಕೂರು-ಕೊಚ್ಚಿ ಸಾರ್ವಜನಿಕಾರೋಗ್ಯ ಅಧಿನಿಯಮ (1955ರ XVI), ಮಲಬಾರ್ ವಲಯಕ್ಕೆ ಅನ್ವಯವಾದ 1939ರ ಮದ್ರಾಸ್ ಸಾರ್ವಜನಿಕಾರೋಗ್ಯ ಅಧಿನಿಯಮ (1939ರ III), ಎಂಬವುಗಳ ಬದಲು ರಾಜ್ಯಾದ್ಯಂತ ಅನ್ವಯವಾಗುವ ಒಂದು ಕಾನೂನನ್ನು ತರಲು ಮತ್ತು ಅದಕ್ಕೆ ಸಂಬಂಧಿಸಿದ ಮತ್ತು ಅದಕ್ಕೆ ಆನುಷಂಗಿಕವಾದ ವಿಷಯಗಳಿಗಾಗಿ ಉಪಬಂಧಿಸುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮವನ್ನು ಮಾಡಲಾಗುವುದು:—

ಅಧ್ಯಾಯ I

ಪ್ರಾರಂಭ

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2023ರ ಕೇರಳ ಸಾರ್ವಜನಿಕಾರೋಗ್ಯ ಅಧಿನಿಯಮವೆಂದು ಕರೆಯಬಹುದು.

(2) 15ನೇ ವಿಭಾಗದ (8)ನೇ ಉಪ-ವಿಭಾಗ, 18ನೇ ವಿಭಾಗದ (7)ನೇ ಉಪ-ವಿಭಾಗ ಮತ್ತು 20ನೇ ವಿಭಾಗದ (3)ನೇ ಉಪ-ವಿಭಾಗ ಮತ್ತು 65ನೇ ವಿಭಾಗವು ಕೂಡಲೇ ಜಾರಿಗೆ ಬರುವುದಾಗಿದೆ ಮತ್ತು ಉಳಿದ ವಿಭಾಗಗಳು 2023 ಜನವರಿ 16ನೇ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ನಿರ್ವಚನಗಳು.—(1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸದಿದ್ದಲ್ಲಿ,—

(ಎ) ''ಜೈವಿಕ ವೈದ್ಯಕೀಯ ತ್ಯಾಜ್ಯ'' ಎಂದರೆ, ವ್ಯಕ್ತಿಯ ಅಥವಾ ವ್ಯಕ್ತಿಗಳ ರೋಗ ನಿರ್ಣಯ, ಶಸ್ತ್ರ ಚಿಕಿತ್ಸೆಗಳು, ಇತರ ಚಿಕಿತ್ಸೆಗಳು ಮತ್ತು ಚುಚ್ಚು ಮದ್ದುಗಳು ಎಂಬೀ ವೇಳೆಗಳಲ್ಲಿ ಅಥವಾ ಆರೋಗ್ಯ ಕ್ಷೇತ್ರದಲ್ಲಿನ ಸಂಶೋಧನೆಗಳ ವೇಳೆಯಲ್ಲಿ ಆಸ್ಪತ್ರೆಗಳು ಮತ್ತು ಆರೋಗ್ಯ ಸಂಶೋಧನಾ ಸಂಸ್ಥೆಗಳು ಎಂಬವುಗಳಲ್ಲಿ ಉಂಟಾಗಬಹುದಾದ ರೋಗಾಣುವಿನ ಸಾನ್ನಿಧ್ಯ ಮತ್ತು ಆ ಮೂಲಕ ಸೋಂಕಿನ ಸಾಧ್ಯತೆಯಿರುವ ಘನ-ದ್ರವ ತ್ಯಾಜ್ಯ ಎಂದರ್ಥ;

(ಬಿ) ''ಕಟ್ಟಡ'' ಎಂಬುವುದರಲ್ಲಿ ಮನೆ, ಹೊರ ಮನೆ, ಅಪಾರ್ಟ್‌ಮೆಂಟ್, ಲಾಯ, ಶೌಚಾಲಯ, ಶೆಡ್, ಗುಡಿಸಲು, ಬಂಕ್ ಅಲ್ಲದೆ ಕಲ್ಲು, ಇಟ್ಟಿಗೆ, ಕೆಸರು, ಲೋಹ ಅಥವಾ ಇತರ ಯಾವುದೇ ಸಾಮಾಗ್ರಿಯಿಂದಲೂ ನಿರ್ಮಿಸಿರುವ ನಿರ್ಮಾಣ ಇತ್ಯಾದಿ ಒಳಗೊಳ್ಳುವುದು;

(ಸಿ) ''ಸೋಂಕು ರೋಗ'' ಎಂದರೆ, ವೈರಾಣು ಸೋಂಕಿರುವುದರಿಂದಾಗಿ ಮನುಷ್ಯರಿಗೆ ಅಥವಾ ಮೃಗಗಳಿಗೆ ಲಕ್ಷಣಗಳೊಂದಿಗೆ ಅಥವಾ ಅಲ್ಲದೆ ಉಂಟಾಗುವ ಮತ್ತು ಮನಷ್ಯರಿಂದ ಮನುಷ್ಯರಿಗೆ ಅಥವಾ ಮೃಗಗಳಿಂದ ಮೃಗಗಳಿಗೆ ಅಥವಾ ಮನುಷ್ಯರಿಗೆ ಹರಡುವ ಅಥವಾ ರೋಗ ನಿರ್ಣಯ ವ್ಯವಸ್ಥೆಗಳ ನೆರವಿನೊಂದಿಗೆ ಕಂಡುಹಿಡಿಯಬಹುದಾದ ಒಂದು ರೋಗ ಎಂದರ್ಥ;

ವಿವರಣೆ:—ಈ ಅಧಿನಿಯಮದ ಉದ್ದೇಶಗಳಿಗಾಗಿ ''ಮೃಗಗಳು'' ಎಂಬುದರಲ್ಲಿ ಪಕ್ಷಿಗಳೂ ಒಳಗೊಳ್ಳುವುದು.

(ಡಿ) ''ಸಾಮುದಾಯಿಕ ಒಟ್ಟುಗೂಡುವಿಕೆ'' ಎಂದರೆ, ಕೌಟುಂಬಿಕ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ, ಆಧ್ಯಾತ್ಮಿಕ, ಜನಾಂಗೀಯ ಅಥವಾ ಧಾರ್ಮಿಕ ಉದ್ದೇಶಗಳಿಗಾಗಿ ಅಥವಾ ಸ್ಪರ್ಧೆಗಳು, ಪ್ರದರ್ಶನಗಳು, ಮನೋರಂಜನೆಗಳು ಅಥವಾ ಅಂತಹುದೇ ಉದ್ದೇಶಗಳಿಗಾಗಿ ಒಟ್ಟಿಗೆ ಸೇರುವ ಜನರ ಗುಂಪು ಎಂದರ್ಥ;

(ಇ) ''ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿ'' ಎಂದರೆ, ಜಿಲ್ಲಾ ಮಟ್ಟದಲ್ಲಿ ಈ ಅಧಿನಿಯಮದ ಪ್ರಕಾರ ಅಧಿಕೃತಗೊಳಿಸಲ್ಪಟ್ಟ, ಜಿಲ್ಲಾ ಸಾರ್ವಜನಿಕಾರೋಗ್ಯ ಸಮಿತಿಯ ಸದಸ್ಯ ಕಾರ್ಯದರ್ಶಿಯಾದ, ಈ ಅಧಿನಿಯಮದ ನಿರ್ವಹಣೆಗಾಗಿ ನಿಯೋಜಿಸಲ್ಪಟ್ಟ ವೈದ್ಯಕೀಯ ಅಧಿಕಾರಿ ಎಂದರ್ಥ;

(ಎಫ್) ''ಒಳ ಚರಂಡಿ'' ಎಂದರೆ ತ್ಯಾಜ್ಯ, ಮಲಿನಜಲ, ಹೊಲಸು ಜಲ, ಮಳೆನೀರು ಅಥವಾ ಭೂಜಲ ಇತ್ಯಾದಿಯನ್ನು ಹರಿದುಬಿಡುವ ಯಾವುದೇ ರೀತಿಯಲ್ಲಿನ ಚರಂಡಿ ಎಂದರ್ಥ;

(ಜಿ) ''ವಸತಿ ಮನೆ'' ಎಂದರೆ, ಮನುಷ್ಯರ ವಸತಿಗಾಗಿ ಅಥವಾ ಅದಕ್ಕೆ ಸಂಬಂಧಿಸಿ ಸಂಪೂರ್ಣವಾಗಿ ಅಥವಾ ಭಾಗಶಃ ನಿರ್ಮಿಸಿದ ಅಥವಾ ಬಳಸುತ್ತಿರುವ ಅಥವಾ ಬಳಸುವುದಕ್ಕಾಗಿ ಪಡೆದುಕೊಂಡ ಒಂದು ಕಟ್ಟಡ ಎಂದರ್ಥ;

This is a digitally signed Gazette.
Authenticity may be verified through https://compose.kerala.gov.in/

(ಎಚ್) "ವಿದ್ಯಾಭ್ಯಾಸ ಸಂಸ್ಥೆ" ಎಂದರೆ, ಜ್ಞಾನ ಹಾಗೂ ವಿದ್ಯಾಭ್ಯಾಸವನ್ನು ನೀಡುವ ಒಂದು ಸ್ಥಳ ಎಂದರ್ಥ ಮತ್ತು ಅದರಲ್ಲಿ ಸಾರ್ವಜನಿಕ ಅಥವಾ ಖಾಸಗಿ ಪ್ರೀ-ಸ್ಕೂಲುಗಳು, ಶಿಶುಪಾಲನೆ ಸಂಸ್ಥೆಗಳು, ವಿದ್ಯಾಲಯಗಳು, ಕಾಲೇಜುಗಳು, ತಾಂತ್ರಿಕ ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು, ಕೋಚಿಂಗ್ ಕೇಂದ್ರಗಳು, ಟ್ಯೂಷನ್ ಕೇಂದ್ರಗಳು ಮತ್ತು ತರಬೇತಿ ಕೇಂದ್ರಗಳು ಇತ್ಯಾದಿ ಒಳಗೊಳ್ಳುವುದು;

(ಐ) "ಸಾಂಕ್ರಾಮಿಕ ರೋಗ" ಎಂದರೆ, ಒಂದು ರೋಗದ ಕೇಸುಗಳ ಸಂಖ್ಯೆಯಲ್ಲಿನ ಒಮ್ಮೆಲೆ ಹಾಗೂ ತೀವ್ರವಾದ ಹೆಚ್ಚಳದಿಂದ ಉಂಟಾಗುವ ಸಾರ್ವಜನಿಕಾರೋಗ್ಯ ಪ್ರಾಮುಖ್ಯತೆಯಿರುವ ಒಂದು ಸ್ಥಿತಿ ಎಂದರ್ಥ;

(ಜೆ) "ಕಾರ್ಖಾನೆ" ಎಂದರೆ, ಯಾಂತ್ರಿಕವಾಗಿ ಪ್ರಸರಿಸಲ್ಪಡುವ, ಉಗಿಶಕ್ತಿ, ಜಲ, ಎಣ್ಣೆ, ಅನಿಲ, ವಿದ್ಯುತ್ತ್ ಅಥವಾ ಇತರ ಯಾವುದೇ ಶಕ್ತಿರೂಪದ ಸಹಾಯದಿಂದ ಕೈಗಾರಿಕೆ, ಉತ್ಪಾದನೆ, ವಾಣಿಜ್ಯ ಕಾರ್ಯವಿಧಾನ ನಡೆಸುವ ಯಾವುದೇ ಪರಿಸರ ಹಾಗೂ ಅದರ ಆವರಣ ಎಂದರ್ಥ ಹಾಗೂ 1948ರ ಕಾರ್ಖಾನೆಗಳ ಅಧಿನಿಯಮ (1948ರ 63ನೇ ಕೇಂದ್ರ ಅಧಿನಿಯಮ)ದಲ್ಲಿ ನಿರ್ವಚಿಸಿರುವ ಯಾವುದೇ ಪರಿಸರವು ಒಳಗೊಳ್ಳುವುದು;

(ಕೆ) "ಹೊಲಸು" ಎಂಬುವುದರಲ್ಲಿ ಹೊಲಸು ನೀರು, ಮಲಮೂತ್ರ ವಿಸರ್ಜನೆಗಳು, ದುರ್ವಾಸನೆ ಹಾಗೂ ಕೊಳೆತ ಪದಾರ್ಥಗಳು ಎಂಬಿವುಗಳು ಹಾಗೂ ನೀಗಿಸದಿದ್ದಲ್ಲಿ ಸಾರ್ವಜನಿಕಾರೋಗ್ಯಕ್ಕೆ ಹಾನಿಕರವಾಗುವ ಇತರ ಎಲ್ಲಾ ಸಾಮಾಗ್ರಿಗಳು ಒಳಗೊಳ್ಳುವುದು;

(ಎಲ್) "ಆಹಾರ" ಅಥವಾ "ಆಹಾರ ಪದಾರ್ಥ" ಎಂಬುವುದರಲ್ಲಿ ವ್ಯಕ್ತಿಗಳು ತಿನ್ನಲು ಅಥವಾ ಕುಡಿಯಲು (ಆಹಾರವಾಗಿ ಅಥವಾ ಪಾನೀಯವಾಗಿ) ಅಥವಾ ಅಗಿಯಲು ಬಳಸುವ ಪಾಕ ಮಾಡಿದ ಅಥವಾ ಭಾಗಶಃ ಪಾಕ ಮಾಡಿದ ಅಥವಾ ಪಾಕಮಾಡದ ಅಥವಾ ಸಂಸ್ಕರಿಸಿದ, ಭಾಗಶಃ ಸಂಸ್ಕರಿಸಿದ ಅಥವಾ ಸಂಸ್ಕರಿಸದ ಧಾನ್ಯಗಳು, ಹಣ್ಣುಗಳು, ತರಕಾರಿಗಳು, ಹೂವುಗಳು, ಎಲೆಗಳು, ಹಾಲು, ಮೀನು, ಮಾಂಸ ಒಳಗೊಂಡ ಎಲ್ಲಾ ಪದಾರ್ಥಗಳು, ಅದರ ಉತ್ಪನ್ನಗಳು, ಪ್ಯಾಕ್ ಮಾಡಿದ ಕುಡಿಯುವ ನೀರು ಒಳಗೊಂಡ ಪಾನೀಯಗಳು ಮತ್ತು ಬಣ್ಣ ಅಥವಾ ರುಚಿಯನ್ನು ಹೆಚ್ಚಿಸುವುದಕ್ಕಾಗಿ ಅಂತಹ ಪದಾರ್ಥಗಳಲ್ಲಿ ಮತ್ತು ಪಾನೀಯಗಳಲ್ಲಿ ಸೇರಿಸುವ ಎಲ್ಲಾ ಘಟಕಾಂಶಗಳು ಒಳಗೊಳ್ಳುವುದಾಗಿದೆ;

(ಎಂ) "ಆಹಾರ ವ್ಯಾಪಾರ" ಎಂದರೆ, ಲಾಭಕ್ಕಾಗಿ ಅಥವಾ ಅಲ್ಲದೆ ಸಾರ್ವಜನಿಕ ಅಥವಾ ಖಾಸಗಿಯಾಗಿ ವಹಿಸಿಕೊಳ್ಳುವ ಮತ್ತು ಆಹಾರ ಪದಾರ್ಥದ ನಿರ್ಮಾಣ, ಸಂಸ್ಕರಣೆ, ಪ್ಯಾಕಿಂಗ್, ಸ್ಟೋರೇಜ್, ಸಾಗಾಟ, ವಿತರಣೆ, ಆಮದು ಇತ್ಯಾದಿಗಳಿಗೆ ಸಂಬಂಧಿಸಿದ ಯಾವುದೇ ಚಟುವಟಿಕೆಗಳನ್ನು ಯಾವುದೇ ಹಂತದಲ್ಲಿ ನಡೆಸುವುದು ಮತ್ತು ಆಹಾರ ಸೇವೆಗಳು, ಕ್ಯಾಟರಿಂಗ್ ಸೇವೆಗಳು, ಆಹಾರದ ಅಥವಾ ಆಹಾರ ಘಟಕಾಂಶಗಳ ಮಾರಾಟ ಮುಂತಾದವನ್ನು ಒಳಗೊಳ್ಳುವವು ಎಂದರ್ಥ;

(ಎನ್) "ಸರಕಾರ" ಎಂದರೆ ಕೇರಳ ಸರಕಾರ ಎಂದರ್ಥ;

(ಒ) "ಆರೋಗ್ಯ ಸಂರಕ್ಷಣೆ ಸಂಸ್ಥೆ" ಎಂದರೆ, ಸಾರ್ವಜನಿಕ ಮಾಲಕತ್ವದಲ್ಲಿರುವ ಅಥವಾ ಖಾಸಗಿ ಮಾಲಿಕತ್ವದಲ್ಲಿರುವ ಮತ್ತು ರೋಗ ನಿರ್ಣಯ, ಚಿಕಿತ್ಸೆ, ನರ್ಸಿಂಗ್, ಉಪಶಾಮಕ ಒಳಗೊಂಡ ಆರೈಕೆಗಳು, ಇತರ ಚಿಕಿತ್ಸಾ ಸಂರಕ್ಷಣೆ ಪ್ರಕ್ರಿಯೆಗಳು ಎಂಬಿವುಗಳ ಮೂಲಕ ಆರೋಗ್ಯದಾಯಕ, ರೋಗನಿರೋಧಕ, ರೋಗಚಿಕಿತ್ಸೆ, ರೋಗ ನಿರ್ಣಯ, ನರ್ಸಿಂಗ್, ಪುನರ್ವಸತಿ, ಉಪಶಾಮಕ, ಆರೋಗ್ಯ ಸಂಸ್ಥಾಪನೆ, ಸಂಶೋಧನಾ ಚಟುವಟಿಕೆಗಳನ್ನೊಳಗೊಂಡ ವಿವಿಧ ಆರೋಗ್ಯ ಸೇವಾ ಚಟುವಟಿಕೆಗಳನ್ನು ಅಥವಾ ಸಂತಾನೋತ್ಪತ್ತಿ ಆರೋಗ್ಯ ಸೇವೆಗಳನ್ನು ಅಥವಾ ತುರ್ತು ಚಿಕಿತ್ಸಾ ಸೇವೆಗಳನ್ನು ಅಥವಾ ವಿವಿಧ ಸಂಯೋಜನೆಗಳನ್ನು ಸಾರ್ವಜನಿಕರಿಗೆ ನೀಡುವ ಸಂಸ್ಥೆಗಳು, ಆಸ್ಪತ್ರೆಗಳು, ನರ್ಸಿಂಗ್ ಹೋಮ್‌ಗಳು, ಪ್ರಸೂತಿ ಆಲಯಗಳು, ಇತರ ಚಿಕಿತ್ಸಾ ಕೇಂದ್ರಗಳು ಎಂಬಿವುಗಳು ಸಂಪೂರ್ಣವಾಗಿ ಅಥವಾ ಅದರ ಒಂದು ಭಾಗ ಎಂದರ್ಥ;

(ಪಿ) "ಆರೋಗ್ಯ ಸಂರಕ್ಷಣೆ ಕಾರ್ಯಕರ್ತರು" ಎಂದರೆ, ಬೇರೊಬ್ಬ ವ್ಯಕ್ತಿಯ ಆರೋಗ್ಯ ಶುಶ್ರೂಷೆಗಾಗಿ ಅಥವಾ ಆರೋಗ್ಯ ಸಂಸ್ಥಾಪನೆಗಾಗಿ ಸಂಬಂಧಿಸಿ ಸೇವೆ ಅಥವಾ ಉದ್ಯೋಗ ಮಾಡುವ ವ್ಯಕ್ತಿಗಳು ಎಂದರ್ಥ ಮತ್ತು ಅಲ್ಲದೆ ವೈದ್ಯ, ನರ್ಸ್, ಪಾರಾಮೆಡಿಕ್, ಸೈಕಾಲಜಿಸ್ಟ್, ಕೌನ್ಸಿಲರ್, ಔಟ್‌ರೀಚ್ ಆರೋಗ್ಯ ಸಂರಕ್ಷಣೆ ಸೇವೆಗಳನ್ನು ನೀಡುವ ಆರೋಗ್ಯ ಸಂರಕ್ಷಣೆ ಕಾರ್ಯಕರ್ತರುಗಳು ಅಲ್ಲದಿದ್ದಲ್ಲಿ ಮೆಡಿಕಲ್, ನರ್ಸಿಂಗ್, ಸೈಕಾಲಜಿಕಲ್ ಅಲ್ಲದಿದ್ದಲ್ಲಿ ಯಾವುದೇ ರೀತಿಯಲ್ಲಿನ ಇತರ ಆರೋಗ್ಯ ಸೇವೆಗಳನ್ನು ಒದಗಿಸುವ ವ್ಯಕ್ತಿಗಳು ಒಳಗೊಳ್ಳುವರು;

(ಕ್ಯೂ) "ಆರೋಗ್ಯ ಸಂರಕ್ಷಣೆ ಸೇವೆಗಳು" ಎಂದರೆ, ಕನ್ಸಲ್ಟೇಶನ್, ರೋಗ ನಿರ್ಣಯ, ಚಿಕಿತ್ಸೆ ಮತ್ತು ಔಟ್‌ರೀಚ್ ಸೇವೆಗಳು ಮತ್ತು ಸಾರ್ವಜನಿಕಾರೋಗ್ಯವನ್ನು ಸಂರಕ್ಷಿಸುವುದಕ್ಕೂ ಪ್ರೋತ್ಸಾಹಿಸುವುದಕ್ಕೂ ಇರುವ ಸೇವೆಗಳು ಎಂದರ್ಥ;

(ಆರ್) "ಆರೋಗ್ಯ ಅಪಾಯ" ಎಂದರೆ, ಗಾಯ ಅಥವಾ ರೋಗಕ್ಕೆ ಕಾರಣವಾಗಬಹುದಾದ ಯಾವುದೇ ಸೂಕ್ಷ್ಮಜೀವಿ, ರಾಸಾಯನಿಕ ಸ್ಥಿತಿ ಅಥವಾ ಯಾವುದೇ ಸನ್ನಿವೇಶ ಎಂದರ್ಥ;

This is a digitally signed Gazette.
Authenticity may be verified through https://compose.kerala.gov.in/

(ಎಸ್) ''ಹೆಲ್ತ್ ಇನ್ಸ್‌ಪೆಕ್ಟರ್'' ಎಂದರೆ, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಯ ಅಥವಾ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗೆ ವರ್ಗಾವಣೆಗೊಂಡ ಸಂಸ್ಥೆಯ ಅಥವಾ ಸರಕಾರಿ ಮೆಡಿಕಲ್ ಕಾಲೇಜಿನ ಹೆಲ್ತ್ ಇನ್‌ಸ್ಪೆಕ್ಟರ್ ಅಥವಾ ಯಾವುದೇ ಒಂದು ಪ್ರದೇಶಕ್ಕೆ ಶಾಶ್ವತವಾಗಿ ಅಥವಾ ತಾತ್ಕಾಲಿಕವಾಗಿ ನೇಮಕಗೊಂಡ ಹೆಲ್ತ್ ಇನ್ಸ್‌ಪೆಕ್ಟರ್ ದರ್ಜೆಯ ಒಬ್ಬ ಅಧಿಕಾರಿ ಎಂದರ್ಥ;

(ಟಿ) ''ನೈರ್ಮಲ್ಯ ಸೌಲಭ್ಯಗಳು'' ಎಂದರೆ, ಒಂದು ಕೊಠಡಿಯಲ್ಲಿ ಅಥವಾ ಕೊಠಡಿಗಳಲ್ಲಿ ಅಥವಾ ಕಟ್ಟಡದಲ್ಲಿ, ವಿವಿಧ ಲಿಂಗಿಗಳಿಗೆ ಪ್ರತ್ಯೇಕವಾಗಿ ಗೌಪ್ಯತೆಯೊಂದಿಗೆ ಮತ್ತು ಶುದ್ಧವಾದ, ರೋಗಾಣುಮುಕ್ತವಾದ, ರೋಗ ಹರಡುವಿಕೆಗೆ ಸಾಧ್ಯತೆಯಿಲ್ಲದ ರೀತಿಯಲ್ಲಿ ಸಿದ್ಧಪಡಿಸಿರುವ ಮತ್ತು ಸಾಕಷ್ಟು ಸಂಖ್ಯೆಯಲ್ಲಿರುವ ಮಲಮೂತ್ರ ವಿಸರ್ಜನಾ ಸೌಲಭ್ಯಗಳು ಎಂದರ್ಥ;

(ಯು) ''ಅಂಟುರೋಗ'' ಎಂದರೆ, ಒಂದು ಮನುಷ್ಯನ ಅಥವಾ ಮೃಗದ ಶರೀರದಲ್ಲಿ ಒಂದು ವೈರಾಣುವಿನ ಸೋಂಕುವಿಕೆ, ಬೆಳೆಯುವಿಕೆ ಅಲ್ಲದಿದ್ದಲ್ಲಿ ವಿಕಾಸ ಎಂದರ್ಥ;

(ವಿ) ''ಐಸೋಲೇಶನ್'' ಎಂದರೆ, ವ್ಯಕ್ತಿಗಳಿಗೆ ಮತ್ತು ಸಮಾಜಕ್ಕೆ ರೋಗ ಹರಡುವುದನ್ನು ತಡೆಯುವುದು ಅಥವಾ ಮಿತಿಗೊಳಿಸುವುದು ಎಂಬ ಉದ್ದೇಶದಿಂದ ಸೋಂಕುರೋಗವಿರುವ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ನಿಗದಿತ ಕಾಲಾವಧಿಯವರೆಗೆ ಇತರರೊಂದಿಗೆ ಸಂಪರ್ಕವಿರಿಸುವುದರಿಂದ ನಿಯಂತ್ರಿಸುವಿಕೆ ಎಂದರ್ಥ;

(ಡಬ್ಲ್ಯೂ) ''ಶೌಚಾಲಯ'' ಎಂದರೆ, ಮಲವಿಸರ್ಜನೆಗೆ ಅಥವಾ ಮೂತ್ರ ವಿಸರ್ಜನೆಗೆ ಅಲ್ಲದಿದ್ದಲ್ಲಿ ಎರಡಕ್ಕೂ ಬೇಕಾಗಿ ಮೀಸಲಿಟ್ಟಿರುವ ಸೌಲಭ್ಯ ಅಥವಾ ಸ್ಥಳ ಎಂದರ್ಥ ಮತ್ತು ಅದರಲ್ಲಿ ಯಾವುದೇ ರೀತಿಯಲ್ಲಿನ ಕ್ಲೋಸೆಟ್ ಹಾಗೂ ಯೂರಿನಲ್ ಒಳಗೊಳ್ಳುವುದು;

(ಎಕ್ಸ್) ''ಸ್ಥಳೀಯ ಪ್ರದೇಶ'' ಎಂದರೆ, ಸ್ಥಳೀಯಾಡಳಿತ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯೊಳಗಿನ ಅಲ್ಲದಿದ್ದಲ್ಲಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಕಾಲಾಕಾಲಗಳಲ್ಲಿ ನಿರ್ದಿಷ್ಟಪಡಿಸುವಂತಹ ಪ್ರದೇಶ ಎಂದರ್ಥ;

(ವೈ) ''ಸ್ಥಳೀಯಾಡಳಿತ ಸಂಸ್ಥೆ'' ಎಂದರೆ, 1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮ (1994ರ 20)ದ ವಿಭಾಗ 4ರ ಪ್ರಕಾರ ರಚಿಸಿದ ಮುನಿಸಿಪಾಲಿಟಿ ಅಥವಾ 1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮ (1994ರ 13)ದ ವಿಭಾಗ 4ರ ಪ್ರಕಾರ ಯಾವುದೇ ಮಟ್ಟದಲ್ಲಿ ರಚಿಸಿದ ಪಂಚಾಯತು ಎಂದರ್ಥ;

(ಝಡ್) ''ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿ'' ಎಂದರೆ, ಸ್ಥಳೀಯ ಮಟ್ಟದಲ್ಲಿ ಈ ಅಧಿನಿಯಮದ ಪ್ರಕಾರ ನೇಮಕಗೊಂಡ, ಸ್ಥಳೀಯ ಸಾರ್ವಜನಿಕಾರೋಗ್ಯ ಸಮಿತಿಯ ಸದಸ್ಯ ಕಾರ್ಯದರ್ಶಿಯಾದ ಈ ಅಧಿನಿಯಮದ ನಿರ್ವಹಣೆಗೆ ಹೊಣೆಗಾರಿಕೆಯಿರುವ ವೈದ್ಯಕೀಯ ಅಧಿಕಾರಿ ಎಂದರ್ಥ;

(ಎ ಎ) ''ಲಾಡ್ಜಿಂಗ್ ಹೌಸ್'' ಎಂದರೆ, ಹಣಪಡೆದು, ಆಹಾರ ನೀಡುವ ಅಥವಾ ನೀಡದ, ವ್ಯಕ್ತಿಗಳಿಗೆ ವಸತಿ ಸೌಲಭ್ಯ ಒದಗಿಸುವ ಹೊಟೇಲು, ಬೋರ್ಡಿಂಗ್ ಹೌಸ್, ಛತ್ರ, ಧರ್ಮಶಾಲೆ, ರೆಸಾರ್ಟ್, ಹೋಮ್ ಸ್ಟೇ, ಸರ್ವೀಸ್ ಅಪಾರ್ಟ್‌ಮೆಂಟ್ ಮತ್ತು ವಿಶ್ರಾಂತಿ ಮಂದಿರ ಇತ್ಯಾದಿ ಸ್ಥಳಗಳು ಎಂದರ್ಥ;

(ಎ ಬಿ) ''ಮಾರ್ಕೆಟ್'' ಎಂದರೆ, ಧಾನ್ಯಗಳ, ಹಣ್ಣುಗಳ, ತರಕಾರಿಗಳ, ಮಾಂಸ, ಮತ್ಸ್ಯ ಅಲ್ಲದಿದ್ದಲ್ಲಿ ಬೇಗನೇ ಹಾಳಾಗುವ ಇತರ ಆಹಾರ ಸಾಮಾಗ್ರಿಗಳ ಮಾರಾಟಕ್ಕೆ ಮತ್ತು ಖರೀದಿಗೆ ಅಲ್ಲದಿದ್ದಲ್ಲಿ ಜಾನುವಾರುಗಳ, ಕೋಳಿಗಳ ಅಥವಾ ಯಾವುದೇ ಕೃಷಿ ಅಲ್ಲದಿದ್ದಲ್ಲಿ ಕೈಗಾರಿಕೆ ಉತ್ಪನ್ನಗಳ ಅಲ್ಲದಿದ್ದಲ್ಲಿ ಯಾವುದೇ ಅಸಂಸ್ಕೃತ ಉತ್ಪನ್ನದ ಅಥವಾ ನಿರ್ಮಾಣ ಉತ್ಪನ್ನದ ಅಥವಾ ಜೀವನ ಸೌಕರ್ಯಗಳಿಗೆ ಅಗತ್ಯವಾಗಿರುವ ಯಾವುದೇ ಸಾಮಾಗ್ರಿಗಳ ಅಲ್ಲದಿದ್ದಲ್ಲಿ ಸರಕುಗಳ ಮಾರಾಟಕ್ಕೆ ಹಾಗೂ ಖರೀದಿಗೆ ಜನರು ಸೇರುವುದಕ್ಕಾಗಿ ಮೀಸಲಿಟ್ಟ ಅಥವಾ ಸಾಮಾನ್ಯವಾಗಿ ಹಾಗೂ ನಿಯತಕಾಲಿಕವಾಗಿ ಬಳಸಲಾಗುವ ಯಾವುದೇ ಸ್ಥಳ ಎಂದರ್ಥ. ಆದರೆ ಅದರಲ್ಲಿ ಒಂದು ಅಂಗಡಿ ಅಥವಾ ಆರಕ್ಕಿಂತ ಹೆಚ್ಚಲ್ಲದ ಅಂಗಡಿಗಳ ಗುಂಪನ್ನು ಒಂದು ಮಾರ್ಕೆಟ್ ಎಂದು ಭಾವಿಸತಕ್ಕದ್ದಲ್ಲ;

(ಎ ಸಿ) ''ವೈದ್ಯಕೀಯ ಚಿಕಿತ್ಸೆ'' ಎಂದರೆ, 2021ರ ಕೇರಳ ರಾಜ್ಯ ವೈದ್ಯಕೀಯ ವೃತ್ತಿಗಾರರ ಅಧಿನಿಯಮ (2021ರ 36ನೇ ಅಧಿನಿಯಮ)ದ ಪ್ರಕಾರ ಅಂಗೀಕೃತವಾದ ಯಾವುದೇ ಚಿಕಿತ್ಸಾ ಪದ್ಧತಿಯನ್ನು ಬಳಸಿ ಕ್ರಮಬದ್ಧವಾದ ರೋಗ ನಿರ್ಣಯ ನಡೆಸಿ ರೋಗವನ್ನು ತಡೆಯುವುದಕ್ಕೆ ಅಥವಾ ಒಬ್ಬ ರೋಗಿಯ ಆರೋಗ್ಯಮಟ್ಟವನ್ನು ಸುಧಾರಿಸುವುದಕ್ಕಿರುವ ಚಿಕಿತ್ಸೆ ಎಂದರ್ಥ;

(ಎ ಡಿ) ''ವಲಸೆ ಕಾರ್ಮಿಕ'' ಎಂದರೆ, ರಾಜ್ಯದ ಹೊರಗಿನಿಂದ ಜೀವನೋಪಾಯಕ್ಕಾಗಿ ವಿವಿಧ ತರದ ಕೆಲಸಗಳನ್ನು ಮಾಡುವುದಕ್ಕಾಗಿ ರಾಜ್ಯದಲ್ಲಿ ಬಂದು ನೆಲೆಸಿರುವವರು ಎಂದರ್ಥ;

This is a digitally signed Gazette.
Authenticity may be verified through https://compose.kerala.gov.in/

5

(ಎ ಇ) "ಅಧಿಸೂಚಿಸಬೇಕಾದ ಸಾಂಕ್ರಾಮಿಕ ರೋಗಗಳು" ಎಂದರೆ, ಈ ಅಧಿನಿಯಮದ 28ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ ಹೇಳಿರುವ ರೋಗಗಳು ಎಂದರ್ಥ;

(ಎ ಎಫ್) "ಅಧಿಸೂಚನೆ" ಎಂದರೆ, ಅಧಿಕೃತ ಗಜೆಟ್‌ನಲ್ಲಿ ಪ್ರಕಟಿಸುವ ಒಂದು ಅಧಿಸೂಚನೆ ಎಂದರ್ಥ;

(ಎ ಜಿ) "ಉಪದ್ರವ" ಎಂದರೆ, ದೃಷ್ಟಿ, ವಾಸನೆ, ಶ್ರವಣ ಇತ್ಯಾದಿಗೆ ಅಡಚಣೆ, ಗಾಯ, ಅಪಾಯ, ಅಲ್ಲದಿದ್ದಲ್ಲಿ ಉಪದ್ರವ ಒಡ್ಡುವ ಅಲ್ಲದಿದ್ದಲ್ಲಿ ವಿಶ್ರಾಂತಿಗೆ ಅಥವಾ ನಿದ್ರೆಗೆ ತಡೆಯೊಡ್ಡುವ ಅಥವಾ ಜೀವಕ್ಕೆ ಅಘಾತವನ್ನುಂಟುಮಾಡುವ ಅಲ್ಲದಿದ್ದಲ್ಲಿ ಆರೋಗ್ಯಕ್ಕೆ ಹಾನಿಕರವಾಗುವ ಅಥವಾ ಕಾರಣವಾಗಲು ಸಾಧ್ಯತೆಯಿರುವ ಯಾವುದೇ ಕಾರ್ಯ, ವಿಮುಖತೆ, ಸ್ಥಳ ಅಥವಾ ಸಾಮಾಗ್ರಿ ಎಂದರ್ಥ;

(ಎ ಎಚ್) "ಅನುಭೋಗದಾರ" ಎಂಬುವುದರಲ್ಲಿ,—

(ಎ) ಬಾಡಿಗೆ ನೀಡುವ ಅಥವಾ ನೀಡಬೇಕಾದಂತಹ ಸ್ವತ್ತಿನ ಅಥವಾ ಕಟ್ಟಡದ ಯಜಮಾನನಿಗೆ, ಬಾಡಿಗೆಯ ಅಥವಾ ಬಾಡಿಗೆಯ ಯಾವುದೇ ಭಾಗವನ್ನು ತತ್ಕಾಲಕ್ಕೆ ನೀಡುವ ಅಥವಾ ನೀಡುವುದಕ್ಕೆ ಹೊಣೆಗಾರನಾದ ಯಾವನೇ ವ್ಯಕ್ತಿ;

(ಬಿ) ಸ್ವತ್ತು ಅಥವಾ ಕಟ್ಟಡ ಸ್ವಾಧೀನದಲ್ಲಿರುವ ಅಥವಾ ಇತರ ಯಾವುದೇ ರೀತಿಯಲ್ಲಿ ಉಪಯೋಗಿಸುವ ಅದರ ಯಾವುದೇ ಯಜಮಾನ;

(ಸಿ) ಯಾವುದೇ ಕಟ್ಟಡದ ಅಥವಾ ಸ್ವತ್ತಿನ ಬಾಡಿಗೆ ಮುಕ್ತ ಗೇಣಿದಾರ;

(ಡಿ) ಯಾವುದೇ ಸ್ವತ್ತು ಅಥವಾ ಕಟ್ಟಡವು ಸ್ವಾಧೀನದಲ್ಲಿರುವ ಒಬ್ಬ ಪರವಾನಗಿದಾರ; ಮತ್ತು

(ಇ) ಯಾವುದೇ ಸ್ವತ್ತನ್ನು ಅಥವಾ ಕಟ್ಟಡವನ್ನು ಉಪಯೋಗಿಸಿದುದಕ್ಕೆ ಅಥವಾ ಸ್ವಾಧೀನದಲ್ಲಿರಿಸಿದುದಕ್ಕೆ ಯಜಮಾನನಿಗೆ ನಷ್ಟ ಪರಿಹಾರ ನೀಡಲು ಹೊಣೆಗಾರನಾದ ಯಾವನೇ ವ್ಯಕ್ತಿ ಒಳಪಡುವನು;

(ಎ ಐ) "ಅಸಹ್ಯಕರ ವ್ಯಾಪಾರ" ಎಂದರೆ, ಉಪದ್ರವ ಅಥವಾ ಉಪದ್ರವ ನೀಡಲು ಸಾಧ್ಯತೆಯಿರುವ ಪದಾರ್ಥಗಳನ್ನು ವ್ಯವಹರಿಸಲ್ಪಡುವ ಯಾವುದೇ ವ್ಯಾಪಾರ ಎಂದರ್ಥ;

(ಎ ಜಿ) "ಯಜಮಾನ" ಎಂದರೆ, ಯಾವ ಸ್ವತ್ತಿಗೆ ಅಥವಾ ಕಟ್ಟಡಕ್ಕೆ ಸಂಬಂಧಿಸಿ ಆಗಿದೆಯೋ ಪದವನ್ನು ಬಳಸಿರುವುದು ಅದರ ಬಾಡಿಗೆಯನ್ನೋ ಆದಾಯಗಳನ್ನೋ ಸ್ವಂತ ಖಾತೆಗೆ ಅಥವಾ ಬೇರೊಬ್ಬರ ಅಥವಾ ಎಸ್ಟೇಟ್‌ನ ಏಜೆಂಟ್‌ನ, ಟ್ರಸ್ಟಿಯ, ಪೋಷಕನ, ಮ್ಯಾನೇಜರ್ ಅಲ್ಲದಿದ್ದಲ್ಲಿ ರಿಸೀವರ್ ಎಂಬ ನೆಲೆಯಲ್ಲಿ ಯಾವುದೇ ಧಾರ್ಮಿಕ ಅಥವಾ ಚಾರಿಟೇಬಲ್ ಅವಶ್ಯಕತೆಗಾಗಿ ಪಡೆಯುವ ಅಥವಾ ಪಡೆಯಲು ಅರ್ಹರಾದ ವ್ಯಕ್ತಿ ಎಂದರ್ಥ ಮತ್ತು ಅವರು ಒಳಗೊಳ್ಳುವರು;

(ಎ ಕೆ) "ನಿಗದಿಪಡಿಸಿದ" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳಿಂದ ಅಥವಾ ರೆಗ್ಯುಲೇಶನ್‌ಗಳಿಂದ ನಿಗದಿಪಡಿಸಿದ ಎಂದರ್ಥ;

(ಎ ಎಲ್) "ಖಾಸಗಿ ಆರೋಗ್ಯ ಸಂರಕ್ಷಣೆ ಸಂಸ್ಥೆಗಳು" ಎಂದರೆ, ಯಾವುದೇ ಖಾಸಗಿ ವ್ಯಕ್ತಿ, ಟ್ರಸ್ಟ್, ಕಾರ್ಪೊರೇಶನ್ ಅಥವಾ ಸರಕಾರೇತರ ಸಂಘಗಳ ಅಧೀನದಲ್ಲಿರುವ ಮತ್ತು ಅಲ್ಲಿ ಸಾರ್ವಜನಿಕರಿಗೆ ಒಳರೋಗಿ ಸೌಲಭ್ಯಗಳಿಂದಿರುವ ಅಥವಾ ಇಲ್ಲದ, ತಪಾಸಣೆ, ರೋಗ ನಿರ್ಣಯ, ಪ್ರತಿರೋಧಕ ಕ್ರಮಗಳು, ರೋಗನಿವಾರಣೆಗಿರುವ ವೈದ್ಯ ಚಿಕಿತ್ಸೆ ಸೌಲಭ್ಯಗಳು ಇತ್ಯಾದಿಯನ್ನು ನೀಡುವ ಯಾವುದೇ ಸಂಸ್ಥೆಗಳು ಎಂದರ್ಥ. ಅದರಲ್ಲಿ ಒಳರೋಗಿ ಸೌಲಭ್ಯಗಳಿಂದಿರುವ ಅಥವಾ ಅಲ್ಲದ ಮೆಡಿಕಲ್ ಕ್ಲಿನಿಕ್‌ಗಳು, ಆರೋಗ್ಯ ಪಾಲನೆ ಕೇಂದ್ರಗಳು, ಪ್ರಸೂತಿ ಶುಶ್ರೂಷೆ ಕೇಂದ್ರಗಳು, ಆಸ್ಪತ್ರೆಗಳು, ವೃದ್ಧ ಮಂದಿರ, ಡೇಕೇರ್ ಸೆಂಟರ್, ಕಾಯ ಚಿಕಿತ್ಸಾ ಸಂಸ್ಥೆ, ಇನ್ವಿಟ್ರೋ ಫರ್ಟಿಲಿಟಿ ಕ್ಲಿನಿಕ್, ಜೆನಿಟಿಕ್ ಲ್ಯಾಬೊರೇಟರಿಗಳು, ಕೌನ್ಸಿಲಿಂಗ್ ಕೇಂದ್ರಗಳು, ಮೆಡಿಕಲ್ ಲ್ಯಾಬೊರೇಟರಿ, ರೋಗನಿರ್ಣಯ ಕೇಂದ್ರಗಳು, ರೇಡಿಯೋಲಜಿಕಲ್ ಆಂಡ್ ಇಮೇಜಿಂಗ್ ಸೆಂಟರುಗಳು, ಸ್ಕ್ಯಾನಿಂಗ್ ಸೆಂಟರ್, ಫಿಝಿಯೋಥೆರಾಪಿ ಸೆಂಟರ್, ಚಿಕಿತ್ಸಾಲಯಗಳು, ಮಾನಸಿಕಾರೋಗ್ಯ ಸಂಸ್ಥೆಗಳು ಇತ್ಯಾದಿ ಒಳಪಡುವುದಾಗಿದೆ;

ವಿವರಣೆ:—ಈ ಅಧಿನಿಯಮದ ಉದ್ದೇಶಕ್ಕಾಗಿ ಸಂಘಗಳ ಅಥವಾ ಸಹಕಾರಿ ಸಂಘಗಳ ಮಾಲಿಕತ್ವದಲ್ಲಿರುವ ಅಥವಾ ಅವರು ನಡೆಸುವಂತಹ ಆರೋಗ್ಯ ಸಂರಕ್ಷಣೆ ಸಂಸ್ಥೆಗಳನ್ನೂ ಸಹ ಖಾಸಗಿ ಆರೋಗ್ಯ ಸಂರಕ್ಷಣೆ ಸಂಸ್ಥೆಗಳೆಂದು ಭಾವಿಸತಕ್ಕದ್ದು.

(ಎ ಎಂ) "ಸಾರ್ವಜನಿಕ ಕಟ್ಟಡ" ಎಂದರೆ, ಸಾರ್ವಜನಿಕ ವಿದ್ಯಾಲಯಗಳು, ಕಾಲೇಜುಗಳು, ಆಸ್ಪತ್ರೆಗಳು, ಉದ್ಯೋಗ ಸ್ಥಳ, ಆರಾಧನಾಲಯಗಳು, ಸಾರ್ವಜನಿಕ ಥಿಯೇಟರ್‌ಗಳು, ಸಿನಿಮಾ ಹಾಲ್‌ಗಳು, ಗ್ರಂಥಾಲಯಗಳು, ಉಪನ್ಯಾಸ ಕೊಠಡಿಗಳು, ಕನ್ಸರ್ಟ್ ಹಾಲ್‌ಗಳು, ಎಕ್ಸ್‌ಹಿಬಿಶನ್ ಹಾಲ್‌ಗಳು, ಸಮೇಳನ ಸ್ಥಳಗಳು, ಹೋಟೆಲುಗಳು, ಭೋಜನಶಾಲೆಗಳು, ವಸತಿ ಮಂದಿರಗಳು, ಆಶ್ರಯ ಕೇಂದ್ರಗಳು ಇತ್ಯಾದಿ ಸಾರ್ವಜಿಕರು ಸಾರ್ವಜನಿಕ ಅವಶ್ಯಕತೆಗಳಿಗಾಗಿ ಆ ರೀತಿ ಉಪಯೋಗಿಸುವ ಅಲ್ಲದಿದ್ದಲ್ಲಿ ಉಪಯೋಗಿಸುವುದಕ್ಕಾಗಿ ನಿರ್ಮಿಸಿರುವ ಎಲ್ಲಾ ಕಟ್ಟಡಗಳು ಒಳಗೊಳ್ಳುವುದು ಮತ್ತು ಅದರಲ್ಲಿ ವಾಸಿಸುವುದಕ್ಕಿರುವ ಮನೆ ಒಳಗೊಳ್ಳುವುದಲ್ಲ;

This is a digitally signed Gazette.
Authenticity may be verified through https://compose.kerala.gov.in/

6

(ಎ ಎನ್) "ಸಾರ್ವಜನಿಕಾರೋಗ್ಯ" ಎಂದರೆ, ಸಮಾಜದ ಸಾಮಾನ್ಯ ಆರೋಗ್ಯ ಸ್ಥಿತಿ ಎಂದರ್ಥ. ಅದರಲ್ಲಿ ಆರೋಗ್ಯದ ಸಾಮಾಜಿಕ ಮೂಲಗಳ ಮೇಲೆ ಕೇಂದ್ರೀಕೃತವಾದ ಆರೋಗ್ಯ ಉತ್ತೇಜಕ ಚಟುವಟಿಕೆಗಳು, ರೋಗ ನಿರೋಧಕ, ಆರಂಭಿಕ ರೋಗ ನಿರ್ಣಯ, ಚಿಕಿತ್ಸೆ, ಪುನರ್ವಸತಿ ಇತ್ಯಾದಿ ವಿವಿಧ ವಿಧಾನಗಳ ಮೂಲಕ ವ್ಯಕ್ತಿಗಳ ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಯೋಗಕ್ಷೇಮವನ್ನು ಖಾತ್ರಿಪಡಿಸುವುದಕ್ಕಿರುವ ಮತ್ತು ಮನುಷ್ಯ ಮತ್ತು ಪ್ರಕೃತಿಯ ನಡುವಿನ ಆರೋಗ್ಯಕರ ಸಹಬಾಳ್ವೆಯನ್ನು ಖಾತ್ರಿಪಡಿಸುವುದಕ್ಕಿರುವ ಮತ್ತು ಸುಧಾರಿಸುವುದಕ್ಕಿರುವ ಚಟುವಟಿಕೆಗಳು ಒಳಗೊಳ್ಳುವುದು;

(ಎ ಒ) "ಸಾರ್ವಜನಿಕಾರೋಗ್ಯ ಸಮಿತಿ" ಅಥವಾ "ಸಮಿತಿ" ಎಂದರೆ, 3ನೇ ವಿಭಾಗ ಪ್ರಕಾರ ಜಾರಿಗೆ ಬರುವ, ಆಯಾಯ ವಿಷಯದಂತೆ, ರಾಜ್ಯ ಸಾರ್ವಜನಿಕಾರೋಗ್ಯ ಸಮಿತಿ, ಜಿಲ್ಲಾ ಸಾರ್ವಜನಿಕಾರೋಗ್ಯ ಸಮಿತಿ ಮತ್ತು ಸ್ಥಳೀಯ ಸಾರ್ವಜನಿಕಾರೋಗ್ಯ ಸಮಿತಿ ಎಂದರ್ಥ;

(ಎ ಪಿ) "ಸಾರ್ವಜನಿಕಾರೋಗ್ಯ ತುರ್ತುಪರಿಸ್ಥಿತಿ" ಎಂದರೆ, ಹಠಾತ್ತಾದ ಒಂದು ರೋಗ ಭೀತಿ ಅಥವಾ ರೋಗ ಸ್ಥಿತಿಯಿಂದಾಗಿ ಸಾರ್ವಜನಿಕಾರೋಗ್ಯಕ್ಕೆ ಸಂಬಂಧಿಸಿದಂತೆ ತೀವ್ರವೆಂದು ಪರಿಗಣಿಸಲ್ಪಡುವ ರೋಗ ಅಥವಾ ಮರಣ ಸಂಭವಿಸುವುದೋ, ಭ್ರೂಣ ಬೆಳವಣಿಗೆ ಒಳಗೊಂಡವುಗಳಿಗೆ ಪರಿಣಾಮ ಬೀರುವ ರೀತಿಯಲ್ಲಿ ಬಹಳಷ್ಟು ಮಂದಿಗೆ ತೀವ್ರ ಆರೋಗ್ಯ ಸ್ಥಿತಿಯನ್ನುಂಟುಮಾಡುವುದೋ, ತೀವ್ರ ಅಪಾಯಗಳಿಗೆ ಕಾರಣವಾಗುವ ಜೈವಿಕ ವಿಷದ ಅಥವಾ ಇತರ ವಿಷ ಪದಾರ್ಥಗಳ ಅಥವಾ ವೈರಾಣುಗಳ ವ್ಯಾಪಕವಾದ ವ್ಯಾಪನೆ ಉಂಟಾಗುವುದೋ, ಹೊಸತಾದ ಅಥವಾ ಮೊದಲೇ ಇದ್ದ ಅಥವಾ ನಿಯಂತ್ರಿಸಲಾಗಿದ್ದ ಅಥವಾ ನಿರ್ಮೂಲನೆ ಮಾಡಲಾಗಿದ್ದಂತಹ ವೈರಾಣು ಅಥವಾ ಜೈವಿಕ ವಿಷದಿಂದಾಗಿ ಹೆಚ್ಚು ಮಂದಿಗೆ ಗಂಭೀರವಾಗಿ ಹಾನಿ ಉಂಟಾಗುವುದೋ, ಭಾರಿ ಅಪಘಾತಗಳನ್ನೊಳಗೊಂಡ ಯಾವುದೇ ದುರಂತವನ್ನು ಉಂಟುಮಾಡುವುದೋ ಆದ ಯಾವುದೇ ಸ್ಥಿತಿ ಎಂದರ್ಥ;

(ಎ ಕ್ಯೂ) "ಸಾರ್ವಜನಿಕ ಸ್ಥಳ" ಎಂದರೆ, ಖಾಸಗಿ ಉಪಯೋಗಕ್ಕಿರುವುದಲ್ಲದ ಒಂದು ಸ್ಥಳ ಎಂದರ್ಥ;

(ಎ ಆರ್) "ಕ್ವಾರಂಟೈನ್" ಎಂದರೆ, ವ್ಯಕ್ತಿಗಳಿಗೆ ಮತ್ತು ಸಾಮಾಜಕ್ಕೆ ರೋಗ ಹರಡುವುದನ್ನು ತಡೆಗಟ್ಟುವ ಸಲುವಾಗಿ ರೋಗವಿದೆಯೆಂದು ಶಂಕಿಸಲಾದ ಅಥವಾ ರೋಗ ಪೀಡಿತರೊಂದಿಗೆ ಸಂಪರ್ಕವಿರುವ ಅಥವಾ ರೋಗ ಹರಡುವ ಪ್ರದೇಶದಿಂದ ಬಂದಿರುವ ಒಬ್ಬ ವ್ಯಕ್ತಿಯನ್ನು ಅಥವಾ ವ್ಯಕ್ತಿಗಳನ್ನು ಒಂದು ನಿರ್ದಿಷ್ಟ ಕಾಲಾವಧಿಯವರೆಗೆ ಇತರರೊಂದಿಗೆ ಬೆರೆಯುವುದರಿಂದ ತಡೆಯಲು ಪ್ರತ್ಯೇಕವಾಗಿರಿಸುವಿಕೆ ಎಂದರ್ಥ;

(ಎ ಎಸ್) "ನೋಂದಾಯಿತ ವೈದ್ಯಕೀಯ ವೃತ್ತಿಗಾರ" ಅಥವಾ "ವೈದ್ಯಕೀಯ ವೃತ್ತಿಗಾರ" ಎಂದರೆ, 2021ರ ಕೇರಳ ರಾಜ್ಯ ವೈದ್ಯಕೀಯ ವೃತ್ತಿಗಾರ ಅಧಿನಿಯಮ (2021ರ 36ನೇ ಅಧಿನಿಯಮ)ದ ಪ್ರಕಾರ ನೋಂದಾಯಿತ ಒಬ್ಬ ವೈದ್ಯಕೀಯ ವೃತ್ತಿಗಾರ ಎಂದರ್ಥ;

(ಎ ಟಿ) "ಕಾರ್ಯದರ್ಶಿ" ಎಂದರೆ ಸ್ಥಳೀಯಾಡಳಿತ ಸಂಸ್ಥೆಯ ಕಾರ್ಯದರ್ಶಿ ಎಂದರ್ಥ;

(ಎ ಯು) "ಕೊಳಚೆ ನೀರು" ಎಂದರೆ, ಶೌಚಾಲಯ ಹೊಲಸು ಮತ್ತು ಕೊಳಚೆ ಜಲಗುಂಡಿಗಳು ಅಥವಾ ಚರಂಡಿಗಳು ಇತ್ಯಾದಿಗಳಿಂದಿರುವ ಹೊಲಸು ಮತ್ತು ವ್ಯಾಪಾರದಿಂದಿರುವ ಕೊಳಚೆಗಳು ಮತ್ತು ಕೈಗಾರಿಕೆಗಳಿಂದ ಹೊರಬಿಡಲ್ಪಡುವ ಎಲ್ಲಾ ರೀತಿಯ ವಿಸರ್ಜನೆಗಳು ಎಂದರ್ಥ ಹಾಗು ಅದು ಒಳಗೊಳ್ಳುವುದು;

(ಎ ವಿ) "ಶಾಪ್ಪಿಂಗ್ ಮಾಲ್" ಎಂದರೆ, ಒಂದು ಅಥವಾ ಪರಸ್ಪರ ಸಂಪರ್ಕಿತ ಒಂದಕ್ಕಿಂತ ಹೆಚ್ಚು ಕಟ್ಟಡಗಳಲ್ಲಿ ನೆಲೆಗೊಂಡಿರುವ ವಿವಿಧ ಮಾರಾಟಕೇಂದ್ರಗಳ ಒಂದು ಸಂಕೀರ್ಣ ಎಂದರ್ಥ;

(ಎ ಡಬ್ಲ್ಯು) "ಸ್ಪೆಸಿಮೆನ್" ಎಂದರೆ, ನಿರ್ದಿಷ್ಟ ತಪಾಸಣೆಗಳಿಗೆ ಅವಶ್ಯಕವಾಗಿರುವ ರಕ್ತ, ಕಫ, ಮೂತ್ರ, ಮಲ ಅಥವಾ ಇತರ ಶರೀರ ದ್ರವಗಳು, ಮಾಲಿನ್ಯಗಳು, ಟಿಶ್ಯೂಸ್ ಇತ್ಯಾದಿಗಳ ಮಾದರಿ ಹಾಗು ಕಲ್ಚರ್ ಎಂದರ್ಥ;

(ಎ ಎಕ್ಸ್) "ರಾಜ್ಯ" ಎಂದರೆ ಕೇರಳ ರಾಜ್ಯ ಎಂದರ್ಥ;

(ಎ ವೈ) "ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿ" ಎಂದರೆ, ರಾಜ್ಯ ಮಟ್ಟದಲ್ಲಿ ಈ ಅಧಿನಿಯಮ ಪ್ರಕಾರ ನೇಮಿಸಲ್ಪಟ್ಟ, ರಾಜ್ಯ ಸಾರ್ವಜನಿಕಾರೋಗ್ಯ ಸಮಿತಿಯ ಸದಸ್ಯ ಕಾರ್ಯದರ್ಶಿಯಾದ ಈ ಅಧಿನಿಯಮದ ನಿರ್ವಹಣೆಗೆ ಹೊಣೆಗಾರನಾದ ವೈದ್ಯಕೀಯ ಅಧಿಕಾರಿ ಎಂದರ್ಥ;

This is a digitally signed Gazette.
Authenticity may be verified through https://compose.kerala.gov.in/

(ಎ ಝಡ್) "ಲಸಿಕೀಕರಣ" ಎಂದರೆ, ದೇಹದ ರೋಗ ನಿರೋಧಕ ವ್ಯವಸ್ಥೆಯನ್ನು ಉತ್ತೇಜಿಸುವ ಮತ್ತು ಆ ಮೂಲಕ ರೋಗ ಸೋಂಕುವ ಸಾಧ್ಯತೆಯನ್ನು ಕಡಿಮೆ ಮಾಡುವುದಕ್ಕಾಗಿ ನಿಷ್ಕ್ರಿಯಗೊಳಿಸಿದ ಅಥವಾ ಶಕ್ತಿ ಕುಂದಿಸಿದ ಸೂಕ್ಷ್ಮಾಣುಗಳನ್ನು ಅಥವಾ ಅದರ ಕೋಶದ ಭಾಗಗಳನ್ನು ಅಥವಾ ಅದರ ಆನುವಂಶಿಕ ವಸ್ತುಗಳನ್ನು ಅಥವಾ ವೈರಾಣುವಿನ ರಚನೆಯೊಂದಿಗೆ ಹೋಲಿಕೆ ಇರುವ ಇತರ ಯಾವುದೇ ಜೈವಿಕ ಅಥವಾ ಅಜೈವಿಕ ಸೂಕ್ಷ್ಮ ವಸ್ತುಗಳನ್ನು ಮನುಷ್ಯರ ದೇಹಕ್ಕೆ ಚುಚ್ಚುಮದ್ದಿನ ಮೂಲಕ ಅಥವಾ ಅಲ್ಲದೆ ನೀಡುವ ಪ್ರಕ್ರಿಯೆ ಎಂದರ್ಥ;

(ಬ ಎ) "ವೆಕ್ಟರ್" ಎಂದರೆ ರೋಗಾಣುಗಳನ್ನು ದೇಹದಲ್ಲಿ ಒಯ್ಯುವ ಮತ್ತು ಕಚ್ಚುವಿಕೆ, ಸಂಪರ್ಕ, ಆಹಾರ ಪಾನೀಯಗಳನ್ನು ಮಲಿನಗೊಳಿಸುವುದು ಇತ್ಯಾದಿ ವಿಧಾನಗಳ ಮೂಲಕ ಮನುಷ್ಯ ಅಥವಾ ಮೃಗಗಳಿಗೆ ರೋಗ ಉಂಟಾಗುವುದಕ್ಕೆ ಕಾರಣವಾಗುವ ಕೀಟಗಳು ಮತ್ತು ಇನ್ನಿತರ ಆರ್ತ್ರೋಪಾಡ್‌ಗಳು ಎಂದರ್ಥ;

(ಬ ಬಿ) "ಜಲಗಮನ ಮಾರ್ಗ" ಎಂದರೆ, ಚರಂಡಿಯ ಹೊರತಾದ ನೈಸರ್ಗಿಕ ಅಥವಾ ಕೃತಕವಾದ ಯಾವುದೇ ನದಿ, ತೊರೆ, ಕಾಲುವೆ ಅಥವಾ ಸರೋವರ ಹಾಗೂ ವಾಟರ್ ಪಾರ್ಕ್ ಎಂಬಿವುಗಳು ಒಳಪಡುವುದು;

(ಬ ಸಿ) "ವಾಟರ್ ಥೀಮ್ ಪಾರ್ಕ್" ಎಂದರೆ, ವಾಟರ್ ಸ್ಲೈಡ್ಸ್, ಸ್ಪ್ಲಾಶ್ ಪ್ಯಾಡ್ಸ್, ಸ್ಪ್ರೇ ಗ್ರೌಂಡ್ಸ್, ವಾಟರ್ ಪ್ಲೇ ಗ್ರೌಂಡ್ಸ್, ಲೇಸಿ ರಿವರ್ಸ್ ಅಥವಾ ಇತರ ಮನೋರಂಜನೆಗಳು, ಈಜು, ವಾಟರ್ ಸ್ಕೀಸ್ ಇಲ್ಲದ ಕ್ರೀಡೆಗಳು, ಕೃತಕ ಅಲೆಯನ್ನು ಒಳಗೊಳ್ಳಿಸಿರುವ ಅಥವಾ ಇಲ್ಲದ ವೇವ್ ಪೂಲ್ ಅಲ್ಲದಿದ್ದಲ್ಲಿ ಫ್ಲೋ ರೈಡರ್‌ನಂತಹ ಬಾಡಿ ಬೋರ್ಡಿಂಗ್ ಮುಂತಾದ ವಿಶೇಷ ವಾಟರ್ ಪ್ಲೇ ಸ್ಥಳವಿರುವ ಮನೋರಂಜನಾ ಪಾರ್ಕ್ ಎಂಬಿವುಗಳು ಎಂದರ್ಥ;

(ಬ ಡಿ) "ಕೆಲಸದ ಸ್ಥಳ" ಎಂದರೆ, ಸಂಬಳ ಅಥವಾ ಇತರ ಯಾವುದೇ ಪ್ರತಿಫಲಕ್ಕೆ ಬೇಕಾಗಿ ವ್ಯಕ್ತಿ ಅಥವಾ ವ್ಯಕ್ತಿಗಳು ಕೆಲಸ ಮಾಡುವ ಕೈಗಾರಿಕೆ, ಉತ್ಪಾದನೆ, ವ್ಯಾಪಾರ ಸೇವಾ ಪ್ರಕ್ರಿಯೆ ನಡೆಯುವ ಆವರಣ ಅಥವಾ ಅದರ ಪರಿಸರ ಎಂದರ್ಥ ಆದರೆ ಕಾರ್ಖಾನೆ ಅಥವಾ ವರ್ಕ್‌ಶಾಪ್ ಒಳಪಡುವುದಲ್ಲ;

(ಬ ಇ) "ವರ್ಕ್‌ಶಾಪ್" ಎಂದರೆ, ಸಂಬಳ ಅಥವಾ ಇತರ ಯಾವುದೇ ಪ್ರತಿಫಲಕ್ಕೆ ಬೇಕಾಗಿ ವ್ಯಕ್ತಿ ಅಥವಾ ವ್ಯಕ್ತಿಗಳು ಮಾಡುವ ಯಾವುದೇ ಸಾಮಾಗ್ರಿಯನ್ನು ತಯಾರಿಸುವ, ಸರಿಪಡಿಸುವ, ಮಾರ್ಪಾಟುಗೊಳಿಸುವ, ಅಲಂಕಾರಗೊಳಿಸುವ ಅಥವಾ ಪೂರ್ತಿಗೊಳಿಸುವ ಅಥವಾ ಇತರ ರೀತಿಯಲ್ಲಿ ವಾಣಿಜ್ಯ ತಳಹದಿಯ ಬಳಕೆಗಾಗಿ ಮಾರ್ಪಡಿಸುವ ಸ್ಥಳ ಅಥವಾ ಪರಿಸರ ಅಥವಾ ಅದರ ಆವರಣ ಎಂದರ್ಥ ಆದರೆ ಒಂದು ಕಾರ್ಖಾನೆಯು ಒಳಪಡುವುದಲ್ಲ.

(2) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡುವ ಸ್ಥಳಗಳನ್ನು ಹೊರತುಪಡಿಸಿ ಸ್ತ್ರೀಲಿಂಗದಲ್ಲಿ ಬಳಸಿರುವವುಗಳಲ್ಲಿ ಎಲ್ಲಾ ಲಿಂಗಿಗಳು ಒಳಪಡುವರು.

ಅಧ್ಯಾಯ 2

ಸಾರ್ವಜನಿಕಾರೋಗ್ಯ ಸಮಿತಿಗಳು, ಸಾರ್ವಜನಿಕಾರೋಗ್ಯ ಅಧಿಕಾರಿಗಳು, ಕರ್ತವ್ಯಗಳು ಮತ್ತು ಅಧಿಕಾರಗಳು

3. ರಾಜ್ಯ, ಜಿಲ್ಲಾ, ಸ್ಥಳೀಯ ಸಾರ್ವಜನಿಕಾರೋಗ್ಯ ಸಮಿತಿಗಳು ಮತ್ತು ಸಾರ್ವಜನಿಕಾರೋಗ್ಯ ಅಧಿಕಾರಿಗಳು.—(1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದಕ್ಕಾಗಿ ಸರಕಾರವು ಅಧಿಸೂಚಿಸುವ ದಿನಾಂಕದಿಂದ ಈ ಕೆಳಗಿನ ವ್ಯವಸ್ಥೆಗಳು ಜಾರಿಗೆ ಬರುವುದಾಗಿದೆ, ಅದೇನೆಂದರೆ:—

(i) ರಾಜ್ಯ ಮಟ್ಟದಲ್ಲಿ ಒಂದು ರಾಜ್ಯ ಸಾರ್ವಜನಿಕಾರೋಗ್ಯ ಸಮಿತಿ ಮತ್ತು ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿ ಎಂಬ ಕಾರ್ಯನಿರ್ವಾಹಕ ಅಧಿಕಾರಿ;

(ii) ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಾರ್ವಜನಿಕಾರೋಗ್ಯ ಸಮಿತಿ ಮತ್ತು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿ ಎಂಬ ಕಾರ್ಯನಿರ್ವಾಹಕ ಅಧಿಕಾರಿ;

(iii) ಸ್ಥಳೀಯ ಮಟ್ಟದಲ್ಲಿ ಸ್ಥಳೀಯ ಸಾರ್ವಜನಿಕಾರೋಗ್ಯ ಸಮಿತಿ ಮತ್ತು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿ ಎಂಬ ಕಾರ್ಯನಿರ್ವಾಹಕ ಅಧಿಕಾರಿ.

This is a digitally signed Gazette.
Authenticity may be verified through https://compose.kerala.gov.in/

8

(2) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು,—

(i) ಸಾರ್ವಜನಿಕಾರೋಗ್ಯವನ್ನು ಖಾತ್ರಿಪಡಿಸುವುದಕ್ಕಾಗಿ ರಾಜ್ಯ, ಜಿಲ್ಲಾ, ಸ್ಥಳೀಯ ಮಟ್ಟಗಳಲ್ಲಿ ಅನುಕ್ರಮವಾಗಿ ರಾಜ್ಯ, ಜಿಲ್ಲಾ, ಸ್ಥಳೀಯ ಸಾರ್ವಜನಿಕಾರೋಗ್ಯ ಸಮಿತಿಗಳು ಕಾರ್ಯಕ್ರಮಗಳನ್ನು ರೂಪಿಸತಕ್ಕದ್ದು;

(ii) ಆರೋಗ್ಯ ವಲಯದಲ್ಲಿನ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಆಯಾಯ ಕಾಲಗಳಲ್ಲಿ ಸರಕಾರವು ಆವಿಷ್ಕರಿಸುವ ಕಾರ್ಯಯೋಜನೆಗಳನ್ನು ಆಯಾಯ ಮಟ್ಟಗಳಲ್ಲಿ ಫಲಪ್ರದವಾಗಿ ಜಾರಿಗೊಳಿಸಲಾಗುತ್ತಿದೆ ಎಂಬುದನ್ನು ಸಮಿತಿಗಳು ಅವಲೋಕಿಸತಕ್ಕದ್ದು ಮತ್ತು ಖಾತ್ರಿಪಡಿಸತಕ್ಕದ್ದು;

(iii) ಸಾರ್ವಜನಿಕಾರೋಗ್ಯಕ್ಕೆ ಸಂಬಂಧಿಸಿದ ಚಟುವಟಿಕೆಗಳ ಕುರಿತು ವರದಿಯನ್ನು ಸಾರ್ವಜನಿಕಾರೋಗ್ಯ ಅಧಿಕಾರಿಗಳು ಅತೀ ಕಡಿಮೆಯೆಂದರೆ ಮೂರು ತಿಂಗಳಿಗೊಮ್ಮೆಯಾದರೂ ಸಮಿತಿಯ ಸಮಕ್ಷ ಮಂಡಿಸತಕ್ಕದ್ದು ಮತ್ತು ಆಯಾಯ ಮಟ್ಟಗಳಲ್ಲಿನ ಸಾರ್ವಜನಿಕಾರೋಗ್ಯ ಚಟುವಟಿಕೆಗಳನ್ನು ಸಮಿತಿಯು ಅವಲೋಕಿಸತಕ್ಕದ್ದು.

4. ರಾಜ್ಯ ಸಾರ್ವಜನಿಕಾರೋಗ್ಯ ಸಮಿತಿ ಮತ್ತು ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿ.—(1) ರಾಜ್ಯ ಸಾರ್ವಜನಿಕಾರೋಗ್ಯ ಸಮಿತಿಯಲ್ಲಿ ಈ ಕೆಳಗಿನ ಸದಸ್ಯರುಗಳು ಒಳಗೊಂಡಿರುವರು, ಅದೇನೆಂದರೆ:—

(i) ಆರೋಗ್ಯ ಇಲಾಖಾ ಸಚಿವರು	:	ಅಧ್ಯಕ್ಷರು
(ii) ಕಾರ್ಯದರ್ಶಿ, ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆ	:	ಉಪಾಧ್ಯಕ್ಷರು
(iii) ನಿರ್ದೇಶಕರು, ಆರೋಗ್ಯ ಇಲಾಖೆ	:	ಸದಸ್ಯ ಕಾರ್ಯದರ್ಶಿ
(iv) ಪ್ರಧಾನ ನಿರ್ದೇಶಕರು, ಸ್ಥಳೀಯ ಸ್ವಯಂ ಆಡಳಿತ ಇಲಾಖೆ	:	ಸದಸ್ಯ
(v) ನಿರ್ದೇಶಕರು, ವೈದ್ಯಕೀಯ ಶಿಕ್ಷಣ	:	„
(vi) ನಿರ್ದೇಶಕರು, ಭಾರತೀಯ ಚಿಕಿತ್ಸಾ ಇಲಾಖೆ	:	„
(vii) ನಿರ್ದೇಶಕರು, ಹೋಮಿಯೋಪಥಿ ಇಲಾಖೆ	:	„
(viii) ಆಯುಕ್ತರು, ಆಹಾರ ಭದ್ರತೆ ಇಲಾಖೆ	:	„
(ix) ನಿರ್ದೇಶಕರು, ಕೃಷಿ ಅಭಿವೃದ್ಧಿ ಮತ್ತು ರೈತರ ಕಲ್ಯಾಣ ಇಲಾಖೆ	:	„
(x) ನಿರ್ದೇಶಕರು, ಪಶುಸಂಗೋಪನೆ ಇಲಾಖೆ	:	„
(xi) ನಿರ್ದೇಶಕರು, ಮೀನುಗಾರಿಕೆ ಇಲಾಖೆ	:	„
(xii) ನಿರ್ದೇಶಕರು, ಹೈನುಗಾರಿಕೆ ಇಲಾಖೆ	:	„

(2) ಆರೋಗ್ಯ ಇಲಾಖೆಯ ನಿರ್ದೇಶಕರು ಅವರ ಅಧಿಕೃತ ಹುದ್ದೆಯ ಕಾರಣದಿಂದಾಗಿ ಸಮಿತಿಯ ಸದಸ್ಯ ಕಾರ್ಯದರ್ಶಿ ಮತ್ತು ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿ ಆಗಿರುವರು.

(3) ರಾಜ್ಯ ಸಾರ್ವಜನಿಕಾರೋಗ್ಯ ಸಮಿತಿಯ ಪರವಾಗಿ ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಕೋರುವುದಾದಲ್ಲಿ ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ ಅಡಿಯಲ್ಲಿನ ಶೈಕ್ಷಣಿಕ ಸಂಶೋಧನಾ-ತಾಂತ್ರಿಕ ನೆರವು ಸಂಸ್ಥೆಗಳು ಮತ್ತು ತಜ್ಞರು ಸಾರ್ವಜನಿಕಾರೋಗ್ಯ ಸಮಸ್ಯೆಗಳನ್ನು ಎದುರಿಸುವುದಕ್ಕೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

5. ಜಿಲ್ಲಾ ಸಾರ್ವಜನಿಕಾರೋಗ್ಯ ಸಮಿತಿ ಮತ್ತು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿ.—(1) ಜಿಲ್ಲಾ ಸಾರ್ವಜನಿಕಾರೋಗ್ಯ ಸಮಿತಿಯಲ್ಲಿ ಈ ಕೆಳಗಿನ ಸದಸ್ಯರುಗಳು ಒಳಗೊಂಡಿರುವರು, ಅದೇನೆಂದರೆ:—

(i) ಜಿಲ್ಲಾ ಪಂಚಾಯತ್ ಅಧ್ಯಕ್ಷರು	:	ಅಧ್ಯಕ್ಷರು
(ii) ಜಿಲ್ಲಾಧಿಕಾರಿ	:	ಉಪಾಧ್ಯಕ್ಷರು

This is a digitally signed Gazette.
Authenticity may be verified through https://compose.kerala.gov.in/

9

(iii) ಜಿಲ್ಲಾ ವೈದ್ಯಕೀಯ ಅಧಿಕಾರಿ (ಆರೋಗ್ಯ) : ಸದಸ್ಯ ಕಾರ್ಯದರ್ಶಿ

(iv) ಜಿಲ್ಲೆಯ ಸರಕಾರಿ ಮೆಡಿಕಲ್ ಕಾಲೇಜಿನ ಪ್ರಾಶುಂಪಾಲರು : ಸದಸ್ಯ

(v) ಜಿಲ್ಲಾ ವೈದ್ಯಕೀಯ ಅಧಿಕಾರಿ (ಭಾರತೀಯ ಚಿಕಿತ್ಸೆ) : „

(vi) ಜಿಲ್ಲಾ ವೈದ್ಯಕೀಯ ಅಧಿಕಾರಿ (ಹೋಮಿಯೋಪಥಿ) : „

(vii) ಜಂಟಿ ನಿರ್ದೇಶಕರು, ಸ್ಥಳೀಯ ಸ್ವಯಂ ಆಡಳಿತ ಇಲಾಖೆ : „

(viii) ಸಹಾಯಕ ಆಯುಕ್ತರು, ಆಹಾರ ಭದ್ರತೆ ಇಲಾಖೆ : „

(ix) ಪ್ರಧಾನ ಕೃಷಿ ಅಧಿಕಾರಿ : „

(x) ಜಿಲ್ಲಾ ಪಶು ಸಂಗೋಪನೆ ಅಧಿಕಾರಿ : „

(xi) ಜಿಲ್ಲಾ ಅಧಿಕಾರಿ, ಮೀನುಗಾರಿಕೆ ಇಲಾಖೆ : „

(xii) ಜಿಲ್ಲಾ ಅಧಿಕಾರಿ, ಹೈನುಗಾರಿಕೆ ಇಲಾಖೆ : „

(2) ಜಿಲ್ಲಾ ವೈದ್ಯಕೀಯ ಅಧಿಕಾರಿ (ಆರೋಗ್ಯ) ಅವರ ಪದನಿಮಿತ್ತವಾಗಿ ಸಮಿತಿಯ ಸದಸ್ಯ ಕಾರ್ಯದರ್ಶಿ ಮತ್ತು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿ ಆಗಿರುವರು.

6. ಸ್ಥಳೀಯ ಸಾರ್ವಜನಿಕಾರೋಗ್ಯ ಸಮಿತಿ ಮತ್ತು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿ.—(1) ಗ್ರಾಮ ಪಂಚಾಯತ್ ಮಟ್ಟದಲ್ಲಿನ ಸಾರ್ವಜನಿಕಾರೋಗ್ಯ ಸಮಿತಿಯಲ್ಲಿ ಈ ಕೆಳಗಿನ ಸದಸ್ಯರುಗಳು ಒಳಗೊಂಡಿರುವರು, ಅದೇನೆಂದರೆ:—

(i) ಗ್ರಾಮ ಪಂಚಾಯತ್ ಅಧ್ಯಕ್ಷರು : ಅಧ್ಯಕ್ಷರು

(ii) ಗ್ರಾಮ ಪಂಚಾಯತಿನ ಪ್ರಭಾರವಿರುವ ಆರೋಗ್ಯ ಇಲಾಖೆಯ ವೈದ್ಯಕೀಯ ಅಧಿಕಾರಿ : ಸದಸ್ಯ ಕಾರ್ಯದರ್ಶಿ

(iii) ವೈದ್ಯಕೀಯ ಅಧಿಕಾರಿ (ಭಾರತೀಯ ಚಿಕಿತ್ಸೆ) : ಸದಸ್ಯ

(iv) ವೈದ್ಯಕೀಯ ಅಧಿಕಾರಿ (ಹೋಮಿಯೋಪಥಿ) : „

(v) ಪಂಚಾಯತ್ ಕಾರ್ಯದರ್ಶಿ : „

(vi) ಪಶುಸಂಗೋಪನೆ ಅಧಿಕಾರಿ : „

(vii) ಸರ್ಕಲ್ ಆಹಾರ ಭದ್ರತಾ ಅಧಿಕಾರಿ : „

(viii) ಕೃಷಿ ಅಧಿಕಾರಿ : „

(2) ಮುನಿಸಿಪಾಲಿಟಿ/ಕಾರ್ಪೋರೇಶನ್ ಮಟ್ಟದಲ್ಲಿ, ನಗರ ಪ್ರದೇಶಗಳಲ್ಲಿ ವರ್ಗಾಯಿಸಲ್ಪಟ್ಟು ಲಭಿಸಿದ ಆರೋಗ್ಯ ಇಲಾಖೆಯ ಆಡಿಯಲ್ಲಿನ ಪ್ರತಿಯೊಂದು ಸಂಸ್ಥೆಯನ್ನು ಕೇಂದ್ರೀಕರಿಸಿ ಸಾರ್ವಜನಿಕಾರೋಗ್ಯ ಸಮಿತಿಯನ್ನು ರಚಿಸತಕ್ಕದ್ದು. ಸಂಬಂಧಪಟ್ಟ ಕಾರ್ಪೋರೇಶನಿನ ಮೇಯರ್ ಅಥವಾ ಮುನಿಸಿಪಲ್ ಚೇರ್‌ಪರ್ಸನ್ ಅಧ್ಯಕ್ಷರು ಹಾಗೂ ವರ್ಗಾಯಿಸಲ್ಪಟ್ಟ ಆರೋಗ್ಯ ಸಂಸ್ಥೆಯ ಮುಖ್ಯಸ್ಥರು ಸದಸ್ಯ ಕಾರ್ಯದರ್ಶಿ ಆಗಿರುವರು. ವರ್ಗಾಯಿಸಲ್ಪಟ್ಟ ಅಂತಹ ಸಂಸ್ಥೆಯ ವ್ಯಾಪ್ತಿಯಲ್ಲಿ ಒಳಪಡದ ನಗರ ಪ್ರದೇಶಗಳಲ್ಲಿನ ಸಮಿತಿಯಲ್ಲಿ ಜಿಲ್ಲಾ ವೈದ್ಯಕೀಯ ಅಧಿಕಾರಿ (ಆರೋಗ್ಯ) ಅಧಿಕೃತಗೊಳಿಸುವ ಒಬ್ಬ ಉಪ ಜಿಲ್ಲಾ ವೈದ್ಯಕೀಯ ಅಧಿಕಾರಿ (ಆರೋಗ್ಯ) ಸದಸ್ಯ ಕಾರ್ಯದರ್ಶಿ ಆಗಿರವರು. ಮುನಿಸಿಪಾಲಿಟಿ/ಕಾರ್ಪೋರೇಶನ್ ಮಟ್ಟದಲ್ಲಿನ ಸ್ಥಳೀಯ ಸಾರ್ವಜನಿಕಾರೋಗ್ಯ ಸಮಿತಿಯಲ್ಲಿನ ಇತರ ಸದಸ್ಯರುಗಳು ಈ ಕೆಳಗಿನವರು ಆಗಿರುವರು, ಅದೇನೆಂದರೆ:—

(i) ಮುನಿಸಿಪಲ್/ಕಾರ್ಪೋರೇಶನಿನ ಕಾರ್ಯದರ್ಶಿ;

(ii) ವೈದ್ಯಕೀಯ ಅಧಿಕಾರಿ (ಭಾರತೀಯ ಚಿಕಿತ್ಸೆ);

(iii) ವೈದ್ಯಕೀಯ ಅಧಿಕಾರಿ (ಹೋಮಿಯೋಪಥಿ)

This is a digitally signed Gazette.
Authenticity may be verified through https://compose.kerala.gov.in/

(iv) ಪಶು ಸಂಗೋಪನೆ ಅಧಿಕಾರಿ;

(v) ಸರ್ಕಲ್ ಆಹಾರ ಭದ್ರತಾ ಅಧಿಕಾರಿ;

(vi) ಕೃಷಿ ಅಧಿಕಾರಿ.

(3) ಸ್ಥಳೀಯ ಸಾರ್ವಜನಿಕಾರೋಗ್ಯ ಸಮಿತಿಯ ಸದಸ್ಯ ಕಾರ್ಯದರ್ಶಿಯವರು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರ ಪ್ರಭಾರವನ್ನು ವಹಿಸತಕ್ಕದ್ದು.

7. ಸಾರ್ವಜನಿಕಾರೋಗ್ಯ ಅಧಿಕಾರಿಯ ಕರ್ತವ್ಯಗಳು ಹಾಗೂ ಪ್ರಕಾರ್ಯಗಳು.—(1) ಈ ಅಧಿನಿಯಮದ ಉಪಬಂಧಗಳನ್ನು ರಾಜ್ಯ, ಜಿಲ್ಲಾ, ಸ್ಥಳೀಯ ವಲಯದಲ್ಲಿ ಜಾರಿಗೊಳಿಸುವ ಜವಾಬ್ದಾರಿಯು ಯಥಾಕ್ರಮವಾಗಿ ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೂ ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೂ ಮತ್ತು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೂ ಇರುವುದಾಗಿದೆ.

(2) 1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮ (1994ರ 13ನೇ ಅಧಿನಿಯಮ)ದ ಹಾಗು 1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮ (1994ರ 20ನೇ ಅಧಿನಿಯಮ)ಕ್ಕೆ ಒಳಪಟ್ಟು, ಈ ಅಧಿನಿಯಮದ ಪ್ರಕಾರದ ಚಟುವಟಿಕೆಗಳನ್ನು ಜಾರಿಗೊಳಿಸುವುದಕ್ಕಾಗಿ, ಅಗತ್ಯವೆಂದು ಭಾವಿಸುವಂತಹ ಯಾವುದೇ ಸಲಹೆಯನ್ನು ಜಾರಿಗೊಳಿಸುವ ಅಧಿಕಾರ ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ನೀಡಲು ಸರಕಾರಕ್ಕೆ ಅಧಿಕಾರ ಇರುವುದಾಗಿದೆ.

(3) ರಾಜ್ಯ ಸರಕಾರದ ಮತ್ತು ಸ್ಥಳೀಯ ಸರಕಾರಗಳ ಆರೋಗ್ಯ ವಲಯದಲ್ಲಿನ ವಾರ್ಷಿಕ ಯೋಜನೆಗಳನ್ನು ರಚಿಸುವಾಗ ಸಾರ್ವಜನಿಕಾರೋಗ್ಯಕ್ಕೆ ಸಂಬಂಧಿಸಿದ ಯೋಜನೆ ನಿರ್ದೇಶಗಳನ್ನು ರಾಜ್ಯ, ಜಿಲ್ಲಾ, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗಳು ನೀಡತಕ್ಕದ್ದು. ತಮ್ಮ ಅಧಿಕಾರ ವ್ಯಾಪ್ತಿಯಲ್ಲಿರುವ ಪ್ರದೇಶದ ವಾರ್ಷಿಕ ಆರೋಗ್ಯ ವರದಿಯ ತಳಹದಿಯಲ್ಲಿ ಆಗಿರಬೇಕು ಅಂತಹ ನಿರ್ದೇಶಗಳನ್ನು ನೀಡುವುದು.

(4) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿ ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಮತ್ತು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರು ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಮತ್ತು ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಸರಕಾರಕ್ಕೆ ಎಲ್ಲಾ ತಿಂಗಳೂ ಚಟುವಟಿಕಾ ವರದಿಯನ್ನು ಸಲ್ಲಿಸತಕ್ಕದ್ದು.

(5) ಸಾರ್ವಜನಿಕಾರೋಗ್ಯ ಗುರಿಗಳನ್ನು ಸಾಕ್ಷಾತ್ಕಾರಗೊಳಿಸುವುದಕ್ಕಾಗಿ, ವೆಕ್ಟರ್ ಡೆನ್ಸಿಟಿ ತಪಾಸಣೆ, ರೋಗ ನಿರೀಕ್ಷಣೆ ಕಾರ್ಯಕ್ರಮಗಳು, ನಿಗದಿಪಡಿಸಬಹುದಾದಂತಹ ರೋಗಗಳಿಗಾಗಿ ಸ್ಕ್ರೀನಿಂಗ್, ಕ್ಲಿನಿಕಲ್ ಆಡಿಟ್, ಮರಣ ಆಡಿಟ್‌ಗಳಿಗಿರುವ ಮೆಥಡೋಲಜಿ, ಮಾನದಂಡಗಳು, ಸಾಂಕ್ರಾಮಿಕ ರೋಗಗಳನ್ನು ಪ್ರತಿರೋಧಿಸುವುದಕ್ಕಿರುವ ಮುಂಜಾಗ್ರತಾ ಕ್ರಮಗಳಿಗೆ ಸಂಬಂಧಿಸಿದ ಮಾರ್ಗದರ್ಶಕಗಳನ್ನು ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಸಿದ್ಧಪಡಿಸತಕ್ಕದ್ದು ಹಾಗೂ ಅದನ್ನು ಜಾರಿಗೊಳಿಲಾಗುತ್ತಿದೆಯೆಂದು ಖಾತ್ರಿಪಡಿಸತಕ್ಕದ್ದು.

(6) ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಸಾರ್ವಜನಿಕಾರೋಗ್ಯ ವಿಷಯಗಳಲ್ಲಿ ರಾಜ್ಯದ ಸಾರ್ವಜನಿಕ ಹಾಗೂ ಖಾಸಗಿ ಆರೋಗ್ಯ ಶುಶ್ರೂಷೆ ಸಂಸ್ಥೆಗಳಿಂದ ಮಾಹಿತಿಗಳನ್ನು ಸಂಗ್ರಹಿಸುವ ಅಧಿಕಾರವಿರುವುದಾಗಿದೆ. ಪ್ರಸ್ತುತ ಮಾಹಿತಿಗಳನ್ನು ವಿಶ್ಲೇಷಣೆ ಮಾಡುವುದಕ್ಕಿರುವ ವ್ಯವಸ್ಥೆಗಳನ್ನು ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಸಜ್ಜೀಕರಿಸತಕ್ಕದ್ದು ಮತ್ತು ಅಂತಹ ವಿಶ್ಲೇಷಣೆಯ ತಳಹದಿಯಲ್ಲಿ ಸಾರ್ವಜನಿಕಾರೋಗ್ಯದ ಕುರಿತಿರುವ ನೀತಿಪರ ವಿಷಯಗಳಲ್ಲಿ ಸರಕಾರಕ್ಕೆ ಶಿಫಾರಸನ್ನು ನೀಡುವುದು ಮತ್ತು ಸಾರ್ವಜನಿಕಾರೋಗ್ಯ ವಿಷಯಗಳಿಗೆ ಸಂಬಂಧಿಸಿದ ವ್ಯಕ್ತಿಗಳಿಗೆ, ಸಂಸ್ಥೆಗಳಿಗೆ ಮತ್ತು ಏಜೆನ್ಸಿಗಳಿಗೆ ನಿರ್ದೇಶಗಳನ್ನು ನೀಡುವುದು ಮಾಡತಕ್ಕದ್ದಾಗಿದೆ. ಈ ರೀತಿಯಲ್ಲಿ ಸಂಗ್ರಹಿಸುವ ವೈಯಕ್ತಿಕ ಮಾಹಿತಿಗಳ ಸುರಕ್ಷೆ ಮತ್ತು ಗೌಪ್ಯತೆಯನ್ನು ಸಂಬಂಧಪಟ್ಟ ಎಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಗಳು ಮತ್ತು ಸಮಿತಿಗಳು ಖಾತ್ರಿಪಡಿಸತಕ್ಕದ್ದು.

(7) ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಇಲಾಖೆಯ ಕಾರ್ಯದರ್ಶಿಯವರ ಮೂಲಕ ರಾಜ್ಯದಲ್ಲಿ ಅಥವಾ ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಜಿಲ್ಲಾಧಿಕಾರಿಯವರ ಮೂಲಕ ಜಿಲ್ಲೆಯಲ್ಲಿ ಅಥವಾ ಸ್ಥಳೀಯ ಮಟ್ಟದಲ್ಲಿ ಸಾರ್ವಜನಿಕಾರೋಗ್ಯ ತುರ್ತುಪರಿಸ್ಥಿತಿಯನ್ನು ಘೋಷಿಸಲು ರಾಜ್ಯ ಸರಕಾರದೊಡನೆ ಶಿಫಾರಸು ಮಾಡಬಹುದಾಗಿದೆ. ಸರಕಾರದ ಅನುಮತಿಗೆ ಒಳಪಟ್ಟು ಜಿಲ್ಲಾ, ಸ್ಥಳೀಯ ಮಟ್ಟದಲ್ಲಿ ಜಿಲ್ಲಾಧಿಕಾರಿಯವರಿಗೆ ಸಾರ್ವಜನಿಕಾರೋಗ್ಯ ತುರ್ತು ಪರಿಸ್ಥಿತಿಯನ್ನು ಘೋಷಿಸಬಹುದಾಗಿದೆ.

(8) ಈ ಅಧಿನಿಯಮದ ಅಡಿಯಲ್ಲಿ ಅಧಿಸೂಚಿಸಲಾದ ರೋಗಗಳ ಅಥವಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಒಳಪಟ್ಟ ರೋಗಗಳ ಚಿಕಿತ್ಸೆ ಅಥವಾ ಪ್ರತಿರೋಧಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಪ್ರೋಟೋಕಾಲ್‌ನ ಅಗತ್ಯತೆಯು ಮನವರಿಕೆಯಾದಲ್ಲಿ ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು, ಸರಕಾರವು ನಿರ್ಧರಿಸುವ ತಜ್ಞರ ನೆರವಿನೊಂದಿಗೆ ಶಿಫಾರಸನ್ನು ಸಿದ್ಧಪಡಿಸಿ ಸರಕಾರಕ್ಕೆ ಸಲ್ಲಿಸತಕ್ಕದ್ದು. ಸರಕಾರವು ನಿರ್ದೇಶಿಸುವ ಪ್ರಸ್ತುತ ಪ್ರೋಟೋಕಾಲ್ ಅನ್ನು ಎಲ್ಲಾ ಸರಕಾರಿ ಮತ್ತು ಖಾಸಗಿ ಆರೋಗ್ಯ ಶುಶ್ರೂಷೆ ಒದಗಿಸುವವರು ಮತ್ತು ಆರೋಗ್ಯ ಸಂರಕ್ಷಣೆ ಸಂಸ್ಥೆಗಳು ಪಾಲಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

11

(9) ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ರೋಗ ವೀಕ್ಷಣೆ, ಸಾಂಕ್ರಾಮಿಕ ರೋಗಗಳ ತಡೆ ಮತ್ತು ನಿಯಂತ್ರಣೆ, ಜೀವನಶೈಲಿ ರೋಗಗಳು, ಕಾಲಾಕಾಲಗಳಲ್ಲಿ ಸರಕಾರವು ಅಧಿಸೂಚಿಸುವ ಇತರ ಯಾವುದೇ ರೋಗಗಳು, ಆರೋಗ್ಯ ಬೆದರಿಕೆಗಳು ಇತ್ಯಾದಿಗಳಿಗಾಗಿ ಸಾರ್ವಜನಿಕರು ಪಾಲಿಸಬೇಕಾದ ಆರೋಗ್ಯ ಮಾನದಂಡಗಳನ್ನು ನಿರ್ಧರಿಸುವುದಕ್ಕಿರುವ ಶಿಫಾರಸನ್ನು ರಾಜ್ಯ ಸಾರ್ವಜನಿಕಾರೋಗ್ಯ ಸಮಿತಿಗೆ ನೀಡತಕ್ಕದ್ದು.

8. ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ನೆರವು ನೀಡುವಿಕೆ.—(1) ಈ ಅಧಿನಿಯಮದ ಅಡಿಯಲ್ಲಿನ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ನೆರವು ನೀಡುವುದಕ್ಕಾಗಿ ಹೆಲ್ತ್ ಇನ್ಸ್‌ಪೆಕ್ಟರ್ ಹಾಗೂ ಇತರ ಸಿಬ್ಬಂದಿಗಳು ಇರತಕ್ಕದ್ದಾಗಿದೆ:

(2) ಸ್ಥಳೀಯ, ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಗಳಿಗೆ ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರ್ ದರ್ಜೆಗಿಂತ ಕೆಳಗಲ್ಲದ ಒಬ್ಬ ಅಧಿಕಾರಿಯವರನ್ನು ಈ ಅಧಿನಿಯಮದ ಅಡಿಯಲ್ಲಿನ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲು ಲಿಖಿತ ಮುಖೇನ ಅಧಿಕೃತಗೊಳಿಸಬಹುದಾಗಿದೆ, ಅದೇನೆಂದರೆ:—

(i) ತಪಾಸಣೆಗಳನ್ನು ನಡೆಸುವುದು;

(ii) ನೋಟೀಸು ನೀಡುವುದು;

(iii) ಕಾನೂನುಕ್ರಮಗಳನ್ನು ಕೈಗೊಳ್ಳುವುದು; ಹಾಗೂ

(iv) ಸಾರ್ವಜನಿಕಾರೋಗ್ಯ ಅಧಿಕಾರಿಯವರು ನಿರ್ದೇಶಿಸುವ ಇತರ ಕ್ರಮಗಳನ್ನು ಕೈಗೊಳ್ಳುವುದು.

(3) (2)ನೇ ಉಪ-ವಿಭಾಗ ಪ್ರಕಾರ ನೀಡುವ ಇಂತಹ ನಿರ್ದೇಶಗಳನ್ನು ಸಾರ್ವಜನಿಕಾರೋಗ್ಯ ಅಧಿಕಾರಿಯವರ ಮೇಲ್ನೋಟ ಹಾಗೂ ನಿಯಂತ್ರಣೆಗೆ ಒಳಪಟ್ಟು ನಿಗದಿಪಡಿಸಬಹುದಾದ ಪ್ರಕಾರ ನಿರ್ವಹಿಸಲು ಪ್ರಸ್ತುತ ಅಧಿಕಾರಿಯವರು ಬಾಧ್ಯಸ್ಥರಾಗಿರುವರು.

9. ತುರ್ತು ಪರಿಸ್ಥಿತಿಗಳಲ್ಲಿ ತಾತ್ಕಾಲಿಕವಾಗಿ ಹೆಚ್ಚುವರಿ ಸಾರ್ವಜನಿಕಾರೋಗ್ಯ ಅಧಿಕಾರಿಗಳ ನೇಮಕಾತಿ.—ಈ ಕೆಳಗಿನ ಪರಿಸ್ಥಿತಿಗಳಲ್ಲಿ ನಿಗದಿತ ಕಾಲಾವಧಿಯವರೆಗೆ ಒಂದು ಅಥವಾ ಅದಕ್ಕಿಂತ ಹೆಚ್ಚು ವೈದ್ಯಕೀಯ ಅಧಿಕಾರಿಗಳನ್ನು ಹೆಚ್ಚುವರಿ ಸಾರ್ವಜನಿಕಾರೋಗ್ಯ ಅಧಿಕಾರಿಗಳನ್ನಾಗಿ ತಾತ್ಕಾಲಿಕವಾಗಿ ನೇಮಿಸಲು ರಾಜ್ಯ ಮತ್ತು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಗಳಿಗೆ ಅಧಿಕಾರವಿರುವುದಾಗಿದೆ. ಅದೇನೆಂದರೆ:—

(i) ಅಧಿಸೂಚಿತ ಸೋಂಕುರೋಗ ಉಂಟಾದಲ್ಲಿ ಅಥವಾ ಅದು ಹರಡಬಹುದೆಂಬ ಬೆದರಿಕೆ ಉಂಟಾದಲ್ಲಿ;

(ii) ಸಾಂಕ್ರಾಮಿಕ ರೋಗಗಳು ಹರಡುವುದೋ ಅಲ್ಲದಿದ್ದಲ್ಲಿ ಅದಕ್ಕಿರುವ ಬೆದರಿಕೆಯು ಅಸ್ತಿತ್ವದಲ್ಲಿರುವಾಗ;

(iii) ವಿಪತ್ತುಗಳು ಅಥವಾ ಅಸಾಮಾನ್ಯ ಮರಣಗಳು ಉಂಟಾದಲ್ಲಿ;

(iv) ಒಂದು ಪ್ರದೇಶದಲ್ಲಿ ಬೃಹತ್ ಮಟ್ಟದಲ್ಲಿ ಜನರು ಗುಂಪುಗೂಡುವ ಪರಿಸ್ಥಿತಿಯಲ್ಲಿ;

(v) ಸೋಂಕು ರೋಗಗಳನ್ನು ಪ್ರತಿರೋಧಿಸುವುದಕ್ಕಾಗಿ, ಅದರ ಕಾರಣಗಳನ್ನು ಕಂಡುಹಿಡಿಯುವುದಕ್ಕಾಗಿ ಅಲ್ಲದಿದ್ದಲ್ಲಿ ಪ್ರಸ್ತುತ ಕಾರಣಗಳನ್ನು ತಡೆಯುವುದಕ್ಕಾಗಿ;

(vi) ಇಂತಹ ಹೆಚ್ಚುವರಿ ಸಾರ್ವಜನಿಕಾರೋಗ್ಯ ಅಧಿಕಾರಿಗಳನ್ನು ನೇಮಿಸುವುದು ಅಗತ್ಯವೆಂದು ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಭಾವಿಸುವಂತಹ ಇತರ ತುರ್ತು ಪರಿಸ್ಥಿತಿಗಳಲ್ಲಿ.

10. ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರ ಅಧಿಕಾರಗಳು.—ನಿಗದಿಪಡಿಸಬಹುದಾದ ಅಂತಹ ಷರತ್ತುಗಳಿಗೆ ಒಳಪಟ್ಟು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಸ್ಥಳೀಯ ಮಟ್ಟದಲ್ಲಿನ ಎಲ್ಲಾ ಅಧಿಕಾರಗಳೂ ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ರಾಜ್ಯಾದ್ಯಂತವೂ ಇರುವುದಾಗಿದೆ. ಜಿಲ್ಲಾ, ಸ್ಥಳೀಯ ಮಟ್ಟಗಳಲ್ಲಿ ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಪ್ರತ್ಯಕ್ಷವಾಗಿ ಅಥವಾ ಜಿಲ್ಲಾ, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗಳ ಮೂಲಕವೋ ಈ ಅಧಿಕಾರವನ್ನು ವಿನಿಯೋಗಿಸಬಹುದಾಗಿದೆ, ಅಲ್ಲದೆ,—

(ಎ) ಅದರ ಹತೋಟಿಯಲ್ಲಿರುವ ಯಾವುದೇ ಸಾರ್ವಜನಿಕಾರೋಗ್ಯ ಸಂಸ್ಥೆಯ ಒಂದು ಅಥವಾ ಒಂದಕ್ಕಿಂತ ಹೆಚ್ಚು ಸಿಬಂದಿಗಳನ್ನು ಇತರ ಯಾವುದೇ ಸಾರ್ವಜನಿಕಾರೋಗ್ಯ ಸಂಸ್ಥೆಯ ಪ್ರದೇಶಕ್ಕಾಗಿ ತಾತ್ಕಾಲಿಕ ಹೊಣೆಗಾರಿಕೆಗಾಗಿ ನಿಯೋಜಿಸುವ;

This is a digitally signed Gazette.
Authenticity may be verified through https://compose.kerala.gov.in/

(ಬ) ರಾಜ್ಯದ ಸಾರ್ವಜನಿಕಾರೋಗ್ಯ ಮಾನದಂಡಗಳ ಕುರಿತಿರುವ ಮಾರ್ಗದರ್ಶಕಗಳನ್ನು ಅಭಿವೃದ್ಧಿಪಡಿಸುವ ಮತ್ತು ಅದನ್ನು ಜಾರಿಗೊಳಿಸುವುದಕ್ಕಾಗಿ ಅವಶ್ಯಕವಾದ ಆದೇಶಗಳನ್ನು ಜಾರಿಗೊಳಿಸುವ; ಅಲ್ಲದೆ

(ಸಿ) ಉಪದ್ರವ ಇಲ್ಲದಾಗಿಸುವಿಕೆ, ಆರೋಗ್ಯ ಅಪಾಯಗಳು ಎಂಬಿವುಗಳಿಗೆ ಸಂಬಂಧಿಸಿದ ನಿಯಮಗಳನ್ನು, ರೆಗ್ಯುಲೇಷನುಗಳನ್ನು, ನಿಯಂತ್ರಣೆಗಳನ್ನು ಮತ್ತು ಮಾರ್ಗದರ್ಶಕಗಳನ್ನು ಜಾರಿಗೊಳಿಸುವ, ಅಧಿಕಾರ ಇರುವುದಾಗಿದೆ.

11. ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರ ಅಧಿಕಾರಗಳು.—ನಿಗದಿಪಡಿಸಬಹುದಾದ ಅಂತಹ ಷರತ್ತುಗಳಿಗೆ ಒಳಪಟ್ಟು, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಸ್ಥಳೀಯ ಮಟ್ಟದಲ್ಲಿನ ಎಲ್ಲಾ ಅಧಿಕಾರಗಳೂ ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಜಿಲ್ಲಾದ್ಯಂತವೂ ಇರುವುದಾಗಿದೆ. ಜಿಲ್ಲಾ, ಸ್ಥಳೀಯ ಮಟ್ಟಗಳಲ್ಲಿ ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಪ್ರತ್ಯಕ್ಷವಾಗಿ ಅಥವಾ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗಳ ಮೂಲಕವೋ ಈ ಅಧಿಕಾರವನ್ನು ವಿನಿಯೋಗಿಸಬಹುದಾಗಿದೆ, ಅಲ್ಲದೆ,—

(ಎ) ಜಿಲ್ಲೆಗಳಲ್ಲಿ ಸಾರ್ವಜನಿಕಾರೋಗ್ಯ ಚಟುವಟಿಕೆಗಳಿಗಾಗಿ ಮಾರ್ಗದರ್ಶಕಗಳನ್ನು ನೀಡುವ, ಮೇಲ್ನೋಟ ವಹಿಸುವ, ನಿಯಂತ್ರಿಸುವ ಮತ್ತು ಜಾರಿಗೊಳಿಸುವ;

(ಬಿ) ರೋಗಗಳನ್ನು ತಡೆಯುವುದಕ್ಕೆ, ಸಾರ್ವಜನಿಕಾರೋಗ್ಯವನ್ನು ಉತ್ತಮಗೊಳಿಸುವುದಕ್ಕೆ ಅಗತ್ಯವೆಂದು ಭಾವಿಸುವ ಸಾರ್ವಜನಿಕಾರೋಗ್ಯ ಪರಿಶೋಧನೆಗಳನ್ನು ಕಾಲಾಕಾಲಗಳಲ್ಲಿ ನಡೆಸುವ;

(ಸಿ) ಎಲ್ಲಾ ವರ್ಗದ ಸೋಂಕುರೋಗಗಳು, ಅಧಿಸೂಚಿಸಬಹುದಾದ ಸೋಂಕುರೋಗಗಳು, ಆರೋಗ್ಯ ಅಪಾಯಗಳು ಇತ್ಯಾದಿಗೆ ಸಂಬಂಧಿಸಿ ತನಿಖೆ ಹಾಗೂ ಪರಿಶೋಧನೆ ನಡೆಸುವ; ಅಲ್ಲದೆ

(ಡಿ) ಅವಶ್ಯಕವೆಂದು ತೋರುವ ಮಾರ್ಗದರ್ಶಕಗಳನ್ನು ಕಾಲಾಕಾಲಗಳಲ್ಲಿ ಜಾರಿಗೊಳಿಸುವ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ನೀಡುವ, ಅಧಿಕಾರ ಇರುವುದಾಗಿದೆ.

12. ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರ ಅಧಿಕಾರಗಳು.—(1) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಅವರ ಅಧಿಕಾರ ವ್ಯಾಪ್ತಿಯೊಳಗಿನ ಆರೋಗ್ಯ ಸಂರಕ್ಷಣೆ ಸಂಸ್ಥೆಗಳಲ್ಲಿ ಸಾರ್ವಜನಿಕಾರೋಗ್ಯ ಮಾರ್ಗದರ್ಶಕಗಳನ್ನು ಮತ್ತು ನಿಯಮಗಳನ್ನು ಪಾಲಿಸಲಾಗುತ್ತಿದೆಯೆಂದು ಖಾತ್ರಿಪಡಿಸತಕ್ಕದ್ದು.

(2) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಯಾವುದೇ ವ್ಯಕ್ತಿಯೊಡನೆ ಅಥವಾ ಸಂಸ್ಥೆಯೊಂದಿಗೆ, ನಿಗದಿಪಡಿಸಬಹುದಾದ ಅಂತಹ ಕಾಲಾವಧಿಯೊಳಗೆ ಯಾವುದೇ ಕೆಲಸಗಳನ್ನು ನಡೆಸುವುದಕ್ಕೋ ನಿಲ್ಲಿಸುವುದಕ್ಕೋ ಅಲ್ಲದಿದ್ದಲ್ಲಿ ಸಾರ್ವಜನಿಕಾರೋಗ್ಯವನ್ನು ಪ್ರೋತ್ಸಾಹಿಸುವುದಕ್ಕಾಗಿ ಅವಶ್ಯಕವೆಂದು ಭಾವಿಸುವ ಯಾವುದೇ ಸ್ಥಿತಿಯಲ್ಲಿ ಬದಲಾವಣೆ ತರಲು ನಿರ್ದೇಶ ನೀಡುವ ಅಧಿಕಾರ ಇರುವುದಾಗಿದೆ. ಆದೇಶದಲ್ಲಿ ನಿರ್ದಿಷ್ಟಪಡಿಸಿರುವಂತಹ ಕಾಲಾವಧಿಯೊಳಗೆ ಆ ವ್ಯಕ್ತಿ ಅಥವಾ ಸಂಸ್ಥೆಯು ಆ ರೀತಿ ಮಾಡಲು ವಿಫಲಗೊಂಡಲ್ಲಿ, ಸಾರ್ವಜನಿಕಾರೋಗ್ಯ ಅಧಿಕಾರಿಯವರು ಸಂಬಂಧಪಟ್ಟ ಸ್ಥಳೀಯಾಡಳಿತ ಸಂಸ್ಥೆಗೆ ತಿಳಿಸತಕ್ಕದ್ದು ಮತ್ತು ಸ್ಥಳೀಯಾಡಳಿತ ಸಂಸ್ಥೆಯು ಆ ಕೆಲಸಗಳನ್ನು ನಡೆಸುವುದೋ ನಿಲ್ಲಿಸುವುದೋ ಬದಲಾವಣೆಯನ್ನು ತರುವುದೋ ಮಾಡತಕ್ಕದ್ದು ಮತ್ತು ಅದಕ್ಕುಂಟಾಗುವ ಖರ್ಚುಗಳನ್ನು ಸಂಬಂಧಪಟ್ಟ ವ್ಯಕ್ತಿಯಿಂದ ಅಥವಾ ಸಂಸ್ಥೆಯಿಂದ, ನಿಗದಿಪಡಿಸಬಹುದಾದ ಪ್ರಕಾರ ವಸೂಲಿ ಮಾಡಬಹುದಾಗಿದೆ.

(3) ಸಾರ್ವಜನಿಕಾರೋಗ್ಯ ವಿಷಯಗಳಲ್ಲಿ, ಈ ಅಧಿನಿಯಮದ ಅಡಿಯಲ್ಲಿ ಉಪಬಂಧಿಸಿದ ರೀತಿಯಲ್ಲಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಅವರಿಗೆ ಅನ್ವಯವಾದ ಅಂತಹ ಪ್ರಕಾರ್ಯಗಳನ್ನು ನಿರ್ವಹಿಸುವುದು ಮತ್ತು ಕರ್ತವ್ಯಗಳನ್ನು ನೆರವೇರಿಸುವುದು ಮಾಡತಕ್ಕದ್ದು, ಅಲ್ಲದೆ,—

(i) ಈ ಅಧಿನಿಯಮದ ಪ್ರಕಾರ ಜಾರಿಗೊಳಿಸಿದ ಯಾವುದೇ ಆದೇಶವನ್ನು ಪಾಲಿಸುವುದರಲ್ಲಿ ಯಾರಾದರೂ ನ್ಯೂನತೆ ಎಸಗಿದ್ದಲ್ಲಿ ದಂಡ ವಿಧಿಸುವ; ಅಥವಾ

(ii) ಈ ಅಧಿನಿಯಮದ ಅಡಿಯ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳ ಅಥವಾ ರಾಜಿಗೊಳಿಸಬಹುದಾಗಿ ಘೋಷಿಸಿರುವ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಅಪರಾಧವೆಸಗಿದ್ದಲ್ಲಿ ಅದನ್ನು ರಾಜಿಗೊಳಿಸುವ, ಅಧಿಕಾರ ಇರುವುದು.

(4) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಈ ಅಧಿನಿಯಮದಲ್ಲಿ ಅಥವಾ ಅದರ ಅಡಿಯಲ್ಲಿನ ನಿಯಮಗಳಲ್ಲಿ ವಿಶೇಷವಾಗಿ ನೀಡಿರುವ ಎಲ್ಲಾ ಅಧಿಕಾರಗಳನ್ನು ವಿನಿಯೋಗಿಸತಕ್ಕದ್ದು ಮತ್ತು ಎಲ್ಲಾ ಕರ್ತವ್ಯಗಳನ್ನು ನೇರವೇರಿಸತಕ್ಕದ್ದು ಅಲ್ಲದೆ, ಈ ಅಧಿನಿಯಮದ ಉಪಬಂಧಗಳಿಗೆ ಹಾಗೂ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳಿಗೆ ಒಳಪಟ್ಟು, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯೆಂಬ ನೆಲೆಯಲ್ಲಿ ಅವಶ್ಯಕವಾದ ಎಲ್ಲಾ ಕೆಲಸಗಳನ್ನು ಜಾರಿಗೊಳಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

13

(5) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಅಥವಾ ಆತನು ಅಧಿಕೃತಗೊಳಿಸಿರುವ ಒಬ್ಬ ಉದ್ಯೋಗಸ್ಥನಿಗೆ ವ್ಯಕ್ತಿಗಳ ಸುರಕ್ಷೆ ಮತ್ತು ಸೌಖ್ಯತೆಗೆ ಭಂಗವಾಗದಂತೆ,—

(ಎ) ಯಾವುದೇ ರೀತಿಯ ಉಪದ್ರವ ನಡೆದ ಅಥವಾ ಮುಂದುವರಿಯುತ್ತಿರುವ ಯಾವುದೇ ಸ್ಥಳಕ್ಕೆ;

(ಬ) ಅಸಹ್ಯಕರ ವ್ಯಾಪಾರ ನಡೆಸುವ ಯಾವುದೇ ಸ್ಥಳಕ್ಕೆ;

(ಸಿ) ಆಹಾರ ಪದಾರ್ಥಗಳನ್ನು, ಕುಡಿಯುವ ನೀರನ್ನು ಒಳಗೊಂಡ ಪಾನೀಯಗಳನ್ನು ತಯಾರಿಸುವ, ನಿರ್ಮಿಸುವ, ಸಂಗ್ರಹಿಸುವ, ಮಾರುವ, ಬಡಿಸುವ ಅಥವಾ ವಿತರಣೆಮಾಡುವುದಕ್ಕೆ ಇರುವ ಯಾವುದೇ ಸ್ಥಳಕ್ಕೆ;

(ಡಿ) ಮಲಿನಗೊಂಡ ಸನ್ನಿವೇಶಗಳ ಅಥವಾ ವೈರಾಣು ವಾಹಕಗಳ ಅಥವಾ ವೈರಾಣುಗಳ ಹೆಚ್ಚಳ ಒಳಗೊಂಡು, ಯಾವುದೇ ಸಾಂಕ್ರಾಮಿಕ ರೋಗ ಹರಡಲು ಸಹಾಯಕವಾದ ಸನ್ನಿವೇಶಗಳಿರುವ ಯಾವುದೇ ಸ್ಥಳಕ್ಕೆ;

(ಇ) ಸಾರ್ವಜನಿಕಾರೋಗ್ಯ ಸಂರಕ್ಷಣೆಗೆ ಅವಶ್ಯಕವೆಂದು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಮನವರಿಕೆಯಾಗುವ ಯಾವುದೇ ಸ್ಥಳಕ್ಕೆ ಪ್ರವೇಶಿಸಿ ಪರಿಶೋಧಿಸಬಹುದಾಗಿದೆ.

(6) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅಥವಾ ಆತನಿಂದ ಲಿಖಿತ ಮುಖೇನ ಅಧಿಕೃತಗೊಳಿಸಲ್ಪಟ್ಟ ಒಬ್ಬ ಉದ್ಯೋಗಸ್ಥನಿಗೆ ಮಲಿನವಾದ ಅಥವಾ ಕೊಳೆತ ಅಥವಾ ಹಾಳಾದುದೆಂದು ಅನುಮಾನಿಸಬಹುದಾದ ಆಹಾರ ಅಥವಾ ಪಾನೀಯಗಳನ್ನು ಪತ್ತೆ ಹಚ್ಚಿದಲ್ಲಿ, ಆ ವಿಷಯದಲ್ಲಿ ಕ್ರಮಕೈಗೊಳ್ಳಲು ಈ ಕೆಳಗಿನ ಅಧಿಕಾರಗಳು ಇರುವುದಾಗಿದೆ, ಅದೇನೆಂದರೆ:—

(i) ಆಹಾರ ಮತ್ತು ಪಾನೀಯಗಳನ್ನು ಪಾಕ ಮಾಡುವ, ಜೋಪಾನವಾಗಿಡುವ ಮತ್ತು ವಿತರಣೆ ಮಾಡಬೇಕಾದ ಸನ್ನಿವೇಶಗಳಲ್ಲಿ ವಿಶೇಷವಾಗಿ ಮಲಿನಗೊಂಡ ಸನ್ನಿವೇಶ, ಅನುಮತಿಸಲಾಗದ ರಾಸಾಯನಿಕ ವಸ್ತುಗಳ ಸಾನ್ನಿಧ್ಯ, ಆಹಾರ ಮತ್ತು ಪಾನೀಯಗಳನ್ನು ನಿರ್ವಹಿಸುವ ವ್ಯಕ್ತಿಗಳ ಅನೈರ್ಮಲ್ಯ, ಆಹಾರ ಭದ್ರತೆ ಕಾನೂನು ಪ್ರಕಾರದ ಮೆಡಿಕಲ್ ಸರ್ಟಿಫಿಕೇಟ್, ಲೈಸೆನ್ಸ್ ಇತ್ಯಾದಿ ಪ್ರಮಾಣ ಪತ್ರಗಳ ಕೊರತೆ, ಇತ್ಯಾದಿ ಸನ್ನಿವೇಶಗಳಿಂದಾಗಿ ರೋಗಗಳು ಹರಡಲು ಅಥವಾ ಸಾರ್ವಜನಿಕಾರೋಗ್ಯ ಸಮಸ್ಯೆಗಳು ಉಂಟಾಗಲು ಸಾಧ್ಯತೆಯಿದೆಯೆಂದು ಮನಗಂಡಲ್ಲಿ ಆ ಸಂಸ್ಥೆಯನ್ನು ಮುಚ್ಚುವುದು ಒಳಗೊಂಡ ಕ್ರಮಗಳನ್ನು ಕೈಗೊಳ್ಳಲು ಅಧಿಕಾರ ಇರುವುದಾಗಿದೆ;

(ii) ಆಹಾರ ಮತ್ತು ಪಾನೀಯಗಳ ಮಾದರಿಯನ್ನು ಸಂಗ್ರಹಿಸಿ ಪರಿಶೋಧಿಸಬೇಕಾದ ಸನ್ನಿವೇಶಗಳಲ್ಲಿ ಸಂಬಂಧಪಟ್ಟ ಆಹಾರ ಭದ್ರತಾ ಅಧಿಕಾರಿಯ ಸೇವೆಯನ್ನು ಕೋರಬಹುದಾಗಿದೆ. ಆಹಾರ ಭದ್ರತಾ ಅಧಿಕಾರಿಯು ಮಾದರಿಯನ್ನು ಸಂಗ್ರಹಿಸುವ ಸಮಯದವರೆಗೆ ಅದನ್ನು ಹಾಗೆಯೇ ಜೋಪಾನವಾಗಿಡುವುದಕ್ಕಿರುವ ಕ್ರಮಗಳನ್ನು ನಿಗದಿಪಡಿಸಬಹುದಾದ ನಿಬಂಧನೆಗಳ ಪ್ರಕಾರ ಕೈಗೊಳ್ಳಲು ಮತ್ತು ಅದನ್ನು ನಾಶಪಡಿಸುವುದಕ್ಕಿರುವ ಸಂಸ್ಥೆಯ ಮಾಲಿಕರ ಅಥವಾ ಇತರರ ಪ್ರಯತ್ನಗಳನ್ನು ತಡೆಯಲು ಅಧಿಕಾರ ಇರುವುದಾಗಿದೆ;

(iii) ಮಾದರಿ ಸಂಗ್ರಹಣೆಯು ಸಾಧ್ಯವಾಗದ ಅಥವಾ ಗುಣಮಟ್ಟವನ್ನು ಖಾತ್ರಿಪಡಿಸುವವರೆಗೆ ಪ್ರಸ್ತುತ ಆಹಾರ ಮತ್ತು ಪಾನೀಯಗಳು ಮಾರಲ್ಪಡುತ್ತಿಲ್ಲವೆಂದು ಖಾತ್ರಿಪಡಿಸಲು ಸಾಧ್ಯವಾಗದಂತಹ ಸನ್ನಿವೇಶಗಳಲ್ಲಿ, ಸಾರ್ವಜನಿಕಾರೋಗ್ಯ ಸಮಸ್ಯೆಗಳು ಉಂಟಾಗುವುದನ್ನು ತಡೆಯುವುದು ಅವಶ್ಯಕವಾಗುವುದಾದಲ್ಲಿ, ಹಳತಾದ ಅಥವಾ ಹಾಳಾದುದೆಂದು ಅನುಮಾನಿಸುವ ಆಹಾರ ಮತ್ತು ಪಾನೀಯಗಳನ್ನು ನಾಶಪಡಿಸುವ ಅಧಿಕಾರ ಇರುವುದಾಗಿದೆ. ಆದರೆ ಈ ರೀತಿಯಲ್ಲಿ ಕ್ರಮವನ್ನು ಕೈಗೊಳ್ಳುವುದಕ್ಕಿಂತ ಮೊದಲು ನಿಯಮ ಪ್ರಕಾರ ಮಹಸರ್ ಅನ್ನು ಸಿದ್ಧಪಡಿಸಬೇಕು ಮತ್ತು ಸಾರ್ವಜನಿಕ ಅಂಗೀಕಾರವಿರುವ ಇಬ್ಬರ ಸಾಕ್ಷಿಗಳ ಉಪಸ್ಥಿತಿಯನ್ನು ಖಾತ್ರಿಪಡಿಸಿ, ಅವರ ಉಪಸ್ಥಿತಿಯಲ್ಲಿ ಸಾಕ್ಷ್ಯವನ್ನು ಲಿಖಿತ ಮುಖೇನ ಖಾತ್ರಿಪಡಿಸತಕ್ಕದ್ದು.

(7) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಅಥವಾ ಆತನು ಅಧಿಕೃತಗೊಳಿಸಿದ ಅಧಿಕಾರಿಗೆ, ವ್ಯಕ್ತಿಗಳ ಸುರಕ್ಷೆ ಮತ್ತು ಸೌಖ್ಯತೆಗೆ ಭಂಗವಾಗದಂತೆ,—

(ಎ) ಯಾವುದೇ ಸ್ಥಳವನ್ನೋ ಕಾರ್ಖಾನೆಯನ್ನೋ ವರ್ಕ್‌ಶಾಪ್ಪನ್ನೋ ಕೆಲಸದ ಸ್ಥಳವನ್ನೋ ಆಫೀಸನ್ನೋ ಸಿನಿಮಾ ಹಾಲನ್ನೋ ಆಸ್ಪತ್ರೆಯನ್ನೋ ಅಥವಾ ಆತನಿಗೆ ಅಗತ್ಯವೆಂದು ತೋರುವಂತಹ ಇತರ ಸ್ಥಳವನ್ನೋ ಸಾಂಕ್ರಾಮಿಕ ರೋಗಗಳು ವರದಿಯಾಗಿರುವ ವಸತಿ ಸ್ಥಳಗಳು ಒಳಗೊಂಡು ಅಥವಾ ಮಲಿನವಾಗಬಹುದೆಂದು ಭಾವಿಸುವಂತಹ ಇತರ ಯಾವುದೇ ಸ್ಥಳವನ್ನೋ ಮುನ್ಸೂಚನೆ ನೀಡದೆಯೂ ಯಾವಾಗ ಬೇಕಾದರೂ ಯಾವುದೇ ಸಹಾಯವಿಲ್ಲದೆ ಪರಿಶೋಧಿಸಬಹುದಾಗಿದೆ;

This is a digitally signed Gazette.
Authenticity may be verified through https://compose.kerala.gov.in/

(ಬ) ಅಂತಹ ಸ್ಥಳದಿಂದಾಚೆಗೆ ಅಂತಹ ರೋಗ ಹರಡುವುದನ್ನು ತಡೆಯುವುದಕ್ಕಾಗಿರುವಂತಹ ಕ್ರಮಗಳನ್ನು ಕೈಗೊಳ್ಳಬಹುದಾಗಿದೆ; ಅಲ್ಲದೆ

(ಸಿ) ಯಾವುದೇ ಸ್ಥಳದಿಂದಲೋ ಆವರಣದಿಂದಲೋ ಯುಕ್ತವೆಂದು ಕಂಡಲ್ಲಿ ಆಹಾರದ, ನೀರಿನ ಅಥವಾ ಯಾವುದೇ ಪದಾರ್ಥದ ಮಾದರಿಗಳನ್ನು ವಿಶ್ಲೇಷಣೆಗಾಗಿ ತೆಗೆಯಬಹುದಾಗಿದೆ.

(8) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿ ಅಥವಾ ಅಧಿಕೃತಗೊಳಿಸಿದ ಅಧಿಕಾರಿ (7)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ಯಾವುದೇ ಕ್ರಮಗಳನ್ನು ಕೈಗೊಳ್ಳುವಾಗ, ಕ್ರಮ ಪೂರ್ತಿಯಾದ ಅನಂತರ ಪರಮಾವಧಿ ಇಪ್ಪತ್ತನಾಲ್ಕು ಗಂಟೆಯೊಳಗೆ, ಆ ರೀತಿ ಕೈಗೊಂಡ ಕ್ರಮಗಳ ಕುರಿತು ಒಂದು ಮಾದರಿಯನ್ನು, ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೂ ಸಂಬಂಧಪಟ್ಟ ಸ್ಥಳೀಯಾಡಳಿತಾ ಸಂಸ್ಥೆಗೂ ನಿಗದಿತ ಮಾದರಿಯಲ್ಲಿ ನೀಡತಕ್ಕದ್ದು.

(9) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿ ಅಥವಾ ಆತನು ಅಧಿಕೃತಗೊಳಿಸಿದ ಅಧಿಕಾರಿಯು,—

(ಎ) ಈ ಅಧಿನಿಯಮದ್ದೋ ಅದರ ಪ್ರಕಾರ ರಚಿಸಿರುವ ನಿಯಮಗಳದ್ದೋ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದ ವ್ಯಕ್ತಿಯ ಅಥವಾ ವ್ಯಕ್ತಿಗಳ ಮೇಲೆ ಕ್ರಮ ಕೈಗೊಳ್ಳುವಾಗ; ಅಥವಾ

(ಬ) ಈ ಅಧಿನಿಯಮದ್ದೋ ಅದರ ಪ್ರಕಾರ ರಚಿಸಿರುವ ನಿಯಮಗಳದ್ದೋ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದುದಕ್ಕೆ ಕಾನೂನುಕ್ರಮವನ್ನು ಪ್ರಾರಂಭಿಸುವಾಗ; ಅಥವಾ

(ಸಿ) ಈ ಅಧಿನಿಯಮದ್ದೋ ಅದರ ಪ್ರಕಾರ ರಚಿಸಿರುವ ನಿಯಮಗಳದ್ದೋ ಪ್ರಕಾರ ಮತ್ತು 2ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ ಪರಿಭಾಷಿಸಲಾದ ಉಪದ್ರವ ಇಲ್ಲದಾಗಿಸುವುದಕ್ಕಿರುವ ಯಾವುದೇ ಕ್ರಮ ಕೈಗೊಳ್ಳುವಾಗ,

ಸಂಬಂಧಪಟ್ಟ ಸ್ಥಳೀಯಾಡಳಿತ ಸಂಸ್ಥೆಯ ಸಮಕ್ಷದಲ್ಲಿ ಮಂಡಿಸುವುದಕ್ಕಾಗಿ ಸ್ಥಳೀಯಾಡಳಿತ ಸಂಸ್ಥೆಯ ಕಾರ್ಯದರ್ಶಿಗೆ ಲಿಖಿತ ಮುಖೇನ ಒಂದು ವರದಿಯನ್ನು ನೀಡತಕ್ಕದ್ದಾಗಿದೆ.

13. ಸಾರ್ವಜನಿಕ ಸೇವಕರ ಸಹಕಾರವನ್ನು ಖಾತ್ರಿಪಡಿಸುವಿಕೆ.—(1) ಸಾರ್ವಜನಿಕಾರೋಗ್ಯ ವಿಷಯಗಳಲ್ಲಿ ನೆರವು ನೀಡಲು ಅಥವಾ ಕ್ರಮವನ್ನು ಸಾಕ್ಷ್ಯಪಡಿಸಲು ಅಥವಾ ತನಿಖಾ ಕ್ರಮಗಳಲ್ಲಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿ ಎಂಬ ನೆಲೆಯಲ್ಲಿ ಸಮೀಪಿಸುವಾಗ, ಸರಕಾರದ ಕೆಳಗಿನ ಎಲ್ಲಾ ಸಾರ್ವಜನಿಕ ಸೇವಕರು, ಎಲ್ಲಾ ಸಹಾಯ ಹಾಗೂ ಸಹಕಾರ ನೀಡತಕ್ಕದ್ದು. ಅಂತಹ ಉದ್ಯೋಗಸ್ಥನಿಂದ ಉಂಟಾಗಿರುವುದಾಗಿ ಕಾಣಲ್ಪಡುವ ಯಾವುದೇ ತಿರಸ್ಕಾರ, ನಿರುತ್ಸಾಹ ಅಥವಾ ಅಶಿಸ್ತನ್ನು ಶಿಸ್ತು ಉಲ್ಲಂಘನೆ ಎಂದು ಪರಿಗಣಿಸಲಾಗುವುದು ಮತ್ತು ಅದನ್ನು ಸಂಬಂಧಪಟ್ಟ ಶಿಸ್ತು ಅಧಿಕಾರಿಯವರು ಯುಕ್ತ ಶಿಕ್ಷಾ ಕಾನೂನು ಕ್ರಮ ಕೈಗೊಳ್ಳಲು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಸಂಬಂಧಪಟ್ಟ ಅಧಿಕಾರಿಯವರ ಉನ್ನತ ಅಧಿಕಾರಿಗೆ ಮತ್ತು ಜಿಲ್ಲಾ ಸಾರ್ವಜನಿಕಾರೋಗ್ಯ ಸಮಿತಿಗೆ ವರದಿಯನ್ನು ಸಲ್ಲಿಸತಕ್ಕದ್ದು.

(2) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಈ ಅಧಿನಿಯಮದ ಪ್ರಕಾರ ಅಥವಾ ಅದರ ಅಡಿಯಲ್ಲಿ ರಚಿಸಿರುವ ನಿಯಮಗಳ ಅಥವಾ ರೆಗ್ಯುಲೇಶನುಗಳ ಪ್ರಕಾರ ನಿಹಿತಗೊಂಡಿರುವ ಯಾವುದೇ ಅಧಿಕಾರವನ್ನು ಕಾನೂನುಪರವಾಗಿ ವಿನಿಯೋಗಿಸಲು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ನೆರವು ನೀಡುವುದು ಸಂಬಂಧಪಟ್ಟ ಪೊಲೀಸುಗಾರನ ಕರ್ತವ್ಯವಾಗಿರುವುದು.

14. ಸ್ಥಳೀಯಾಡಳಿತ ಸಂಸ್ಥೆಯು ಬೆಂಬಲ ನೀಡಬೇಕೆಂದು.—(1) ಪ್ರತಿಯೊಂದು ಸ್ಥಳೀಯಾಡಳಿತ ಸಂಸ್ಥೆಯು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಯುಕ್ತವಾದ ಅಧಿಕೃತ ಕಾರ್ಯನಿರ್ವಹಣೆಗೆ ಸೌಲಭ್ಯಗಳನ್ನು ಒದಗಿಸತಕ್ಕದ್ದು ಮತ್ತು ಅದಕ್ಕೆ ಬೇಕಾದ ಬೆಂಬಲವನ್ನು ನೀಡತಕ್ಕದ್ದು.

ಅಧ್ಯಾಯ 3

ಮನುಷ್ಯನ ಬಳಕೆಗಿರುವ ಜಲದ ಸುರಕ್ಷತೆಯ ಖಾತ್ರಿಪಡಿಸುವಿಕೆ

15. ಮನುಷ್ಯನ ಬಳಕೆಗಿರುವ ಜಲ.—(1) ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ ಕಾಲಾಕಾಲಗಳಲ್ಲಿ ನಿರ್ದಿಷ್ಟ ಪಡಿಸುವ ಸುರಕ್ಷಿತ ಕುಡಿಯುವ ನೀರಿಗಾಗಿರುವ ಮಾನದಂಡಗಳು ಮತ್ತು 2006ರ ಆಹಾರ ಭದ್ರತೆ ಮತ್ತು ಗುಣಮಟ್ಟ ಅಧಿನಿಯಮದ ಉಪಬಂಧಗಳು ಪ್ರಕಾರ ಆಗಿರಬೇಕು ಕುಡಿಯುವ ನೀರಿನ ಗುಣಮಟ್ಟವನ್ನು ಲೆಕ್ಕಹಾಕಬೇಕಾಗಿರುವುದು. ಈ ರೀತಿ ಗುಣಮಟ್ಟವನ್ನು ಖಾತ್ರಿಪಡಿಸುವುದು ಕುಡಿಯುವ ನೀರನ್ನು ಸರಬರಾಜು ಮಾಡುವವರ ಜವಾಬ್ದಾರಿಯಾಗಿರುವುದು.

This is a digitally signed Gazette.
Authenticity may be verified through https://compose.kerala.gov.in/

15

(2) ಮನುಷ್ಯನ ಬಳಕೆಗಿರುವ ಕುಡಿಯುವ ನೀರಿನ ಸುರಕ್ಷತೆಯನ್ನು ಖಾತ್ರಿಪಡಿಸುವುದಕ್ಕಾಗಿ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಅವರ ಅಧಿಕಾರವ್ಯಾಪ್ತಿಯೊಳಗೆ ಈ ಕೆಳಗಿನ ಅಧಿಕಾರಗಳು ಇರುವುದಾಗಿದೆ, ಅದೇನೆಂದರೆ:—

(ಎ) ಜಲಜನ್ಯ ರೋಗಗಳೆಂದು ಸಂಶಯ ತೋರುವ ಸನ್ನಿವೇಶಗಳಲ್ಲಿ ಮತ್ತು ನಿಯಮಿತ ಮಧ್ಯಾಂತರಗಳಲ್ಲಿ ಕುಡಿಯುವ ನೀರಿನ ಗುಣಮಟ್ಟವನ್ನು ಪರಿಶೋಧಿಸಲು ಮತ್ತು ಪರಿಶೋಧಿಸಬೇಕೆಂದು ನಿರ್ದೇಶಿಸಲು;

(ಬಿ) ಕುಡಿಯುವ ನೀರಿನ ಗುಣಮಟ್ಟವು ಅಪರ್ಯಾಪ್ತವೆಂದು ಕಂಡುಹಿಡಿದಲ್ಲಿ ಸರಬರಾಜುದಾರರೊಂದಿಗೆ ಸೃಷ್ಟೀಕರಣವನ್ನು ಕೇಳಲು, ಪರಿಹಾರ ಕ್ರಮಗಳನ್ನು ನಿರ್ದೇಶಿಸಲು ಮತ್ತು ಸರಬರಾಜನ್ನು ತಡೆಯಲು ಮತ್ತು ಅಗತ್ಯವಿದ್ದಲ್ಲಿ ಜುಲ್ಮಾನೆಯನ್ನೊಳಗೊಂಡ ಕಾನೂನುಕ್ರಮಗಳನ್ನು ಕೈಗೊಳ್ಳಲು:

ಆದರೆ, ಈ ಉಪ-ವಿಭಾಗ ಪ್ರಕಾರ ಕುಡಿಯುವ ನೀರಿನ ಸರಬರಾಜನ್ನು ತಡೆಯುವ ಸನ್ನಿವೇಶದಲ್ಲಿ ಪ್ರಸ್ತುತ ಮಾಹಿತಿಯನ್ನು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಕೂಡಲೇ ಸ್ಥಳೀಯ ಸರಕಾರಕ್ಕೆ ತಿಳಿಸತಕ್ಕದ್ದು.

(3) ಕುಡಿಯಲು, ಸ್ನಾನಮಾಡಲು, ವಿನೋದಕ್ಕಾಗಿ ಒಳಗೊಂಡು ಇತರ ಯಾವುದೇ ಅಗತ್ಯಗಳಿಗಾಗಿ ಬಳಸುವ ನದಿ, ಕೆರೆ, ಸರೋವರ, ಝರಿ, ಒರಸೆ, ಬಾವಿ, ಟ್ಯಾಂಕ್, ಜಲಾಶಯ, ಕೊಳ, ಟ್ಯಾಂಕರ್ ಲಾರಿಗಳಲ್ಲಿನ ನೀರು ಅಲ್ಲದಿದ್ದಲ್ಲಿ ಇತರ ಜಲ ಸರಬರಾಜು ಮೂಲಗಳ ಅಥವಾ ಯೋಜನೆಗಳ ನೀರು, ಅದರ ಯಜಮಾನರಿಗೆ ಅಲ್ಲದಿದ್ದಲ್ಲಿ ಅದರ ನಿಯಂತ್ರಣೆ ಅಥವಾ ಉಸ್ತುವಾರಿ ಇರುವ ವ್ಯಕ್ತಿಗೆ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಯಾವಾಗ ಬೇಕಿದ್ದರೂ ಲಿಖಿತವಾಗಿ ನೋಟೀಸು ನೀಡಬಹುದಾಗಿದೆ ಮತ್ತು ನೋಟೀಸಿನಲ್ಲಿ ಸ್ಪಷ್ಟಪಡಿಸಿರುವ ಯುಕ್ತವಾದ ಕಾಲಾವಧಿಯೊಳಗೆ,—

(ಎ) ಸ್ಥಳೀಯ ಸಾರ್ವಜನಿಕಾರೋಗ್ಯಕ್ಕೆ ಹಾನಿಯಾಗದಂತಹ ರೀತಿಯಲ್ಲಿ ಜಲಸರಬರಾಜು ಮೂಲಗಳನ್ನು ಕಾಯ್ದುಕೊಳ್ಳಲು ಮತ್ತು ಪರಿಪಾಲಿಸಲು;

(ಬಿ) ಕೆಸರು, ತ್ಯಾಜ್ಯಗಳು ಎಂಬಿವುಗಳನ್ನು ಹೊರತುಪಡಿಸಿ ಅಂತಹ ಜಲ ಸರಬರಾಜು ಮೂಲಗಳನ್ನು ಸಂರಕ್ಷಿಸಲು;

(ಸಿ) ಡ್ರೈನೇಜ್ ಮುಖಾಂತರದ ಹೊಲಸಿನಿಂದ ಅಂತಹ ಜಲ ಸರಬರಾಜು ಮೂಲಗಳನ್ನು ಮತ್ತು ಜಲ ಸರಬರಾಜು ವ್ಯವಸ್ಥೆಗಳನ್ನು ಸಂರಕ್ಷಿಸಲು;

(ಡಿ) ಸಾರ್ವಜನಿಕರ ಆರೋಗ್ಯ ಮತ್ತು ಸುರಕ್ಷಿತತೆಯನ್ನು ಮುಂದಿರಿಸಿ ಜಲ ಸರಬರಾಜು ಮೂಲಗಳಿಗೆ ಅಗತ್ಯವಾದ ದುರಸ್ತಿ ಕಾಮಗಾರಿಗಳನ್ನು ಮತ್ತು ಸಂರಕ್ಷಣೆಯನ್ನು ಖಾತ್ರಿಪಡಿಸಲು;

(ಇ) ಕುಡಿಯುವ ನೀರಿನ ಅಗತ್ಯಗಳಿಗಾಗಿ ಅಥವಾ ಇತರ ಮನುಷ್ಯನ ಬಳಕೆಗಾಗಿ ಯೋಗ್ಯವಲ್ಲದಿದ್ದಲ್ಲಿ ಅಥವಾ ಸಾರ್ವಜನಿಕಾರೋಗ್ಯಕ್ಕೆ ಹಾನಿಕರವಾಗಿದ್ದಲ್ಲಿ ಪ್ರಸ್ತುತ ಜಲಮೂಲದಿಂದಿರುವ ನೀರಿನ ಬಳಕೆಯನ್ನು ನಿಲ್ಲಿಸಲು ಮತ್ತು ಬಳಸುವುದರಿಂದ ಇತರರನ್ನು ತಡೆಯಲು;

(ಎಫ್) ಸಾರ್ವಜನಿಕರ ಆರೋಗ್ಯಕ್ಕೆ ಹಾನಿಕರವಾದ ಅಥವಾ ಅಸಹ್ಯಕರವಾದ ರೀತಿಯಲ್ಲಿರುವ ನೀರು ಅಥವಾ ಮಲಿನಜಲವನ್ನು ಹರಿದುಬಿಡಲು ಅಥವಾ ಇತರ ರೀತಿಯಲ್ಲಿ ನಿರ್ಮೂಲನೆ ಮಾಡಲು, ನಿರ್ದೇಶಿಸಬಹುದಾಗಿದೆ:

ಆದರೆ (ಇ) ಖಂಡದ ಪ್ರಕಾರ ಒಂದು ನಿರ್ದೇಶವನ್ನು ನೀಡುವ ವಿಷಯಗಳಲ್ಲಿ ಪ್ರಸ್ತುತ ಮಾಹಿತಿಯನ್ನು ಸ್ಥಳೀಯ ಸರಕಾರಕ್ಕೆ ತಿಳಿಸತಕ್ಕದ್ದು.

(4) ಮೇಲೆ ಹೇಳಿದ ರೀತಿಯಲ್ಲಿ ಯಜಮಾನ ಅಥವಾ ನಿಯಂತ್ರಣೆಯಿರುವ ವ್ಯಕ್ತಿಯು (3)ನೇ ಉಪ-ವಿಭಾಗ ಪ್ರಕಾರ ನೀಡಿದ ನೋಟೀಸು, ಅದರಲ್ಲಿ ನಿಗದಿಪಡಿಸಿರುವ ಕಾಲಾವಧಿಯೊಳಗೆ ಪಾಲಿಸಲು ನ್ಯೂನತೆಯೆಸಗಿದ್ದಲ್ಲಿ ಅಥವಾ ನಿರ್ಲಕ್ಷಿಸುವುದಾದಲ್ಲಿ, ಯಾವುದೇ ವ್ಯಕ್ತಿಯ ಅಲ್ಲದಿದ್ದಲ್ಲಿ ವ್ಯಕ್ತಿಗಳ ಆರೋಗ್ಯವನ್ನು ಸಂರಕ್ಷಿಸುವುದಕ್ಕಾಗಿ ತುರ್ತುಕ್ರಮ ಅವಶ್ಯಕವಾಗಿದ್ದಲ್ಲಿ, ಅಂತಹ ನೋಟೀಸಿನಲ್ಲಿ ಹೇಳಿರುವ ಕೆಲಸಗಳನ್ನು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಕೂಡಲೇ ನಿರ್ವಹಿಸುವುದು ಮತ್ತು ಆ ರೀತಿಯಲ್ಲಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಆದ ಎಲ್ಲಾ ಖರ್ಚುಗಳನ್ನು ಯಜಮಾನ ಅಥವಾ ಅಂತಹ ಜಲಸರಬರಾಜು ಮೂಲದ ನಿಯಂತ್ರಣೆಯಿರುವ ವ್ಯಕ್ತಿ ನಿಗದಿಪಡಿಸಬಹುದಾದ ಪ್ರಕಾರ ಪಾವತಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

16

(5) ಸಾಮಾನ್ಯವಾಗಿ ಅಲ್ಲದಿದ್ದಲ್ಲಿ ವಿಶೇಷವಾಗಿ ನಿರ್ಧರಿಸಿದುದರ ಹೊರತಾಗಿ ಯಾವನೇ ವ್ಯಕ್ತಿಯು,—

(ಎ) ಕೊಳಚೆ ಚರಂಡಿಗೆ ಬಾಧಿಸುವ ಅಥವಾ ಅದರಲ್ಲಿ ತುಂಬಿರುವ ವಸ್ತುಗಳ ಸ್ವತಂತ್ರವಾದ ಹರಿಯುವಿಕೆಗೆ ತಡೆಯೊಡ್ಡುವಂತಹ ನಿರ್ಮಾಣಗಳು ಅಥವಾ ಇನ್ನಿತರವುಗಳು ಅಲ್ಲದಿದ್ದಲ್ಲಿ ಅಂತಹ ವಸ್ತುಗಳ ಸಂಸ್ಕರಣೆ ಮತ್ತು ತೊಲಗಿಸುವಿಕೆಯನ್ನು ಬಾಧಿಸುವ ವಸ್ತುವನ್ನು;

(ಬಿ) ಅದು ಮಾತ್ರವಾಗಿ ಅಲ್ಲದಿದ್ದಲ್ಲಿ ಚರಂಡಿಯೊಳಗಿನ ಇತರ ವಸ್ತುಗಳೊಂದಿಗೆ ಸಂಯೋಜನೆಗೊಂಡಾಗ ಅಪಾಯಕಾರಿಯಾಗುವ ಅಥವಾ ಉಪದ್ರವಕ್ಕೆ ಕಾರಣವಾಗುವ ಅಲ್ಲದಿದ್ದಲ್ಲಿ ಆರೋಗ್ಯಕ್ಕೆ ಹಾನಿಕರವಾಗುವ ದ್ರವ ಅಥವಾ ನೀರಾವಿಯನ್ನು;

(ಸಿ) ಯಾವುದೇ ಸ್ಫೋಟಕ ವಸ್ತುವನ್ನು;

ಸಾರ್ವಜನಿಕ ಚರಂಡಿಗೆ ಅಥವಾ ಸಾರ್ವಜನಿಕ ಚರಂಡಿಗೆ ಸಂಪರ್ಕ ನೀಡುವ ಚರಂಡಿಗೆ ನಿರ್ಮಿಸುವುದೋ ಎಸೆಯುವುದೋ ಎಸೆಯಲು ಅನುಮತಿಸುವುದೋ ಹರಿದುಬಿಡುವುದೋ ಬಸಾಡುವುದೋ ತೆರೆದುಬಿಡುವುದೋ ಮಾಡತಕ್ಕದ್ದಲ್ಲ.

(6) ಸಾಮಾನ್ಯವಾಗಿ ಅಲ್ಲದಿದ್ದಲ್ಲಿ ನಿಗದಿಪಡಿಸಿದುದರ ಹೊರತಾಗಿ ಯಾವನೇ ವ್ಯಕ್ತಿಯು,—

(ಎ) ಯಾವುದೇ ಜಲಗಮನ ಮಾರ್ಗಕ್ಕೆ ಅಲ್ಲದಿದ್ದಲ್ಲಿ ಅದರ ಸಮೀಪದಲ್ಲಿ,—

(i) ಆರೋಗ್ಯಕ್ಕೆ ಹಾನಿಕರವಾದ ಯಾವುದೇ ವಸ್ತುವನ್ನು, ತ್ಯಾಜ್ಯವನ್ನು, ವಿಸರ್ಜನೆಯನ್ನು, ಶೌಚಾಲಯ ತ್ಯಾಜ್ಯವನ್ನು; ಅಲ್ಲದಿದ್ದಲ್ಲಿ,

(ii) ಉತ್ಪಾದನೆಯಿಂದ ಅಥವಾ ಉತ್ಪಾದನೆ ಪ್ರಕ್ರಿಯೆಯಿಂದ ಉಂಟಾಗುವ ವಿಷವಿರುವ, ಹಾನಿಕರವಾದ ಅಥವಾ ಮಲಿನಗೊಳ್ಳುವ ಅಥವಾ ಆರೋಗ್ಯಕ್ಕೆ ಹಾನಿಕರವಾದುದೋ ಆದ ದ್ರವ ಅಥವಾ ಘನ ವಸ್ತುಗಳನ್ನು,

ಹಾಕುವುದೋ ಹಾಕಲು ಕಾರಣವಾಗುವುದೋ ಅಲ್ಲದಿದ್ದಲ್ಲಿ ಬೀಳಲು ಕಾರಣವಾಗುವುದೋ ಸುರಿಯುವುದೋ ಹೊರದೂಡುವುದೋ ಸಾಗಿಸುವುದೋ ಅಥವಾ ಮನಪೂರ್ವಕವಾಗಿ ಹಾಕಲು, ಬೀಳಲು, ಸುರಿಯಲು, ಸಾಗಿಸಲು ಅನುಮತಿಸುವುದೋ, ಅಲ್ಲದಿದ್ದಲ್ಲಿ

(ಬಿ) ಜಲಗಮನ ಮಾರ್ಗಕ್ಕೆ ಯಾವುದೇ ವಸ್ತುವನ್ನು ಹಾಕುವುದೋ ಹಾಕಲು ಕಾರಣವಾಗುವುದೋ ಹೊರದೂಡುವುದೋ ಬೀಳಲು ಕಾರಣವಾಗುವುದೋ ಬೀಳಿಸುವುದೋ ಸುರಿಯುವುದೋ ಅಥವಾ ಇತರ ಯಾವುದೇ ವ್ಯಕ್ತಿಯ ಇತರ ಸಮಾನ ಪ್ರವೃತ್ತಿಗಳೊಂದಿಗೆ ವ್ಯಕ್ತಿಗತವಾಗಿ ಅಲ್ಲದಿದ್ದಲ್ಲಿ ಸಂಯೋಜಿಸಿ ಜಲಗಮನ ಮಾರ್ಗದ ನೈಜ ಹರಿಯುವಿಕೆಗೆ ತಡೆಯೊಡ್ಡುವುದೋ, ಅದರಲ್ಲಿನ ಜಲವನ್ನು ಮಲಿನಗೊಳಿಸುವುದೋ ಯಾವುದೇ ಫ್ಯಾಕ್ಟರಿಯಿಂದಲೋ ನಿರ್ಮಾಣ ಕೆಲಸಗಳಿಂದಲೋ ಕ್ವಾರಿಯಿಂದಲೋ ಇರುವ ಘನ-ದ್ರವ ತ್ಯಾಜ್ಯಗಳು ಯಾವುದೇ ಕಸಗಳು, ಬೂದಿಗಳು, ಇತರ ತ್ಯಾಜ್ಯಗಳು, ವ್ಯಾಪಾರ ತ್ಯಾಜ್ಯಗಳು, ಮಲಿನಗೊಂಡ ಘನ ಪದಾರ್ಥಗಳು ಇತ್ಯಾದಿ ಒಳಗೊಂಡವುಗಳನ್ನು ಹಾಕುವುದೋ; ಅಲ್ಲದಿದ್ದಲ್ಲಿ

(ಸಿ) ಸಾರ್ವಜನಿಕಾರೋಗ್ಯಕ್ಕೆ ಹಾನಿಕರವಾದ ರೀತಿಯಲ್ಲಿ ಜಲಗಮನ ಮಾರ್ಗದಲ್ಲೋ ಅದರ ಸಮೀಪ ಪ್ರದೇಶದಲ್ಲೋ ಯಾವುದೇ ಉಪದ್ರವ ನೀಡುವುದೋ, ಮಾಡತಕ್ಕದ್ದಲ್ಲ.

(7) (5)ನೇ ಉಪ-ವಿಭಾಗದ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು 65ನೇ ವಿಭಾಗದಲ್ಲಿ ನಿರ್ದಿಷ್ಟಪಡಿಸಿರುವ ದಂಡಕ್ಕೆ ಒಳಪಡುವನು.

(8) (6)ನೇ ಉಪ-ವಿಭಾಗದಲ್ಲಿನ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು ಅಪರಾಧ ನಿರ್ಣಯದ ಮೇರೆಗೆ ಮೂರು ವರ್ಷಗಳ ವರೆಗಿನ ಜೈಲುಶಿಕ್ಷೆ ಅಥವಾ ಇಪ್ಪತ್ತೈದು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಎರಡು ಲಕ್ಷ ರೂಪಾಯಿಯವರೆಗಿನ ದಂಡಕ್ಕೆ ಅಥವಾ ಅವೆರಡನ್ನೂ ಸೇರಿ ಶಿಕ್ಷಿಸಲ್ಪಡುವನು.

18. ಜಲಸರಬರಾಜಿಗೆ ಸಂಬಂಧಿಸಿ ರಾಜ್ಯ, ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರ ಅಧಿಕಾರಗಳು.—(1) ಯಾವುದೇ ಸ್ಥಳೀಯ ವಲಯಗಳಲ್ಲಿ ಅಥವಾ ಅದರ ಭಾಗಗಳಲ್ಲಿ ಜಲಸರಬರಾಜು ಮೂಲವು ಮಲಿನವಾಗಿದೆಯೇ ಅಥವಾ ಅಲ್ಲವೇ ಎಂದು ಕಂಡುಹಿಡಿಯುವುದಕ್ಕಾಗಿ ಅಂತಹ ಪ್ರದೇಶಗಳಲ್ಲಿ ಅಥವಾ ಅದರ ಭಾಗಗಳಲ್ಲಿ ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಗೆ ತನಿಖೆ ನಡೆಸಬಹುದಾಗಿದೆ.

(2) ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿ ಅಥವಾ ಯಥಾ ಪ್ರಕಾರ ಅಧಿಕೃತಗೊಳಿಸಿರುವ ಯಾವನೇ ಉದ್ಯೋಗಸ್ಥ, ಅಂತಹ ತನಿಖೆಗಳ ಫಲವನ್ನು ಪರಿಗಣಿಸಿ, ನಿಗದಿಪಡಿಸಿದ ಕಾಲಾವಧಿಯೊಳಗೆ, ಜಲಸರಬರಾಜು ಮೂಲವನ್ನು ಸ್ವಚ್ಛಗೊಳಿಸಲು ಅಥವಾ ಉತ್ತಮಗೊಳಿಸಲು ಅಥವಾ ದುರಸ್ತಿಗೊಳಿಸಲು ಅಥವಾ ಮಲಿನವಾಗುವುದರಿಂದ ಸಂರಕ್ಷಿಸಲು ನಿರ್ದೇಶಿಸುತಾ ಯಜಮಾನನಿಗೆ ಅಥವಾ ಸ್ವಾಧೀನಗಾರನಿಗೆ ಅಥವಾ ಸಂಬಂಧಪಟ್ಟ ಸಂಸ್ಥೆಗೆ ಅಥವಾ ಅಧಿಕಾರಿಗೆ ಆದೇಶ ನೀಡಬಹುದಾಗಿದೆ:

This is a digitally signed Gazette.
Authenticity may be verified through https://compose.kerala.gov.in/

17

ಆದರೆ, ಈ ಉಪ-ವಿಭಾಗದ ಕೆಳಗೆ ಒಂದು ಆದೇಶವನ್ನು ಜಾರಿಗೊಳಿಸುವುದಕ್ಕಿಂತ ಮುಂಚಿತವಾಗಿ, ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿ ಅಥವಾ ಅಧಿಕೃತ ಅಧಿಕಾರಿ, ಅಧಿಕಾರಿಗಳಿಗೆ ಅಥವಾ ಸಂಬಂಧಪಟ್ಟ ವ್ಯಕ್ತಿಗಳಿಗೆ ಹೇಳುವುದನ್ನು ಹೇಳಲು ಒಂದು ನ್ಯಾಯವಾದ ಅವಕಾಶವನ್ನು ನೀಡತಕ್ಕದ್ದು ಮತ್ತು ಅದನ್ನು ಪರಿಗಣಿಸತಕ್ಕದ್ದು.

17. ಜಲದ ಗುಣಮಟ್ಟವನ್ನು ಉತ್ತಮಗೊಳಿಸುವುದಕ್ಕಿರುವ ರಾಜ್ಯ, ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯ ಅಧಿಕಾರಗಳು.— ಒಂದು ಸ್ಥಳೀಯ ವಲಯದ ಸಾರ್ವಜನಿಕ ಜಲ ಸರಬರಾಜು ಮೂಲವು ಮಲಿನವಾಗಿದೆಯೆಂದು ಅಥವಾ ಮಲಿನವಾಗುವ ಅಪಾಯದಲ್ಲಿದೆಯೆಂದು ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅಥವಾ ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಮನಗಂಡಲ್ಲಿ, ಅವರಿಗೆ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಲಿಖಿತವಾಗಿ, ಅದರಲ್ಲಿ ಸ್ಪಷ್ಟಪಡಿಸಿರುವ ಅಂತಹ ಕ್ರಮಗಳನ್ನು ಕೈಗೊಳ್ಳಲು ಯುಕ್ತವಾದ ನಿರ್ದೇಶಗಳನ್ನು ನೀಡಬಹುದಾಗಿದೆ.

ಅಧ್ಯಾಯ 4

ನೈರ್ಮಲ್ಯ ಸೌಲಭ್ಯಗಳು

18. ಸಾರ್ವಜನಿಕ ಶೌಚಾಲಯ ಸೌಲಭ್ಯಗಳನ್ನು ಖಾತ್ರಿಪಡಿಸುವುದಕ್ಕಿರುವ ಹೊಣೆಗಾರಿಕೆ.—(1) ಸಾರ್ವಜನಿಕ ಸ್ಥಳಗಳಲ್ಲೂ ಸಾರ್ವಜನಿಕ ಜಾಗಗಳಲ್ಲೂ ಶೌಚಾಲಯ ಸೌಲಭ್ಯಗಳ ಮಾನದಂಡಗಳನ್ನು ರಾಜ್ಯ ಸಾರ್ವಾಜನಿಕಾರೋಗ್ಯ ಸಮಿತಿಯು ಚರ್ಚೆ ಮಾಡಿ ರೂಪಿಸತಕ್ಕದ್ದು ಮತ್ತು ರಾಜ್ಯ ಸಾರ್ವಾಜನಿಕಾರೋಗ್ಯ ಅಧಿಕಾರಿಯವರು ನಿರ್ದೇಶಗಳನ್ನು ಹೊರಡಿಸತಕ್ಕದ್ದು. ಅಂತಹ ನಿರ್ದೇಶಗಳು 1994ರ ಕೇರಳ ಪಂಚಾಯತ್ ರಾಜ್ ಅಧಿನಿಯಮ (1994ರ 13ನೇ ಅಧಿನಿಯಮ)ದ ಅಡಿಯಲ್ಲಿ ಮತ್ತು 1994ರ ಕೇರಳ ಮುನಿಸಿಪಾಲಿಟಿ ಅಧಿನಿಯಮ (1994ರ 20ನೇ ಅಧಿನಿಯಮ)ದ ಅಡಿಯಲ್ಲಿ ರಚಿಸಿರುವ ಕಟ್ಟಡ ನಿರ್ಮಾಣ ನಿಯಮಗಳಿಗೆ ಅನುಸಾರವಾಗಿರತಕ್ಕದ್ದು.

(2) ಸಾರ್ವಜನಿಕರ ಉಪಯೋಗಕ್ಕೆ ಅಗತ್ಯವಿರುವಷ್ಟು ಸಂಖ್ಯೆಯ ಮತ್ತು ಸರಿಯಾದ ಗುಣಮಟ್ಟದ ಶೌಚಾಲಯ ಸೌಲಭ್ಯಗಳನ್ನು ಸೌಕರ್ಯವಿರುವ ಸ್ಥಳಗಳಲ್ಲಿ ಸ್ಥಳೀಯ ಸ್ವಯಂ ಆಡಳಿತ ಸರಕಾರಗಳು ವ್ಯವಸ್ಥೆ ಮಾಡತಕ್ಕದ್ದು. ನಾಮಮಾತ್ರದ ಹಣವನ್ನು ವಸೂಲಿ ಮಾಡುವ ಮೂಲಕ ಅಥವಾ ಅಲ್ಲದೆ ಸಾರ್ವಜನಿಕಾರೋಗ್ಯಕ್ಕೆ ಹಾನಿ ಅಥವಾ ಉಪದ್ರವ ಉಂಟಾಗದಂತೆ ಇದನ್ನು ಅಚ್ಚುಕಟ್ಟಾಗಿ ಪರಿಪಾಲಿಸತಕ್ಕದ್ದು.

(3) ವೈಯಕ್ತಿಕ ವಾಸಕ್ಕೆ ಹೊರತುಪಡಿಸಿ ಮನುಷ್ಯ ವಾಸಕ್ಕೆ ಅಥವಾ ಬಳಕೆಗೆ ಉದ್ದೇಶಿಸಿರುವ ಯಾವುದೇ ಕಟ್ಟಡದಲ್ಲಿ ನಿಗದಿಪಡಿಸಿದ ಮಾನದಂಡಗಳಿಗೆ ಅನುಗುಣವಾಗಿ ಸಾಕಷ್ಟು ಶೌಚಾಲಯ ಸೌಲಭ್ಯಗಳನ್ನು ಕಟ್ಟಡದ ಯಜಮಾನರು ಅಥವಾ ನಿರ್ವಾಹಕರು ವ್ಯವಸ್ಥೆ ಮಾಡತಕ್ಕದ್ದು. ಇಂತಹ ಸೌಲಭ್ಯಗಳು ಅಪರ್ಯಾಪ್ತವಾಗಿದ್ದಲ್ಲಿ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಲಿಖಿತ ಮುಖೇನ ನೋಟೀಸು ನೀಡಿ ನೋಟೀಸಿನಲ್ಲಿ ಅವಶ್ಯಕವಾದ ಸೌಲಭ್ಯಗಳಿಗೆ ವ್ಯವಸ್ಥೆ ಮಾಡಬೇಕೆಂದು ನಿರ್ದೇಶಿಸಬಹುದಾಗಿದೆ ಮತ್ತು ನಿರ್ದೇಶಗಳು ಪಾಲಿಸಲ್ಪಡುತ್ತಿದೆಯೆಂಬುದನ್ನು ಖಾತ್ರಿಪಡಿಸುವುದಕ್ಕೆ ಅಗತ್ಯವಾದ ಕ್ರಮಗಳನ್ನು ಸ್ವೀಕರಿಸಬಹುದಾಗಿದೆ.

(4) ಕೆಲಸದ ಸ್ಥಳಗಳಲ್ಲಿ, ವ್ಯಾಪಾರ ಸಂಸ್ಥೆಗಳಲ್ಲಿ, ಶಾಪಿಂಗ್ ಮಾಲ್‌ಗಳಲ್ಲಿ, ಇತ್ಯಾದಿಯನ್ನೊಳಗೊಂಡ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲೂ ಮಹಿಳೆಯರು, ವಿಕಲಚೇತನರು, ಭಿನ್ನಲಿಂಗಿಗಳು ಎಂಬವರುಗಳನ್ನು ಒಳಗೊಂಡವರಿಗೆ ಉಪಕಾರಪ್ರದವಾದ ಶೌಚಾಲಯಗಳನ್ನು ಖಾತ್ರಿಪಡಿಸತಕ್ಕದ್ದು.

(5) ಎಲ್ಲಾ ಶೌಚಾಲಯಗಳನ್ನು,—

(ಎ) ಉಪಯೋಗಿಸುವ ಜನರ ಆರೋಗ್ಯ ಮತ್ತು ಗೌಪ್ಯತೆಯನ್ನು ಖಾತ್ರಿಪಡಿಸುವ ರೀತಿಯಲ್ಲಿ ನಿರ್ಮಿಸಿರತಕ್ಕದ್ದು;

(ಬಿ) ರೋಗ ಹರಡುವಿಕೆಯನ್ನು ಹೊರತುಪಡಿಸುವ ರೀತಿಯಲ್ಲಿ ಸ್ವಚ್ಛವಾಗಿ ಪರಿಪಾಲಿಸತಕ್ಕದ್ದು;

(ಸಿ) ಅದನ್ನು ಪ್ರದೇಶದ ವಿಶೇಷತೆಗಳನ್ನೂ ಸಹ ಗಣನೆಗೆ ತೆಗೆದುಕೊಂಡು ವೈಜ್ಞಾನಿಕ ವಿಲೇವಾರಿ ವ್ಯವಸ್ಥೆಗಳೊಂದಿಗೆ ಸಂಪರ್ಕಗೊಳಿಸತಕ್ಕದ್ದು;

(ಡಿ) ಆವರಣದಲ್ಲಿ ಹೊಲಸು ನೀರು ತಂಗದಂತೆ ಹಾಗೂ ಉತ್ತಮ ರೀತಿಯಲ್ಲಿ ದುರಸ್ತಿ ಕೆಲಸಗಳನ್ನು ನಡೆಸಿ ಹಾಗೂ ಹತ್ತಿರದ ನಿವಾಸಿಗಳಿಗೆ ಉಪದ್ರವ ಉಂಟಾಗದ ರೀತಿಯಲ್ಲಿ ಪರಿಪಾಲಿಸತಕ್ಕದ್ದು,

ಆಗಿದೆ.

This is a digitally signed Gazette.
Authenticity may be verified through https://compose.kerala.gov.in/

18

(6) ಒಂದು ಶೌಚಾಲಯವನ್ನು ಸಾರ್ವಜನಿಕ ಸಭ್ಯತೆಗೆ ವಿರುದ್ಧವಾಗಿ ಅಥವಾ ಉಪದ್ರವ ಉಂಟಾಗುವ ರೀತಿಯಲ್ಲಿ ಸ್ಥಾಪಿಸುವುದೋ, ನಿರ್ಮಿಸುವುದೋ ಮಾಡಲಾಗಿದ್ದಲ್ಲಿ ಅಥವಾ ಸಾರ್ವಜನಿಕಾರೋಗ್ಯಕ್ಕೆ ಬೆದರಿಕೆಯನ್ನುಂಟು ಮಾಡುವುದೋ ಅಥವಾ (5)ನೇ ಉಪ-ವಿಭಾಗದ ಉಪಬಂಧಗಳನ್ನೋ ಪಾಲಿಸದಿದ್ದಲ್ಲಿ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಲಿಖಿತ ನೋಟೀಸು ಮುಖೇನ, ನಿರ್ದಿಷ್ಟಪಡಿಸಿದ ಕಾಲಾವಧಿಯೊಳಗೆ, ಅದನ್ನು ವಿಲೇವಾರಿ ಮಾಡಲು ಅಥವಾ ಅಗತ್ಯವಾದ ದುರಸ್ತಿಗಳನ್ನು ಮಾಡಲು ಯಜಮಾನನೊಡನೆ ಅಥವಾ ನಿರ್ವಾಹಕರೊಡನೆ ಕೋರಬಹುದಾಗಿದೆ.

(7) (6)ನೇ ಉಪ-ವಿಭಾಗದ ಉಪಬಂಧಗಳ ಪ್ರಕಾರ ಸಾರ್ವಜನಿಕಾರೋಗ್ಯ ಅಧಿಕಾರಿಯವರು ನೀಡುವ ನಿರ್ದೇಶಗಳನ್ನು ಪಾಲಿಸದ ಕಟ್ಟಡದ ಯಜಮಾನ ಅಥವಾ ನಿರ್ವಾಹಕನು ಆರು ತಿಂಗಳ ವರೆಗಿನ ಜೈಲುಶಿಕ್ಷೆ ಅಥವಾ ಹತ್ತು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಯವರೆಗಷ್ಟಾಗುವ ದಂಡಕ್ಕೆ ಅಥವಾ ಅವೆರಡನ್ನೂ ಸೇರಿ ಶಿಕ್ಷಿಸಲ್ಪಡುವನು.

19. ನೈರ್ಮಲ್ಯ ಸೌಲಭ್ಯಗಳ ಖಾತ್ರಿಪಡಿಸುವಿಕೆ.—(1) ವೈಯಕ್ತಿಕ ವಸತಿ ಸ್ಥಳಗಳ ಹೊರತಾದ ಮತ್ತು ನಿಗದಿಪಡಿಸಿದ ಪ್ರಕಾರದ ಸಂಖ್ಯೆಯ ವ್ಯಕ್ತಿಗಳು ವಾಸಿಸುವ ಅಥವಾ ಕೆಲಸ ಮಾಡುವ ಎಲ್ಲಾ ಸಂಸ್ಥೆಗಳಲ್ಲೂ ಸಾರ್ವಜನಿಕಾರೋಗ್ಯ ಅಧಿಕಾರಿ ಅಥವಾ ಅವರು ಹೊಣೆಗೊಳಿಸುವ ಜೂನಿಯರ್ ಹೆಲ್ತ್‌ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ಅಧಿಕಾರಿಯವರು ಹೊರಡಿಸಿರುವ ನೈರ್ಮಲ್ಯ ಮಾನದಂಡಗಳು ಪಾಲಿಸಲ್ಪಡುತ್ತಿದೆಯೇ ಎಂದು ಖಾತ್ರಿಪಡಿಸತಕ್ಕದ್ದು ಮತ್ತು ಯಾವುದೇ ಅಸಮಂಜಸತೆಗಳನ್ನು ಕಂಡುಹಿಡಿಯುವುದಾದಲ್ಲಿ ಅದನ್ನು ಪರಿಹರಿಸಬೇಕೆಂದು ನಿರ್ದೇಶಿಸುತಾ ಸಂಸ್ಥೆಯ ಯಜಮಾನನಿಗೆ ಅಥವಾ ನಿರ್ವಾಹಕನಿಗೆ ನೋಟೀಸು ನೀಡತಕ್ಕದ್ದು ಮತ್ತು ಅದನ್ನು ಸಂಸ್ಥೆಯ ಯಜಮಾನನೋ ಅಥವಾ ನಿರ್ವಾಹಕನೋ ಕಾರ್ಯಗತಗೊಳಿಸತಕ್ಕದ್ದು.

(2) ಉಪ-ವಿಭಾಗ (1)ರ ಉಪಬಂಧಗಳನ್ನು ಉಲ್ಲಂಘಿಸುವ ಸಂಸ್ಥೆಯ ಯಜಮಾನನು 65ನೇ ವಿಭಾಗದಲ್ಲಿ ನಿಗದಿಪಡಿಸಿರುವ ದಂಡ ಶಿಕ್ಷೆಗೆ ಬಾಧ್ಯಸ್ಥನಾಗಿರುವನು.

20. ಬೀದಿಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯಗಳನ್ನು, ಕಸಗಳನ್ನು ಮತ್ತು ಇತರವುಗಳನ್ನು ಹಾಕುವುದಕ್ಕೆ ನಿಷೇಧ.—(1) ಯಾವನೇ ವ್ಯಕ್ತಿಯು ಬೀದಿಗಳಲ್ಲಿ ಅಥವಾ ಸಾರ್ವಜನಿಕ ಸ್ಥಳಗಳಲ್ಲಿ ತ್ಯಾಜ್ಯಗಳನ್ನು ಅಥವಾ ಕಸಗಳನ್ನು ಅಥವಾ ಅದೇ ರೀತಿಯ ವಸ್ತುಗಳನ್ನು ಹಾಕುವುದು ಮಾಡತಕ್ಕದ್ದಲ್ಲ.

(2) ಬೀದಿಯಲ್ಲಿ ಅಥವಾ ಸಾರ್ವಜನಿಕ ಅಥವಾ ಖಾಸಗಿ ಸ್ಥಳಗಳಲ್ಲಿ ಹಾಕಲ್ಪಡುವ ತ್ಯಾಜ್ಯಗಳು ಸಾರ್ವಜನಿಕಾರೋಗ್ಯಕ್ಕೆ ಬೆದರಿಕೆಯೊಡ್ಡುವ ಸನ್ನಿವೇಶಗಳಲ್ಲಿ, ಸಾರ್ವಜನಿಕಾರೋಗ್ಯ ಹಿತಾಸಕ್ತಿಯನ್ನು ಮುಂದಿರಿಸಿ ತ್ಯಾಜ್ಯವನ್ನು ವಿಲೇವಾರಿ ಮಾಡಲು ಮತ್ತು ಮುಂದುವರಿದ ಕ್ರಮಗಳಿಗಿರುವ ಶಿಫಾರಸನ್ನು ಸಾರ್ವಜನಿಕಾರೋಗ್ಯ ಅಧಿಕಾರಿಯವರು ಸ್ಥಳೀಯ ಸರಕಾರಕ್ಕೆ ನೀಡತಕ್ಕದ್ದು.

(3) ಉಪ-ವಿಭಾಗ (1)ರ ಪ್ರಕಾರದ ಅಪರಾಧವನ್ನೆಸಗುವ ಯಾವುದೇ ವ್ಯಕ್ತಿಯು ಮೂರು ವರ್ಷದವರೆಗಿನ ಜೈಲುಶಿಕ್ಷೆಗೆ ಅಥವಾ ಹತ್ತುಸಾವಿರ ರೂಪಾಯಿಗಿಂತ ಕಡಿಮೆಯಿಲ್ಲದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಯವರೆಗಷ್ಟಾಗುವ ದಂಡಕ್ಕೆ ಅಥವಾ ಅವೆರಡನ್ನೂ ಸೇರಿ ಶಿಕ್ಷಿಸಲ್ಪಡುವನು.

ಅಧ್ಯಾಯ 5

ಉಪದ್ರವ ಇಲ್ಲದಾಗಿಸುವಿಕೆ

21. ಉಪದ್ರವವಾಗುವ ವಿಷಯಗಳು.—2ನೇ ವಿಭಾಗದಲ್ಲಿ "ಉಪದ್ರವ" ಎಂಬ ಪದಕ್ಕೆ ನೀಡಿರುವ ವ್ಯಾಖ್ಯಾನದ ಸಾಮಾನ್ಯಾನ್ವಯಕ್ಕೆ ಭಂಗಬರದಂತೆ, ಈ ಅಧ್ಯಾಯದ ಅಗತ್ಯಗಳಿಗಾಗಿ ಈ ಕೆಳಗಿನವುಗಳನ್ನು, ವಿಶೇಷವಾಗಿ ಉಪದ್ರವ ಎಂದು ಭಾವಿಸತಕ್ಕದ್ದು, ಅದೇನೆಂದರೆ:—

(i) ಯಾವುದೇ ಆವರಣವನ್ನು ಆರೋಗ್ಯಕ್ಕೆ ಹಾನಿಕರವಾದ ರೀತಿಯಲ್ಲಾಗಿಸುವುದು;

(ii) ಯಾವುದೇ ನದಿ, ಸರೋವರ, ಕೊಳ, ಕೆರೆ, ತೋಡು, ಝರಿ, ನೀರಿನ ತೊಟ್ಟಿ ಮತ್ತು ಕೊಳಚೆ ಚರಂಡಿ ಇತ್ಯಾದಿ ಜಲಮೂಲಗಳನ್ನು ಹೊಲಸಾಗಿ ಅಥವಾ ಆರೋಗ್ಯಕ್ಕೆ ಹಾನಿಕರವಾದ ಸ್ಥಿತಿಯಲ್ಲಾಗಿಸುವುದು;

(iii) ಬೂದಿ ಹೊಂಡ, ಸಗಣಿ ಹೊಂಡ, ಕಂಪೋಸ್ಟ್ ಹೊಂಡ, ಸೆಪ್ಟಿಕ್ ಟ್ಯಾಂಕ್, ಜೈವಿಕ ಅನಿಲ ಸ್ಥಾವರ, ಮಾಲಿನ್ಯ ಸಂಗ್ರಹಣೆ ವ್ಯವಸ್ಥೆಗಳು ಇತ್ಯಾದಿಯನ್ನು ಸಾಕಷ್ಟು ಪರಿಪಾಲನೆ ಮತ್ತು ಸುರಕ್ಷಿತತೆಯಿಲ್ಲದೆ ಹೊಲಸಾಗಿ ಅಥವಾ ಆರೋಗ್ಯಕ್ಕೆ ಹಾನಿಕರವಾದ ಸ್ಥಿತಿಯಲ್ಲಾಗಿಸುವುದು;

This is a digitally signed Gazette.
Authenticity may be verified through https://compose.kerala.gov.in/

19

(iv) ಆರೋಗ್ಯಕ್ಕೆ ಹಾನಿಕರವಾದ ರೀತಿಯಲ್ಲಿ ಅಥವಾ ಅಂತಹ ಸ್ಥಳದಲ್ಲಿ ಯಾವುದೇ ಮೃಗವನ್ನು ಒಂಟಿಯಾಗಿ ಅಥವಾ ಗುಂಪಾಗಿ ಇಟ್ಟುಕೊಳ್ಳುವುದು;

(v) ಆರೋಗ್ಯಕ್ಕೆ ಹಾನಿಕರವಾದ ಯಾವುದೇ ಕಸವನ್ನು, ಕಟ್ಟಡ ತ್ಯಾಜ್ಯಗಳನ್ನು, ವ್ಯಾಪಾರ ತ್ಯಾಜ್ಯಗಳನ್ನು ಅಥವಾ ಇತರ ಸಾಮಾಗ್ರಿಗಳು ಎಂಬವುಗಳನ್ನು ರಾಶಿಹಾಕುವುದು ಅಥವಾ ಸಂಗ್ರಹಿಸುವುದು;

(vi) ತಕ್ಕ ಗಾಳಿನಿರ್ಗಮನ ವ್ಯವಸ್ಥೆಗಳನ್ನು ಒದಗಿಸದೆ ಅಥವಾ ವಿಷಯುಕ್ತವಾದ ತ್ಯಾಜ್ಯಗಳಿಂದ ಸಂರಕ್ಷಣೆಯನ್ನು ಒದಗಿಸದೆ ಮತ್ತು ಕೆಲಸದ ಸಮಯದಲ್ಲಿ ನೂಕುನುಗ್ಗಲನ್ನುಂಟುಮಾಡುವ ರೀತಿಯಲ್ಲಿ ಮತ್ತು ಆರೋಗ್ಯಕ್ಕೆ ಹಾನಿಕರವಾದ ಸ್ಥಿತಿಯಲ್ಲಿ ಯಾವುದೇ ಕಾರ್ಖಾನೆ, ಕಾರ್ಯಗಾರ, ಕೆಲಸದ ಸ್ಥಳ, ಅಂಗಡಿಗಳು, ಭೋಜನ ಶಾಲೆಗಳು ಇತ್ಯಾದಿಯನ್ನು ಕಾರ್ಯಾಚರಿಸುವುದು;

(vii) ಬೆಂಕಿ ಹಚ್ಚುವ ಸ್ಥಳ, ಕುಲುಮೆ ಇತ್ಯಾದಿಯಿಂದ ಉಂಟಾಗುವ ಹೊಗೆ ಆರೋಗ್ಯಕ್ಕೆ ಹಾನಿಕರವಾದ ರೀತಿಯಲ್ಲಿ ವಾತಾವರಣದಲ್ಲಿ ಉಳಿಯುವಂತೆ ಮಾಡುವುದು;

(viii) ಹೊಗೆಯನ್ನು ಹೊರಬಿಡುವ ಹೊಗೆ ಕೊಳವೆಗಳನ್ನು ಆರೋಗ್ಯಕ್ಕೆ ಹಾನಿಕರವಾದ ಪ್ರಮಾಣದಲ್ಲಿ, ವಿಧಾನದಲ್ಲಿ ಅಥವಾ ಎತ್ತರದಲ್ಲಿ ನೆಲೆನಿಲ್ಲಿಸುವುದು;

(ix) ಆರೋಗ್ಯಕ್ಕೆ ಹಾನಿಕರವಾದ ಶಬ್ದ, ಧ್ವನಿ, ಕಂಪನ, ದೂಳು, ಬೂದಿ, ಅಸಹ್ಯವಾದ ವಾಸನೆ, ವಿಷಕಾರಿ ವಸ್ತು ಅಥವಾ ಹೇಸಿಗೆಯುಂಟುಮಾಡುವ ದೃಶ್ಯ ಇತ್ಯಾದಿಯನ್ನು ಉಂಟುಮಾಡುವುದು;

(x) ಎಕ್ಸ್‌ರೇ ಯೂನಿಟ್, ಕ್ಲಿನಿಕಲ್ ಲಾಬೋರೇಟರಿ, ಸ್ಕ್ಯಾನ್ ಸೆಂಟರ್ ಅಥವಾ ಆಸ್ಪತ್ರೆ ಇತ್ಯಾದಿಯನ್ನು ಆರೋಗ್ಯಕ್ಕೆ ಹಾನಿಕರವಾದ ಸ್ಥಿತಿಯಲ್ಲಿ ದಕ್ಷ ಮುಂಜಾಗ್ರತಾ ಕ್ರಮಗಳಿಲ್ಲದೆ ನೆಲೆನಿಲ್ಲಿಸುವುದು;

(xi) ಆರೋಗ್ಯಕ್ಕೆ ಹಾನಿಕರವಾದ ರೀತಿಯಲ್ಲಿ ಯಾವುದೇ ಹೋಟೆಲು ಅಥವಾ ಆಹಾರ ನಿರ್ವಹಣಾ ಸಂಸ್ಥೆ, ಕಸಾಯಿಖಾನೆ, ಮಾಂಸದಂಗಡಿ, ಕೋಳಿಯಂಗಡಿ, ಹಾಲಿನ ಸ್ಟಾಲ್, ಮಾರುಕಟ್ಟೆ, ಐಸ್ ಫ್ಯಾಕ್ಟರಿ, ಲಾಡ್ಜ್‌ಗಳು, ಅದಕ್ಕೆ ಸಮಾನವಾದ ವಸತಿ ಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳು ಇತ್ಯಾದಿಗಳನ್ನು ನಡೆಸುವುದು ಅಥವಾ ನೆಲೆನಿಲ್ಲಿಸುವುದು;

(xii) ಆರೋಗ್ಯಕ್ಕೆ ಹಾನಿಕರವಾದ ಅವಸ್ಥೆಯಲ್ಲಿ ಸ್ಮಶಾನ, ಚಿತಾಗಾರ, ಸಮಾಧಿ ಇತ್ಯಾದಿಗಳನ್ನು ನೆಲೆನಿಲ್ಲಿಸುವುದು;

(xiii) ಯಾವುದೇ ಮರ ಅಥವಾ ಯಾವುದೇ ರೀತಿಯ ನಿರ್ಮಾಣವನ್ನು ಆರೋಗ್ಯಕ್ಕೆ ಹಾನಿಕರವಾಗುವ ಸ್ಥಿತಿಯಲ್ಲಿ ನೆಲೆನಿಲ್ಲಿಸುವುದು;

(xiv) ಸೊಳ್ಳೆಗಳ ಸಂತಾನೋತ್ಪತ್ತಿಗೆ ಸಹಾಯಕವಾದ ರೀತಿಯಲ್ಲಿ ನೀರು ಕಟ್ಟಿನಿಲ್ಲಲು ಎಡೆಮಾಡಿಕೊಡುವುದು ಅಥವಾ ಕಟ್ಟಿನಿಂತಿರುವ ಅಥವಾ ಹರಿಯುವ ಜಲಸಂಗ್ರಹಗಳನ್ನು ಅಥವಾ ನೀರು ಕಟ್ಟಿ ನಿಲ್ಲುವಿಕೆಯನ್ನು ಸೃಷ್ಠಿಸುವುದು ಅಥವಾ ನಿರ್ಮೂಲನೆ ಮಾಡದಿರುವುದು;

(xv) ನೊಣಗಳು, ಮರಳು ನೊಣಗಳು, ಜಿರಲೆಗಳು, ಉಣ್ಣೆ ಮತ್ತು ಬಸವನ ಹುಳು ಮುಂತಾದವುಗಳು ಆರೋಗ್ಯಕ್ಕೆ ಹಾನಿಕರವಾದ ರೀತಿಯಲ್ಲಿ ಸಂತಾನೋತ್ಪತ್ತಿಯನ್ನು ಉಂಟು ಮಾಡುವುದಕ್ಕಿರುವ ಸನ್ನಿವೇಶವನ್ನು ಸೃಷ್ಠಿಸುವುದು ಅಥವಾ ಅದನ್ನು ನಿರ್ಮೂಲನೆ ಮಾಡದಿರುವುದು;

(xvi) ಹಂದಿ ಫಾರ್ಮ್, ಕೋಳಿ ಫಾರ್ಮ್, ಆಡು ಫಾರ್ಮ್, ಜಾನುವಾರು ಫಾರ್ಮ್, ಹ್ಯಾಚರಿ, ಕುದುರೆ ಲಾಯ ಇತ್ಯಾದಿಯನ್ನು ಆರೋಗ್ಯಕ್ಕೆ ಹಾನಿಕರವಾದ ರೀತಿಯಲ್ಲಿ ನೆಲೆ ನಿಲ್ಲಿಸುವುದು;

(xvii) ಬೀದಿ ನಾಯಿಗಳು, ಇಲಿ ಜಾತಿಗೆ ಸೇರಿದ ಜೀವಿಗಳು ಇತ್ಯಾದಿಗಳಿಗೆ ಆಶ್ರಯ ನೀಡಲು ಸಹಾಯಕವಾಗುವ ರೀತಿಯಲ್ಲಿ ಯಾವುದೇ ಗೋದಾಮಿನಲ್ಲಿ ಅಥವಾ ಅದರ ಆವರಣವನ್ನು ಅಥವಾ ತ್ಯಾಜ್ಯ ರಾಶಿಯನ್ನು ಅಥವಾ ಅದೇ ರೀತಿಯಲ್ಲಿರುವವುಗಳನ್ನು ಆರೋಗ್ಯಕ್ಕೆ ಹಾನಿಕರವಾದ ರೀತಿಯಲ್ಲಿ ನೆಲೆನಿಲ್ಲಿಸುವುದು;

(xviii) ಆರೋಗ್ಯಕ್ಕೆ ಹಾನಿಕರವಾದ ರೀತಿಯಲ್ಲಿ ಯಾವುದೇ ರೀತಿಯ ತ್ಯಾಜ್ಯಗಳನ್ನು ವಾಹನದಲ್ಲಿ ಅಥವಾ ಇತರ ರೀತಿಯಲ್ಲಿ ಸಾಗಿಸುವುದು;

This is a digitally signed Gazette.
Authenticity may be verified through https://compose.kerala.gov.in/

(xix) ಸಾರ್ವಜನಿಕಾರೋಗ್ಯ ಚಟುವಟಿಕೆಗಳನ್ನು ಅಥವಾ ಗುರಿಗಳನ್ನು ಪ್ರತಿಕೂಲಕರವಾಗಿ ಬಾಧಿಸುವ ಯಾವುದೇ ರೀತಿಯ ಸುಳ್ಳು ಅಥವಾ ನಕಲಿ ಪ್ರಚಾರವನ್ನು ಮಾಡುವುದು; ಮತ್ತು

(xx) ಈ ಅಧ್ಯಾಯದ ಉದ್ದೇಶಕ್ಕಾಗಿ ನಿಗದಿಪಡಿಸಬಹುದಾದಂತಹ ಇತರ ವಿಷಯಗಳು.

22. ಉಪದ್ರವಕ್ಕೆ ಸಂಬಂಧಿಸಿದ ಮಾಹಿತಿಗಳು.—ಯಾವುದೇ ಪ್ರದೇಶದಲ್ಲಿ ಉಪದ್ರವದಿಂದ ಸಂಕಟ ಅನುಭವಿಸುವ ಯಾವನೇ ವ್ಯಕ್ತಿಗೆ ಅಥವಾ ಅಂತಹ ಒಂದು ಉಪದ್ರವ ಅಸ್ತಿತ್ವದಲ್ಲಿ ಇದೆಯೆಂದು ತಿಳಿದಿರುವ ಯಾವನೇ ವ್ಯಕ್ತಿಗೆ, ಆ ಕುರಿತು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅಥವಾ ಸ್ಥಳೀಯ ಸಾರ್ವಜನಿಕ ಸಮಿತಿಗೆ ಲಿಖಿತವಾಗಿ ದೂರು ನೀಡುವುದೋ ಮಾಡಬಹುದಾಗಿದೆ.

23. ಉಪದ್ರವ ಇಲ್ಲದಾಗಿಸುವುದಕ್ಕಿರುವ ಸ್ಥಳೀಯ ಸಾರ್ವಾಜನಿಕಾರೋಗ್ಯ ಅಧಿಕಾರಿಯವರ ಅಧಿಕಾರ.—(1) ಒಂದು ಉಪದ್ರವ ಆಗುತ್ತಿದೆ ಎಂದು, 22ನೇ ವಿಭಾಗ ಪ್ರಕಾರದ ದೂರಿನ ತಳಹದಿಯಲ್ಲಿ ಅಥವಾ ಇತರ ರೀತಿಯಲ್ಲಿ, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಮನವರಿಕೆಯಾದಲ್ಲಿ, ಅಧಿಕಾರಿಯವರಿಗೆ, ಯಾರ ಪ್ರವೃತ್ತಿಯಿಂದ ಅಥವಾ ಲೋಪದಿಂದ ಆಗಿದೆ ಉಪದ್ರವ ಆಗಿರುವುದೋ ಅಥವಾ ಮುಂದುವರಿಯುತ್ತಿರುವುದೋ ಆತನಿಗೆ ಸೂಚನೆ ನೀಡುತಾ ಮತ್ತು ಆತನನ್ನು ಪತ್ತೆಹಚ್ಚಲು ಸಾಧ್ಯವಾಗದಿದ್ದಲ್ಲಿ, ಉಪದ್ರವ ಮುಂದುವರಿಯುತ್ತಿರುವುದಾದ ಆವರಣದ ಯಜಮಾನನೊಡನೆ ಅಥವಾ ಸ್ವಾಧೀನಗಾರನೊಡನೆ ನೋಟೀಸು ಮುಖೇನ ನಿಗದಿತ ಕಾಲಾವಧಿಯೊಳಗೆ ಅದನ್ನು ನಿವಾರಿಸುವುದಕ್ಕಿರುವ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಅಥವಾ ಅಂತಹ ಕೆಲಸಗಳನ್ನು ಮಾಡಿಸಲು ನಿರ್ದೇಶಿಸಬಹುದಾಗಿದೆ:

ಆದರೆ,—

(ಎ) ಯಾವುದಾದರೂ ಕಟ್ಟಡದ ರಚನಾತ್ಮಕ ನ್ಯೂನತೆಯಿಂದ ಉಪದ್ರವ ಆಗುವುದಾದಲ್ಲಿ, ಅದರ ಯಜಮಾನನಿಗೆ ನೋಟೀಸು ನೀಡತಕ್ಕದ್ದು;

(ಬಿ) ಉಪದ್ರವ ಉಂಟಾಗಿರುವುದು ಅಥವಾ ಆದು ಮುಂದುವರಿಯುತ್ತಿರುವುದು, ಯಜಮಾನನ ಅಥವಾ ಸ್ವಾಧೀನಗಾರನ ಕೃತ್ಯದಿಂದ ಅಥವಾ ನ್ಯೂನತೆಯಿಂದ ಅಲ್ಲದಿದ್ದಲ್ಲಿ, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಉಪದ್ರವ ಮುಂದುವರಿಯುತ್ತಿರುವುದನ್ನು ತಡೆಯುವುದಕ್ಕಾಗಿ ಅಥವಾ ಅದನ್ನು ಇಲ್ಲದಾಗಿಸಲು ಅವಶ್ಯಕವಾದ ಕ್ರಮಗಳನ್ನು ಕೂಡಲೇ ಕೈಗೊಳ್ಳುವಂತೆ ಸ್ಥಳೀಯ ಸರಕಾರದೊಡನೆ ಲಿಖಿತ ಮುಖೇನ ಶಿಫಾರಸನ್ನು ಮಾಡತಕ್ಕದ್ದು; ಹಾಗೂ

(ಸಿ) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಯಾರಿಗೆ ಅಂತಹ ನೋಟೀಸನ್ನು ನೀಡಿರುವುದೋ, ಆ ವ್ಯಕ್ತಿಯ ಲಿಖಿತ ಮುಖೇನವಿರುವ ಅರ್ಜಿಯ ಮೇರೆಗೆ, ಪ್ರಕರಣದ ವಾಸ್ತವಾಂಶಗಳ ಹಾಗೂ ಸನ್ನಿವೇಶಗಳ ತಳಹದಿಯಲ್ಲಿ, ಸ್ಥಳೀಯ ಸಾರ್ವಜನಿಕಾರೋಗ್ಯ ಸಮಿತಿಗೆ ಅಂತಹ ನೋಟಿಸಿನಲ್ಲಿ ನಿರ್ದೇಶಿಸಿದ ಕಾಲಾವಧಿಯನ್ನು ವಿಸ್ತರಿಸಿ ನೀಡಬಹುದಾಗಿದೆ.

(2) ಉಪದ್ರವ ಇಲ್ಲದಾಗಿಸುವ ಅಗತ್ಯಕ್ಕಾಗಿರುವ ಸಾರ್ವಜನಿಕಾರೋಗ್ಯ ಅಧಿಕಾರಿಯವರ ಉಪ-ವಿಭಾಗ (1)ರ ಪ್ರಕಾರವಿರುವ ನೋಟೀಸನ್ನು ಸ್ವೀಕರಿಸಲಾಗಿದೆ ಎಂಬ ಕಾರಣದಿಂದ ಅಥವಾ ಉಪದ್ರವವನ್ನು ಇಲ್ಲದಾಗಿಸುವುದಕ್ಕಿರುವ ಕೃತ್ಯಗಳನ್ನು ಮಾಡಿರುವುದರಿಂದಾಗಿ ಮಾತ್ರ ಒಬ್ಬ ಸ್ವಾಧೀನಗಾರನಿಗೆ ಪ್ರಸ್ತುತ ಸ್ಥಳದ ಮೇಲೆ ಯಾವುದೇ ಕಾನೂನುಪರ ಹಕ್ಕು ಅಥವಾ ಮಾಲಿಕತ್ವ ಅಥವಾ ಇತರ ಅವಕಾಶಗಳು ಲಭ್ಯವಾಗುವುದಿಲ್ಲ.

(3) ಉಪ-ವಿಭಾಗ (1)ರ ಪ್ರಕಾರ ನೋಟಿಸು ಲಭಿಸಿದ ಯಾವುದೇ ವ್ಯಕ್ತಿ, ಯಜಮಾನ ಅಥವಾ ಸ್ವಾಧೀನಗಾರನು ನೋಟೀಸಿನಲ್ಲಿ ನೀಡಿದ ವಿಸ್ತರಿಸಿದ ಕಾಲಾವಧಿಯೊಳಗೆ ಅದರಲ್ಲಿ ಹೇಳಿರುವ ನಿರ್ದೇಶಗಳನ್ನು ಪಾಲಿಸಲು ವಿಫಲನಾದಲ್ಲಿ, 65ನೇ ವಿಭಾಗದಲ್ಲಿ ನಿಗದಿಪಡಿಸಿರುವಂತಹ ದಂಡಕ್ಕೆ ಬಾಧ್ಯಸ್ಥನಾಗುವನು. ಉಪದ್ರವವನ್ನು ಇಲ್ಲದಾಗಿಸುವುದಕ್ಕಾಗಿ ಹಾಗೂ ಅದರ ಆವರ್ತನೆಯನ್ನು ತಡೆಯುವುದಕ್ಕಾಗಿ ಅಗತ್ಯವೆಂದು ಭಾವಿಸುವ ಚಟುವಟಿಕೆಗಳನ್ನು ನಿರ್ವಹಿಸುವುದಕ್ಕಾಗಿ ಸಾರ್ವಜನಿಕಾರೋಗ್ಯ ಅಧಿಕಾರಿ ಸ್ಥಳೀಯ ಸರಕಾರಕ್ಕೆ ತಿಳಿಸತಕ್ಕದ್ದು.

(4) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಆತನು ಆದೇಶ ಹೊರಡಿಸಿದ ಅಥವಾ ವಹಿಸಿಕೊಂಡಂತಹ ಕ್ರಮಗಳ ಕುರಿತು ಸ್ಥಳೀಯಾಡಳಿತ ಸಮಿತಿಗೆ ವರದಿ ಮಾಡತಕ್ಕದ್ದು.

24. ಉಪದ್ರವದಿಂದಾಗಿ ಜನವಾಸಕ್ಕೆ ಯೋಗ್ಯವಲ್ಲದ ರೀತಿಯಲ್ಲಿರುವ ಮನೆಗೆ ಅಥವಾ ಕಟ್ಟಡಕ್ಕೆ ಸಂಬಂಧಿಸಿದ ಉಪಬಂಧ.—ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರ ಅಭಿಪ್ರಾಯದಲ್ಲಿ, ಒಂದು ಮನೆ ಅಥವಾ ಇತರ ಕಟ್ಟಡವು ಅಲ್ಲಿ ಆಗಿರುವ ಒಂದು ಉಪದ್ರವದಿಂದಾಗಿ ಜನವಾಸಕ್ಕೆ ಯೋಗ್ಯವಲ್ಲದಿದ್ದಲ್ಲಿ, ಅಂತಹ ಮನೆ ಅಥವಾ ಕಟ್ಟಡವು ಜನವಾಸಕ್ಕೆ ಯೋಗ್ಯವಾಗುವ ತನಕ, ವಾಸಸ್ಥಳವಾಗಿ ಉಪಯೋಗಿಸುವುದರಿಂದ ಆತನನ್ನು ತಡೆಯತಕ್ಕದ್ದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

25. ಉಪದ್ರವವನ್ನು ಇಲ್ಲದಾಗಿಸಿದಾಗ ತೊಲಗಿಸಲ್ಪಟ್ಟ ಸಾಮಾಗ್ರಿಗಳ ವಿಲೇವಾರಿ.—(1) ಈ ಅಧ್ಯಾಯದ ಕೆಳಗಿನ ಕೆಲಸಗಳನ್ನು ನಿರ್ವಹಿಸುವಾಗ ಅಥವಾ ಇತರ ರೀತಿಯಲ್ಲಿ ಅದರ ಉಪಬಂಧಗಳನ್ನು ಜಾರಿಗೊಳಿಸುವಾಗ, ಸಾರ್ವಜನಿಕ ಸ್ಥಳಗಳನ್ನು ಒಳಗೊಂಡು ಯಾವುದೇ ಆವರಣದಿಂದ ತೊಲಗಿಸಿದ ಸಾಮಾಗ್ರಿಗಳನ್ನು, ನಿಗದಿಪಡಿಸಬಹುದಾದ ವಿಧಾನದಲ್ಲಿ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ನಿಭಾಯಿಸಬಹುದಾಗಿದೆ.

26. ಸ್ಥಳೀಯ ವಲಯದ ಹೊರಗೆ ಕೃತ್ಯ ಅಥವಾ ನ್ಯೂನತೆಯಿಂದ ಉಂಟಾಗುವ ಉಪದ್ರವ.—ಯಾವುದೇ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಆತನ ಸ್ಥಳೀಯ ವಲಯಕ್ಕೆ ಅಥವಾ ಅದರ ಯಾವುದೇ ಭಾಗಕ್ಕೆ ಪರಿಣಾಮ ಬೀರುವ ಒಂದು ಉಪದ್ರವ ಅಂತಹ ಸ್ಥಳೀಯ ವಲಯದ ಹೊರಗೆ ಮಾಡಿದುದೋ ಅಥವಾ ಸಂಭವಿಸಿದುದೋ ಆದ ಯಾವುದೇ ಕೃತ್ಯ ಅಥವಾ ನ್ಯೂನತೆಯಿಂದಾಗಿ ಪೂರ್ಣವಾಗಿ ಅಥವಾ ಭಾಗಶಃವಾಗಿ ಉಂಟಾಗಿರುವುದಾಗಿ ಕಂಡುಬಂದಲ್ಲಿ, ಆ ವಿಷಯವನ್ನು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ತಿಳಿಸತಕ್ಕದ್ದು ಮತ್ತು ಆತನು ಆ ಉಪದ್ರವವನ್ನು ನಿವಾರಿಸುವುದಕ್ಕೆ ಅಗತ್ಯವಾದ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ನಿರ್ದೇಶ ನೀಡತಕ್ಕದ್ದು. ಸ್ಥಳೀಯ ವಲಯಗಳು ಎರಡು ಜಿಲ್ಲೆಗಳಲ್ಲಾಗಿ ಒಳಪಡುವುದಾದಲ್ಲಿ ಉಪದ್ರವ ಉಂಟಾದ ಪ್ರದೇಶ ಒಳಪಡುವ ಜಿಲ್ಲೆಯ ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರ ಮೂಲಕ ಆ ವಿಷಯವನ್ನು ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ತಿಳಿಸತಕ್ಕದ್ದು ಮತ್ತು ಆತನು ಅಗತ್ಯ ನಿರ್ದೇಶಗಳನ್ನು ನೀಡುವುದಕ್ಕಿರುವ ಕ್ರಮವನ್ನು ಕೈಗೊಳ್ಳತಕ್ಕದ್ದು.

ಅಧ್ಯಾಯ 6

ಸಂತಾನೋತ್ಪತ್ತಿ, ಮಾತೃ, ನವಜಾತ ಶಿಶು, ಶೈಶವ, ಕೌಮಾರ ಆರೋಗ್ಯ

27. ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಸಂತಾನೋತ್ಪತ್ತಿ, ಮಾತೃ, ನವಜಾತ ಶಿಶು, ಶೈಶವ, ಕೌಮಾರ ಆರೋಗ್ಯ ಉತ್ತಮಗೊಳಿಸುವುದಕ್ಕಿರುವ ಚಟುವಟಿಕೆಗಳನ್ನು ಜಾರಿಗೊಳಿಸಬೇಕೆಂದು.—(1) ಸರಕಾರವು ಕಾಲಾಕಾಲಗಳಲ್ಲಿ ಜಾರಿಗೊಳಿಸುವ ನಿರ್ದೇಶ ಪ್ರಕಾರ, ರಾಜ್ಯ, ಜಿಲ್ಲಾ, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗಳು ಸಂತಾನೋತ್ಪತ್ತಿ, ಮಾತೃ, ನವಜಾತ ಶಿಶು, ಶೈಶವ, ಕೌಮಾರ ಆರೋಗ್ಯಕ್ಕೆ ಸಂಬಂಧಿಸಿದಂತಹ ಕ್ರಮಗಳನ್ನು ಜಾರಿಗೊಳಿಸತಕ್ಕದ್ದು.

(2) ಉಪ-ವಿಭಾಗ (1)ರಲ್ಲಿ ಉಲ್ಲೇಖಿಸಿರುವ ಕ್ರಮಗಳನ್ನು ಜಾರಿಗೊಳಿಸುವುದಕ್ಕಾಗಿ, ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ, ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಮತ್ತು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅವಶ್ಯಕವಾದ ಬೆಂಬಲವನ್ನು ಸಂಬಂಧಪಟ್ಟ ಸರಕಾರಿ ಇಲಾಖೆಗಳೂ ಸ್ಥಳೀಯ ಆಡಳಿತಗಳೂ ನೀಡತಕ್ಕದ್ದಾಗಿದೆ.

(3) ಕಾಲಾಕಾಲಗಳಲ್ಲಿ ಸರಕಾರವು ನಿರ್ದೇಶಿಸುವ ಸಂತಾನೋತ್ಪತ್ತಿ, ಮಾತೃ, ನವಜಾತ ಶಿಶು, ಶೈಶವ, ಕೌಮಾರ ಆರೋಗ್ಯ ಮುಂತಾದವುಗಳಿಗೆ ಸಂಬಂಧಿಸಿದ ಪ್ರತಿರೋಧಕ, ಪ್ರೋತ್ಸಾಹ, ಕಾರ್ಯನಿರ್ವಹಣೆ ಇತ್ಯಾದಿಗೆ ಸಂಬಂಧಿಸಿದ ಎಲ್ಲಾ ಕ್ರಮಗಳು, ಅವಶ್ಯಕವೆಂದು ಭಾವಿಸುವುದಾದಲ್ಲಿ, ಇತರ ಇಲಾಖೆಗಳೊಂದಿಗೆ ಸಂಯೋಜಿಸಿ ಜಾರಿಗೊಳಿಸಬೇಕಾದುದು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯ ಹೊಣೆಗಾರಿಕೆಯಾಗಿದೆ.

(4) ಮಾತೃ-ಶಿಶು ಆರೋಗ್ಯ ಮತ್ತು ಕಲ್ಯಾಣವನ್ನು ಪ್ರೋತ್ಸಾಹಿಸುವುದಕ್ಕೂ ಸಂರಕ್ಷಿಸುವುದಕ್ಕೂ ಯಾವುದೇ ಒಂದು ಪ್ರವೃತ್ತಿಯನ್ನು ಮಾಡಲೂ, ತಡೆಯಲೂ ಮಾರ್ಪಾಟುಗೊಳಿಸಲೂ ಯಾವುದೇ ವ್ಯಕ್ತಿಯೊಡನೆ ಅಥವಾ ಸಂಸ್ಥೆಯೊಡನೆ ಲಿಖಿತ ಮುಖೇನ ಅಥವಾ ಅಲ್ಲದೆ ನಿರ್ದೇಶಿಸಲು ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅಧಿಕಾರವಿರುವುದಾಗಿದೆ. ಆದರೆ ಪ್ರಸ್ತುತ ಆದೇಶದಲ್ಲಿ ನಿರ್ದೇಶಿಸಿರುವ ಕಾಲಾವಧಿಯೊಳಗೆ ಆ ವ್ಯಕ್ತಿಯು ಅಥವಾ ಸಂಸ್ಥೆಯು ಆ ರೀತಿ ಮಾಡಲು ವಿಫಲವಾಗಿದ್ದಲ್ಲಿ, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಈ ವಿಷಯವನ್ನು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಮುಂದುವರಿದು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರು ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೂ ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಸರಕಾರಕ್ಕೂ ತಿಳಿಸತಕ್ಕದ್ದು ಮತ್ತು ಅದರ ಮೇಲೆ ಸರಕಾರದ ತೀರ್ಮಾನ ಅಂತಿಮವಾಗಿರುವುದು.

ಅಧ್ಯಾಯ 7

ಸಾಂಕ್ರಾಮಿಕ ರೋಗಗಳ ಹಾಗೂ ಅಧಿಸೂಚಿಸಬೇಕಾದ ಸಾಂಕ್ರಾಮಿಕ ರೋಗಗಳ ತಡೆ, ಅಧಿಸೂಚನೆ ಮತ್ತು ಚಿಕಿತ್ಸೆ

28. ಸಾಂಕ್ರಾಮಿಕ ರೋಗಗಳು ಹಾಗೂ ಅಧಿಸೂಚಿಸಬೇಕಾದ ಸಾಂಕ್ರಾಮಿಕ ರೋಗಗಳು.—(1) ಈ ಅಧಿನಿಯಮದ 2ನೇ ವಿಭಾಗದ (1)ನೇ ಉಪ-ವಿಭಾಗ ಪ್ರಕಾರ ಸಾಂಕ್ರಾಮಿಕ ರೋಗ ಎಂಬ ನಿರ್ವಚನದಲ್ಲಿ ಒಳಪಡುವ ಎಲ್ಲಾ ರೋಗಗಳನ್ನೂ ಈ ವಿಭಾಗದ ಅಗತ್ಯಕ್ಕಾಗಿ ಸಾಂಕ್ರಾಮಿಕ ರೋಗ ಎಂದು ಭಾವಿಸಲ್ಪಡಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

22

(2) ಈ ಅಧಿನಿಯಮದ ಅಗತ್ಯಕ್ಕಾಗಿ, ಅಧಿಸೂಚಿಸಬೇಕಾದ ಸಾಂಕ್ರಾಮಿಕ ರೋಗ ಎಂದರೆ,—

(i) ಕ್ಷಯರೋಗ;

(ii) ರಾಷ್ಟ್ರೀಯ ಜಂತುಜನ್ಯ ರೋಗ ತಡೆ ಕಾರ್ಯಕ್ರಮದಲ್ಲಿ ಒಳಗೊಂಡಿರುವ ಅಥವಾ ಭವಿಷ್ಯದಲ್ಲಿ ಸೇರಿಸಬಹುದಾದ ರೋಗಗಳು (ಮಲೇರಿಯ, ಆನೆಕಾಲು ರೋಗ, ಜಪಾನ್ ಜ್ವರ, ಡೆಂಗ್ಯೂ ಜ್ವರ, ಚಿಕನ್‌ಗುನಿಯ, ಕಾಲಾ ಅಸರ್ ಮುಂತಾದವು);

(iii) ಸಿಕ್ಕಾ;

(iv) ಟೈಫಸ್ ವಿಭಾಗಕ್ಕೊಳಪಡುವ ಎಲ್ಲಾ ಜ್ವರಗಳು (ಸ್ಕ್ರಬ್ ಟೈಫಸ್, ಎಪಿಡೆಮಿಕ್ ಟೈಫಸ್ ಮುಂತಾದವು);

(v) ಆಂಥ್ರಾಕ್ಸ್

(vi) ಹಕ್ಕಿ ಜ್ವರ ಒಳಗೊಂಡ ಇನ್‌ಫ್ಲುಯೆನ್ಸ-ಎ ವಿಭಾಗಕ್ಕೊಳಪಟ್ಟ ಜ್ವರಗಳು;

(vii) ಎನ್ಸೆಫಾಲೈಟೀಸ್/ಮೆನಿಂಜೈಟಿಸ್‌ನ ಲಕ್ಷಣ ತೋರಿಸುವ ಎಲ್ಲಾ ಜ್ವರಗಳು;

(viii) ಯೂನಿವರ್ಸಲ್ ಇಮ್ಯೂನೈಸೇಶನ್ ಯೋಜನೆಯಲ್ಲಿ ಒಳಗೊಂಡ ಅಥವಾ ಭವಿಷ್ಯದಲ್ಲಿ ಸೇರಿಸಬಹುದಾದ ರೋಗಗಳು (ಪೋಲಿಯೋ, ಡಿಫ್ತೀರಿಯ, ಪೆರ್ಟುಸಿಸ್, ಟೆಟನಸ್, ಮೀಝಲ್ಸ್, ಹೆಪಟೈಟೀಸ್-ಬಿ, ಹಿಮೋಫಿಲಸ್ ಇನ್‌ಫ್ಲೂಯೆನ್ಸಾ-ಬಿ ಯಿಂದಿರುವ ನ್ಯುಮೋನಿಯ ಅಲ್ಲದಿದ್ದಲ್ಲಿ ಮೆನಿಂಜೈಟಿಸ್, ನ್ಯೂಮೋಕ್ಕೋಕ್ಕಸ್‌ನಿಂದಿರುವ ರೋಗಗಳು, ರುಬೆಲ್ಲ ಮುಂತಾದವು);

(ix) ಅಕ್ಯೂಟ್ ಫ್ಲಾಸಿಡ್ ಪರಾಲಿಸಿಸ್;

(x) ಮಂಕಿಪಾಕ್ಸ್;

(xi) ರೇಬಿಸ್;

(xii) ನಿಪ;

(xiii) ಸಾರ್ಸ್, ಮಿಡಿಲ್ ಈಸ್ಟ್ ರೆಸ್ಪಿರೇಟರಿ ಸಿನ್‌ಡ್ರೋಂ, ಕೋವಿಡ್-19 ಮುಂತಾದ ಕೊರೋನ ವೈರಸ್ ರೋಗಾಣುಗಳು;

(xiv) ಇಲಿಜ್ವರ,

(xv) ಪ್ಲೇಗ್

(xvi) ಕುಷ್ಠ

(xvii) ಆಂಟಿಬಯೋಟಿಕ್ ಪ್ರತಿರೋಧಕ ಬೆದರಿಕೆಯ ಸನ್ನಿವೇಶದಲ್ಲಿ ರಿಪೋರ್ಟಿಂಗ್ ಅವಶ್ಯಕವೆಂದು ಸರಕಾರವು ನಿರ್ಧರಿಸುವ ರೋಗಾಣುಗಳು;

(xviii) ಕಾಲಾಕಾಲಗಳಲ್ಲಿ ಕೇಂದ್ರ, ರಾಜ್ಯ ಸರಕಾರಗಳು ಅಧಿಸೂಚನೆಯ ಮುಖೇನ ರಾಜ್ಯ ವ್ಯಾಪಕವಾಗಿಯೋ, ರಾಜ್ಯದ ಒಂದು ಪ್ರದೇಶಕ್ಕಾಗಿಯೋ ಅಧಿಸೂಚಿಸಬೇಕಾಗಿರುವುದೆಂದು ಘೋಷಿಸುವ ರೋಗಗಳು.

(3) ಸರಕಾರಕ್ಕೆ, ಡಾಟಾ ಶೇಖರಿಸಬೇಕಾದ ಅಥವಾ ಚಿಕಿತ್ಸೆ ಮಾನದಂಡಗಳನ್ನು ಪಾಲಿಸಬೇಕಾದಂತಹ ಯಾವುದೇ ಹರಡುವ ಅಲ್ಲದಿದ್ದಲ್ಲಿ ಅಲ್ಲದಂತಹ ರೋಗವನ್ನು ಸಾರ್ವಜನಿಕಾರೋಗ್ಯ ಪ್ರಾಧ್ಯಾನ್ಯತೆಯಿರುವ ರೋಗವೆಂದು ಅಧಿಸೂಚಿಸಬಹುದಾಗಿದೆ.

(4) ಅಧಿಸೂಚಿಸಬೇಕಾದ ಯಾವುದೇ ಸಾಂಕ್ರಾಮಿಕ ರೋಗ ಯಾವುದೇ ವ್ಯಕ್ತಿಗಳ, ಸರಕಾರೀ ಆಸ್ಪತ್ರೆಯ, ಖಾಸಗಿ ಆಸ್ಪತ್ರೆಯ, ಕ್ಲಿನಿಕ್ ಅಥವಾ ಲ್ಯಾಬೋರೇಟರಿಯ ಅಥವಾ ಸಂಶೋಧನೆ ಸಂಸ್ಥೆಯ ಗಮನಕ್ಕೆ ಬಂದಲ್ಲಿ ಅಥವಾ ಮಾಹಿತಿ ಲಭಿಸಿದ್ದಲ್ಲಿ, ಆ ವ್ಯಕ್ತಿ ಅಥವಾ ಸಂಸ್ಥೆಯು ಆ ವಿಷಯವನ್ನು ಕೂಡಲೇ ಸಾರ್ವಜನಿಕಾರೋಗ್ಯ ಅಧಿಕಾರಿಗೆ ವರದಿಮಾಡತಕ್ಕದಾಗಿದೆ. ಅಂತಹ ಮಾಹಿತಿಯು ಲಭಿಸಿದಾಗ ಅಂತಹ ರೋಗಗಳ ಹರಡುವಿಕೆಯನ್ನು ನಿಯಂತ್ರಿಸಲೂ ಅದನ್ನು ನಿರ್ಮೂಲನೆ ಮಾಡಲೂ ಸಾರ್ವಜನಿಕಾರೋಗ್ಯ ಅಧಿಕಾರಿಗಳು ಕೂಡಲೇ ಪ್ರತಿಕ್ರಿಯಿಸತಕ್ಕದ್ದು.

(5) ಉಪ-ವಿಭಾಗ (4)ರಲ್ಲಿ ಉಲ್ಲೇಖಿಸಿರುವ ಒಂದು ಘಟನೆಯನ್ನು ವರದಿ ಮಾಡಲು ವಿಫಲ ಹೊಂದುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯು 65ನೇ ವಿಭಾಗದಲ್ಲಿ ನಿಗದಿಪಡಿಸಬಹುದಾದಂತಹ ದಂಡಕ್ಕೆ ಬಾಧ್ಯಸ್ಥನಾಗುವನು.

This is a digitally signed Gazette.
Authenticity may be verified through https://compose.kerala.gov.in/

23

29. ವಲಸೆ ಕಾರ್ಮಿಕರ ಆರೋಗ್ಯ ಸಂರಕ್ಷಣೆ ಮತ್ತು ಸಾಂಕ್ರಾಮಿಕ ರೋಗ ತಡೆಗಟ್ಟುವಿಕೆ.—ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಆರೋಗ್ಯ ಇಲಾಖೆಯ, ಕಾರ್ಮಿಕ ಇಲಾಖೆಯ ಮತ್ತು ಸ್ಥಳೀಯಾಡಳಿತಗಳ ಸಹಕಾರದಿಂದ ಈ ಕೆಳಗಿನ ಚಟುವಟಿಕೆಗಳನ್ನು ನಡೆಸತಕ್ಕದ್ದು,—

(i) ವಲಸೆ ಕಾರ್ಮಿಕರ ಆರೋಗ್ಯ ತಪಾಸಣೆಗಳನ್ನು ಸರಿಯಾದ ಮಧ್ಯಾಂತರಗಳಲ್ಲಿ ಆರೋಗ್ಯ ಇಲಾಖೆಯ ಸಹಾಯದಿಂದ ಆಯೋಜಿಸತಕ್ಕದ್ದು, ಮತ್ತು ಜಾರಿಗೊಳಿಸಲಾಗುತ್ತಿದೆ ಎಂದು ಖಾತರಿಪಡಿಸತಕ್ಕದ್ದು;

(ii) ಅಂತಹ ತಪಾಸಣೆಗಳಲ್ಲಿ, ರಾಜ್ಯದಿಂದ ನಿರ್ಮೂಲನೆಮಾಡುವಲ್ಲಿ ಆರೋಗ್ಯ ಕಾರ್ಯಕ್ರಮಗಳು ಅಸ್ತಿತ್ವದಲ್ಲಿರುವ ಸಾಂಕ್ರಾಮಿಕ ರೋಗಗಳು ಅಥವಾ ರೋಗಗಳನ್ನು ಪತ್ತೆಹಚ್ಚಿದ್ದಲ್ಲಿ, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯವರಿಗೆ ಲಿಖಿತವಾಗಿ ತಿಳಿಸತಕ್ಕದ್ದು;

(iii) ವಲಸೆ ಕಾರ್ಮಿಕರ ವಾಸ ಸ್ಥಳಗಳಲ್ಲಿ ಯಾರಿಗಾದರೂ ಯಾವುದೇ ಸಾಂಕ್ರಾಮಿಕ ರೋಗವು ಹಿಡಿದಿದ್ದಲ್ಲಿ ಅಥವಾ ಹರಡಿದ್ದಲ್ಲಿ ಅಂತಹವರಿಗೆ ಚಿಕಿತ್ಸೆಯು ಲಭ್ಯವಾಗುತ್ತಿದೆ ಎಂದು ಖಾತ್ರಿಪಡಿಸತಕ್ಕದ್ದು ಮತ್ತು ಆಯಾಯ ಸ್ಥಳಗಳಲ್ಲಿ ಸಾಂಕ್ರಾಮಿಕ ರೋಗ ತಡೆಗಟ್ಟುವಿಕೆಗೆ ಮತ್ತು ನಿಯಂತ್ರಣೆಗೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

30. ಐಸೋಲೇಶನ್ ಆಸ್ಪತ್ರೆಗಳ ಮತ್ತು ವಾರ್ಡ್‌ಗಳ ಪಾಲನೆ.—(1) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು, ರೋಗದ ಲಕ್ಷಣದಿಂದಾಗಿ ಅಗತ್ಯವಾದಲ್ಲಿ ಸ್ಥಳೀಯಾಡಳಿತಗಳ ಸಹಕಾರದಿಂದ ಈ ಕೆಳಗಿನ ಚಟುವಟಿಕೆಗಳನ್ನು ನಡೆಸತಕ್ಕದ್ದು, ಅದೇನೆಂದರೆ:—

(ಎ) ಸೋಂಕು ರೋಗ ಅಥವಾ ಅಧಿಸೂಚಿಸಬೇಕಾದ ಸೋಂಕು ರೋಗ ಸೋಂಕಿದ ವ್ಯಕ್ತಿಗಳನ್ನು ತಪಾಸಣೆಮಾಡಲು ಮತ್ತು ಚಿಕಿತ್ಸೆಗಾಗಿ ಆಸ್ಪತ್ರೆಗಳನ್ನು ಮತ್ತು ವಾರ್ಡ್‌ಗಳನ್ನು ಅಥವಾ ಇತರ ಸ್ಥಳಗಳನ್ನು ಸಜ್ಜೀಕರಿಸುವುದು;

(ಬಿ) ಸೋಂಕು ರೋಗ ಅಥವಾ ಅಧಿಸೂಚಿಸಬೇಕಾದ ಸೋಂಕು ರೋಗಗಳು ಸೋಂಕಿದ ವ್ಯಕ್ತಿಗಳನ್ನು ಸಾಗಿಸುವುದಕ್ಕೆ ಅವಶ್ಯಕವಾದ ವಾಹನ ಸೌಕರ್ಯಗಳನ್ನು ನೀಡುವುದು ಮತ್ತು ಪರಿಪಾಲನೆಯನ್ನು ಮಾಡುವುದು;

(ಸಿ) ಸೋಂಕುರೋಗ ಅಥವಾ ಅಧಿಸೂಚಿಸಬೇಕಾದ ಸೋಂಕುರೋಗ ಸೋಂಕಿದ ಅಥವಾ ಸೋಂಕಿರುವುದಾಗಿ ಸಂದೇಹಪಡುವಂತಹ ವ್ಯಕ್ತಿಗಳಿಗೆ ರೋಗ ನಿರ್ಣಯಕ್ಕೆ ಮತ್ತು ಚಿಕಿತ್ಸೆಗಾಗಿ ಸಜ್ಜೀಕರಣಗಳನ್ನು ಏರ್ಪಡಿಸುವುದು, ಅಲ್ಲದೆ

(ಡಿ) ವೈರಾಣುವಿಗೆ ವಿಧೇಯವಾದ ವಾಹನಗಳನ್ನು, ವಸ್ತ್ರಗಳನ್ನು, ಹಾಸಿಗೆಗಳನ್ನು ಅಥವಾ ಇತರ ಸಾಮಾಗ್ರಿಗಳು ಇತ್ಯಾದಿಗಳನ್ನು ಸೂಕ್ತವಾದ ರೀತಿಯಲ್ಲಿ ವೈರಾಣು ಮುಕ್ತಗೊಳಿಸಲಾಗಿದೆಯೆಂದು ಖಾತ್ರಿಪಡಿಸತಕ್ಕದ್ದು.

(2) ಪ್ರತಿಯೊಂದು ರೋಗ ಶುಶ್ರೂಷೆ ಸಂಸ್ಥೆಯು,—

(ಎ) ಪ್ರದೇಶದ ಸೋಂಕುರೋಗದ ಅಥವಾ ಅಧಿಸೂಚಿಸಬೇಕಾದ ಸೋಂಕುರೋಗಕ್ಕೆ ಸಂಬಂಧಿಸಿದ ವಿವರಗಳನ್ನು;

(ಬಿ) ಸೋಂಕು ರೋಗ ಅಥವಾ ಅಧಿಸೂಚಿಸಬೇಕಾದ ಸೋಂಕುರೋಗ ಸೋಂಕಿದ ಅಥವಾ ಸೋಂಕಿರುವುದಾಗಿ ಅನುಮಾನಿಸಲ್ಪಡುವವರಿಗೆ ರೋಗ ನಿರ್ಣಯ, ನೀಡುವ ಸೇವೆಗಳು ಎಂಬವುಗಳ ವಿಶದಾಂಶಗಳನ್ನು;

(ಸಿ) ಅಂತಹ ವ್ಯಕ್ತಿಗಳಿಗೆ ಅವಶ್ಯಕವಾದ ವೈದ್ಯಕೀಯ ಚಿಕಿತ್ಸೆ ಮತ್ತು ಅದರ ವಿಶದಾಂಶಗಳು, ಇತ್ಯಾದಿಗಳನ್ನು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಮತ್ತು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಗೆ ವರದಿ ಮಾಡತಕ್ಕದ್ದು.

31. ವೈದ್ಯಕೀಯ ವೃತ್ತಿಗಾರರು ಸೋಂಕುರೋಗಗಳ ಮತ್ತು ಅಧಿಸೂಚಿಸಬೇಕಾದ ಸೋಂಕುರೋಗಗಳ ವಿವರವನ್ನು ನೀಡಬೇಕೆಂದು ಹಾಗೂ ನಿಗದಿಪಡಿಸಿದ ಚಿಕಿತ್ಸೆ ಮಾನದಂಡಗಳನ್ನು ಪಾಲಿಸಬೇಕೆಂದು.—(1) ಯಾವುದೇ ವೈದ್ಯಕೀಯ ಪದ್ಧತಿಯ ಪ್ರತಿಯೋರ್ವ ವೈದ್ಯಕೀಯ ವೃತ್ತಿಗಾರನು, ತನ್ನ ವೃತ್ತಿಯ ವೇಳೆಯಲ್ಲಿ ಯಾವುದೇ ಖಾಸಗಿ ಅಥವಾ ಸಾರ್ವಜನಿಕ ವಸತಿ ಸ್ಥಳದಲ್ಲಿ ಸೋಂಕುರೋಗ ಅಥವಾ ಅಧಿಸೂಚಿಸಬೇಕಾದ ಸೋಂಕುರೋಗವು ಅಸ್ತಿತ್ವದಲ್ಲಿದೆಯೆಂದು ತಿಳಿದಲ್ಲಿ ಅಲ್ಲದಿದ್ದಲ್ಲಿ ಅದರಿಂದ ಮರಣಹೊಂದಿರುವನೆಂದು ತಿಳಿದಲ್ಲಿ ಅಥವಾ ನಂಬಲು ಕಾರಣವಿದ್ದಲ್ಲಿ ಆ ಸಂಗತಿಯನ್ನು ಮೊದಲು ತಿಳಿಸದಿದ್ದಲ್ಲಿ ಗರಿಷ್ಠ ಇಪ್ಪತ್ತನಾಲ್ಕು ಗಂಟೆಯೊಳಗೆ, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅಥವಾ ಇದಕ್ಕಾಗಿ ಸರಕಾರವು ಅಧಿಸೂಚಿಸಿರುವ ಇತರ ಯಾವುದೇ ಅಧಿಕಾರಿಗೆ ಆ ವಿಷಯವನ್ನು ತಿಳಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

24

(2) 28ನೇ ವಿಭಾಗ ಪ್ರಕಾರ ಸರಕಾರವು ಒಂದು ಸಾಂಕ್ರಾಮಿಕ ರೋಗವೆಂದು ಅಧಿಸೂಚಿಸಿದ್ದಲ್ಲಿ, ಮಾದರಿಯ ಸಂಗ್ರಹಣೆ ಮತ್ತು ರೋಗ ನಿರ್ಣಯ ಚಿಕಿತ್ಸಾ ಕ್ರಮಗಳು ಒಳಗೊಂಡು ಆ ರೋಗವನ್ನು ನಿರ್ವಹಿಸಲು ಮಾತ್ರವಾಗಿ ಅನುಸರಿಸಬೇಕಾದ, ನಿರ್ವಹಣಾ ರೀತಿಗಳನ್ನು ನಿರ್ದೇಶಿಸಿದ್ದಲ್ಲಿ, ಅಂತಹ ರೋಗದ ಲಕ್ಷಣಗಳಿರುವ ರೋಗಿಗಳಿಗೆ ಚಿಕಿತ್ಸೆ ನೀಡುವ ಎಲ್ಲಾ ವೈದ್ಯಕೀಯ ವೃತ್ತಿಗಾರರು ಹಾಗೂ ಆರೋಗ್ಯ ಸಂರಕ್ಷಣೆ ಸಂಸ್ಥೆಗಳು ಅಂತಹ ನಿರ್ವಹಣೆ ರೀತಿಯನ್ನು, ಕ್ರಮಗಳನ್ನು ಪಾಲಿಸತಕ್ಕದ್ದು.

(3) ಉಪ-ವಿಭಾಗ (1) ಮತ್ತು (2)ರ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ನೋಂದಾಯಿತ ವೈದ್ಯಕೀಯ ವೃತ್ತಿಗಾರರು ಮತ್ತು ಆರೋಗ್ಯ ಸಂರಕ್ಷಣೆ ಸಂಸ್ಥೆಯು 65ನೇ ವಿಭಾಗದಲ್ಲಿ ನಿಗದಿಪಡಿಸಿದ ದಂಡಕ್ಕೆ ಬಾಧ್ಯಸ್ಥನಾಗುವನು.

32. ಸೋಂಕುರೋಗದ ಮತ್ತು ಅಧಿಸೂಚಿಸಬೇಕಾದ ಸೋಂಕು ರೋಗದ ಹರಡುವಿಕೆಯನ್ನು ತಡೆಗಟ್ಟುವ ರೀತಿಗೆ ಸಂಬಂಧಿಸಿ ನಿರ್ದೇಶ ನೀಡತಕ್ಕದೆಂದು.—ಸೋಂಕುರೋಗ ಅಥವಾ ಅಧಿಸೂಚಿಸಬೇಕಾದ ಸೋಂಕುರೋಗ ಸೋಂಕಿದ ಒಬ್ಬ ವ್ಯಕ್ತಿಗೆ ಚಿಕಿತ್ಸೆ ನೀಡುವುದೋ ಅಥವಾ ಚಿಕಿತ್ಸೆ ನೀಡಬೇಕೆಂಬ ಉದ್ದೇಶದಿಂದ ಪರೀಕ್ಷೆ ಮಾಡುವ ಯಾವನೇ ವೈದ್ಯಕೀಯ ವೃತ್ತಿಗಾರನು, ಪ್ರಥಮ ಸಂದರ್ಶನದಲ್ಲಿ,—

(ಎ) ರೋಗ ಗುಣಮುಖವಾಗುವ ತನಕ ಚಿಕಿತ್ಸೆಯ ಅವಶ್ಯಕತೆಯ ಕುರಿತು ಅಂತಹ ವ್ಯಕ್ತಿಯನ್ನು ಮನವರಿಕೆ ಮಾಡತಕ್ಕದ್ದು;

(ಬಿ) ರೋಗ ಹರಡುವುದನ್ನು ತಡೆಯುವುದಕ್ಕೆ ಅವಶ್ಯಕವಾದ ವೈಜ್ಞಾನಿಕ ಕ್ರಮಗಳ ಕುರಿತು ಆತನಿಗೆ ನಿರ್ದೇಶಿಸತಕ್ಕದ್ದು;

(ಸಿ) ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿ ನಿರ್ದೇಶಿಸುವ ರೀತಿಯಲ್ಲಿ ರೋಗದ ಕುರಿತಿರುವ ಇತರ ವಿವರಗಳನ್ನು ಆತನಿಗೆ ನೀಡತಕ್ಕದ್ದು.

33. ಅಧಿಸೂಚಿಸಬೇಕಾದ ಸೋಂಕುರೋಗದಿಂದ ಒಬ್ಬ ವ್ಯಕ್ತಿಯು ಗುಣಮುಖವಾಗಿರುವುದಾಗಿ ನೋಂದಾಯಿತ ವೈದ್ಯಕೀಯ ವೃತ್ತಿಗಾರನು ಪ್ರಮಾಣೀಕರಿಸಬೇಕೆಂದು.—(1) 28ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ ಮತ್ತು 31ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ಸಾಂಕ್ರಾಮಿಕ ರೋಗಗಳೋ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಲ್ಲಿ ಒಳಗೊಂಡ ವೈರಾಣುಗಳೋ ಸೋಂಕಿದ ಒಬ್ಬ ವ್ಯಕ್ತಿಗೆ ಅದರಿಂದ ಗುಣಮುಖನಾದ ನಂತರ, ರೋಗದಿಂದ ಗುಣಮುಖನಾದ ಎಂಬ ಪ್ರಮಾಣ ಪತ್ರವನ್ನು ನೀಡಬೇಕಾದ ಸನ್ನಿವೇಶದಲ್ಲಿ ಆ ವ್ಯಕ್ತಿಗೆ ಚಿಕಿತ್ಸೆ ನೀಡಿದ ವೈದ್ಯಕೀಯ ವೃತ್ತಿಗಾರನೇ, ಲ್ಯಾಬ್ ತಪಾಸಣೆಗಳು ಒಳಗೊಂಡ ಅವಶ್ಯಕವಾದ ಎಲ್ಲಾ ತಪಾಸಣೆಗಳನ್ನು ನಡೆಸಿ, ರೋಗ ಗುಣಮುಖ ಪ್ರಮಾಣ ಪತ್ರವನ್ನು ನಿಗದಿತ ಮಾದರಿಯಲ್ಲಿ ನೀಡತಕ್ಕದ್ದು.

(2) ಉಪ-ವಿಭಾಗ (1)ರಲ್ಲಿ ಉಲ್ಲೇಖಿಸಿದಂತಹ ಪ್ರಮಾಣಪತ್ರವನ್ನು ನೀಡಲು ಒಬ್ಬ ವೈದ್ಯಕೀಯ ವೃತ್ತಿಗಾರನು ತಕ್ಕುದಾದ ಕಾರಣವಿಲ್ಲದೆ ಸಮ್ಮತಿಸದಿದ್ದಲ್ಲಿ ಅಥವಾ (1)ನೇ ಉಪ-ವಿಭಾಗ ಪ್ರಕಾರ ಚಿಕಿತ್ಸೆ ನೀಡದೆ ಪ್ರಮಾಣಪತ್ರವನ್ನು ನೀಡಿದ್ದಲ್ಲಿ 65ನೇ ವಿಭಾಗದಲ್ಲಿ ನಿಗದಿಪಡಿಸಿದ ದಂಡಕ್ಕೆ ಬಾಧ್ಯಸ್ಥನಾಗುವನು.

34. ಸಂಶಯಾಸ್ಪದವಾದ ಮೂಲದಿಂದಿರುವ ನೀರಿನ, ಆಹಾರದ ಅಥವಾ ಪಾನೀಯದ ಬಳಕೆಗೆ ನಿಷೇಧ.—(1) ನೈರ್ಮಲ್ಯ ಹಾಗೂ ಶುಚಿತ್ವವನ್ನು ಪರಿಶೋಧಿಸಿದ ಅನಂತರ, ಯಾವುದೇ ಟ್ಯಾಂಕಿನ ಅಥವಾ ಬಾವಿಯ, ಟ್ಯಾಂಕರ್ ಕಂಟೈನರ್‌ನ ಅಥವಾ ಇತರ ಸ್ಥಳದ ಜಲವನ್ನು ಬಳಸಿದ್ದಲ್ಲಿ ಅಥವಾ ಕುಡಿದಲ್ಲಿ ಅಥವಾ ಇತರ ಯಾವುದೇ ಗೃಹಬಳಕೆ ಅಥವಾ ವ್ಯಾಪಾರದ ಅವಶ್ಯಕತೆಗೆ ಬಳಸಿದ್ದಲ್ಲಿ ಯಾವುದೇ ಸೋಂಕುರೋಗದ ಅಥವಾ ಅಧಿಸೂಚಿಸಬೇಕಾದ ಸೋಂಕುರೋಗದ ಹರಡುವಿಕೆಗೆ ಕಾರಣವಾಗಲು ಸಾಧ್ಯತೆಯಿದೆ ಎಂದು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಮನವರಿಕೆಯಾದಲ್ಲಿ, ಮೇಲೆ ಹೇಳಿದ ಮೂಲಗಳಲ್ಲಿನ ಜಲದ ಬಳಕೆಯನ್ನು ನಿಷೇಧಿಸಲು ಆತನಿಗೆ ಅಧಿಕಾರವಿರುವುದಾಗಿದೆ.

(2) ನೈರ್ಮಲ್ಯ ಹಾಗು ಶುಚಿತ್ವವನ್ನು ಪರಿಶೋಧಿಸಿದ ಅನಂತರ, ಸಾರ್ವಜನಿಕ ಬಳಕೆಗೆ ಅಥವಾ ಇತರ ಯಾವುದೇ ಗೃಹ ಬಳಕೆಗೆ ಅಥವಾ ವ್ಯಾಪಾರದ ಉದ್ದೇಶದಿಂದಿರುವ ಆಹಾರ ಅಥವಾ ಪಾನೀಯವು ಇತರ ಯಾವುದೇ ಸೋಂಕು ರೋಗದ ಹರಡುವಿಕೆಗೆ ಕಾರಣವಾಗಲು ಸಾಧ್ಯತೆ ಇದೆಯೆಂದು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಮನವರಿಕೆಯಾದಲ್ಲಿ ಮೇಲೆ ಹೇಳಿದ ಆಹಾರದ ಅಥವಾ ಪಾನೀಯದ, ಸಾಮಾನ್ಯವಾಗಿ ಅಲ್ಲದಿದ್ದಲ್ಲಿ ನಿರ್ದಿಷ್ಟವಾಗಿ ಹೇಳಿರುವ ಅವಶ್ಯಕತೆಗೆ ಬಳಸುವುದನ್ನು ನಿಷೇಧಿಸಲು ಅಧಿಕಾರವಿರುವುದಾಗಿದೆ.

(3) (1)ನೇ ಉಪ-ವಿಭಾಗ ಪ್ರಕಾರ ಜಲದ ಮಾದರಿಯನ್ನು ತಪಾಸಣೆಮಾಡಬೇಕಾಗದ ಅವಶ್ಯಕತೆ ಇದ್ದಲ್ಲಿ ಅದನ್ನು ಶೇಖರಿಸಿ ತಪಾಸಣೆಗೆ ಕಳುಹಿಸಲೋ ಆಹಾರದ ಮಾದರಿಯನ್ನು ತಪಾಸಣೆಗಾಗಿ ಪಡೆಯಬೇಕಾಗಿದ್ದಲ್ಲಿ ಅದನ್ನು ಸಂಬಂಧಪಟ್ಟ ಸರ್ಕಲ್ ಆಹಾರ ಭದ್ರತಾ ಅಧಿಕಾರಿಯೊಡನೆ ಅವಶ್ಯಪಡಲೋ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅಧಿಕಾರ ಇರುವುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

25

(4) (2)ನೇ ಉಪ-ವಿಭಾಗ ಪ್ರಕಾರ ಬಳಸುವುದನ್ನು ನಿಷೇಧಿಸಿರುವ ಆಹಾರವನ್ನೋ ಪಾನೀಯವನ್ನೋ ಯಾವುದೇ ವ್ಯಕ್ತಿಯು ಬಳಸುವುದೋ ಉಪಯೋಗಿಸುವುದೋ ಮಾಡತಕ್ಕದ್ದಲ್ಲ.

(5) ಈ ವಿಭಾಗದ ಪ್ರಕಾರ ನಿಷೇಧ ಜಾರಿಗೊಳಿಸುವ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಅದನ್ನು ಸಾಧ್ಯವಾದಷ್ಟು ಬೇಗನೆ, ಯಾವುದೇ ವಿಷಯದಲ್ಲೂ ಗರಿಷ್ಠ ಇಪ್ಪತ್ತನಾಲ್ಕು ಗಂಟೆಯೊಳಗೆ, ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗೆ ತಿಳಿಸತಕ್ಕದ್ದು.

(6) ಉಪ-ವಿಭಾಗ (4)ರ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ಸಂಸ್ಥೆ, ವ್ಯಕ್ತಿಯು 65ನೇ ವಿಭಾಗದಲ್ಲಿ ನಿಗದಿಪಡಿಸಿದ ದಂಡಕ್ಕೆ ಬಾಧ್ಯಸ್ಥನಾಗುವನು.

35. ರೋಗಸೋಂಕಿದವನನ್ನು ಆಸ್ಪತ್ರೆಗೆ ವರ್ಗಾಯಿಸುವುದು.—(1) ಅಧಿಸೂಚಿಸಬೇಕಾದ ಸೋಂಕುರೋಗ ಸೋಂಕಿದ ಯಾವುದೇ ವ್ಯಕ್ತಿಗೆ ಈ ಕೆಳಗಿನ ಯಾವುದೇ ಸ್ಥಿತಿಯಿದೆ ಎಂದು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಮನವರಿಕೆಯಾದಲ್ಲಿ, ರೋಗ ಹರಡುವುದನ್ನು ತಡೆಯಲೂ ಚಿಕಿತ್ಸೆ ನೀಡಲೂ ಅಂತಹ ವ್ಯಕ್ತಿಯನ್ನು ಅವಶ್ಯಕವಾದ ಸ್ಥಳಕ್ಕೆ ವರ್ಗಾಯಿಸಲು ಸ್ಥಳೀಯಾಡಳಿತ ಸರಕಾರದ ಸಹಾಯದಿಂದ ಅವರು ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಅದೇನೆಂದರೆ:—

(i) ಒಂದಕ್ಕಿಂತ ಹೆಚ್ಚು ಕುಟುಂಬಗಳು ವಾಸಿಸುವ ಸ್ಥಳದಲ್ಲಿ ವಾಸಿಸುವುದಾದಲ್ಲಿ;

(ii) ರೋಗ ಹರಡುವಿಕೆಯನ್ನು ತಡೆಗಟ್ಟಲು ಮತ್ತು ಚಿಕಿತ್ಸೆ ಮೇಲ್ನೋಟಕ್ಕೆ ಅವಶ್ಯಕವಾದ ವ್ಯವಸ್ಥೆಗಳು ಇಲ್ಲದಿದ್ದಲ್ಲಿ;

(iii) ಪ್ರಸ್ತುತ ಸ್ಥಳದಲ್ಲಿ ಈ ರೋಗಿಯ ಸಾನ್ನಿಧ್ಯವು ಇತರ ವ್ಯಕ್ತಿಗಳ ಆರೋಗ್ಯಕ್ಕೆ ಅಪಾಯಕರವಾಗಿದ್ದಲ್ಲಿ;

(iv) ರೋಗಿಯ ಸುರಕ್ಷೆಗೆ ಅಥವಾ ಚಿಕಿತ್ಸೆಗೆ ಅಥವಾ ಇತರ ಕಾರಣಗಳಿಂದ ರೋಗಿಯನ್ನು ಆಸ್ಪತ್ರೆಗೆ ಅಥವಾ ಅಂತಹ ರೋಗ ಇರುವವರನ್ನು ಪರಿಪಾಲಿಸುವ ಸ್ಥಳಕ್ಕೆ ಸ್ಥಳಾಂತರಿಸಬೇಕೆಂದು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಉತ್ತಮ ಮನವರಿಕೆಯಾಗಿದ್ದಲ್ಲಿ.

(2) ಯಾವನೇ ವ್ಯಕ್ತಿಯು ಅಂತಹ ಆಸ್ಪತ್ರೆಯ ಅಥವಾ ಸ್ಥಳದ ಹೊಣೆಗಾರಿಕೆಯಿರುವ ವೈದ್ಯಕೀಯ ಅಧಿಕಾರಿಯವರ ಅನುಮತಿ ಇಲ್ಲದೆ ಯಾವುದೇ ಆಸ್ಪತ್ರೆಯಿಂದ ಅಥವಾ (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿರುವ ಇತರ ಸ್ಥಳದಿಂದ ಬಿಟ್ಟು ಹೋಗುವುದೋ ಯಾರಾದರೂ ಆ ವ್ಯಕ್ತಿಯನ್ನು ಕೊಂಡುಹೋಗುವುದೋ ಮಾಡತಕ್ಕದ್ದಲ್ಲ.

(3) ಉಪ-ವಿಭಾಗ (1)ರ ಪ್ರಕಾರ, ಆಸ್ಪತ್ರೆಗೆ ಅಥವಾ ಸ್ಥಳಕ್ಕೆ ರೋಗಿಯನ್ನು ವರ್ಗಾಯಿಸುವುದನ್ನು ತಡೆಯುವ ಅಥವಾ ಉಪ-ವಿಭಾಗ (2)ರ ವಿರುದ್ಧವಾಗಿ ಅಂತಹ ಆಸ್ಪತ್ರೆಯಿಂದ ಬಿಟ್ಟುಹೋಗುವ ಯಾವುದೇ ವ್ಯಕ್ತಿಯು 65ನೇ ವಿಭಾಗದಲ್ಲಿ ನಿಗದಿಪಡಿಸಿದ ದಂಡಕ್ಕೆ ಬಾಧ್ಯಸ್ಥನಾಗುವನು.

36. ಜನರಿಗೆ ವೈರಾಣುಭಾಧೆಯುಂಟಾಗುವ ರೀತಿಯಲ್ಲಿ ಸಂಪರ್ಕಗೊಳ್ಳುವುದಕ್ಕೆ ನಿಷೇಧ.—(1) ಈ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿರುವ ಅಧಿಸೂಚಿಸಬೇಕಾದ ಸೋಂಕುರೋಗ ತಗಲಿರುವುದಾಗಿ ತಿಳಿದಿರುವ ಯಾವನೇ ವ್ಯಕ್ತಿಯು,—

(i) ಯಾವುದೇ ಮಾರುಕಟ್ಟೆ, ಥಿಯೇಟರ್ ಅಥವಾ ಮನೋರಂಜನೆ ಅಥವಾ ಸಭೆ ಸೇರುವುದಕ್ಕಿರುವ ಇತರ ಸ್ಥಳ; ಅಥವಾ

(ii) ಯಾವುದೇ ಶಾಲೆ, ಕಾಲೇಜು, ಗ್ರಂಥಾಲಯ, ಕ್ರೀಡಾಂಗಣ ಇತ್ಯಾದಿ ಸ್ಥಳಗಳು; ಅಥವಾ

(iii) ಯಾವುದೇ ಹಾಸ್ಟೆಲು, ಹೋಟೆಲು, ಲಘು ಭೋಜನಶಾಲೆ, ರಿಸೋರ್ಟ್, ಸ್ಟೇ ಹೋಮ್, ಛತ್ರ, ಬಾಡಿಗೆ ಮನೆ, ಹೌಸ್ ಬೋಟು, ಕ್ಲಬ್ ಅಥವಾ ವಾಟರ್ ಥೀಮ್ ಪಾರ್ಕ್; ಅಥವಾ

(iv) ಯಾವುದೇ ಕಾರ್ಖಾನೆ, ಅಂಗಡಿ, ವರ್ಕ್‌ಶಾಪ್ ಅಥವಾ ವರ್ಕ್‌ಪ್ಲೇಸ್; ಅಥವಾ

(v) ಯಾವುದೇ ಸಾರ್ವಜನಿಕ ವಾಹನ ಸೌಲಭ್ಯ; ಅಥವಾ

(vi) ಯಾವುದೇ ಸಾರ್ವಜನಿಕ ಸ್ನಾನ ಸ್ಥಳ; ಅಥವಾ

(vii) ಯಾವುದೇ ಇತರ ಸಾರ್ವಜನಿಕ ಮನೋರಂಜನಾ ಸ್ಥಳ, ಸಾರ್ವಜನಿಕ ಸ್ಥಳ, ಇತ್ಯಾದಿ ಸ್ಥಳಗಳಲ್ಲಿ ತನ್ನ ಇರುವಿಕೆಯಿಂದ ಅಥವಾ ಚಟುವಟಿಕೆಯಿಂದ ವೈರಾಣುಬಾಧೆಯೆಂಬ ಅಪಾಯವನ್ನು ಉಂಟುಮಾಡತಕ್ಕದ್ದಲ್ಲ.

This is a digitally signed Gazette.
Authenticity may be verified through https://compose.kerala.gov.in/

ವಿವರಣೆ:—ಒಬ್ಬ ವ್ಯಕ್ತಿಗೆ ಅಧಿಸೂಚಿಸಬೇಕಾದ ಸೋಂಕುರೋಗ ಸೋಂಕಿದೆ ಎಂದು ಯಾವುದೇ ಒಬ್ಬ ವೈದ್ಯಕೀಯ ವೃತ್ತಿಗಾರ ಅಥವಾ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಆತನಿಗೆ ತಿಳಿಸಿದ್ದಲ್ಲಿ ಆತನು ಆ ರೀತಿ ಸೋಂಕು ಇರುವವನೆಂದು ತಿಳಿದಿರುವುದಾಗಿ ಈ ಉಪ-ವಿಭಾಗದ ಅರ್ಥದ ಪ್ರಕಾರ ಭಾವಿಸತಕ್ಕದ್ದು.

(2) ಅಧಿಸೂಚಿಸಬೇಕಾದ ಸೋಂಕುರೋಗ ಸೋಂಕಿರುವ ವ್ಯಕ್ತಿಯ ಅಥವಾ ವ್ಯಕ್ತಿಗಳ ಶುಶ್ರೂಷೆಯ ಹೊಣೆಗಾರಿಕೆಯಿರುವ ಯಾವನೇ ವ್ಯಕ್ತಿಯು (1)ನೇ ಉಪ-ವಿಭಾಗದಲ್ಲಿ ಹೇಳಿರುವ ಸ್ಥಳಗಳಲ್ಲಿ ಅಂತಹ ವ್ಯಕ್ತಿಯ ಸಾನಿಧ್ಯದಿಂದ ಅಥವಾ ಚಟುವಟಿಕೆಯಿಂದ ಇತರರಿಗೆ ಅಪಾಯ ಉಂಟಾಗುವಂತೆ ಮಾಡತಕ್ಕದ್ದಲ್ಲ.

(3) ಉಪ-ವಿಭಾಗ (1) ಮತ್ತು (2)ರ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು 65ನೇ ವಿಭಾಗದಲ್ಲಿ ನಿಗದಿಪಡಿಸಿದ ದಂಡಕ್ಕೆ ಬಾಧ್ಯಸ್ಥನಾಗಿರುವನು.

37. ಸೋಂಕಿತರು ಕೆಲವು ವ್ಯಾಪಾರದಲ್ಲಿ ಹಾಗೂ ಉದ್ಯೋಗದಲ್ಲಿ ನಿರತರಾಗತಕ್ಕದ್ದಲ್ಲೆಂದು.—(1) ಅಧಿಸೂಚಿಸಬೇಕಾದ ಸೋಂಕುರೋಗವಿರುವ ಯಾವನೇ ವ್ಯಕ್ತಿಯು ಅವರು ಅಂತಹ ರೋಗವು ಹರಡಲು ಸಾಧ್ಯತೆಯಿರುವ ಸನ್ನಿವೇಶದಲ್ಲಿ ಈ ಕೆಳಗಿನ ಚಟುವಟಿಕೆಗಳನ್ನು ಮಾಡತಕ್ಕದ್ದಲ್ಲ, ಅದೇನೆಂದರೆ:—

(ಎ) ಇತರರಿಗೆ ಬಳಕೆಗಿರುವ ಯಾವುದೇ ಆಹಾರ ಸಾಮಾಗ್ರಿಗಳನ್ನು ತಯಾರಿಸುವುದೋ ವಿತರಿಸುವುದೋ ಮಾರಾಟಕ್ಕಾಗಿ ಕೊಂಡುಹೋಗುವುದೋ ಇಡುವುದೋ ಮಾರಾಟಕ್ಕಾಗಿ ತಯಾರಿಸುವುದೋ ಇಡುವುದೋ ಕೊಂಡುಹೋಗುವುದೋ ಆದ ಕೆಲಸಗಳಲ್ಲಿ ಭಾಗಿಯಾಗುವುದೋ;

(ಬ) ಇತರರಿಗೆ ವೈರಾಣು ಹರಡಲು ಕಾರಣವಾಗುವ ಯಾವುದೇ ಚಟುವಟಿಕೆಯನ್ನು ಮಾಡುವುದು.

(2) ಉಪ-ವಿಭಾಗ (1)ರ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು 65ನೇ ವಿಭಾಗದಲ್ಲಿ ನಿಗದಿಪಡಿಸಿದ ದಂಡಕ್ಕೆ ಬಾಧ್ಯಸ್ಥನಾಗಿರುವನು.

38. ವೈರಾಣುವಿನ ಹರಡುವಿಕೆಯನ್ನು ತಡೆಯಲು ಕಟ್ಟಡಗಳ ಹಾಗೂ ಸ್ಥಳಗಳ ವಶಪಡಿಸುವಿಕೆ.—(1) ಸಾಂಕ್ರಾಮಿಕ ರೋಗ ತಡೆಗಟ್ಟುವಿಕೆ, ಪ್ರತಿರೋಧಕ ಚಟುವಟಿಕೆಗಳನ್ನು ದಕ್ಷವಾಗಿ ನಡೆಸಬೇಕಾದ ಅವಶ್ಯಕತೆಗಾಗಿ ಜಿಲ್ಲಾಧಿಕಾರಿಯವರ ಅನುಮತಿಯಿಂದ ಯಾವುದೇ ಕಟ್ಟಡದೊಳಗೆ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಪ್ರವೇಶಿಸಬಹುದಾಗಿದೆ ಮತ್ತು ಅಗತ್ಯವಿದ್ದಲ್ಲಿ ನಿಗದಿಪಡಿಸಬಹುದಾದ ರೀತಿಯಲ್ಲಿ ಅದನ್ನು ತಾತ್ಕಾಲಿಕವಾಗಿ ವಶಪಡಿಸಿಕೊಳ್ಳಬಹುದಾಗಿದೆ. ಈ ಚಟುವಟಿಕೆಗಳನ್ನು ನಡೆಸುವುದಕ್ಕಾಗಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಸ್ಥಳೀಯಾಡಳಿತ ಸಂಸ್ಥೆಗಳ ಸಹಕಾರವನ್ನು ಖಾತ್ರಿಪಡಿಸಬಹುದಾಗಿದೆ.

(2) ಮೇಲೆ ಹೇಳಿದಂತಹ ಕಟ್ಟಡದ ಅಥವಾ ಸ್ಥಳದ ವಶಪಡಿಸುವಿಕೆಯು ಕೊನೆಗೊಂಡಾಗ ಅಥವಾ ಬಳಕೆಯು ಕೊನೆಗೊಂಡಾಗ ಯಜಮಾನನಿಗೆ ಮರಳಿ ನೀಡುವುದಕ್ಕಿಂತ ಮೊದಲು ಪ್ರಸ್ತುತ ಕಟ್ಟಡ ಅಥವಾ ಸ್ಥಳವನ್ನು ಸಂಪೂರ್ಣವಾಗಿ ವೈರಾಣು ಮುಕ್ತಗೊಳಿಸಿರುವುದಾಗಿ ಹಾಗೂ ಸ್ವಚ್ಛಗೊಳಿಸುವುದಾಗಿ ಸ್ಥಳೀಯಾಡಳಿತದ ಸಹಾಯದಿಂದ ಸಾರ್ವಜನಿಕಾರೋಗ್ಯ ಅಧಿಕಾರಿಯು ಖಾತ್ರಿಪಡಿಸತಕ್ಕದ್ದು.

39. ಪ್ರತಿರೋಧಕ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಪ್ರವೇಶಿಸುವುದಕ್ಕಿರುವ ಅಧಿಕಾರ.—(1) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅಥವಾ ಇದಕ್ಕಾಗಿ ಅಧಿಕೃತಗೊಳಿಸಿದ ಉದ್ಯೋಗಸ್ಥನಿಗೆ,—

(ಎ) ಯುಕ್ತವಾದ ಎಲ್ಲಾ ವೇಳೆಗಳಲ್ಲೂ, ಸಹಾಯಕರೊಂದಿಗೆ ಅಥವಾ ಅಲ್ಲದೆ ಸೋಂಕುರೋಗ ಅಥವಾ ಅಧಿಸೂಚಿಸಬೇಕಾದ ಸೋಂಕುರೋಗ ವರದಿಯಾದ ಅಥವಾ ಸಂದೇಹಪಡುವ ಕಾರ್ಖಾನೆಗಳು, ವರ್ಕ್‌ಶಾಪ್‌ಗಳು, ಕೆಲಸದ ಸ್ಥಳಗಳು, ಆಫೀಸುಗಳು, ವ್ಯಾಪಾರ ಸ್ಥಳಗಳು, ಶಿಕ್ಷಣ ಸಂಸ್ಥೆಗಳು, ಕಟ್ಟಡಗಳ ಆವರಣಗಳು, ತೋಟಗಳು ಮುಂತಾದ ಸ್ಥಳಗಳಲ್ಲಿ ನೋಟೀಸ್ ನೀಡದೆಯೂ ಮನೆಗಳು, ಅಪಾರ್ಟ್‌ಮೆಂಟುಗಳು ಒಳಗೊಂಡ ವಸತಿ ಸ್ಥಳಗಳಲ್ಲಿ ಎರಡು ಗಂಟೆಗಿಂತ ಮೊದಲು ನೋಟೀಸು ನೀಡಿದ ನಂತರವೂ ಪರಿಶೀಲಿಸಬಹುದಾಗಿದೆ;

(ಬ) ಅಂತಹ ಸ್ಥಳದ ಹೊರಗೆ ರೋಗದ ಹರಡುವಿಕೆಯನ್ನು ತಡೆಗಟ್ಟುವುದಕ್ಕಾಗಿ ಆತನಿಗೆ ಅಗತ್ಯವೆಂದು ತೋರುವಂತಹ ಕ್ರಮವನ್ನು ಕೈಗೊಳ್ಳಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

27

(2) ಈ ಚಟುವಟಿಕೆಗಳನ್ನೆಲ್ಲಾ ನಡೆಸುವುದಕ್ಕಾಗಿ ಸ್ಥಳೀಯಾಡಳಿತ ಸಂಸ್ಥೆಗಳ ಸಹಾಯವನ್ನು ಮತ್ತು ಸಹಕಾರವನ್ನು ಖಾತ್ರಿಪಡಿಸತಕ್ಕದ್ದು.

40. ಆಹಾರ ಸಿದ್ಧಪಡಿಸುವ ಸ್ಥಳಗಳ, ಲಾಡ್ಜಿಂಗ್ ಹೌಸ್‌ಗಳ ಮುಚ್ಚುವಿಕೆ.—(1) ಒಂದು ಲಾಡ್ಜಿಂಗ್ ಹೌಸ್‌ನಲ್ಲಿ ಅಥವಾ ಆಹಾರ ಸಾಮಾಗ್ರಿಗಳನ್ನು ಮಾರುವ ಅಥವಾ ಸಿದ್ಧಪಡಿಸುವ ಸ್ಥಳದಲ್ಲಿ ಅಥವಾ ಮಾರಾಟಕ್ಕಾಗಿ ಅಥವಾ ವಿತರಿಸುವುದಕ್ಕಾಗಿ ಇಟ್ಟಿರುವ ಸ್ಥಳದಲ್ಲಿ, ಅಧಿಸೂಚಿಸಬೇಕಾದ ಸೋಂಕುರೋಗ ಇದೆ ಎಂದು ಅಥವಾ ಇತ್ತೀಚೆಗಿನ ಸಮಯದಲ್ಲಿ ಇತ್ತೆಂಬ ಕಾರಣದಿಂದ ಅಂತಹ ಲಾಡ್ಜಿಂಗ್ ಹೌಸನ್ನು ಅಥವಾ ಸ್ಥಳವನ್ನು ಸಾರ್ವಜನಿಕಾರೋಗ್ಯದ ಹಿತಕ್ಕಾಗಿ ಮುಚ್ಚತಕ್ಕದೆಂದು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಮನವರಿಕೆಯಾದಲ್ಲಿ ಅಂತಹ ಸಂಸ್ಥೆಯನ್ನು ಅಥವಾ ಆದೇಶದಲ್ಲಿ ನಿಗದಿಪಡಿಸಬಹುದಾದ ಕಾಲಾವಧಿಯು ಮುಗಿಯುವ ತನಕ ಅಥವಾ ರೋಗಾವಸ್ಥೆಯಿಂದ ಗುಣಮುಖವಾಗಿರುವುದಾಗಿ ಒಬ್ಬ ವೈದ್ಯಕೀಯ ವೃತ್ತಿಗಾರನು ಪ್ರಮಾಣೀಕರಿಸುವ ತನಕ ಮುಚ್ಚಲು ಆದೇಶ ಮುಖೇನ ನಿರ್ದೇಶಿಸಲು ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅಧಿಕಾರ ಇರುವುದಾಗಿದೆ.

(2) ಉಪ-ವಿಭಾಗ (1)ರ ಆದೇಶಗಳನ್ನು ಉಲ್ಲಂಘಿಸುವ ಯಾವುದೇ ಸಂಸ್ಥೆ, ವ್ಯಕ್ತಿಯು 65ನೇ ವಿಭಾಗದಲ್ಲಿ ನಿಗದಿಪಡಿಸಿರುವ ದಂಡಕ್ಕೆ ಬಾಧ್ಯಸ್ಥರಾಗಿರುವರು.

41. ಸೋಂಕಿತರು ಉಪಯೋಗಿಸಿದ ವಸ್ತ್ರಗಳನ್ನು ದೋಬಿಖಾನೆಗೆ ನೀಡತಕ್ಕದ್ದಲ್ಲೆಂದು.—(1) ಸೋಂಕುರೋಗ ಅಥವಾ ಅಧಿಸೂಚಿಸಬೇಕಾದ ಸೋಂಕು ರೋಗವಿರುವ ವ್ಯಕ್ತಿ ಅಥವಾ ವ್ಯಕ್ತಿಗಳು ಬಳಸಿದ ವಸ್ತ್ರವನ್ನು ಅಥವಾ ಹಾಸಿಗೆಯನ್ನು ಅಥವಾ ಸಾಮಾಗ್ರಿಗಳನ್ನು ಈ ಕೆಳಗೆ ಹೇಳಿದ ಕ್ರಮಗಳನ್ನು ಮಾಡದೆ ಯಾವುದೇ ದೋಬಿಖಾನೆಗೆ ಅಥವಾ ಸಾರ್ವಜನಿಕ ಜಲಾಶಯಕ್ಕೆ, ಟ್ಯಾಂಕಿಗೆ ಅಥವಾ ಸಾರ್ವಜನಿಕ ಬಾವಿಗೆ ಒಗೆಯುವ ಅವಶ್ಯಕತೆಗಾಗಿ ಕಳುಹಿಸುವುದು ಅಥವಾ ತಲುಪಿಸುವುದು ಮಾಡತಕ್ಕದ್ದಲ್ಲ, ಅದೇನೆಂದರೆ:—

(ಎ) ಸಾರ್ವಜನಿಕಾರೋಗ್ಯ ಅಧಿಕಾರಿಯು ನಿರ್ದೇಶಿಸಿದ ರೀತಿಯಲ್ಲಿ ವೈರಾಣು ಮುಕ್ತಗೊಳಿಸುವುದು;

(ಬಿ) ವೈರಾಣು ತಗಲಿದುದೆಂದು ಮುನ್ನೆಚ್ಚರಿಕೆ ನೀಡುವುದು ಮತ್ತು ತಕ್ಕುದಾದ ಮುಂಜಾಗರೂಕತೆ ಕೈಗೊಳ್ಳುವುದು.

(2) ಉಪ-ವಿಭಾಗ (1)ರ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು 65ನೇ ವಿಭಾಗದಲ್ಲಿ ನಿಗದಿಪಡಿಸಿದ ದಂಡಕ್ಕೆ ಬಾಧ್ಯಸ್ಥನಾಗಿರುವನು.

42. ಸಾಮುದಾಯಿಕ ಒಟ್ಟುಗೂಡುವಿಕೆಯನ್ನು ನಿಯಂತ್ರಿಸುವುದಕ್ಕಿರುವ ಜಿಲ್ಲಾಧಿಕಾರಿಯವರ ಅಧಿಕಾರ.—(1) ಯಾವುದೇ ಸ್ಥಳೀಯ ಪ್ರದೇಶದಲ್ಲಿ ಅಥವಾ ಜಿಲ್ಲೆಯಲ್ಲಿ ಸೋಂಕುರೋಗ ಅಥವಾ ಅಧಿಸೂಚಿಸಬೇಕಾದ ಸೋಂಕುರೋಗವು ಅಸ್ತಿತ್ವದಲ್ಲಿರುವ ಸನ್ನಿವೇಶದಲ್ಲಿ ಅಂತಹ ಪ್ರದೇಶಗಳಲ್ಲಿನ ಅಂತಹ ಉದ್ದೇಶಕ್ಕಾಗಿರುವ ಸಾಮುದಾಯಿಕ ಒಟ್ಟುಗೂಡುವಿಕೆಯು ಸಾಂಕ್ರಾಮಿಕ ರೋಗ ಅಥವಾ ಅಧಿಸೂಚಿಸಬೇಕಾದ ಸಾಂಕ್ರಾಮಿಕ ರೋಗವು ಹರಡುವುದಕ್ಕೆ ಕಾರಣವಾಗಬಹುದೆಂದೋ ಅಥವಾ ರೋಗವನ್ನು ಹೆಚ್ಚಾಗಿ ಗಂಭೀರವನ್ನಾಗಿಸುವುದೆಂದೋ ಜಿಲ್ಲಾಧಿಕಾರಿಗೆ ಅಭಿಪ್ರಾಯವಿದ್ದಲ್ಲಿ, ಸ್ಥಳೀಯ ಅಥವಾ ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯ ಕೋರಿಕೆಯ ಮೇಲೆ ಅಥವಾ ಇತರ ರೀತಿಯಲ್ಲಿ ಆ ಉದ್ದೇಶಕ್ಕೆ ಸಾರ್ವಜನಿಕವಾದ ಅಥವಾ ಖಾಸಗಿಯಾದ ಯಾವುದೇ ಸ್ಥಳದಲ್ಲಿ ಮತ್ತು ತನ್ನ ಆದೇಶದಲ್ಲಿ ನಿಗದಿಪಡಿಸಿದ ಸಂಖ್ಯೆಗಿಂತ ಅಧಿಕ ವ್ಯಕ್ತಿಗಳ ಸಾಮುದಾಯಿಕ ಒಟ್ಟುಗೂಡುವಿಕೆಯು, ಯಾವುದೇ ವೈಯಕ್ತಿಕ ವಿಷಯದಲ್ಲಿ ವಿಶೇಷ ಆದೇಶದ ಮುಖೇನ, ಅಥವಾ ಅಲ್ಲದಿದ್ದಲ್ಲಿ ಸಾಮಾನ್ಯವಾದ ಆದೇಶದ ಮುಖೇನ ನಿಷೇಧಿಸಲು ಜಿಲ್ಲಾಧಿಕಾರಿಯವರಿಗೆ ಅಧಿಕಾರವಿರುವುದಾಗಿದೆ.

(2) ಉಪ-ವಿಭಾಗ (1)ರ ಪ್ರಕಾರ ಹೊರಡಿಸಿದ ಆದೇಶವನ್ನು ಉಲ್ಲಂಘಿಸುವ ಯಾವುದೇ ಸಂಸ್ಥೆ ಮತ್ತು ವ್ಯಕ್ತಿಯು 65ನೇ ವಿಭಾಗದಲ್ಲಿ ನಿಗದಿಪಡಿಸಿದ ದಂಡಕ್ಕೆ ಬಾಧ್ಯಸ್ಥರಾಗಿರುವರು.

43. ಸೋಂಕುರೋಗಗಳನ್ನು ಅಥವಾ ಅಧಿಸೂಚಿಸಬೇಕಾದ ಸೋಂಕುರೋಗಗಳನ್ನು ತಡೆಗಟ್ಟುವುದಕ್ಕಾಗಿ ಉದ್ಯೋಗಸ್ಥರಿಗೆ ವಿಶೇಷ ಅಧಿಕಾರ ನೀಡುವುದಕ್ಕೆ ಸರಕಾರಕ್ಕಿರುವ ಅಧಿಕಾರ.—ಸಂದರ್ಭವು ಆ ರೀತಿ ಅಗತ್ಯಪಟ್ಟಲ್ಲಿ, ಸೋಂಕುರೋಗಗಳು ಅಥವಾ ಅಧಿಸೂಚಿಸಬೇಕಾದ ಸೋಂಕುರೋಗಗಳು ಅಥವಾ ಎರಡನ್ನೂ ತಡೆಗಟ್ಟುವುದಕ್ಕಾಗಿ ಸಂಬಂಧಪಟ್ಟ ಉದ್ಯೋಗಸ್ಥರಿಗೆ ವಿಶೇಷ ಅಧಿಕಾರಗಳನ್ನು ನೀಡುವುದಕ್ಕಾಗಿ ಸರಕಾರಕ್ಕೆ ಅಧಿಕಾರ ಇರುವುದಾಗಿದೆ.

44. ಮೃಗಗಳಿಂದ ಹರಡುವ ಸೋಂಕುರೋಗದ ತಡೆಗಟ್ಟುವಿಕೆ.—ಯಾವುದಾದರು ಪ್ರದೇಶದಲ್ಲಿ ಮೃಗಗಳಿಂದ ಮನುಷ್ಯರಿಗೆ ಹರಡುವಂತಹ ಸೋಂಕುರೋಗ ಒಮ್ಮೆಲೆ ಹರಡಿದರೆ ಅಥವಾ ಒಮ್ಮೆಲೆ ಹರಡಲು ಸಾಧ್ಯತೆ ಇದ್ದಲ್ಲಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ರೋಗ ಹರಡುವಿಕೆಯನ್ನು ಪ್ರತಿರೋಧಿಸುವುದಕ್ಕಾಗಿ ಸಾರ್ವಜನಿಕಾರೋಗ್ಯ ಸಮಿತಿಯನ್ನು ಕೂಡಲೇ ಕರೆದು ಸೇರಿಸತಕ್ಕದ್ದು ಮತ್ತು ಅಂತಹ ವಿಷಯವನ್ನು ಚರ್ಚೆಮಾಡತಕ್ಕದ್ದು. ರೋಗ ತಡೆಗಟ್ಟುವಿಕೆ ಅವಶ್ಯಕವಾದ ಕ್ರಮಗಳನ್ನು ಸ್ಥಳೀಯ ಮಟ್ಟದಲ್ಲಿ ಸ್ವೀಕರಿಸಲಾಗುವುದೆಂದು ಸ್ಥಳೀಯ ಸಾರ್ವಜನಿಕಾರೋಗ್ಯ ಸಮಿತಿಯು ಖಾತ್ರಿಪಡಿಸತಕ್ಕದ್ದು. ಇದರ ಮೇಲಿನ ವರದಿಯನ್ನು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಗೆ ನೀಡತಕ್ಕದ್ದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

28

45. ಇಲಿ ವರ್ಗಗಳ, ನಾಯಿಗಳ ಮತ್ತು ಇತರ ಮೃಗಗಳ ನಿಯಂತ್ರಣೆ.—(1) ಯಾವುದೇ ಆವರಣದ ಸ್ವಾಧೀನಗಾರನು, ಜನವಸತಿಯಿಲ್ಲದಿದ್ದಲ್ಲಿ ಅದರ ಯಜಮಾನನು, ಇಲಿ ವರ್ಗದ, ನಾಯಿಗಳ ಮತ್ತು ಇತರ ಮೃಗಗಳನ್ನು ಮನಃಸೆಳೆಯುವ ರೀತಿಯಲ್ಲಿ ತ್ಯಾಜ್ಯವನ್ನು ಬಿಸಾಕುವುದು ಅಥವಾ ಕಾಡು ಮತ್ತು ಇತರವು ಬೆಳೆಯಲು ಅನುಮತಿಸುವುದು ಮಾಡತಕ್ಕದ್ದಲ್ಲ ಮತ್ತು ಪ್ಲೇಗ್ ಮತ್ತು ಇಲಿಜ್ವರಕ್ಕೆ ಕಾರಣವಾಗುವ ಇಲಿ ವರ್ಗವನ್ನು ನಾಶಗೊಳಿಸತಕ್ಕದ್ದು ಅಲ್ಲದೆ ರೇಬೀಸ್ ಇರುವ ಅಥವಾ ರೇಬೀಸ್ ಇರುವುದಾಗಿ ಅನುಮಾನಿಸಲ್ಪಡುವ ನಾಯಿಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಕೂಡಲೇ ಸ್ಥಳೀಯಾಡಳಿತಕ್ಕೆ ತಿಳಿಸತಕ್ಕದ್ದು.

(2) ಯಾವುದೇ ಆವರಣದ ನಿವಾಸಿ ಅಥವಾ ಯಜಮಾನನು (1)ನೇ ಉಪ-ವಿಭಾಗದಲ್ಲಿ ಉಪಬಂಧಿಸಿರುವ ಕರ್ತವ್ಯವನ್ನು ಪಾಲಿಸಿಲ್ಲೆಂದು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಮನವರಿಕೆಯಾದಲ್ಲಿ ನಿರ್ದಿಷ್ಟ ಕಾಲಾವಧಿಯೊಳಗೆ ಕ್ರಮ ಕೈಗೊಳ್ಳಲು ಅವಶ್ಯಪಡುತಾ ಅಂತಹ ನಿವಾಸಿಗೆ ಅಥವಾ ಯಜಮಾನನಿಗೆ ನೋಟೀಸು ನೀಡತಕ್ಕದ್ದು.

(3) ನಾಯಿಗಳನ್ನೂ ಬೆಕ್ಕುಗಳನ್ನೂ ಸಾಕುವ ಯಾವುದೇ ವ್ಯಕ್ತಿಯು ಸರಿಯಾದ ಮಧ್ಯಾಂತರ ವೇಳೆಯಲ್ಲಿ ಅವುಗಳಿಗೆ ರೇಬೀಸ್ ವಿರುದ್ಧ ವಾಕ್ಸಿನೇಶನ್ ನೀಡತಕ್ಕದ್ದಾಗಿದೆ.

(4) (1) ಮತ್ತು (3)ನೇ ಉಪ-ವಿಭಾಗಗಳ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿ ಮತ್ತು ಸಂಸ್ಥೆಯು 65ನೇ ವಿಭಾಗದಲ್ಲಿ ನಿಗದಿಪಡಿಸಿದಂತಹ ದಂಡಕ್ಕೆ ಬಾಧ್ಯಸ್ಥರಾಗಿರುವರು.

46. ರೋಗ ಸೋಂಕಿತರ ಕ್ವಾರೆಂಟೈನ್.—ಕಾಲಾಕಾಲಗಳಲ್ಲಿ ಸರಕಾರವು ಜಾರಿಗೊಳಿಸುವ ಮಾರ್ಗದರ್ಶಕಗಳಿಗನುಸಾರವಾಗಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಸೋಂಕುರೋಗದಿಂದ ಅಥವಾ ಅಧಿಸೂಚಿಸಬೇಕಾದ ಸೋಂಕುರೋಗ ಸೋಂಕಿತರಾದ ವ್ಯಕ್ತಿಗಳನ್ನು ಕ್ವಾರಂಟೈನಲ್ಲಿ ಅಥವಾ ಐಸೋಲೇಶನ್‌ನಲ್ಲಿ ಇಡುವುದಕ್ಕಿರುವ ಅಧಿಕಾರವಿರುವುದಾಗಿದೆ.

47. ಮೃತದೇಹಗಳನ್ನು ವ್ಯವಹರಿಸುವಾಗ ವಹಿಸಬೇಕಾದ ಮುಂಜಾಗ್ರತೆಗಳು.—ಕಾಲಾಕಾಲಗಳಲ್ಲಿ ಸರಕಾರವು ಜಾರಿಗೊಳಿಸುವ ಮಾರ್ಗದರ್ಶಕಗಳಿಗನುಸಾರವಾಗಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ, ಸೋಂಕುರೋಗದಿಂದ ಅಥವಾ ಅಧಿಸೂಚಿಸಬೇಕಾದ ಸೋಂಕುರೋಗದಿಂದ ಮರಣಹೊಂದಿದ ವ್ಯಕ್ತಿಗಳ ಮೃತದೇಹಗಳನ್ನು ವೈಜ್ಞಾನಿಕವಾಗಿ ದಹನಮಾಡುವ ಅಧಿಕಾರ ಇರುವುದಾಗಿದೆ.

48. ಸರಕಾರವು ಜಾರಿಗೊಳಿಸುವ ಮಾರ್ಗದರ್ಶಕಗಳನ್ನು ಜಾರಿಗೊಳಿಸಬೇಕೆಂದು.—(1) ಅಧಿಸೂಚಿಸಬೇಕಾದ ಸೋಂಕುರೋಗ ತಡೆಗಟ್ಟುವಿಕೆಗೆ, ಚಿಕಿತ್ಸೆಗೆ, ರೋಗ ನಿರ್ಣಯಕ್ಕಾಗಿ ಸರಕಾರವು ಕಾಲಾಕಾಲಗಳಲ್ಲಿ ಜಾರಿಗೊಳಿಸುವ ಮಾರ್ಗದರ್ಶಕಗಳನ್ನು ಜಾರಿಗೊಳಿಸಲು ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ, ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಗೆ, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅಧಿಕಾರ ಇರುವುದಾಗಿದೆ.

(2) ಅಧಿಸೂಚಿಸಬೇಕಾದ ಸೋಂಕುರೋಗ ಒಳಗೊಂಡು ಯಾವುದೇ ರೋಗಕ್ಕೆ ಚಿಕಿತ್ಸೆ ನೀಡುವುದಕ್ಕಾಗಿ (1)ನೇ ಉಪ-ವಿಭಾಗದ ಪ್ರಕಾರ ಜಾರಿಗೊಳಿಸಿರುವ ಮಾರ್ಗದರ್ಶಕಗಳಲ್ಲಿ ಹೇಳಿರುವ ಚಿಕಿತ್ಸಾ ರೀತಿಗಳನ್ನು ಪಾಲಿಸಲು ಪ್ರತಿಯೊಬ್ಬ ವೈದ್ಯಕೀಯ ವೃತ್ತಿಗಾರ ಮತ್ತು ಸಾರ್ವಜನಿಕ, ಖಾಸಗಿ ಆರೋಗ್ಯ ಸಂರಕ್ಷಣೆ ಸಂಸ್ಥೆಯು ಹೊಣೆಯಾಗಿರುವುದಾಗಿದೆ.

(3) ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯ ಕೋರಿಕೆಯ ಮೇರೆಗೆ, ಪ್ರದೇಶದಲ್ಲಿನ ಸಾರ್ವಜನಿಕಾರೋಗ್ಯ ಪ್ರಾಮುಖ್ಯತೆಯಿರುವ ಯಾವುದೇ ರೋಗಕ್ಕೆ ಸಂಬಂಧಿಸಿದ ವಿವರಗಳನ್ನು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅಥವಾ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ನೀಡಲು ಪ್ರತಿಯೊಬ್ಬ ವೈದ್ಯಕೀಯ ವೃತ್ತಿಗಾರ ಮತ್ತು ಸಾರ್ವಜನಿಕ, ಖಾಸಗಿ ಆರೋಗ್ಯ ಸಂರಕ್ಷಣೆ ಸಂಸ್ಥೆಯು ಹೊಣೆಯಾಗಿರುವುದಾಗಿದೆ.

(4) ಉಪ-ವಿಭಾಗ (2)ರ ಮತ್ತು (3)ರ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವೈದ್ಯಕೀಯ ವೃತ್ತಿಗಾರನು ಮತ್ತು ಸಾರ್ವಜನಿಕ ಅಥವಾ ಖಾಸಗಿ ಆದ ಆರೋಗ್ಯ ಸಂರಕ್ಷಣೆ ಸಂಸ್ಥೆಯು 65ನೇ ವಿಭಾಗದಲ್ಲಿ ನಿಗದಿಪಡಿಸಿದ ದಂಡಕ್ಕೆ ಬಾಧ್ಯಸ್ಥರಾಗಿರುವರು.

49. ಹಾಸ್ಟೆಲು, ಇತರ ಸಾರ್ವಜನಿಕ ವಸತಿ ಸ್ಥಳಗಳು ಇತ್ಯಾದಿಗಳನ್ನು ಪರಿಶೀಲಿಸುವುದಕ್ಕಿರುವ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯ ಅಧಿಕಾರ.—(1) ತಕ್ಕದಾದ ನೈರ್ಮಲ್ಯ, ವೈಜ್ಞಾನಿಕ ತ್ಯಾಜ ನಿರ್ಮೂಲನೆ ವ್ಯವಸ್ಥೆ, ಸುರಕ್ಷಿತ ಕುಡಿಯುವ ನೀರು ಮತ್ತು ಇತರ ಸೌಲಭ್ಯಗಳನ್ನು ಒದಗಿಸದೆ ಯಾವುದೇ ವ್ಯಕ್ತಿಯ ಹಾಸ್ಟೆಲನ್ನು, ಪೇಯಿಂಗ್ ಗೆಸ್ಟ್ ಸೌಲಭ್ಯಗಳನ್ನು, ಇತರ ಸಾರ್ವಜನಿಕ ವಸತಿ ಸ್ಥಳಗಳನ್ನು ನಡೆಸತಕ್ಕದ್ದಲ್ಲ.

(2) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಹಾಸ್ಟೆಲುಗಳು, ಸಾರ್ವಜನಿಕ ವಸತಿ ಸ್ಥಳಗಳನ್ನು ಪರಿಶೋಧಿಸತಕ್ಕದ್ದು ಮತ್ತು ಆ ಕಟ್ಟಡಗಳಲ್ಲಿ ಅಥವಾ ಸ್ಥಳಗಳಲ್ಲಿ ನೂಕು ನುಗ್ಗಲು ಇಲ್ಲೆಂದೂ ಮತ್ತು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಮನವರಿಕೆಯಾಗುವ ರೀತಿಯಲ್ಲಿ ಅಂತಹ ಕಟ್ಟಡಗಳಲ್ಲೂ ಸ್ಥಳಗಳಲ್ಲೂ ತಕ್ಕ ನೈರ್ಮಲ್ಯಕ್ಕೆ, ತ್ಯಾಜ್ಯ ನಿರ್ಮೂಲನೆಗೆ, ಕುಡಿಯುವ ನೀರಿನ ಸರಬರಾಜಿಗೆ ಸೌಲಭ್ಯಗಳನ್ನು ಒದಗಿಸಲಾಗಿದೆ ಎಂದು ಖಾತ್ರಿಪಡಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

29

(3) ಉಪ-ವಿಭಾಗ (1)ರ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ಸಂಸ್ಥೆ ಮತ್ತು ವ್ಯಕ್ತಿಯು 65ನೇ ವಿಭಾಗದಲ್ಲಿ ನಿಗದಿಪಡಿಸಿದ ದಂಡಕ್ಕೆ ಬಾಧ್ಯಸ್ಥರಾಗಿರುವರು.

50. ಬಯೋ-ಮೆಡಿಕಲ್ ತ್ಯಾಜ್ಯವನ್ನು ವ್ಯವಹರಿಸುವುದಕ್ಕಿರುವ ಮಾರ್ಗದರ್ಶಕಗಳು.—(1) ಸರಕಾರಕ್ಕೆ ಮತ್ತು ಸರಕಾರವು ನಿರ್ದೇಶಿಸುವ ಪ್ರಕಾರ ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಬಯೋ-ಮೆಡಿಕಲ್ ತ್ಯಾಜ್ಯ ನಿರ್ವಹಣೆಗಾಗಿ ಮತ್ತು ಅಂತಹ ತ್ಯಾಜ್ಯದಿಂದಿರುವ ಯಾವುದೇ ರೋಗದ ಹರಡುವಿಕೆಯನ್ನು ತಡೆಯುವುದಕ್ಕಾಗಿ ಮತ್ತು ಅಂತಹ ತ್ಯಾಜ್ಯದ ಸರಿಯಾದ ವಿಲೇವಾರಿಗಾಗಿ, ಅವರು ಅವಶ್ಯಕವೆಂದು ಭಾವಿಸುವ, ಮಾರ್ಗದರ್ಶಕಗಳನ್ನು ಜಾರಿಗೊಳಿಸಲು ಅಧಿಕಾರವಿರುವುದಾಗಿದೆ ಮತ್ತು ಅದನ್ನು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿ ಮತ್ತು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿ ಮುಖೇನ ನಿರ್ವಹಿಸುವ, ಜಾರಿಗೊಳಿಸುವ ಮತ್ತು ನೆರವೇರಿಸುವ ಅಧಿಕಾರವಿರುವುದಾಗಿದೆ.

(2) ಬಯೋ-ಮೆಡಿಕಲ್ ತ್ಯಾಜ್ಯವನ್ನು ವ್ಯವಹರಿಸುವುದರಲ್ಲಿ (1)ನೇ ಉಪ-ವಿಭಾಗದ ಪ್ರಕಾರ ಜಾರಿಗೊಳಿಸಿರುವ ಮಾರ್ಗದರ್ಶಕಗಳಲ್ಲಿ ಸೂಚಿಸಿರುವ ಪ್ರಯೋಗ ರೀತಿಗಳನ್ನು ಪಾಲಿಸಲು ಪ್ರತಿಯೊಬ್ಬ ವೈದ್ಯಕೀಯ ವೃತ್ತಿಗಾರ ಮತ್ತು ಸಾರ್ವಜನಿಕ ಮತ್ತು ಖಾಸಗಿ ಆರೋಗ್ಯ ಸಂರಕ್ಷಣೆ ಸಂಸ್ಥೆಯು ಹೊಣೆಯಾಗಿರುವುದಾಗಿದೆ:

ಆದರೆ, ಈ ವಿಭಾಗದ ಯಾವುದೂ ಕೂಡ 1986ರ ಪರಿಸರ ಸಂರಕ್ಷಣೆ ಅಧಿನಿಯಮ (1986ರ 29ನೇ ಅಧಿನಿಯಮ)ದ 6 ಮತ್ತು 25ನೇ ವಿಭಾಗದ ಉಪಬಂಧಗಳನ್ನು ಉಲ್ಲಂಘಿಸತಕ್ಕದ್ದಲ್ಲ.

(3) ಉಪ-ವಿಭಾಗ (1)ರ ಪ್ರಕಾರ ಜಾರಿಗೊಳಿಸಿರುವ ಮಾರ್ಗದರ್ಶಕಗಳನ್ನು ಪಾಲಿಸದ ಯಾವುದೇ ವೈದ್ಯಕೀಯ ವೃತ್ತಿಗಾರ ಮತ್ತು ಸಾರ್ವಜನಿಕ ಅಥವಾ ಖಾಸಗಿ ಆರೋಗ್ಯ ಸಂರಕ್ಷಣೆ ಸಂಸ್ಥೆಯು 65ನೇ ವಿಭಾಗದಲ್ಲಿ ನಿಗದಿಪಡಿಸಿರುವ ದಂಡಕ್ಕೆ ಬಾಧ್ಯಸ್ಥರಾಗಿರುವರು.

51. ರಕ್ತಬೇಂಕುಗಳು ಮತ್ತು ಸೋಂಕುರೋಗಗಳ ನಿಯಂತ್ರಣೆ.—(1) ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ರಕ್ತಬೇಂಕುಗಳ ನಿರ್ವಹಣೆಗಾಗಿ ವೈಜ್ಞಾನಿಕ ಮಾರ್ಗನಿರ್ದೇಶಕಗಳನ್ನು ಜಾರಿಗೊಳಿಸಲು ಮತ್ತು ರಕ್ತ ನೀಡುವ ಮೂಲಕ ಉಂಟಾಗುವ ಯಾವುದೇ ವೈರಾಣು ಸೋಂಕುವಿಕೆಯ ಹರಡುವಿಕೆಯನ್ನು ತಡೆಯುವುದಕ್ಕಾಗಿ ಕ್ರಮ ಕೈಗೊಳ್ಳಲು ಮತ್ತು ಅದನ್ನು ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯ ಅಥವಾ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯ ಮೂಲಕ ಜಾರಿಗೊಳಿಸಲು ಮತ್ತು ನಿರ್ವಹಿಸಲು ಅಧಿಕಾರವಿರುವುದಾಗಿದೆ.

(2) ರಕ್ತಬೇಂಕುಗಳನ್ನು ನಡೆಸುವುದಕ್ಕೆ, ರಕ್ತದಾನಕ್ಕೆ, ರಕ್ತ ನೀಡುವುದಕ್ಕಾಗಿ ಮತ್ತು ಸ್ವೀಕರಿಸುವುದಕ್ಕಾಗಿ (1)ನೇ ಉಪ-ವಿಭಾಗದ ಕೆಳಗೆ ನಿರ್ದಿಷ್ಟಪಡಿಸಿರುವ ಪ್ರಯೋಗ ರೀತಿಗಳನ್ನು ಪಾಲಿಸಲು ಪ್ರತಿಯೊಬ್ಬ ವೈದ್ಯಕೀಯ ವೃತ್ತಿಗಾರನು, ಸಾರ್ವಜನಿಕ ಅಥವಾ ಖಾಸಗಿ ಆರೋಗ್ಯ ಶುಶ್ರೂಷೆ ಸಂಸ್ಥೆಯು ಹೊಣೆಯಾಗಿರುವುದಾಗಿದೆ.

(3) ಉಪ-ವಿಭಾಗ (1)ರ ಪ್ರಕಾರ ಜಾರಿಗೊಳಿಸಿರುವ ಮಾರ್ಗದರ್ಶಕಗಳನ್ನು ಪಾಲಿಸದ ಪ್ರತಿಯೊಬ್ಬ ವೈದ್ಯಕೀಯ ವೃತ್ತಿಗಾರನು ಮತ್ತು ಸಾರ್ವಜನಿಕ ಅಥವಾ ಖಾಸಗಿ ಆರೋಗ್ಯ ಸಂರಕ್ಷಣೆ ಸಂಸ್ಥೆಯು 65ನೇ ವಿಭಾಗದಲ್ಲಿ ನಿಗದಿಪಡಿಸಿರುವ ದಂಡಕ್ಕೆ ಬಾಧ್ಯಸ್ಥರಾಗಿರುವರು.

ಅಧ್ಯಾಯ 8

ವೆಕ್ಟರುಗಳ ನಿಯಂತ್ರಣೆ

52. ಕೀಟಗಳ ಮತ್ತು ಇತರ ವೆಕ್ಟರುಗಳ ನಿಯಂತ್ರಣಕ್ಕಾಗಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯ ಹೊಣೆಗಾರಿಕೆಗಳು.—(1) ಸ್ಥಳದ ಅಥವಾ ಆವರಣದ ಯಜಮಾನ ಅಥವಾ ಸ್ವಾಧೀನಗಾರನು ಕೀಟಗಳ ಸಂತಾನಾಭಿವೃದ್ಧಿಯನ್ನು ತಡೆಯುವುದಕ್ಕಿರುವ ಕ್ರಮಗಳನ್ನು ಸ್ವತಃ ಕೈಗೊಳ್ಳತಕ್ಕದ್ದು ಮತ್ತು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿ ಅಥವಾ ಅವರು ಅಧಿಕೃತಗೊಳಿಸುವ ಉದ್ಯೋಗಸ್ಥನು ನಿರ್ದೇಶಿಸುವುದಾದಲ್ಲಿ ಅದರಲ್ಲಿ ಹೇಳುವ ರೀತಿಯ ಕ್ರಮಗಳನ್ನು ನಿರ್ವಹಿಸತಕ್ಕದ್ದು.

ವಿವರಣೆ.—ಈ ವಿಭಾಗದ ಅಗತ್ಯಕ್ಕಾಗಿ 'ಕೀಟಗಳು' ಎಂಬ ಪದಪ್ರಯೋಗದಲ್ಲಿ ಸೊಳ್ಳೆಗಳು, ನೊಣಗಳು, ಹೇನು, ಮರಳು ನೊಣ, ಟಿಕ್, ಮೈಟ್, ಫ್ಲೀ ವಿಭಾಗಗಳಲ್ಲಿನ ಚಿಳ್ಳುಗಳು ಮುಂತಾದವು ಒಳಗೊಳ್ಳುವುದು.

(2) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯವರು ಕೀಟಗಳ ಸಂತಾನಾಭಿವೃದ್ಧಿಯ ಕಾರಣ ಅಥವಾ ಕಾರಣಗಳನ್ನು ಕಂಡುಹಿಡಿದು ಅದನ್ನು ತಡೆಯುವುದಕ್ಕೆ ಮತ್ತು ನಿಯಂತ್ರಿಸುವುದಕ್ಕೆ ಮತ್ತು ತೊಲಗಿಸುವುದಕ್ಕಿರುವ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಯಾವುದೇ ಸನ್ನಿವೇಶದಲ್ಲಿ ಅಂತಹ ಕಾರಣವನ್ನೋ ಕಾರಣಗಳನ್ನೋ ತಡೆಗಟ್ಟಲೋ ನಿಯಂತ್ರಿಸಲೋ ತೊಲಗಿಸಲೋ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಸಾಧ್ಯವಾಗದಿದ್ದಲ್ಲಿ ಆ ಕುರಿತು ಸ್ಥಳೀಯ ಸಾರ್ವಜನಿಕಾರೋಗ್ಯ ಸಮಿತಿಗೆ ವರದಿ ಮಾಡತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

30

53. ಸಣ್ಣ ಮತ್ತು ದೊಡ್ಡ ಮಟ್ಟದಲ್ಲಿ ನೀರುಕಟ್ಟಿ ನಿಲ್ಲುವೆಡೆಯಲ್ಲಿ ಮತ್ತು ಜಲಸಂಗ್ರಹಣೆಗಳಲ್ಲಿ ಸೊಳ್ಳೆಗಳ ಮತ್ತು ಇತರ ಕೀಟಗಳ ಸಂತಾನಾಭವೃದ್ಧಿಯ ತಡೆಯುವಿಕೆ.—(1) ಯಾವನೇ ವ್ಯಕ್ತಿ ಅಥವಾ ಸಂಸ್ಥೆಯು ಈ ಕೆಳಗಿನ ವಿಷಯಗಳಿಗೆ ಕಾರಣವಾಗುವುದೋ ಅನುಮತಿಸುವುದೋ ಮಾಡತಕ್ಕದ್ದಲ್ಲ, ಅದೇನೆಂದರೆ:—

(i) ಸೊಳ್ಳೆಗಳು ಸಂತಾನಾಭವೃದ್ಧಿಯಾಗುವ ಅಥವಾ ಸಂತಾನಾಭವೃದ್ಧಿಯಾಗಲು ಸಾಧ್ಯತೆಯಿರುವ ನೀರುಕಟ್ಟಿ ನಿಲ್ಲುವೆಡೆಗಳನ್ನೋ ಅಥವಾ ತಟಸ್ಥವಾದ ಜಲ ಸಂಗ್ರಹಣೆಗಳನ್ನೋ ನೆಲೆನಿಲ್ಲಿಸುವುದು;

(ii) ಮರಳು ನೊಣಗಳ ಮತ್ತು ಸೊಳ್ಳೆಗಳ ಸಂತಾನಾಭವೃದ್ಧಿಗೆ ಕಾರಣವಾಗುವ ರೀತಿಯಲ್ಲಿ ಮಲಿನವಾದ ರೀತಿಯಲ್ಲಿ ಮೃಗಗಳನ್ನು ಸಂರಕ್ಷಿಸುವುದು;

(iii) ಸಾರ್ವಜನಿಕಾರೋಗ್ಯಕ್ಕೆ ಬೆದರಿಕೆಯಾಗುವ ರೀತಿಯಲ್ಲಿ ಸಾಕು ಪ್ರಾಣಿಗಳಲ್ಲಿ ಚೆಳ್ಳುಗಳ ಸಾನ್ನಿಧ್ಯ ಕಂಡುಬಂದಲ್ಲಿ ಅದನ್ನು ನಿರ್ಮೂಲನೆ ಮಾಡುವುದಕ್ಕೆ ಅವಶ್ಯಕವಾದ ಕ್ರಮಗಳಲ್ಲಿ ವಿಮುಖತೆಯನ್ನು ತೋರಿಸುವುದು;

(iv) ಸ್ವಂತ ಯಜಮಾನತ್ವದಲ್ಲಿಯೋ ಸ್ವಾಧೀನದಲ್ಲಿಯೋ ಹತೋಟಿಯಲ್ಲಿಯೋ ಇರುವ ಪ್ರದೇಶವನ್ನು ಪರಿಪಾಲಿಸದೆ ಚೆಳ್ಳುಜ್ವರ (ಸ್ಕ್ರಬ್ ಟೈಫಸ್) ರೋಗ ಉಂಟುಮಾಡುವ ಮೈಟುಗಳು ಒಳಗೊಂಡ ಕೀಟಗಳ ವೃದ್ಧಿಗೆ ಕಾರಣವಾಗುವುದು;

(v) ಸ್ವಂತ ಯಜಮಾನತ್ವದಲ್ಲಿಯೋ ಸ್ವಾಧೀನದಲ್ಲಿಯೋ ಹತೋಟಿಯಲ್ಲಿಯೋ ಇರುವ ತೋಟ, ಪ್ಲಾಂಟೇಶನ್ ವಲಯದಲ್ಲಿ ಗೆರಟೆಗಳಲ್ಲಿ, ಹಾಳೆಗಳಲ್ಲಿ ಇತರವುಗಳಲ್ಲಿ ನೀರು ಕಟ್ಟಿ ನಿಲ್ಲುವುದನ್ನು ತಡೆಯುವುದೋ ತೊಲಗಿಸುವುದೋ ಮಾಡದಿರುವುದು;

(vi) ಸೊಳ್ಳೆ, ಮರಳು ನೊಣ, ಇತರ ಚೆಳ್ಳುಗಳು ಇತ್ಯಾದಿಗಳ ಸಂತಾನಾಭವೃದ್ಧಿ ಅಥವಾ ಸಂತಾನಾಭವೃದ್ಧಿ ಸಾಧ್ಯತೆಯಿಂದಿರುವ ಸಾರ್ವಜನಿಕಾರೋಗ್ಯ ಅಪಾಯಗಳನ್ನು ಪರಿಗಣಿಸಿ ಆರೋಗ್ಯ ಕಾರ್ಯಕರ್ತರ ನಿರ್ದೇಶಗಳನ್ನು ಕಡೆಗಣಿಸುವುದು.

(2) ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯು (1)ನೇ ಉಪ-ವಿಭಾಗದಲ್ಲಿನ ಉಪಬಂಧಗಳನ್ನು ಉಲ್ಲಂಘಿಸುವುದಾದಲ್ಲಿ 65ನೇ ವಿಭಾಗದಲ್ಲಿ ನಿಗದಿಪಡಿಸಿರುವ ದಂಡಕ್ಕೆ ಬಾಧ್ಯಸ್ಥರಾಗಿರುವರು.

54. ರೋಗ ಹರಡುವ ವೆಕ್ಟರುಗಳ ಸಂತಾನಾಭವೃದ್ಧಿಯ ತಡೆಗಟ್ಟುವಿಕೆ.—(1) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು, ವೆಕ್ಟರುಗಳು ಸಂತಾನಾಭವೃದ್ಧಿಯಾಗುವ ಅಥವಾ ಸಂತಾನಾಭವೃದ್ಧಿಯಾಗಲು ಸಾಧ್ಯತೆಯಿರುವ ಯಾವುದೇ ಸ್ಥಳದ ಯಜಮಾನನಲ್ಲಿ ಅಥವಾ ಸ್ವಾಧೀನಗಾರನಲ್ಲಿ ನೋಟೀಸಿನಲ್ಲಿ ಹೇಳಿರುವಂತಹ ಕಾಲಾವಧಿಯೊಳಗೆ, ಸನ್ನಿವೇಶಕ್ಕೆ ಯೋಗ್ಯವೆಂದು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಭಾವಿಸುವ ಅಂಗೀಕೃತ ವಿಧಾನ ಮುಖೇನ ವೆಕ್ಟರುಗಳ ಸಂತಾನಾಭವೃದ್ಧಿಯನ್ನು ತಡೆಯಲು ಅವಶ್ಯಪಡತಕ್ಕದ್ದು.

(2) ಉಪ-ವಿಭಾಗ (1)ರಲ್ಲಿ ಹೇಳುವ ಸ್ಥಳ ಒಂದು ಸ್ಥಳೀಯಾಡಳಿತ ಸಂಸ್ಥೆಯ ಅಥವಾ ಕೇಂದ್ರ ಸರಕಾರದ ಅಥವಾ ರಾಜ್ಯ ಸರಕಾರದ ಅಧೀನದಲ್ಲಿರುವುದಾದಲ್ಲಿ ಸಂಬಂಧಪಟ್ಟ ಆಫೀಸಿನ ಮುಖ್ಯಾಧಿಕಾರಿಗೆ ಮುಂಚಿತವಾಗಿ ವಿಷಯಗಳನ್ನು ಮನವರಿಕೆಮಾಡತಕ್ಕದ್ದು ಮತ್ತು ಕ್ರಮಗಳನ್ನು ಕೈಗೊಳ್ಳಲು ಲಿಖಿತವಾಗಿ ಅವಶ್ಯಪಡತಕ್ಕದ್ದು.

(3) ತನ್ನ ವ್ಯಾಪ್ತಿಯಲ್ಲಿರುವ ಯಾವುದೇ ಪ್ರದೇಶದಲ್ಲಿ ಕಾಸನೂರ್ ಫಾರಸ್ಟ್ ರೋಗ (ಮಂಗಜ್ವರ) ಕಂಡುಬರುವ ಸನ್ನಿವೇಶ ಅಥವಾ ಆಕಸ್ಮಿಕವಾದ ಮಂಗದ ಮರಣವು ಗಮನಕ್ಕೆ ಬಂದಲ್ಲಿ ಕೀಟಗಳ ನಿಯಂತ್ರಣೆಗೆ ಅವಶ್ಯಕವಾದ ಚಟುವಟಿಕೆಗಳನ್ನು ಸಾರ್ವಜನಿಕಾರೋಗ್ಯ ಅಧಿಕಾರಿಯು ಕೂಡಲೇ ನಿರ್ವಹಿಸತಕ್ಕದ್ದು.

(4) ತನ್ನ ವ್ಯಾಪ್ತಿಯಲ್ಲಿರುವ ಒಂದು ಪ್ರದೇಶದಲ್ಲಿ ಕಾಲ ಅಸಾರ್ ಕಂಡುಬಂದಲ್ಲಿ ಸಾರ್ವಜನಿಕಾರೋಗ್ಯ ಅಧಿಕಾರಿಯು ಮರಳು ನೊಣಗಳನ್ನು ನಿಯಂತ್ರಿಸುವುದಕ್ಕಿರುವ ಚಟುವಟಿಕೆಗಳನ್ನು ಕೂಡಲೇ ನಡೆಸತಕ್ಕದ್ದು.

55. ಲೋಪವೆಸಗುವ ವಿಷಯದಲ್ಲಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯ ಅಧಿಕಾರಗಳು.—ವಿಭಾಗ 54ರ ಪ್ರಕಾರ ನೋಟೀಸು ಲಭಿಸಿದ ವ್ಯಕ್ತಿಯು ಅದರಲ್ಲಿ ನಿಗದಿಪಡಿಸಿರುವ ಸಮಯದೊಳಗೆ ಅಂತಹ ನೋಟೀಸಿನಲ್ಲಿ ನಿಗದಿಪಡಿಸಿರುವ ಕ್ರಮ ಕೈಗೊಳ್ಳಲು ಅಥವಾ ಪರಿಹಾರಮಾರ್ಗಗಳನ್ನು ಅವಲಂಬಿಸಲು ವಿಫಲಗೊಂಡಲ್ಲಿ ಅಥವಾ ತಿರಸ್ಕರಿಸಿದ್ದಲ್ಲಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ನೇರವಾಗಿ ಅಂತಹ ಕ್ರಮಗಳನ್ನು ಕೈಗೊಳ್ಳುವುದು ಅಥವಾ ಅವಲಂಬಿಸುವುದು ಮಾಡಬಹುದಾಗಿದೆ.

56. ವೆಕ್ಟರ್ ನಿಯಂತ್ರಣ ಚಟುವಟಿಕೆಗಳಿಗೆ ಸಂರಕ್ಷಣೆ.—(1) ಯಾವುದೇ ಸ್ಥಳದಲ್ಲಿ ಅಥವಾ ಕಟ್ಟಡದಲ್ಲಿ, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿ ಅಥವಾ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯ ನಿರ್ದೇಶದಲ್ಲಿ ಒಬ್ಬ ಉದ್ಯೋಗಸ್ಥನು, ವೆಕ್ಟರುಗಳ ಸಂತಾನಾಭವೃದ್ಧಿಯನ್ನು ತಡೆಯಬೇಕೆಂಬ ಗುರಿಯಿಂದ ನೀಡುವ ನಿರ್ದೇಶಗಳಿಗನುಸಾರವಾಗಿ ಬದಲಾವಣೆಗಳನ್ನು ಮಾಡದಿದ್ದಲ್ಲಿ ಅಂತಹ ಸ್ಥಳದಲ್ಲಿ ಅಥವಾ ಕಟ್ಟಡದಲ್ಲಿ ಮಾಡುವ ಮಾರ್ಪಾಟುಗಳನ್ನೋ, ಮಾಡಿದ ಕೆಲಸಗಳನ್ನೋ, ಕೈಗೊಂಡ ಕ್ರಮಗಳನ್ನೋ ಪ್ರಸ್ತುತ ಸ್ಥಳದ ಆಗಿನ ಯಜಮಾನ ಅಥವಾ ಸ್ವಾಧೀನದಾರನು, ತಡೆಯೊಡ್ಡುವುದೋ ನಾಶಗೊಳಿಸುವುದೋ ದುರ್ಬಲಗೊಳಿಸುವ ಸಾಧ್ಯತೆಗೆ ಕಾರಣವಾಗುವುದೋ ಆಗತಕ್ಕದ್ದಲ್ಲ.

This is a digitally signed Gazette.
Authenticity may be verified through https://compose.kerala.gov.in/

31

(2) ಉಪ-ವಿಭಾಗ (1)ರ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ಸಂಸ್ಥೆ ಮತ್ತು ವ್ಯಕ್ತಿಯು 65ನೇ ವಿಭಾಗದಲ್ಲಿ ನಿಗದಿಪಡಿಸಿದ ದಂಡಕ್ಕೆ ಬಾಧ್ಯಸ್ಥರಾಗಿರುವರು.

57. ವಿಪತ್ತಿನಿಂದ ಪರಿಣಾಮವಾಗಿ ಉಂಟಾಗುವ ಜಂತುಜನ್ಯ ಸೋಂಕುರೋಗಗಳ ಮತ್ತು ಅಧಿಸೂಚಿಸಬೇಕಾದ ಸೋಂಕುರೋಗಗಳ ತಡೆಗಟ್ಟುವಿಕೆ ಮತ್ತು ನಿರ್ವಹಣೆ.—(1) ನೈಸರ್ಗಿಕ ವಿಕೋಪಗಳ ಅಥವಾ ಇತರ ನಿರ್ಮಿತ ವಿಪತ್ತುಗಳ ಪರಿಣಾಮದಿಂದ ಉಂಟಾಗುವ ಸಾಂಕ್ರಾಮಿಕ ರೋಗಗಳ ಅಥವಾ ಅಧಿಸೂಚಿಸಬೇಕಾದ ಸೋಂಕುರೋಗಗಳು ಒಳಗೊಂಡ ರೋಗಗಳನ್ನು ತಡೆಗಟ್ಟುವುದಕ್ಕಾಗಿ ಮತ್ತು ನಿರ್ವಹಿಸುವುದಕ್ಕಾಗಿ ಅವಶ್ಯಕವಾದ ಎಲ್ಲಾ ಕ್ರಮಗಳನ್ನು ರಾಜ್ಯ, ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಗಳ ನಿರ್ದೇಶಗಳ ತಳಹದಿಯಲ್ಲಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಕೈಗೊಳ್ಳತಕ್ಕದ್ದು:

ಆದರೆ, ಈ ವಿಭಾಗದ ಯಾವುದೂ ಕೂಡ 2005ರ ವಿಪತ್ತು ನಿರ್ವಹಣೆ ಅಧಿನಿಯಮ (2005ರ 53ನೇ ನಂಬ್ರ)ದ ಉಪಬಂಧವನ್ನು ಉಲ್ಲಂಘಿಸುವಂತದ್ದಾಗಿರತಕ್ಕದ್ದಲ್ಲ.

(2) ಉಪ-ವಿಭಾಗ (1)ರಲ್ಲಿ ಹೇಳಿದ ಪ್ರಕಾರದ ಸ್ಥಿತಿಯಲ್ಲಿ ಜಲಜನ್ಯ-ಪ್ರಾಣಿಜನ್ಯ-ಜಂತುಜನ್ಯ ರೋಗಗಳನ್ನು ತಡೆಯುವುದಕ್ಕಾಗಿ ಸಾರ್ವಜನಿಕಾರೋಗ್ಯ ಸಮಿತಿಗಳನ್ನು ಆಯಾಯ ಮಟ್ಟದಲ್ಲಿರುವ ಸಾರ್ವಜನಿಕಾರೋಗ್ಯ ಅಧಿಕಾರಿಗಳು ಕರೆದು ಸೇರಿಸತಕ್ಕದ್ದು ಮತ್ತು ಅವಶ್ಯಕವಾದ ತ್ವರಿತ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

(3) ಉಪ-ವಿಭಾಗ (2)ರಲ್ಲಿ ಹೇಳಿದ ಪ್ರಕಾರ ಜಲಜನ್ಯ-ಪ್ರಾಣಿಜನ್ಯ-ಜಂತುಜನ್ಯ ರೋಗಗಳನ್ನು ನಿಯಂತ್ರಿಸುವುದಕ್ಕಾಗಿ ಸಾರ್ವಜನಿಕಾರೋಗ್ಯ ಅಧಿಕಾರಿಯು ನೀಡುವ ನಿರ್ದೇಶಗಳನ್ನು ಪಾಲಿಸಲು ಎಲ್ಲರೂ ಹೊಣೆಗಾರರಾಗಿರುವರು.

ಅಧ್ಯಾಯ 9

ಸಾಮುದಾಯಿಕ ಒಟ್ಟುಗೂಡುವಿಕೆ ಮತ್ತು ಸಾರ್ವಜನಿಕಾರೋಗ್ಯ

58. ಸಾಮುದಾಯಿಕ ಒಟ್ಟುಗೂಡುವಿಕೆ ನಡೆಯುವ ಸ್ಥಳಗಳಲ್ಲಿನ ಶುಚಿತ್ವ ಮತ್ತು ಇತರ ಸಜ್ಜೀಕರಣಗಳು.—(1) ಸಾಮುದಾಯಿಕ ಒಟ್ಟುಗೂಡುವಿಕೆಯನ್ನು ಕರೆದು ಸೇರಿಸುವುದೋ ನಡೆಸುವುದೋ ಮಾಡುವ ವ್ಯಕ್ತಿಯೋ ವ್ಯಕ್ತಿಗಳೋ ಸಂಸ್ಥೆಯೋ ಈ ಕೆಳಗಿನ ವಿಷಯಗಳನ್ನು ಖಾತ್ರಿಪಡಿಸತಕ್ಕದ್ದು, ಅದೇನೆಂದರೆ:—

(i) ಅಂತಹ ಸನ್ನಿವೇಶಗಳಲ್ಲಿ ನೂಕು ನುಗ್ಗಲಿನಿಂದ ಉಂಟಾಗಲು ಸಾಧ್ಯತೆಯಿರುವ ಅಪಘಾತಗಳು ಮತ್ತು ಇತರವುಗಳನ್ನು ಇಲ್ಲದಾಗಿಸುವುದಕ್ಕಾಗಿ ಆಗಮಿಸುವ ಅಥವಾ ಆಗಮಿಸಲು ಸಾಧ್ಯತೆಯಿರುವ ಜನರ ಸಂಖ್ಯೆಗೆ ಅನುಸಾರವಾದ ಸ್ಥಳ ಸೌಲಭ್ಯಗಳು ಮತ್ತು ಅಗತ್ಯಕ್ಕೆ ವಾಯು ಸಂಚಾರವಿರುವ ಸ್ಥಳಗಳು;

(ii) ಅಂತಹ ಒಟ್ಟುಗೂಡುವಿಕೆಯ ಭಾಗವಾಗಿ ಆಹಾರ ನೀಡುವುದಿದ್ದಲ್ಲಿ ಆಹಾರ ಸುರಕ್ಷೆ ಮತ್ತು ನೈರ್ಮಲ್ಯ ಶುಚಿತ್ವ;

(iii) ಸುರಕ್ಷಿತವಾದ ಕುಡಿಯುವ ನೀರು;

(iv) ತುರ್ತು ಆರೋಗ್ಯ ಸೇವೆಗಳು;

(v) ಸಾಮುದಾಯಿಕ ಒಟ್ಟುಗೂಡುವಿಕೆಯ ಸ್ಥಳಗಳಲ್ಲಿ ಸಾಕಷ್ಟು ಶೌಚಾಲಯಗಳು ಇದೆ ಎಂದೂ ಅಲ್ಲಿಂದಿರುವ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸಲಾಗುತ್ತಿದೆ ಎಂದು.

(2) ಸಾಮುದಾಯಿಕ ಒಟ್ಟುಗೂಡುವಿಕೆಗಾಗಿ,

(i) ನಿರ್ಮಿಸಲಾಗಿರುವ ಹಾಲುಗಳು, ಆಡಿಟೋರಿಯಮ್‌ಗಳು ಮುಂತಾದ ಸ್ಥಳಗಳಲ್ಲಿನ ಕುಡಿಯುವ ನೀರಿನ ಮೂಲಗಳಲ್ಲಿನ ನೀರಿನ ತಪಾಸಣೆಯನ್ನು ಯಜಮಾನ ಅಥವಾ ಸ್ವಾಧೀನವಿರುವ ವ್ಯಕ್ತಿ ಅಥವಾ ವ್ಯಕ್ತಿಗಳು ನಡೆಸತಕ್ಕದ್ದು ಮತ್ತು ಕುಡಿಯುವ ನೀರಿನ ಸುರಕ್ಷೆಯನ್ನು ಖಾತ್ರಿಪಡಿಸತಕ್ಕದ್ದು;

(ii) ಸ್ಥಳಗಳನ್ನೂ ಕಟ್ಟಡಗಳನ್ನೂ ಬಾಡಿಗೆಗೆ ನೀಡುವ ಸ್ಥಳಗಳಲ್ಲಿ ಯಜಮಾನ ಅಥವಾ ಸ್ವಾಧೀನವಿರುವ ವ್ಯಕ್ತಿ ಅಥವಾ ವ್ಯಕ್ತಿಗಳು ಅವಶ್ಯಕವಾದ ಶೌಚಾಲಯಗಳನ್ನು ಸಜ್ಜೀಕರಿಸಿರುವರೆಂದೂ ಶೌಚಾಲಯ ತ್ಯಾಜ್ಯವನ್ನು ವೈಜ್ಞಾನಿಕವಾಗಿ ಸಂಸ್ಕರಿಸುವರೆಂದೂ ಖಾತ್ರಿಪಡಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

(3) ಸಾರ್ವಜನಿಕಾರೋಗ್ಯಕ್ಕೆ ಹಾನಿಕರವಾಗಿ ಬಾಧಿಸುವುದಿಲ್ಲೆಂದು ಖಾತ್ರಿಪಡಿಸಲು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿ ಈ ಕೆಳಗಿನ ವಿಷಯಗಳನ್ನು ಮಾಡತಕ್ಕದ್ದು, ಅದೇನೆಂದರೆ:—

(i) ಅಸ್ತಿತ್ವದಲ್ಲಿ ಜಾರಿಯಲ್ಲಿರುವ ಅಥವಾ ಒಮ್ಮೆಲೆ ಹರಡಲು ಸಾಧ್ಯತೆ ಇದೆ ಎಂದು ಕೇಂದ್ರ, ರಾಜ್ಯ ಸರಕಾರಗಳ ಮುನ್ನೆಚ್ಚರಿಕೆ ಇರುವ ಸೋಂಕು ರೋಗಗಳನ್ನು ತಡೆಗಟ್ಟುವುದಕ್ಕಿರುವ ಸಜ್ಜೀಕರಣ ಮತ್ತು ವ್ಯವಸ್ಥೆ;

(ii) ನೀಡುವುದು ಶುದ್ಧವಾದ ಕುಡಿಯುವ ನೀರು ಮತ್ತು ಆಹಾರ ಆಗಿದೆ ಎಂಬುವುದಕ್ಕೆ ಸಂಬಂಧಿಸಿ ಪರಿಶೋಧನೆಗಳು;

(iii) ತುರ್ತು ಆರೋಗ್ಯ ಸೇವೆಗಳಿಗೆ ಸಜ್ಜೀಕರಣಗಳನ್ನು ಮಾಡಲಾಗಿದೆ ಎಂಬುವುದು;

(iv) ತುರ್ತು ಸನ್ನಿವೇಶಗಳನ್ನು ಎದುರಿಸಲು ಆಸ್ಪತ್ರೆಗಳ ಸಜ್ಜೀಕರಿಸುವಿಕೆ.

(4) ಉಪ-ವಿಭಾಗ (1) ಮತ್ತು (2)ರಲ್ಲಿ ನಿಗದಿಪಡಿಸಿದ ಉಪಬಂಧಗಳನ್ನು ಅಥವಾ ಉಪಬಂಧಗಳಿಗೆ ಅನುಸಾರವಾಗಿ ಸಾರ್ವಜನಿಕಾರೋಗ್ಯ ಅಧಿಕಾರಿಯು ನೀಡುವ ನಿರ್ದೇಶಗಳನ್ನು ಪಾಲಿಸದಿದ್ದಲ್ಲಿ 65ನೇ ವಿಭಾಗದಲ್ಲಿ ನಿಗದಿಪಡಿಸಿರುವ ದಂಡಕ್ಕೆ ಬಾಧ್ಯಸ್ಥರಾಗಿರುವರು.

59. ಜಲ ಸರಬರಾಜಿನ ಖಾಸಗಿ ಮೂಲಗಳ ಮೇಲೆ ನಿಯಂತ್ರಣ.—(1) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯ ಅಭಿಪ್ರಾಯದಲ್ಲಿ, ಸಾಮುದಾಯಿಕ ಒಟ್ಟುಗೂಡುವಿಕೆಗಳಿಗೆ ಸರಬರಾಜು ಮಾಡುವ ಜಲವು ವ್ಯಕ್ತಿಗಳನ್ನೋ ಸಮಾಜವನ್ನೋ ಅಪಾಯಗೊಳಿಸಲು ಅಥವಾ ರೋಗ ಹರಡಿಸಲು ಸಾಧ್ಯತೆಯಿರುವುದಾದ್ದಲ್ಲಿ, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಅದರ ನಿಯಂತ್ರಣೆಯಿರುವ ಯಜಮಾನನೊಡನೆ ಅಥವಾ ಇತರ ವ್ಯಕ್ತಿಯೊಡನೆ, ಅಂತಹ ಜಲಸರಬರಾಜನ್ನು ನಿಲ್ಲಿಸಲು ಅಥವಾ ವೈರಾಣು ಮುಕ್ತಗೊಳಿಸಲು ನಿರ್ದೇಶಿಸಬಹುದಾಗಿದೆ.

(2) ಉಪ-ವಿಭಾಗ (1)ರ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ಸಂಸ್ಥೆ ಮತ್ತು ವ್ಯಕ್ತಿಯು 65ನೇ ವಿಭಾಗದಲ್ಲಿ ನಿಗದಿಪಡಿಸಿರುವ ದಂಡಕ್ಕೆ ಬಾಧ್ಯಸ್ಥರಾಗಿರುವರು.

60. ಸಾಮುದಾಯಿಕ ಒಟ್ಟುಗೂಡುವಿಕೆಯ ಅಧಿಸೂಚಿಸುವಿಕೆ.—(1) ಸರಕಾರಕ್ಕೆ ಅಧಿಸೂಚನೆ ಮುಖೇನ ರಾಜ್ಯವನ್ನು ಅಥವಾ ಸರಕಾರ ಸಾಮಾನ್ಯವಾಗಿ ಅಥವಾ ವಿಶೇಷವಾಗಿ ಅಧಿಕೃತಗೊಳಿಸಿದ ರೀತಿಯಲ್ಲಿ ಇತರ ಪ್ರಾಧಿಕಾರಗಳಿಗೆ ಆದೇಶ ಮುಖೇನ ರಾಜ್ಯದ ಯಾವುದೇ ಪ್ರದೇಶವನ್ನು ಯಾವುದೇ ಸಾಮುದಾಯಿಕ ಒಟ್ಟುಗೂಡುವಿಕೆಗೆ ಸಂಬಂಧಿಸಿದಂತೆ ಅಥವಾ ಅಲ್ಲದೆ ಉತ್ಸವ ವಲಯವಾಗಿ ಅದರಲ್ಲಿ ಹೇಳುವ ಕಾಲಾವಧಿಯವರೆಗೆ ಘೋಷಿಸಬಹುದಾಗಿದೆ ಮತ್ತು ಸಾರ್ವಜನಿಕಾರೋಗ್ಯಕ್ಕೆ ಸಂಬಂಧಿಸಿದ ಅವಶ್ಯಕವಾದ ಸಜ್ಜೀಕರಣಗಳನ್ನು ಮತ್ತು ನಿಯಂತ್ರಣಗಳನ್ನು ಏರ್ಪಡಿಸಬಹುದಾಗಿದೆ.

(2) ಈ ರೀತಿ ಏರ್ಪಡಿಸಿದ ನಿಯಂತ್ರಣಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯು 65ನೇ ವಿಭಾಗದಲ್ಲಿ ನಿಗದಿಪಡಿಸಿರುವ ದಂಡಕ್ಕೆ ಬಾಧ್ಯಸ್ಥನಾಗಿರುವನು.

ಅಧ್ಯಾಯ 10

ವೃದ್ಧರು, ಹಾಸಿಗೆ ಹಿಡಿದವರು, ಮಾರಕರೋಗ ಇರುವವರು, ವಿಕಲಚೇತನರು ಮುಂತಾದವರಿಗಿರುವ ಆರೋಗ್ಯ ಶುಶ್ರೂಷೆ ಕಾರ್ಯಕ್ರಮ

61. ಶಾರೀರಿಕವೂ ಮಾನಸಿಕವೂ ಸಾಮಾಜಿಕವೂ ಆರ್ಥಿಕವೂ ಆದ ಸವಾಲುಗಳನ್ನು ಎದುರಿಸುವವರಿಗೆ ಲಭಿಸಬೇಕಾದ ಪರಿಗಣನೆ ಮತ್ತು ಆದ್ಯತೆ.—(1) ವೃದ್ಧರೂ ಹಾಸಿಗೆ ಹಿಡಿದವರೂ ಮಾರಕರೋಗ ಇರುವವರೂ ವಿಕಲಚೇತನರೂ ಮುಂತಾದ ವಿಶೇಷ ಪರಿಗಣನೆ ಮತ್ತು ಗಮನ ಅವಶ್ಯವಿರುವ ಜನವಿಭಾಗದವರಿಗೆ ಸೋಂಕುರೋಗ ತಡೆಗಟ್ಟುವಿಕೆಯ ಮತ್ತು ಸಾರ್ವಜನಿಕಾರೋಗ್ಯ ಸಂರಕ್ಷಣೆಯ ಭಾಗವಾಗಿ ಆವಿಷ್ಕರಿಸಿರುವ ಚಟುವಟಿಕೆಗಳೂ ಸೇವೆಗಳೂ ಲಭ್ಯವಾಗುತ್ತಿದೆ ಎಂದು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಖಾತ್ರಿಪಡಿಸತಕ್ಕದ್ದು. ಇದಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನೂ ಕಾರ್ಯಕ್ರಮಗಳನ್ನೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯ ಮತ್ತು ರಾಜ್ಯಮಟ್ಟದಲ್ಲಿ ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯೂ ಅವಲೋಕಿಸತಕ್ಕದ್ದು. ಉಪಶಾಮಕ ಆರೈಕೆ ಒಳಗೊಂಡ ಸರಕಾರದ ಆರೋಗ್ಯ ಪರಿಪಾಲನೆ ಕಾರ್ಯಕ್ರಮಗಳನ್ನು ಆಯಾಯ ಜನವಿಭಾಗದವರೊಳಗೆ ದಕ್ಷವಾಗಿ ಜಾರಿಗೊಳಿಸಲಾಗುತ್ತಿದೆ ಎಂದು ಖಾತ್ರಿಪಡಿಸತಕ್ಕದ್ದು.

(2) ಉಪ-ವಿಭಾಗ (1)ರಲ್ಲಿ ಉಲ್ಲೇಖಿಸಿರುವ ಕಾರ್ಯಕ್ರಮಗಳನ್ನು ದಕ್ಷವಾಗಿ ಜಾರಿಗೊಳಿಸಲಾಗುತ್ತಿದೆಯೇ ಎಂದು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯೂ ರಾಜ್ಯ ಮಟ್ಟದಲ್ಲಿ ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಯೂ ಖಾತ್ರಿಪಡಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

33

ಅಧ್ಯಾಯ 11

ಸಾಂಕ್ರಮಿಕವಲ್ಲದ ರೋಗಗಳ ನಿಯಂತ್ರಣ

62. ಸಾಂಕ್ರಾಮಿಕವಲ್ಲದ ರೋಗಗಳ ನಿಯಂತ್ರಣ.—(1) ಈ ಅಧ್ಯಾಯದ ಅಗತ್ಯಕ್ಕಾಗಿ ಸಾಂಕ್ರಾಮಿಕವಲ್ಲದ ರೋಗ ಎಂದರೆ, 2ನೇ ವಿಭಾಗದ (1) ಉಪ-ವಿಭಾಗದ (ಸಿ) (ಐ) ಎಂಬೀ ಖಂಡಗಳಲ್ಲಿನ ನಿರ್ವಚನಗಳಲ್ಲಿ ಒಳಪಡದ ಹರಡದ ರೋಗಗಳು ಆಲ್ಲದಿದ್ದಲ್ಲಿ ಸ್ಥಿತಿ ಎಂದರ್ಥ;

(2) ದೀರ್ಘಕಾಲದ ಒಂದು ರೋಗ ಎಂದರೆ, ಈ ಕೆಳಗಿನ ಒಂದು ಅಥವಾ ಅದಕ್ಕಿಂತ ಹೆಚ್ಚು ಒಳಗೊಂಡ ಸೋಂಕುರೋಗವಲ್ಲದ ಮತ್ತು ಸಾಮಾನ್ಯ ರೀತಿಯಿಂದ ವ್ಯತಿಯಾನ ಇರುವ ಸ್ಥಿತಿ ಎಂದರ್ಥ, ಅದೇನೆಂದರೆ:—

(i) ರೋಗ ಅಥವಾ ಅಪಘಾತದಿಂದುಂಟಾದ ಶಾಶ್ವತವಾದ ದುರ್ಬಲತೆ;

(ii) ರೋಗ ಅಥವಾ ಅಪಘಾತದಿಂದುಂಟಾದ ಶಾಶ್ವತವಾದ ಅಂಗವೈಕ್ಯಲ್ಯ;

(iii) ಪತ್ತೆ ಹಚ್ಚಲು ಸಾಧ್ಯವಾಗದ ರೋಗಾವಸ್ಥೆಯಿಂದುಂಟಾದ ಅಂಗವೈಕಲ್ಯ;

(iv) ಪುನರುಜ್ಜೀವನಗೊಳಿಸುವುದಕ್ಕಾಗಿ ವಿಶೇಷ ತರಬೇತಿಯ ಅವಶ್ಯಕತೆಯಿರುವ ಸ್ಥಿತಿ; ಅಲ್ಲದೆ

(v) ಗುಣಮುಖವಾಗಲು ದೀರ್ಘಕಾಲದ ಮೇಲ್ನೋಟ ಅಥವಾ ವೀಕ್ಷಣೆ ನಿರೀಕ್ಷಿಸುವಂತಹವು.

(3) ಈ ಕೆಳಗಿನವುಗಳನ್ನು ಸಾಮಾನ್ಯವಾಗಿ ಸೋಂಕುರೋಗ ಅಲ್ಲದ ರೋಗಗಳಾಗಿ ಭಾವಿಸಲಾಗುವುದು, ಅದೇನೆಂದರೆ:—

(i) ಮಧುಮೇಹ;

(ii) ರಕ್ತದೊತ್ತಡ (ಹೈಪರ್ ಟೆನ್ಸನ್);

(iii) ಅರ್ಬುದ ರೋಗ;

(iv) ದೀರ್ಘಕಾಲದ ಶ್ವಾಸಕೋಶ ರೋಗ;

(v) ದೀರ್ಘಕಾಲದ ಮೂತ್ರಜನಕಾಂಗ ರೋಗ;

(vi) ಕುರುಡು;

(vii) ಹೃದ್ರೋಗ;

(viii) ಅಲ್ಷೈಮರ್ಸ್ ರೋಗ ಒಳಗೊಂಡ ಮರೆವಿನ ರೋಗಗಳು;

(ix) ಅಪಘಾತದಿಂದುಂಟಾಗುವ ಗಾಯಗಳು;

(x) ಮಸ್ಕುಲೊಸ್ಕೆಲಿಟಲ್ ರೋಗಗಳು ಮತ್ತು ಸಂಧಿವಾತ

(xi) ನರ ಸಂಬಂಧಿತ ರೋಗಗಳು;

(xii) ಬೊಜ್ಜು;

(xiii) ಮಾನಸಿಕ ರೋಗ;

(xiv) ರುಮಾಟಿಕ್ ಹೃದ್ರೋಗ;

(xv) ಪಾರ್ಶ್ವವಾಯು;

(xvi) ಪಿಂತಜನಕಾಂಗ ರೋಗಗಳು;

(xvii) ಆನುವಂಶಿಕ ರೋಗಗಳು.

(4) ಉಪ-ವಿಭಾಗ (1) ಅಥವಾ ಉಪ-ವಿಭಾಗ (2)ರಲ್ಲಿ ನಿರ್ದಿಷ್ಟಪಡಿಸಿರುವ ಉಪಬಂಧಗಳಿಗೆ ಅನುಸಾರವಾಗಿ ಬೇರೆ ಯಾವುದೇ ರೋಗವನ್ನು ಸರಕಾರಕ್ಕೆ ಸಾಂಕ್ರಾಮಿಕವಲ್ಲದ ರೋಗವೆಂದು ಅಧಿಸೂಚಿಸಬಹುದಾಗಿದೆ ಮತ್ತು ಯಾವುದೇ ರೋಗಗಳು ಸಾಂಕ್ರಾಮಿಕವಲ್ಲೆಂದು ಭಾವಿಸುವುದಾದಲ್ಲಿ ಅದನ್ನು ಅಧಿಸೂಚನೆಯ ಮುಖೇನ ಹೊರತುಪಡಿಸಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

34

(5) ಸರಕಾರವು, ಸಾಂಕ್ರಾಮಿಕವಲ್ಲದ ರೋಗಗಳ ನಿಯಂತ್ರಣೆಗಾಗಿ, ಆರೋಗ್ಯದಾಯಕ ಪ್ರತಿರೋಧಕ, ರೋಗ ಚಿಕಿತ್ಸೆ, ಪುನರುಜ್ಜೀವನ, ಉಪಶಾಮಕ ಆರೈಕೆ ಚಟುವಟಿಕೆಗಳಿಗಿರುವ ಮಾರ್ಗದರ್ಶಕಗಳನ್ನು ಜಾರಿಗೊಳಿಸುವುದು ಮತ್ತು ಆ ಮಾರ್ಗದರ್ಶಕಗಳನ್ನು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗಳು, ಆರೋಗ್ಯ ಶುಶ್ರೂಷೆ ನೀಡುವವರು ಪಾಲಿಸುತ್ತಿರುವರೆಂದು ಖಾತ್ರಿಪಡಿಸುವುದು ಮಾಡತಕ್ಕದ್ದು. ಅಲ್ಲದೆ ಸರಕಾರವು ಸಾಂಕ್ರಾಮಿಕವಲ್ಲದ ರೋಗಗಳನ್ನು ತಡೆಗಟ್ಟುವುದಕ್ಕೆ ಮತ್ತು ನಿಯಂತ್ರಿಸುವುದಕ್ಕೆ ಧೋರಣೆಗಳನ್ನು ಆಯೋಜಿಸುವುದು ಮತ್ತು ವಿನ್ಯಾಸಿಸುವುದು ಮತ್ತು ಅಂತಹ ಧೋರಣೆಗಳನ್ನು ಜಾರಿಗೊಳಿಸುವುದಕ್ಕಾಗಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗಳ ಮುಖೇನ ಆರೋಗ್ಯ ಶುಶ್ರೂಷೆ ದಾತರಿಗೆ ತರಬೇತಿ ನೀಡುವುದು ಮಾಡತಕ್ಕದ್ದು.

(6) ಸ್ಥಳೀಯ ಜನರ ಈಗಿನ ಆರೋಗ್ಯ ಅವಸ್ಥೆಗಳಿಗೆ ಅನುಸಾರವಾಗಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗಳು ಸಾಂಕ್ರಾಮಿಕವಲ್ಲದ ರೋಗಗಳ ತಡೆಗಟ್ಟುವಿಕೆಗೆ ಮತ್ತು ನಿಯಂತ್ರಣೆಗಾಗಿ ಸರಕಾರವು ವಿನ್ಯಾಸಿಸಿದ ಧೋರಣೆಗಳನ್ನೂ ಮಾರ್ಗದರ್ಶಕಗಳನ್ನೂ ಜಾರಿಗೊಳಿಸತಕ್ಕದ್ದು. ಆರೋಗ್ಯದಿಂದಿರುವ ಹವ್ಯಾಸಗಳನ್ನು ಪಾಲಿಸುವುದಕ್ಕಿರುವ ಸನ್ನಿವೇಶವು ಸೃಷ್ಟಿಸಲಾಗಿದೆ ಎಂದು ಸ್ಥಳೀಯರ ಅಂತಹ ಜೀವನಶೈಲಿಗಿರುವ ಭೌತಿಕ ಸನ್ನಿವೇಶ ನೆಲೆನಿಲ್ಲಿಸಲಾಗುತ್ತಿದೆಯೆಂದೂ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗಳು ಖಾತ್ರಿಪಡಿಸತಕ್ಕದ್ದು.

(7) ವಿವರಿಸಿರುವ ಪ್ರಕಾರ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗಳು ಪ್ರಾಥಮಿಕ ಪ್ರತಿರೋಧ, ದ್ವಿತೀಯ ಪ್ರತಿರೋಧ, ತೃತೀಯ ಪ್ರತಿರೋಧ ಇತ್ಯಾದಿಗಳ ಮುಖೇನ ಸಾಂಕ್ರಾಮಿಕವಲ್ಲದ ರೋಗಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣೆಯನ್ನು ಪ್ರೋತ್ಸಾಹಿಸತಕ್ಕದ್ದಾಗಿದೆ, ಅದೇನೆಂದರೆ:—

(i) ಪ್ರಾಥಮಿಕ ಪ್ರತಿರೋಧದಲ್ಲಿ,—

(ಎ) ಮನೆಯ ಒಳಗೆ ಹಾಗೂ ಹೊರಗೆ ಇರುವ ವಾಯುಮಾಲಿನ್ಯ ನಿಯಂತ್ರಿಸುವಿಕೆ;

(ಬಿ) ವ್ಯಾಯಾಮಕ್ಕೆ ಬೇಕಾದ ಭೌತಿಕ ಸೌಕರ್ಯಗಳ ಸಜ್ಜುಗೊಳಿಸುವಿಕೆ;

(ಸಿ) ಆರೋಗ್ಯಯುತವಾದ ಆಹಾರ ಮತ್ತು ಆಹಾರ ರೂಢಿಗಳ ಪ್ರೋತ್ಸಾಹಿಸುವಿಕೆ;

(ಡಿ) ಆರೋಗ್ಯಯುತವಾದ ಕೃಷಿ ರೀತಿಗಳ ಪ್ರೋತ್ಸಾಹಿಸುವಿಕೆ;

(ಇ) ಸಾರ್ವಜನಿಕರಲ್ಲಿ ಆರೋಗ್ಯದ ಅರಿವು ಮೂಡಿಸುವಿಕೆ;

(ಎಫ್) ಮಾದಕಮುಕ್ತ ಚಟುವಟಿಕೆಗಳು ಮತ್ತು ಅದಕ್ಕಿರುವ ಅರಿವು ಮೂಡಿಸುವಿಕೆ;

(ಜಿ) ಇತರ ಆರೋಗ್ಯದಾಯಕ ಚಟುವಟಿಕೆಗಳು; ಇತ್ಯಾದಿ

(ii) ದ್ವಿತೀಯ ಪ್ರತಿರೋಧದಲ್ಲಿ,—

(ಎ) ಪೂರ್ವಭಾವಿ ರೋಗ ನಿರ್ಣಯ ಮತ್ತು ಸರಿಯಾದ ಚಿಕಿತ್ಸೆ;

(ಬಿ) ಯುಕ್ತವಾದ ಮಧ್ಯಾಂತರಗಳಲ್ಲಿ ರೋಗ ತಪಾಸಣೆ ನಡೆಸುವುದು;

(ಸಿ) ಆಂಟಿಬಯೋಟಿಕ್‌ಗಳ ಅಮಿತ ಹಾಗು ಅವೈಜ್ಞಾನಿಕ ಸೇವನೆಯನ್ನು ನಿಯಂತ್ರಿಸುವುದು ಮತ್ತು ಹೊರತುಪಡಿಸುವುದು; ಇತ್ಯಾದಿ

(iii) ತೃತೀಯ ಪ್ರತಿರೋಧದಲ್ಲಿ,—

(ಎ) ದೈಹಿಕ ಮತ್ತು ಮಾನಸಿಕ ಪುನರ್ವಸತಿ ಯೋಜನೆಗಳು;

(ಬಿ) ಉಪಶಾಮಕ ಆರೈಕೆ;

(ಸಿ) ಉದ್ಯೋಗಪರವಾದ ಪುನರ್ವಸತಿ; ಇತ್ಯಾದಿ ಒಳಗೊಳ್ಳುವುದು.

(8) ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಈ ಕೆಳಗೆ ಹೇಳುವ ವಿಷಯಗಳಿಗೆ ಪ್ರೋತ್ಸಾಹ ನೀಡತಕ್ಕದ್ದು, ಅದೇನೆಂದರೆ:—

(i) ಆರೋಗ್ಯ ಉಪಕೇಂದ್ರಗಳಲ್ಲಿ ಜನಪರ ಒಕ್ಕೂಟದ ಮುಖೇನ ಜನರ ಸಹಭಾಗಿತ್ವವನ್ನು ಖಾತ್ರಿಪಡಿಸಿ ವ್ಯಾಯಾಮಕ್ಕೆ ಮತ್ತು ಆರೋಗ್ಯಕ್ಕೆ ಹಾನಿಕರವಾಗುವ ಜೀವನಶೈಲಿಗಳನ್ನು ಬದಲಿಸುವುದಕ್ಕಿರುವ ಚಟುವಟಿಕೆಗಳು;

(ii) ದೈಹಿಕವೂ ಮಾನಸಿಕವೂ ಆದ ಹುರುಪಿಗೂ ಆರೋಗ್ಯ ಸಂರಕ್ಷಣೆಗೂ ಯೋಗ ತರಬೇತಿ ಹಾಗೂ ಯೋಗಾಭ್ಯಾಸ;

This is a digitally signed Gazette.
Authenticity may be verified through https://compose.kerala.gov.in/

35

(iii) ಆರೋಗ್ಯ ತಪಾಸಣೆಗಳಲ್ಲಿ ಜೀವನಶೈಲಿ ರೋಗಗಳು ಹಿಡಿಯಲು ಸಾಧ್ಯತೆ ಇರುವವರನ್ನು ಕಂಡುಹಿಡಿದಲ್ಲಿ ಮತ್ತು ರೋಗ ತಡೆಗಟ್ಟುವಿಕೆಗೆ ಆವಶ್ಯಕವಾದ ಆಹಾರ ಕ್ರಮಗಳು ಮತ್ತು ಜೀವನಶೈಲಿಯಲ್ಲಿ ಬದಲಾವಣೆ;

(iv) ಅಮಲು ಪದಾರ್ಥಗಳ ಸೇವನೆಯಿಂದ ಜನರಲ್ಲುಂಟಾಗುವ ದೈಹಿಕವೂ ಮಾನಸಿಕವೂ ಆದ ಗಂಭೀರ ರೋಗಾವಸ್ಥೆಗಳ ಕುರಿತು ಮನವರಿಕೆ ಮಾಡುವುದು ಮತ್ತು ಅರಿವು ಮೂಡಿಸುವಿಕೆ;

(v) ಸಾಂಕ್ರಾಮಿಕವಲ್ಲದ ರೋಗ ಸೋಂಕಿತರನ್ನೂ ರೋಗ ಸಾಧ್ಯತೆಯಿರುವವರನ್ನೂ ಕಂಡುಹಿಡಿಯಲು ಆರೋಗ್ಯ ಕಾರ್ಯಕರ್ತರಿಗೆ ತರಬೇತಿ;

(vi) ಆರೋಗ್ಯಕ್ಕೆ ಸಂಬಂಧಿಸಿದ ವೈಜ್ಞಾನಿಕ ಅರಿವು ಮೂಡಿಸುವಿಕೆ ಚಟುವಟಿಕೆಗಳ;

(vii) ಹೃದಯಾಘಾತ, ಸುಟ್ಟಗಾಯ ಮುಂತಾದ ಸನ್ನಿವೇಶಗಳಲ್ಲಿ ನೀಡಬೇಕಾದ ತುರ್ತು ಪ್ರಥಮ ಶುಶ್ರೂಷೆಗೆ ಸಂಬಂಧಿಸಿ ಆರೋಗ್ಯ ಕಾರ್ಯಕರ್ತರಿಗೂ ಇತರರಿಗೂ ತರಬೇತಿ;

(viii) ಶಾಲಾ ಆರೋಗ್ಯ ಯೋಜನೆಯಲ್ಲಿ ಸರಕಾರವು ನಿರ್ದೇಶಿಸುವ ಕಾರ್ಯಕ್ರಮಗಳೂ ಚಟುವಟಿಕೆಗಳೂ.

ಅಧ್ಯಾಯ 12

ಇತರೆ

63. ಸಮಿತಿಯ ಸಭೆಗಳು.—(1) ಸಮಿತಿಯು ಅತೀ ಕಡಿಮೆ ಮೂರು ತಿಂಗಳಿಗೊಮ್ಮೆಯಾದರೂ ಅಧ್ಯಕ್ಷರು ನಿರ್ಧರಿಸುವ ಸಮಯದಲ್ಲೂ ಸ್ಥಳದಲ್ಲೂ ಸಭೆ ಸೇರತಕ್ಕದ್ದು. ಸಭೆಯ ಕ್ವಾರಂ ಮತ್ತು ಪ್ರಕ್ರಿಯೆಗಳು ನಿಗದಿಪಡಿಸಬಹುದಾದ ರೀತಿಯಲ್ಲಿ ಆಗಿರತಕ್ಕದ್ದು:

(2) ತುರ್ತು ಸನ್ನಿವೇಶಗಳಲ್ಲಿ ಅಧ್ಯಕ್ಷರ ನಿರ್ದೇಶ ಪ್ರಕಾರ ಸದಸ್ಯ ಕಾರ್ಯದರ್ಶಿಯವರು ಸಭೆ ಕರೆದು ಸೇರಿಸತಕ್ಕದ್ದು.

(3) ಸಭೆಗಳಲ್ಲಿ ಎಲ್ಲಾ ಸದಸ್ಯರೂ ಪಾಲ್ಗೊಳ್ಳತಕ್ಕದ್ದು ಮತ್ತು ಯಾವುದೇ ಅನಿವಾರ್ಯ ಕಾರಣದಿಂದ ಒಬ್ಬ ಸದಸ್ಯನಿಗೆ ಸಮಿತಿಯ ಯಾವುದೇ ಸಭೆಯಲ್ಲಿ ಭಾಗವಹಿಸಲು ಸಾಧ್ಯವಾಗದ ಸನ್ನಿವೇಶದಲ್ಲಿ ಪ್ರಸ್ತುತ ಸದಸ್ಯನು ಆ ಮಾಹಿತಿಯನ್ನು ಸಮಿತಿಯ ಅಧ್ಯಕ್ಷನಿಗೆ ಲಿಖಿತವಾಗಿ ಮುಂಚಿತವಾಗಿ ತಿಳಿಸತಕ್ಕದ್ದು ಮತ್ತು ಅಧ್ಯಕ್ಷನ ಅನುಮತಿಯಿಂದ ಆ ಸದಸ್ಯನನ್ನು ಪ್ರತಿನಿಧೀಕರಿಸಿ ಹೊಣೆಗಾರಿಕೆಯಿರುವ ಬೇರೊಬ್ಬ ಉದ್ಯೋಗಸ್ಥನಿಗೆ ಆ ಸಭೆಯಲ್ಲಿ ಭಾಗವಹಿಸಬಹುದಾಗಿದೆ.

(4) ಸಭೆಯ ಪರಿಗಣನೆಗೆ ಬರುವ ವಿಷಯಕ್ಕೆ ಸಂಬಂಧಿಸಿ ಇತರ ಇಲಾಖೆಗಳ ಉದ್ಯೋಗಸ್ಥರನ್ನೋ ವಿಷಯ ತಜ್ಞರನ್ನೋ ಅಧ್ಯಕ್ಷರ ಅನುಮತಿಯಿಂದ ಆಹ್ವಾನಿತರನ್ನಾಗಿಸಬಹುದಾಗಿದೆ.

64. ನೋಟೀಸುಗಳನ್ನು ಮತ್ತು ಆದೇಶಗಳನ್ನು ನೀಡುವ ರೀತಿ.—(1) ಈ ಅಧಿನಿಯಮ ಅಥವಾ ಅದರ ಪ್ರಕಾರ ರಚಿಸಿರುವ ಯಾವುದೇ ನಿಯಮಗಳ, ರೆಗ್ಯುಲೇಷನ್‌ಗಳ ಅಥವಾ ಆದೇಶಗಳ ಪ್ರಕಾರ ಯಾವುದೇ ನೋಟೀಸನ್ನು ನೀಡಬೇಕಾಗಿದ್ದಲ್ಲಿ, ಅಂತಹ ನೋಟೀಸು ಅಥವಾ ಆದೇಶವು ಲಿಖಿತ ಮುಖೇನವಾಗಿರತಕ್ಕದ್ದು, ಅದು,—

(ಎ) ಅಂತಹ ವ್ಯಕ್ತಿಗೆ ನೀಡುವುದೋ ಒಪ್ಪಿಸುವುದೋ ಮಾಡುತಾ; ಅಥವಾ

(ಬಿ) ಅಂತಹ ವ್ಯಕ್ತಿಯು ಲಭಿಸದಿದ್ದಲ್ಲಿ ಆತನ ಕೊನೆಯದ್ದು ಎಂದು ಹೇಳಲ್ಪಡುವ ವಾಸ ಸ್ಥಳದಲ್ಲಿ ಅಥವಾ ಕೆಲಸದ ಸ್ಥಳದಲ್ಲಿ ನೀಡುತಾ ಅಲ್ಲದಿದ್ದಲ್ಲಿ ಆತನ ಕುಟುಂಬದ ವಯಸ್ಕ ಸದಸ್ಯನಿಗೆ ನೀಡುತಾ ಅಥವಾ ಒಪ್ಪಿಸುತಾ; ಅಥವಾ

(ಸಿ) ಅಂತಹ ವ್ಯಕ್ತಿಯು ಆ ಪ್ರದೇಶದಲ್ಲಿ ವಾಸಿಸದಿದ್ದಲ್ಲಿ ಆತನ ಬೇರೆ ಎಲ್ಲಾದರು ವಿಳಾಸ ತಿಳಿದಿದ್ದಲ್ಲಿ ಅದನ್ನು ರಿಜಿಸ್ಟರ್ಡ್ ಅಂಚೆ ಮುಖೇನ ಆ ವಿಳಾಸಕ್ಕೆ ಆತನಿಗೆ ಕಳುಹಿಸುತಾ; ಅಥವಾ

(ಡಿ) ಮೇಲೆ ಹೇಳಿದ ವಿಧಾನಗಳು ಯಾವುದೂ ಲಭ್ಯವಿಲ್ಲದಿದ್ದಲ್ಲಿ ಅಂತಹ ವಾಸಸ್ಥಳದ ಅಥವಾ ಕೆಲಸದ ಸ್ಥಳದ ಎದ್ದು ಕಾಣುವ ಜಾಗದ ಯಾವುದೇ ಭಾಗದಲ್ಲಿ ಅಂಟಿಸುತಾ,

ನೀಡತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

36

(2) ಒಬ್ಬ ವ್ಯಕಿಯು ಯಾವುದೇ ಕಟ್ಟಡದ ಯಜಮಾನ ಅಥವಾ ಸ್ವಾಧೀನಗಾರ ಆಗಿದ್ದಲ್ಲಿ ಆ ನೋಟೀಸಿನಲ್ಲಿ ಅಥವಾ ಆದೇಶದಲ್ಲಿ ಆ ಯಜಮಾನನ ಅಥವಾ ಸ್ವಾಧೀನಗಾರನ ಹೆಸರನ್ನು ಹೇಳಿರತಕ್ಕದ್ದು ಹಾಗು ಜಂಟಿ ಯಜಮಾನರ ಅಥವಾ ಸ್ವಾಧೀನಗಾರರ ವಿಷಯದಲ್ಲಿ ಅಂತಹ ಯಜಮಾನರಲ್ಲಿ ಅಥವಾ ಸ್ವಾಧೀನಗಾರರಲ್ಲಿ ಒಬ್ಬನಿಗೆ ನೀಡಿದರೆ ಸಾಕಾಗಬಹುದಾಗಿದೆ.

65. ಶಿಕ್ಷೆಗಳು.—(1) 15ನೇ ವಿಭಾಗದ (8)ನೇ ಉಪ-ವಿಭಾಗದ ಮತ್ತು 18ನೇ ವಿಭಾಗದ (7)ನೇ ಉಪ-ವಿಭಾಗದ ಮತ್ತು 20ನೇ ವಿಭಾಗದ (3)ನೇ ಉಪ—ವಿಭಾಗದ ಉಪಬಂಧಗಳ ಹೊರತು ಈ ಅಧಿನಿಯಮದ ಇತರ ಉಪಬಂಧಗಳನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯು ಈ ಕೆಳಗಿನ ಪಟ್ಟಿಯಲ್ಲಿ ನಿರ್ದಿಷ್ಟಪಡಿಸಿರುವ ದಂಡ ಶಿಕ್ಷೆಗೆ ಬಾಧ್ಯಸ್ಥರಾಗಿರುವರು, ಅದೇನೆಂದರೆ:—

ಪಟ್ಟಿ

ಕ್ರಮ ನಂಬ್ರ	ವಿಭಾಗ	ಅಪರಾಧ	ದಂಡ ಮೊತ್ತ
(1)	(2)	(3)	(4)
1.	15	ಉಪ-ವಿಭಾಗ (5)ರ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ	ಹದಿನೈದು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಮೂವತ್ತು ಸಾವಿರ ರೂಪಾಯಿಗಿಂತ ಮೀರದ ಮೊತ್ತ
2.	19	ಉಪ-ವಿಭಾಗ (1)ರ ಉಪಬಂಧಗಳ ಪ್ರಕಾರ ಸಾರ್ವಜನಿಕಾರೋಗ್ಯ ಅಧಿಕಾರಿ ಅಥವಾ ಆತನು ಅಧಿಕೃತಗೊಳಿಸುವ ಜೂನಿಯರ್ ಹೆಲ್ತ್‌ಇನ್ಸ್‌ಪೆಕ್ಟರ್ ದರ್ಜೆಗಿಂತ ಕಡಿಮೆಯಲ್ಲದ ಉದ್ಯೋಗಸ್ಥನು ನೀಡುವ ನೋಟೀಸಿನ ನಿರ್ದೇಶಗಳನ್ನು ಪಾಲಿಸದಿದ್ದಲ್ಲಿ	ಹತ್ತು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಇಪ್ಪತ್ತು ಸಾವಿರ ರೂಪಾಯಿಗಿಂತ ಮೀರದ ಮೊತ್ತ
3.	23	ಉಪ-ವಿಭಾಗ (1)ರ ಪ್ರಕಾರ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ನೀಡಿದ ನಿರ್ದೇಶಗಳನ್ನು ಪಾಲಿಸುವುದರಲ್ಲಿ ನ್ಯೂನತೆಯೆಸಗಿದ್ದಲ್ಲಿ	ಮೂರುಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಹತ್ತು ಸಾವಿರ ರೂಪಾಯಿಗಿಂತ ಮೀರದ ಮೊತ್ತ
4.	28	ಉಪ-ವಿಭಾಗ (4)ರಲ್ಲಿ ಉಲ್ಲೇಖಿಸಿರುವ ಒಂದು ಘಟನೆಯನ್ನು ವರದಿ ಮಾಡುವುದರಲ್ಲಿ ನ್ಯೂನತೆಯೆಸಗುವುದು	ಗರಿಷ್ಠ ಇಪ್ಪತ್ತೈದು ಸಾವಿರ ರೂಪಾಯಿ
5.	31	ಉಪ-ವಿಭಾಗ (1) ಮತ್ತು (2)ರ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ	ಹತ್ತು ಸಾವಿರ ರೂಪಾಯಿಗಿಂತ ಮೀರದ ಮೊತ್ತ
6.	33	ಉಪ-ವಿಭಾಗ (1)ರ ಪ್ರಕಾರ ನೀಡಬೇಕಾದ ಪ್ರಮಾಣಪತ್ರ ನೀಡುವುದಕ್ಕೆ ತಕ್ಕ ಕಾರಣವಿಲ್ಲದೆ ಸಮ್ಮತಿಸದಿರುವುದೋ, ಉಪ-ವಿಭಾಗ (1)ರಲ್ಲಿ ಹೇಳಿರುವ ರೀತಿಯಲ್ಲಿ ಚಿಕಿತ್ಸೆ ನೀಡದೆ ಪ್ರಮಾಣಪತ್ರವನ್ನು ನೀಡಿದಲ್ಲಿ	ಹತ್ತು ಸಾವಿರ ರೂಪಾಯಿಗಿಂತ ಮೀರದ ಮೊತ್ತ
7.	34	ಉಪ-ವಿಭಾಗ (2)ರ ಪ್ರಕಾರದ ನಿಷೇಧವನ್ನು ಉಲ್ಲಂಘಿಸಿದಲ್ಲಿ	ಐದು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಹತ್ತು ಸಾವಿರ ರೂಪಾಯಿಗಿಂತ ಮೀರದ ಮೊತ್ತ
8.	35	(i) ಉಪ-ವಿಭಾಗ (1)ರ ಪ್ರಕಾರ ಒಂದು ಆಸ್ಪತ್ರೆಗೆ ಅಥವಾ ಸ್ಥಳಕ್ಕೆ ಒಬ್ಬ ರೋಗಿಯನ್ನು ವರ್ಗಾಯಿಸುವುದನ್ನು ತಡೆಯುವುದು (ii) ಉಪ-ವಿಭಾಗ (2)ಕ್ಕೆ ವಿರುದ್ಧವಾಗಿ ಆಸ್ಪತ್ರೆಯಿಂದ/ಇತರ ಸ್ಥಳದಿಂದ ಬಿಟ್ಟುಹೋಗುವುದು ಅಥವಾ ಕೊಂಡುಹೋಗುವುದು ಮಾಡಿದಲ್ಲಿ	(i) ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಐದು ಸಾವಿರ ರೂಪಾಯಿಗಿಂತ ಮೀರದ ಮೊತ್ತ (ii) ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಐದು ಸಾವಿರ ರೂಪಾಯಿಗಿಂತ ಮೀರದ ಮೊತ್ತ

This is a digitally signed Gazette.
Authenticity may be verified through https://compose.kerala.gov.in/

37

(1)	(2)	(3)	(4)
9.	36	ಅಧಿಸೂಚಿಸಬೇಕಾದ ಸೋಂಕು ರೋಗವಿರುವ ವ್ಯಕ್ತಿ ಅಥವಾ ಅಂತಹ ವ್ಯಕ್ತಿಯ ಶುಶ್ರೂಷೆಯ ಹೊಣೆಗಾರಿಕೆಯಿರುವ ವ್ಯಕ್ತಿ 36(1)ನೇ ವಿಭಾಗದಲ್ಲಿ ಹೇಳುವ ಸ್ಥಳಗಳಲ್ಲಿ ತನ್ನ/ರೋಗಿಯ ಸಾನ್ನಿಧ್ಯ ಉಂಟುಮಾಡುವುದು ಅಥವಾ ಆ ರೀತಿ ಕಾರ್ಯವೆಸಗುವುದು ಮಾಡಿದಲ್ಲಿ	ಗರಿಷ್ಠ ಎರಡು ಸಾವಿರ ರೂಪಾಯಿ
10.	37	ಉಪ-ವಿಭಾಗ (1)ರ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ	ಗರಿಷ್ಠ ಹತ್ತು ಸಾವಿರ ರೂಪಾಯಿ
11.	40	ಉಪ-ವಿಭಾಗ (1)ರ ಪ್ರಕಾರ ಸಾರ್ವಜನಿಕಾರೋಗ್ಯ ಅಧಿಕಾರಿಯು ನೀಡುವ ಆದೇಶವನ್ನು ಉಲ್ಲಂಘಿಸಿದಲ್ಲಿ	ಗರಿಷ್ಠ ಹತ್ತು ಸಾವಿರ ರೂಪಾಯಿ
12.	41	ಉಪ-ವಿಭಾಗ (1)ರ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ	ಗರಿಷ್ಠ ಹತ್ತು ಸಾವಿರ ರೂಪಾಯಿ
13.	42	ಉಪ-ವಿಭಾಗ (1)ರ ಕೆಳಗೆ ಜಿಲ್ಲಾ ಕಲೆಕ್ಟರ್ ಜಾರಿಗೊಳಿಸುವ ಆದೇಶವನ್ನು ಉಲ್ಲಂಘಿಸಿ ಸಾಮುದಾಯಿಕ ಒಟ್ಟುಗೂಡುವಿಕೆ ನಡೆಸುವುದು ಮಾಡಿದಲ್ಲಿ	ಗರಿಷ್ಠ ಇಪ್ಪತ್ತೈದು ಸಾವಿರ ರೂಪಾಯಿ
14.	45	(i) ಉಪ-ವಿಭಾಗ (1)ರಲ್ಲಿ ಇಲಿ ವರ್ಗದವನ್ನು, ನಾಯಿಗಳನ್ನು ಮತ್ತು ಇತರ ಮೃಗಗಳನ್ನು ಆಕರ್ಷಿಸುವ ರೀತಿಯಲ್ಲಿ ಪರಿಸರದಲ್ಲಿ ತ್ಯಾಜ್ಯವನ್ನು ಎಸೆಯುವುದು, ಕಾಡು ಇತರವುಗಳನ್ನು ಬೆಳೆಯಲು ಅನುಮತಿಸುವುದು.	(i) ಗರಿಷ್ಠ ಇಪ್ಪತ್ತೈದು ಸಾವಿರ ರೂಪಾಯಿ
		(ii) ಉಪ-ವಿಭಾಗ (3)ರಲ್ಲಿ ಸಾಕು ನಾಯಿಗಳಿಗೆ/ಸಾಕು ಬೆಕ್ಕುಗಳಿಗೆ ರೇಬೀಸ್‌ನ ವಿರುದ್ಧ ತಕ್ಕ ಸಮಯದಲ್ಲಿ ವಾಕ್ಸಿನೇಶನ್ ನೀಡದಿದ್ದಲ್ಲಿ	(ii) ಗರಿಷ್ಠ ಎರಡು ಸಾವಿರ ರೂಪಾಯಿ
15.	48	ಉಪ-ವಿಭಾಗ (2) ಮತ್ತು (3)ರ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ	ಗರಿಷ್ಠ ಹತ್ತು ಸಾವಿರ ರೂಪಾಯಿ
16.	49	ಉಪ-ವಿಭಾಗ (1)ರ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ	ಹತ್ತು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಿಂತ ಮೀರದ ಮೊತ್ತ
17.	50	ಉಪ-ವಿಭಾಗ (1)ರ ಕೆಳಗೆ ಜಾರಿಗೊಳಿಸಿದ ಮಾರ್ಗನಿರ್ದೇಶಗಳನ್ನು ಪಾಲಿಸದಿದ್ದಲ್ಲಿ	ಹತ್ತು ಸಾವಿರ ರೂಪಾಯಿಗಿಂತ ಕಡಿಮೆಯಲ್ಲದ ಮತ್ತು ಐವತ್ತು ಸಾವಿರ ರೂಪಾಯಿಗಿಂತ ಮೀರದ ಮೊತ್ತ
18.	51	ಉಪ-ವಿಭಾಗ (2)ರ ಕೆಳಗೆ ಜಾರಿಗೊಳಿಸಿದ ಮಾರ್ಗನಿರ್ದೇಶಗಳನ್ನು ಪಾಲಿಸದಿದ್ದಲ್ಲಿ	ಗರಿಷ್ಠ ಇಪ್ಪತ್ತೈದು ಸಾವಿರ ರೂಪಾಯಿಯವರೆಗಿನ ಮೊತ್ತ
19.	53	ಉಪ-ವಿಭಾಗ (1)ರ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ	ಗರಿಷ್ಠ ಹತ್ತು ಸಾವಿರ ರೂಪಾಯಿಯವರೆಗಿನ ಮೊತ್ತ
20.	56	ಉಪ-ವಿಭಾಗ (1)ರ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ	ಗರಿಷ್ಠ ಹತ್ತು ಸಾವಿರ ರೂಪಾಯಿ
21.	58	ಉಪ-ವಿಭಾಗ (1)ರ ಮತ್ತು (2)ರ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ	ಹತ್ತು ಸಾವಿರ ರೂಪಾಯಿಗಿಂತ ಮೀರದ ಮೊತ್ತ
22.	59	ಉಪ-ವಿಭಾಗ (1)ರ ಉಪಬಂಧಗಳನ್ನು ಉಲ್ಲಂಘಿಸಿದಲ್ಲಿ	ಗರಿಷ್ಠ ಹತ್ತು ಸಾವಿರ ರೂಪಾಯಿ
23.	60	ಉಪ-ವಿಭಾಗ (1)ರ ಪ್ರಕಾರ ಅಧಿಸೂಚಿಸಿದ ಆದೇಶದ ನಿಯಂತ್ರಣೆಗಳನ್ನು ಉಲ್ಲಂಘಿಸಿದಲ್ಲಿ	ಗರಿಷ್ಠ ಹತ್ತು ಸಾವಿರ ರೂಪಾಯಿ

This is a digitally signed Gazette.
Authenticity may be verified through https://compose.kerala.gov.in/

38

(2) ಉಪ-ವಿಭಾಗ (1)ರ ಪಟ್ಟಿಯ (2) ಮತ್ತು (3)ನೇ ಕಾಲಂಗಳಲ್ಲಿ ವಿವರಿಸಿರುವ ಅಪರಾಧಗಳಿಗೆ ಒಬ್ಬ ವ್ಯಕ್ತಿ ಅಥವಾ ಸಂಸ್ಥೆ ಒಂದು ಬಾರಿ ಶಿಕ್ಷಿಸಲ್ಪಟ್ಟ ನಂತರ ಅಥವಾ ಆ ಅಪರಾಧವನ್ನು ರಾಜಿಗೊಳಿಸಿದ ನಂತರ ಪುನಃ ಆ ಅಪರಾಧವನ್ನು ಪುನರಾವರ್ತಿಸುವುದಾದಲ್ಲಿ (4)ನೇ ಕಾಲಂನಲ್ಲಿ ನಿರ್ದಿಷ್ಟಪಡಿಸಿರುವ ಮೊತ್ತದ ಇಮ್ಮಡಿ ಮೊತ್ತಕ್ಕೆ ಶಿಕ್ಷಾರ್ಹನಾಗಿರುವನು.

66. ಅಪರಾಧಗಳಿಗೆ ಕ್ರಮ ಕೈಗೊಳ್ಳುವಿಕೆ.—(1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮ ಪ್ರಕಾರದ ಒಂದು ಅಪರಾಧವನ್ನು ಮಾಡಿದ ಮೂರು ತಿಂಗಳೊಳಗೆ, ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯ ಅಥವಾ ಇದಕ್ಕಾಗಿ ಯಥೋಚಿತವಾಗಿ ಅಧಿಕೃತಗೊಳಿಸಿದ ಒಬ್ಬ ಉದ್ಯೋಗಸ್ಥನ ಲಿಖಿತವಾದ ದೂರಿನ ಮೇಲೆ ಅಲ್ಲದೆ ಯಾವುದೇ ನ್ಯಾಯಾಲಯವು ಅಂತಹ ಒಂದು ಅಪರಾಧವನ್ನು ವಿಚಾರಣೆಗೆ ತೆಗೆಯತಕ್ಕದ್ದಲ್ಲ.

(2) ವಿಭಾಗ 15ರ ಉಪ-ವಿಭಾಗ (8) ಮತ್ತು ವಿಭಾಗ 20ರ ಉಪ-ವಿಭಾಗ (3)ರ ಪ್ರಕಾರದ ಅಪರಾಧಗಳ ಹೊರತು ಈ ಅಧಿನಿಯಮದ ಕೆಳಗೆ ಶಿಕ್ಷಿಸಲ್ಪಡಬಹುದಾದ ಅಪರಾಧಗಳು ಸಂಜ್ಞೇಯವಲ್ಲದುದಾಗಿದೆ ಮತ್ತು ಜ್ಯುಡೀಶಿಯಲ್ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ವಿಚಾರಣೆ ಮಾಡತಕ್ಕದ್ದಾಗಿದೆ.

67. ಮ್ಯಾಜಿಸ್ಟ್ರೇಟ್‌ರವರ ವಿಶೇಷ ಅಧಿಕಾರ—1973ರ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ (1974ರ 2ನೇ ಕೇಂದ್ರ ಅಧಿನಿಯಮ) 29ನೇ ವಿಭಾಗದ (2)ನೇ ಉಪ-ವಿಭಾಗದಲ್ಲಿ ಏನೇ ಒಳಗೊಂಡಿದ್ದರೂ ಈ ಅಧಿನಿಯಮದ 15ನೇ ವಿಭಾಗದ (8)ನೇ ಉಪ-ವಿಭಾಗ ಮತ್ತು 20ನೇ ವಿಭಾಗದ (3)ನೇ ಉಪ-ವಿಭಾಗ ಪ್ರಕಾರದ ಅಪರಾಧಗಳಿಗೆ ಎರಡು ಲಕ್ಷ ರೂಪಾಯಿಯವರೆಗೂ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಯವರೆಗೂ ದಂಡ ಶಿಕ್ಷೆ ನೀಡಲು ಜ್ಯುಡೀಶಿಯಲ್ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ನ್ಯಾಯಾಲಯಕ್ಕೆ ಅಧಿಕಾರವಿರುವುದಾಗಿದೆ.

68. ಅಪರಾಧಗಳ ರಾಜಿಗೊಳಿಸುವಿಕೆ.—(1) 1973ರ ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮ ಪ್ರಕಾರ ಜೈಲು ಶಿಕ್ಷೆ ಮಾತ್ರ ಅಥವಾ ಜೈಲು ಶಿಕ್ಷೆ ಮತ್ತು ದಂಡ ಸಹ ಸೇರಿ ಉಪಬಂಧಿಸಿದ ಅಪರಾಧಗಳ ಹೊರತಾದ ಯಾವುದೇ ಅಪರಾಧವನ್ನು ಮಾಡಿರುವುದಾಗಿ ಆಪಾದಿತನಾದ ಯಾವುದೇ ವ್ಯಕ್ತಿಯ ಅರ್ಜಿಯ ಮೇರೆಗೆ, ಪ್ರೋಸಿಕ್ಯೂಷನ್ ಪ್ರಾರಂಭಿಸುವುದಕ್ಕಿಂತ ಮೊದಲು ಅಥವಾ ಪ್ರೋಸಿಕ್ಯೂಷನ್ ಪ್ರಾರಂಭಿಸಿದ ನಂತರ ಸಂಬಂಧಪಟ್ಟ ನ್ಯಾಯಾಲಯದ ಅನುಮತಿಯಿಂದ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಈ ಅಧಿನಿಯಮದ ಕೆಳಗಿನ ನಿಯಮಗಳಲ್ಲಿ ನಿಗದಿಪಡಿಸಿರುವ ಮೊತ್ತಕ್ಕೆ ರಾಜಿಮಾಡಬಹುದಾಗಿದೆ.

(2) (1)ನೇ ಉಪ-ವಿಭಾಗ ಪ್ರಕಾರ ರಾಜಿಮಾಡಬಹುದಾದ ಅಪರಾಧಗಳಿಗೆ ಸಂಬಂಧಿಸಿ ಪ್ರತಿ ತಿಂಗಳು ವರದಿಯನ್ನು ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಸ್ಥಳೀಯ ಸಾರ್ವಜನಿಕಾರೋಗ್ಯ ಸಮಿತಿಗೆ ನೀಡತಕ್ಕದ್ದಾಗಿದೆ.

(3) ಅಪರಾಧಗಳನ್ನು ರಾಜಿಮಾಡುವುದಕ್ಕಾಗಿ ನಿಗದಿಪಡಿಸಿದ ಪ್ರಕಾರ ಅರ್ಜಿ ಸಲ್ಲಿಸತಕ್ಕದ್ದು.

(4) ಒಂದು ಅಪರಾಧವನ್ನು ರಾಜಿಮಾಡುವುದು, ಆ ಕುರಿತು ಪ್ರೋಸಿಕ್ಯೂಷನ್ ಕ್ರಮಗಳನ್ನು ಪ್ರಾರಂಭಿಸುವುದಕ್ಕೆ ಮೊದಲು ಆಗಿದ್ದಲ್ಲಿ ಆ ಅಪರಾಧಕ್ಕೆ ಸಂಬಂಧಿಸಿ ರಾಜಿಯಲ್ಲಿ ಏರ್ಪಟ್ಟ ಆ ವ್ಯಕ್ತಿಯ ವಿರುದ್ಧ ಪ್ರೋಸಿಕ್ಯೂಶನ್ ಕ್ರಮಗಳನ್ನು ಪ್ರಾರಂಭಿಸತಕ್ಕದ್ದಲ್ಲ;

ಆದರೆ, ರಾಜಿಗೊಳಿಸಿದ ನಂತರ ಆ ವ್ಯಕ್ತಿ ಅದೇ ಅಪರಾಧವನ್ನು ಪುನರಾವರ್ತಿಸುವುದಾದಲ್ಲಿ ಆ ರೀತಿ ಪುನರಾವರ್ತಿಸುವ ಅಪರಾಧಕ್ಕೆ ಪ್ರೋಸಿಕ್ಯೂಷನ್ನನ್ನು ಆರಂಭಿಸತಕ್ಕದ್ದು ಮತ್ತು ಅದನ್ನು ರಾಜಿಮಾಡತಕ್ಕದ್ದಲ್ಲ.

69. ಅಪೀಲುಗಳು.—ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿರುವ ವಿಷಯಗಳಲ್ಲಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯ ತೀರ್ಮಾನಗಳ ಅಥವಾ ಕ್ರಮಗಳ ಮೇಲಿನ ಅಪೀಲನ್ನು ಜಿಲ್ಲಾ ಸಾರ್ವಜನಿಕಾರೋಗ್ಯ ಸಮಿತಿಗೂ, ಜಿಲ್ಲಾ ಸಾರ್ವಜನಿಕಾರೋಗ್ಯ ಅಧಿಕಾರಿಯ ತೀರ್ಮಾನಗಳ ಅಥವಾ ಕ್ರಮಗಳ ಮೇಲಿನ ಅಪೀಲನ್ನು ರಾಜ್ಯ ಸಾರ್ವಜನಿಕಾರೋಗ್ಯ ಸಮಿತಿಗೂ, ರಾಜ್ಯ ಸಾರ್ವಜನಿಕಾರೋಗ್ಯ ಸಮಿತಿಯ ತೀರ್ಮಾನಗಳ ಅಥವಾ ಕ್ರಮಗಳ ಮೇಲಿನ ಅಪೀಲಿನ್ನು ಸರಕಾರಕ್ಕೂ ಸಲ್ಲಿಸಬಹುದಾಗಿದೆ ಮತ್ತು ಅದರ ಮೇಲಿನ ಸರಕಾರದ ತೀರ್ಮಾನವು ಅಂತಿಮವಾಗಿರುವುದು.

70. ರಿವಿಷನ್.—ಜಿಲ್ಲಾ ಸಾರ್ವಜನಿಕಾರೋಗ್ಯ ಸಮಿತಿಯ 69ನೇ ವಿಭಾಗ ಪ್ರಕಾರದ ತೀರ್ಮಾನದಿಂದ ಸಂಕಟ ಅನುಭವಿಸುವ ಯಾವುದೇ ವ್ಯಕ್ತಿಗೆ ರಾಜ್ಯ ಸಾರ್ವಜನಿಕಾರೋಗ್ಯ ಸಮಿತಿಯ ಸಮಕ್ಷದಲ್ಲಿ ರಿವಿಷನ್ ಫೈಲು ಮಾಡಬಹುದಾಗಿದೆ ಹಾಗು ಅದರ ಮೇಲಿನ ದೂರನ್ನು ಸರಕಾರಕ್ಕೆ ಸಲ್ಲಿಸಬಹುದಾಗಿದೆ. ಸರಕಾರದ ಈ ವಿಷಯದಲ್ಲಿನ ತೀರ್ಮಾನವು ಅಂತಿಮವಾಗಿರುವುದು.

This is a digitally signed Gazette.
Authenticity may be verified through https://compose.kerala.gov.in/

39

71. ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಗೆ ಪ್ರತಿಬಂಧ.—ಈ ಅಧಿನಿಯಮ ಪ್ರಕಾರ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಪ್ರಕಾರ ನೀಡಲ್ಪಟ್ಟ ಅಧಿಕಾರಗಳನ್ನು ಉಪಯೋಗಿಸಿ ಸಾರ್ವಜನಿಕಾರೋಗ್ಯ ಅಧಿಕಾರಿ ಅಥವಾ ಆತನು ಅಧಿಕೃತಗೊಳಿಸಿದುದಕ್ಕನುಸರಿಸಿ ಇತರ ಯಾವುದೇ ಉದ್ಯೋಗಸ್ಥನು ಅಥವಾ ಸಾರ್ವಜನಿಕಾರೋಗ್ಯ ಸಮಿತಿಯು ಮಾಡಿದ ಅಥವಾ ಮಾಡಲು ಉದ್ದೇಶಿಸಿದ, ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿದಂತಹ ಯಾವುದೇ ಕ್ರಮಕ್ಕೆ ಅಥವಾ ತೀರ್ಮಾನದ ವಿರುದ್ಧ ಯಾವುದೇ ದಾವೆ, ಅರ್ಜಿ, ಮನವಿಯನ್ನು ಪರಿಗಣನೆಗೆ ತೆಗೆಯಲು ಯಾವುದೇ ಸಿವಿಲ್ ನ್ಯಾಯಾಲಯಕ್ಕೆ ಅಧಿಕಾರವಿರುವುದಿಲ್ಲ.

72. ಸದ್ಭಾವನೆಯಿಂದ ಮಾಡಿದ ಕಾರ್ಯಗಳಿಗೆ ಸಂರಕ್ಷಣೆ.—ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉಪಬಂಧಗಳ ಪ್ರಕಾರ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದಂತಹ ಯಾವುದೇ ವಿಷಯಕ್ಕೆ ಸಂಬಂಧಿಸಿ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅಥವಾ ಆತನು ಅಧಿಕೃತಗೊಳಿಸಿದುದಕ್ಕನುಸರಿಸಿ ಕಾರ್ಯವೆಸಗಿದ ಇತರ ಯಾವುದೇ ಉದ್ಯೋಗಸ್ಥನಿಗೆ ಅಥವಾ ಸಾರ್ವಜನಿಕಾರೋಗ್ಯ ಸಮಿತಿಗೆ, ಸಮಿತಿಯಲ್ಲಿನ ಸದಸ್ಯರಿಗೆ ಅಥವಾ ಕಾರ್ಯದರ್ಶಿಗೆ ವಿರುದ್ಧವಾಗಿ ಯಾವುದೇ ದಾವೆ, ಪ್ರೋಸಿಕ್ಯೂಶನ್ ಅಥವಾ ಇತರ ಕಾನೂನು ಕ್ರಮಗಳು ನೆಲೆನಿಲ್ಲುವುದಲ್ಲ.

73. ಅಧಿನಿಯಮವು ಇತರ ಯಾವುದೇ ಕಾನೂನುಗಳಿಗೆ ಭಂಗ ತರುವಂತದಲ್ಲೆಂದು.—ಈ ಅಧಿನಿಯಮದ ಉಪಬಂಧಗಳು ತತ್ಕಾಲ ಜಾರಿಯಲ್ಲಿರುವ ಇತರ ಕಾನೂನುಗಳಲ್ಲಿನ ಉಪಬಂಧಗಳ ಹೊರತು ಹಾಗೂ ಅದಕ್ಕೆ ಭಂಗಬರದಂತೆಯೂ ಆಗಿರುವುದಾಗಿದೆ.

74. ಸಾರ್ವಜನಿಕಾರೋಗ್ಯ ಅಧಿಕಾರಿಗಳು, ಇತರ ಉದ್ಯೋಗಸ್ಥರು ಮತ್ತು ನೌಕರರು ಸಾರ್ವಜನಿಕ ಸೇವಕರಾಗಿರುವರೆಂದು.—ಸಾರ್ವಜನಿಕಾರೋಗ್ಯ ಸಮಿತಿಯ ಸದಸ್ಯರುಗಳು, ಸಾರ್ವಜನಿಕಾರೋಗ್ಯ ಅಧಿಕಾರಿಗಳು ಅವರು ಅಧಿಕೃತಗೊಳಿಸಿದುದಕ್ಕನುಸರಿಸಿ ಕಾರ್ಯವೆಸಗುವ ಯಾವುದೇ ಉದ್ಯೋಗಸ್ಥ ಮತ್ತು ನೌಕರನು, ಈ ಅಧಿನಿಯಮದ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳ, ರೆಗ್ಯುಲೇಶನುಗಳ ಉಪಬಂಧಗಳಿಗನುಸಾರವಾಗಿ ಕಾರ್ಯವೆಸಗುವಾಗ ಅಥವಾ ಕಾರ್ಯವೆಸಗುತ್ತಿರುವುದಾಗಿ ಭಾವಿಸಲ್ಪಡುವಾಗ 1860ರ ಭಾರತ ದಂಡ ಸಂಹಿತೆಯ (1860ರ 45ನೇ ಕೇಂದ್ರ ಅಧಿನಿಯಮ) 21ನೇ ವಿಭಾಗದ ಅರ್ಥವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕ ಸೇವಕರೆಂದು ಭಾವಿಸತಕ್ಕದ್ದು.

75. ಸರಕಾರದಿಂದ ಅಧಿಕಾರ ವಹಿಸಿಕೊಡುವಿಕೆ.—ಸರಕಾರಕ್ಕೆ ಅಧಿಸೂಚನೆಯ ಮುಖೇನ, ಅದರಲ್ಲಿ ವ್ಯಕ್ತಪಡಿಸುವ ಯಾವುದೇ ನಿಯಂತ್ರಣೆಗೆ ಮತ್ತು ಪರಿಮಿತಿಗಳಿಗೆ ಅನುಸಾರವಾಗಿ, ಅದಕ್ಕೆ ಈ ಅಧಿನಿಯಮ ಪ್ರಕಾರ ನಿಹಿತಗೊಳಿಸಿರುವ ಒಂದು ಅಥವಾ ಅದಕ್ಕಿಂತ ಹೆಚ್ಚು ಅಧಿಕಾರಗಳನ್ನು ವಿನಿಯೋಗಿಸಲು ಯಾವುದೇ ವ್ಯಕ್ತಿಯನ್ನು ಅಧಿಕೃತಗೊಳಿಸಬಹುದಾಗಿದೆ ಮತ್ತು ಅದೇ ರೀತಿಯಲ್ಲಿಯೇ ಅಂತಹ ಅಧಿಕಾರಗಳನ್ನು ಹಿಂಪಡೆಯಬಹುದಾಗಿದೆ:

ಆದರೆ, ಈ ವಿಭಾಗದಲ್ಲಿ ಒಳಗೊಂಡ ಯಾವುದು ಕೂಡ 81ನೇ ವಿಭಾಗ ಪ್ರಕಾರ ಈ ಅಧಿನಿಯಮದ ಅಡಿಯಲ್ಲಿ ನಿಯಮಗಳನ್ನು ರಚಿಸುವುದಕ್ಕಿರುವ ಸರಕಾರದ ಅಧಿಕಾರಕ್ಕೆ ಅನ್ವಯವಲ್ಲ.

76. ಪ್ರವೇಶಿಸಲೂ ಪರಿಶೀಲಿಸಲೂ ಇರುವ ಅಧಿಕಾರ.—ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದರ ಅವಶ್ಯಕತೆಗಾಗಿ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ ಅಥವಾ ಅವರು ಅಧಿಕೃತಗೊಳಿಸುವ ಜೂನಿಯರ್ ಹೆಲ್ತ್ ಇನ್ಸ್‌ಪೆಕ್ಟರರ ದರ್ಜೆಗಿಂತ ಕಡಿಮೆಯಲ್ಲದ ಉದ್ಯೋಗಸ್ಥರಿಗೆ, ವ್ಯಕ್ತಿಗಳ ಸುರಕ್ಷೆಗೆ ಮತ್ತು ಗೋಪ್ಯತೆಗೆ ಭಂಗಬರದ ರೀತಿಯಲ್ಲಿ, ಯಾವುದೇ ಸಂಸ್ಥೆಯಲ್ಲೂ ಕಟ್ಟಡದಲ್ಲೂ ಆವರಣದಲ್ಲೂ ಪ್ರವೇಶಿಸುವುದೂ ಪರಿಶೀಲಿಸುವುದೂ ಮಾಡಬಹುದಾಗಿದೆ.

ಆದರೆ,—

(ಎ) ತುರ್ತು ಅವಶ್ಯಕತೆ ಇಲ್ಲದಿದ್ದಲ್ಲಿ ಸೂರ್ಯಾಸ್ತಮಾನದ ಮತ್ತು ಸೂರ್ಯೋದಯದ ಮಧ್ಯದಲ್ಲಿ ಅಂತಹ ಸ್ಥಳಗಳಲ್ಲಿ ಪ್ರವೇಶಿಸುವುದೋ;

(ಬಿ) ಅಂತಹ ಪ್ರವೇಶ ಮಾಡುವುದಕ್ಕಿರುವ ಉದ್ದೇಶದ ಕುರಿತು ಕನಿಷ್ಠ ಎರಡು ಗಂಟೆಗಿಂತ ಮೊದಲಾದಲೂ ವಾಸಿಸುವವರಿಗೆ ಸೂಚನೆ ನೀಡದಿದ್ದಲ್ಲಿ ನಿವಾಸಿಗರ ಸಮ್ಮತಿಯಿಲ್ಲದೆ ವಾಸಿಸುವ ವಸತಿಗೆ ಪ್ರವೇಶಿಸುವುದೋ; ಮಾಡತಕ್ಕದ್ದಲ್ಲ.

77. ಪರಿಶೀಲಿಸುವಾಗಲೂ ದಂಡ ವಿಧಿಸುವಾಗಲೂ ಗಮನಿಸಬೇಕಾದ ವಿಷಯಗಳು.—ಈ ಅಧಿನಿಯಮದ ಉಪಬಂಧಗಳ ಪ್ರಕಾರ ಪರಿಶೀಲಿಸುವಾಗಲೂ ದಂಡ ವಿಧಿಸುವುದಕ್ಕಿಂತ ಮುಂಚಿತವಾಗಿಯೂ ಸ್ಥಳೀಯ ಸಾರ್ವಜನಿಕಾರೋಗ್ಯ ಅಧಿಕಾರಿಯು ಅಸ್ತಿತ್ವದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಅಧಿಕೃತಗೊಳಿಸಲ್ಪಟ್ಟ ಯಾವುದೇ ಅಧಿಕಾರಿಯು ಅದೇ ವಿಷಯದಲ್ಲಿ ಕ್ರಮ ಕೈಗೊಳ್ಳುವರೇ ಎಂದೂ ಕೈಗೊಂಡಿರುವರೇ ಎಂದು ಪರಿಗಣಿಸತಕ್ಕದ್ದು ಹಾಗೂ ಹೊಂದಾಣಿಕೆಯಿಲ್ಲದ ತೀರ್ಮಾನವುಂಟಾಗುವುದಿಲ್ಲೆಂದು ಖಾತ್ರಿಪಡಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

40

78. ಸಾರ್ವಜನಿಕಾರೋಗ್ಯ ನಿಧಿಯ ರಚನೆ.—(1) ಈ ಅಧಿನಿಯಮವು ಜಾರಿಗೆ ಬಂದ ತಕ್ಷಣ ಸಾರ್ವಜನಿಕಾರೋಗ್ಯ ಚಟುವಟಿಕೆಗಳನ್ನು ಜಾರಿಗೊಳಿಸುವುದಕ್ಕಾಗಿಯೂ ಸಮನ್ವಯಗೊಳಿಸುವುದಕ್ಕಾಗಿಯೂ ಸಾರ್ವಜನಿಕಾರೋಗ್ಯ ನಿಧಿ ಎಂಬ ಹೆಸರಿನಲ್ಲಿ ಒಂದು ನಿಧಿಯನ್ನು ರಚಿಸತಕ್ಕದ್ದಾಗಿದೆ. ಈ ಅಧಿನಿಯಮದ ಅಡಿಯಲ್ಲಿ ವಿಧಿಸಲ್ಪಟ್ಟ ದಂಡ ಮತ್ತು ಇತರ ಶುಲ್ಕಗಳನ್ನು ಮತ್ತು ಸಂಗ್ರಹಿಸಲ್ಪಡುವ ಇತರ ಮೊತ್ತಗಳನ್ನು ನಿಗದಿಪಡಿಸಿದ ರೀತಿಯಲ್ಲಿ ನಿಧಿಯಲ್ಲಿ ಜಮೆಮಾಡತಕ್ಕದ್ದು. ಈ ನಿಧಿಯಲ್ಲಿನ ಮೊತ್ತವನ್ನು ಸಂಬಂಧಪಟ್ಟ ಸ್ಥಳೀಯಾಡಳಿತ ಸಂಸ್ಥೆಗಳಲ್ಲಿನ ಸಾರ್ವಜನಿಕಾರೋಗ್ಯ ಚಟುವಟಿಕೆಗಳಿಗೆ ಬಳಸತಕ್ಕದ್ದು;

(2) ನಿಧಿಯ ಆಡಳಿತ ನಿಯಂತ್ರಣೆ, ಚಟುವಟಿಕೆ, ಲೆಕ್ಕಗಳ ಜೋಪಾನಪಡಿಸುವಿಕೆ, ಆಡಿಟ್ ಮತ್ತು ಇತರವು ನಿಗದಿಪಡಿಸಿದ ಪ್ರಕಾರ ಆಗಿರುವುದು.

79. ತೊಂದರೆಗಳನ್ನು ನೀಗಿಸುವುದಕ್ಕಿರುವ ಅಧಿಕಾರ.—(1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವುದರಲ್ಲಿ ಯಾವುದೇ ತೊಂದರೆಗಳು ಉಂಟಾಗುವುದಾದಲ್ಲಿ, ಸರಕಾರಕ್ಕೆ ಗಜೆಟ್ ಆದೇಶದ ಮುಖೇನ ಆ ತೊಂದರೆಗಳನ್ನು ನೀಗಿಸುವುದಕ್ಕಾಗಿ ಅಗತ್ಯ ಅಥವಾ ಯುಕ್ತವೆಂದು ಅದಕ್ಕೆ ತೋರುವಂತಹ ಹಾಗು ಈ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಲ್ಲದಂತಹ ಉಪಬಂಧಗಳನ್ನು ರಚಿಸಬಹುದಾಗಿದೆ.

ಆದರೆ ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಎರಡು ವರ್ಷ ಕಳೆದ ನಂತರ (1)ನೇ ಉಪ-ವಿಭಾಗ ಪ್ರಕಾರ ಯಾವುದೇ ಆದೇಶವನ್ನು ಜಾರಿಗೊಳಿಸತಕ್ಕದ್ದಲ್ಲ.

(2) ಉಪ-ವಿಭಾಗ (1)ರ ಅಡಿಯಲ್ಲಿ ಜಾರಿಗೊಳಿಸುವ ಪ್ರತಿಯೊಂದು ಆದೇಶವನ್ನು, ಅದನ್ನು ಜಾರಿಗೊಳಿಸಿದ ಅನಂತರ ಆದಷ್ಟು ಬೇಗನೆ ವಿಧಾನಸಭೆಯ ಸಮಕ್ಷದಲ್ಲಿ ಮಂಡಿಸತಕ್ಕದ್ದು.

80. ರೆಗ್ಯುಲೇಷನುಗಳನ್ನು ರಚಿಸುವುದಕ್ಕಿರುವ ಅಧಿಕಾರ.—(1) ರಾಜ್ಯ ಸಾರ್ವಜನಿಕಾರೋಗ್ಯ ಅಧಿಕಾರಿಗೆ, ಸರಕಾರದ ಪೂರ್ವಾನುಮತಿಯಿಂದ, ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ಈ ಅಧಿನಿಯಮದ ಮತ್ತು ಅದರ ಕೆಳಗೆ ರಚಿಸಿರುವ ನಿಯಮಗಳಿಗೆ ಅನುಸಾರವಾಗಿ ರೆಗ್ಯುಲೇಷನುಗಳನ್ನು ರಚಿಸಬಹುದಾಗಿದೆ.

(2) ಈ ಅಧಿನಿಯಮದ ಪ್ರಕಾರ ಆ ರೀತಿಯಲ್ಲಿ ರಚಿಸಲ್ಪಡುವ ಪ್ರತಿಯೊಂದು ರೆಗ್ಯುಲೇಶನನ್ನು ಅದನ್ನು ರಚಿಸಿದ ನಂತರ ಆದಷ್ಟು ಬೇಗನೆ ವಿಧಾನಸಭೆಯು ಅಧಿವೇಶನದಲ್ಲಿರುವಾಗ ಅದರ ಸಮಕ್ಷದಲ್ಲಿ, ಅದನ್ನು ಒಂದು ಅಧಿವೇಶನದಲ್ಲಿ ಅಥವಾ ಸತತವಾದ ಎರಡು ಅಧಿವೇಶನದಲ್ಲಿ ಒಳಪಡುವ ಒಟ್ಟು ಹದಿನಾಲ್ಕು ದಿವಸ ಕಾಲಾವಧಿಗೆ ಮಂಡಿಸತಕ್ಕದ್ದು.

81. ನಿಯಗಳನ್ನು ರಚಿಸಲು ಸರಕಾರದ ಅಧಿಕಾರ.—(1) ಸರಕಾರಕ್ಕೆ, ಅಧಿಸೂಚನೆಯ ಮುಖೇನ ಈ ಅಧಿನಿಯಮದ ಉದ್ದೇಶಗಳನ್ನು ಜಾರಿಗೊಳಿಸುವುದಕ್ಕಾಗಿ ಪೂರ್ವಾನ್ವಯ ಅಥವಾ ಉತ್ತರಾನ್ವಯ ಪ್ರಾಬಲ್ಯದಿಂದಿರುವ ನಿಯಮಗಳನ್ನು ರಚಿಸಬಹುದಾಗಿದೆ.

(2) ವಿಶಿಷ್ಠವಾಗಿ, (1)ನೇ ಉಪ-ವಿಭಾಗದಲ್ಲಿ ನೀಡಿರುವ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಭಂಗಬರದಂತೆ ಸರಕಾರಕ್ಕೆ, ಈ ಅಧಿನಿಯಮದಲ್ಲಿ ಯಥೋಚಿತವಾಗಿ ಅಗತ್ಯವಿರುವ ಅಥವಾ ಅನುಮತಿಸಿರುವ ಎಲ್ಲಾ ವಿಷಯಗಳಿಗೆ ಸಂಬಂಧಿಸಿ ನಿಯಮಗಳನ್ನು ರಚಿಸಬಹುದಾಗಿದೆ.

(3) ಈ ಅಧಿನಿಯಮದ ಪ್ರಕಾರ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಅನಂತರ ಆದಷ್ಟು ಬೇಗನೇ, ವಿಧಾನಸಭೆಯು ಅಧಿವೇಶದಲ್ಲಿರುವಾಗ ಅದರ ಸಮಕ್ಷದಲ್ಲಿ, ಅದನ್ನು ಒಂದು ಅಧಿವೇಶನದಲ್ಲೋ ಸತತವಾದ ಎರಡು ಅಧಿವೇಶನಗಳಲ್ಲೋ ಒಳಗೊಳ್ಳುವ ಒಟ್ಟು ಹದಿನಾಲ್ಕು ದಿವಸ ಕಾಲಾವಧಿಗೆ ಮಂಡಿಸತಕ್ಕದ್ದು ಮತ್ತು ಆ ರೀತಿ ಯಾವ ಅಧಿವೇಶನದಲ್ಲಿ ಮಂಡಿಸುವುದೋ ಆ ಅಧಿವೇಶನವೋ ನಿಕಟಾನಂತರದ ಅಧಿವೇಶನವೋ ಕೊನೆಗೊಳ್ಳುವುದಕ್ಕಿಂತ ಮುಂಚಿತವಾಗಿ, ವಿಧಾನಸಭೆಯು ಪ್ರಸ್ತುತ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡುವುದೋ ಅಲ್ಲದಿದ್ದಲ್ಲಿ ಆ ನಿಯಮವನ್ನು ರಚಿಸಬೇಕಾಗಿಲ್ಲೆಂದು ತೀರ್ಮಾನಿಸುವುದೋ ಮಾಡುವುದಾದಲ್ಲಿ, ಆ ನಿಯಮಕ್ಕೆ ಅನಂತರ ಆಯಾಯ ವಿಷಯದಂತೆ, ಆ ರೀತಿ ಮಾರ್ಪಾಟುಗೊಳಿಸಿದ ರೀತಿಯಲ್ಲಿ ಮಾತ್ರ ಪ್ರಾಬಲ್ಯವಿರುವುದು ಅಥವಾ ಯಾವುದೇ ಪ್ರಾಬಲ್ಯವು ಇಲ್ಲದಾಗುವುದಾಗಿದೆ. ಹಾಗಿದ್ದರೂ, ಅಂತಹ ಯಾವುದೇ ಮಾರ್ಪಾಟುಗೊಳಿಸುವಿಕೆಯೋ ರದ್ದುಗೊಳಿಸುವಿಕೆಯೋ ಆ ನಿಯಮಗಳ ಪ್ರಕಾರ ಹಿಂದೆ ಮಾಡಿರುವ ಯಾವುದೇ ವಿಷಯದ ಸಿಂಧುತ್ವಕ್ಕೆ ಭಂಗವಾಗದ ರೀತಿಯಲ್ಲಿ ಆಗಿರತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

41

82. ಸಿಂಧುತ್ವ.—(1) 2022ರ ಕೇರಳ ಸಾರ್ವಜನಿಕಾರೋಗ್ಯ ಅಧ್ಯಾದೇಶ (2022ರ 15)ಕ್ಕೆ ಜನವರಿ 15ನೇ ದಿನಾಂಕದಿಂದ ಪ್ರಾಬಲ್ಯವು ಮುಕ್ತಾಯಗೊಂಡಿದ್ದರೂ ಪ್ರಸ್ತುತ ಅಧ್ಯಾದೇಶದ ಶಿಕ್ಷಾ ಉಪಬಂಧಗಳ ಪ್ರಕಾರ ಮಾಡಿದ ಅಥವಾ ಮಾಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕಾರ್ಯ ಅಥವಾ ಕೈಗೊಂಡ ಅಥವಾ ಕೈಗೊಂಡಿರುವುದಾಗಿ ಭಾವಿಸಲ್ಪಡುವ ಯಾವುದೇ ಕ್ರಮವನ್ನು ಈ ಅಧಿನಿಯಮ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

(2) ಈ ಅಧಿನಿಯಮದ ಶಿಕ್ಷಾ ಉಪಬಂಧಗಳ ಹೊರತಾದ ಉಪಬಂಧಗಳ ಪ್ರಕಾರ ಈ ಅಧಿನಿಯಮದ ಪ್ರಾರಂಭ ದಿನಾಂಕದಿಂದ ಅಧಿನಿಯಮವನ್ನು ಗಜೆಟಿನಲ್ಲಿ ಪ್ರಕಟಿಸುವ ದಿನಾಂಕದವರೆಗಿನ ಕಾಲಾವಧಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವು ಅದು ಈ ಅಧಿನಿಯಮದ ಉಪಬಂಧಗಳು ಪ್ರಸ್ತುತ ಕಾಲಾವಧಿಯಲ್ಲಿ ಜಾರಿಯಲ್ಲಿರುತ್ತಿದ್ದರೆ, ಆ ಉಪಬಂಧಗಳ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸುವಷ್ಟರ ಮಟ್ಟಿಗೆ ಅದನ್ನು ಈ ಅಧಿನಿಯಮದ ಉಪಬಂಧಗಳಿಗೆ ಅಸಮಂಜಸವಾಗದಿರುವ ತನಕ ಈ ಅಧಿನಿಯಮದ ಉಪಬಂಧಗಳ ಪ್ರಕಾರ ಮಾಡಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಸಿ) ಇಲಾಖೆ

ಅಧಿಸೂಚನೆ

2023 ಅಕ್ಟೋಬರ್ 16,

ನಂಬ್ರ 84/ಲೆಗ್. ಸಿ2/2022/ಕಾನೂನು. ತಿರುವನಂತಪುರಂ, *1199 ಕನ್ಯಾ 29/*

1945 ಆಶ್ವಯುಜ 24.

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2023 ಅಕ್ಟೋಬರ್ 14ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ ಸನಲ್ ಕುಮಾರ್,

ಕಾನೂನು ಕಾರ್ಯದರ್ಶಿ.

2023ರ 26ನೇ ಅಧಿನಿಯಮ

2023ರ ಕೇರಳ ಮೋಟಾರು ಸಾರಿಗೆ ನೌಕರರಿಗೆ ನ್ಯಾಯಯುತ ವೇತನ ಪಾವತಿ (ತಿದ್ದುಪಡಿ) ಅಧಿನಿಯಮ

1971ರ ಕೇರಳ ಮೋಟಾರು ಸಾರಿಗೆ ನೌಕರರಿಗೆ ನ್ಯಾಯಯುತ ವೇತನ ಪಾವತಿ ಅಧಿನಿಯಮವನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಿರುವ

ಒಂದು

ಅಧಿನಿಯಮ

ಪೀಠಿಕೆ.—1971ರ ಕೇರಳ ಮೋಟಾರು ಸಾರಿಗೆ ನೌಕರರಿಗೆ ನ್ಯಾಯಯುತ ವೇತನ ಪಾವತಿ ಅಧಿನಿಯಮ (1971ರ 23)ವನ್ನು ಇನ್ನು ಮುಂದಿನ ಅಗತ್ಯಗಳಿಗಾಗಿ ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದಲೂ;

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು ಮತ್ತು ಪ್ರಾರಂಭ.—(1) ಈ ಅಧಿನಿಯಮವನ್ನು 2023ರ ಕೇರಳ ಮೋಟಾರು ಸಾರಿಗೆ ನೌಕರರಿಗೆ ನ್ಯಾಯಯುತ ವೇತನ ಪಾವತಿ (ತಿದ್ದುಪಡಿ) ಅಧಿನಿಯಮವೆಂದು ಕರೆಯಬಹುದು.

(2) ಇದು ಸರಕಾರವು ಗಜೆಟ್ ಅಧಿಸೂಚನೆಯ ಮೂಲಕ ಗೊತ್ತುಪಡಿಸುವ ದಿನಾಂಕದಿಂದ ಜಾರಿಗೆ ಬರುವುದಾಗಿದೆ.

2. 2ನೇ ವಿಭಾಗದ ತಿದ್ದುಪಡಿ.—1971ರ ಕೇರಳ ಮೋಟಾರು ಸಾರಿಗೆ ನೌಕರರಿಗೆ ನ್ಯಾಯಯುತ ವೇತನ ಪಾವತಿ ಅಧಿನಿಯಮ (1971ರ 23) (ಇನ್ನು ಮುಂದೆ ಪ್ರಧಾನ ಅಧಿನಿಯಮವೆಂದು ಉಲ್ಲೇಖಿಸಲ್ಪಡುವುದು)ದ 2ನೇ ವಿಭಾಗದಲ್ಲಿ,—

This is a digitally signed Gazette.
Authenticity may be verified through https://compose.kerala.gov.in/

2

(i) ಅಸ್ತಿತ್ವದಲ್ಲಿರುವ (ಎ) ಖಂಡವನ್ನು (ಎಬಿ) ಖಂಡವಾಗಿ ಪುನಃ ನಮೂದಿಸತಕ್ಕದ್ದು ಹಾಗೂ ಆ ರೀತಿ ಪುನಃ ನಮೂದಿಸಿದ (ಎಬಿ) ಖಂಡಕ್ಕಿಂತ ಮೊದಲು ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎ) "ಪ್ರಾಧಿಕಾರ" ಅಂದರೆ 3ಎ ವಿಭಾಗದ ಕೆಳಗೆ ರಚಿಸಲ್ಪಟ್ಟ ಪ್ರಾಧಿಕಾರ ಎಂದರ್ಥ;

(ಎಎ) "ಡೆಪ್ಯುಟಿ ಲೇಬರ್ ಕಮೀಶನರ್" ಅಂದರೆ ಸಂಬಂಧಪಟ್ಟ ಪ್ರದೇಶದಲ್ಲಿ ಅಧಿಕಾರ ವ್ಯಾಪ್ತಿಯಿರುವ ರಾಜ್ಯ ಡೆಪ್ಯುಟಿ ಲೇಬರ್ ಕಮೀಶನರ್ ಎಂದರ್ಥ;";

(ii) ಆ ರೀತಿ ಪುನಃ ನಮೂದಿಸಿದ (ಎಬಿ) ಖಂಡದ ನಂತರ ಈ ಕೆಳಗಿನ ಖಂಡಗಳನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಎಸಿ) "ಇನ್‌ಸ್ಪೆಕ್ಟರ್" ಅಂದರೆ 1961ರ ಮೋಟಾರು ಸಾರಿಗೆ ನೌಕರರ ಅಧಿನಿಯಮ (1961ರ 27ನೇ ಕೇಂದ್ರ ಅಧಿನಿಯಮದ) 4ನೇ ವಿಭಾಗದ (1)ನೇ ಉಪ-ವಿಭಾಗದ ಕೆಳಗೆ ನೇಮಿಸಿದ ಚೀಫ್ ಇನ್‌ಸ್ಪೆಕ್ಟರ್ ಅಥವಾ ಯಾವುದಾದರು ಇನ್ಸ್‌ಪೆಕ್ಟರ್ ಎಂದರ್ಥ;

(ಎಡಿ) "ಲೇಬರ್ ಕಮೀಶನರ್" ಎಂದರೆ ಕೇರಳ ರಾಜ್ಯ ಲೇಬರ್ ಕಮೀಶನರ್ ಎಂದರ್ಥ;".

(iii) (ಡಿ) ಖಂಡದ ನಂತರ ಈ ಕೆಳಗಿನ ಖಂಡವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"(ಇ) "ಸರಕಾರ" ಎಂದರೆ ಕೇರಳ ಸರಕಾರ ಎಂದರ್ಥ;".

3. 3ಎ ಎಂಬ ಹೊಸ ವಿಭಾಗದ ಸೇರಿಸುವಿಕೆ.—ಪ್ರಧಾನ ಅಧಿನಿಯಮದ 3ನೇ ವಿಭಾಗದ ನಂತರ, ಈ ಕೆಳಗಿನ ವಿಭಾಗವನ್ನು ಸೇರಿಸತಕ್ಕದ್ದು, ಅದೇನೆಂದರೆ:—

"3ಎ ನ್ಯಾಯಯುತ ವೇತನ ಪಾವತಿಸದಿರುವುದಕ್ಕೆ ಸಂಬಂಧಿಸಿ ಉಂಟಾಗುವ ಹಕ್ಕುಮಂಡನೆ ಹಾಗೂ ಅದಕ್ಕಿರುವ ದಂಡ.—(1) ಯಾವುದಾದರು ಒಂದು ವಿಶಿಷ್ಟ ಪ್ರದೇಶದಲ್ಲಿ ನಿಯೋಜಿತರಾದ ಅಥವಾ ಅಲ್ಲಿ ವೇತನ ನೀಡಲ್ಪಡುವ ಮೋಟಾರು ಸಾರಿಗೆ ನೌಕರರಿಗೆ ನ್ಯಾಯಯುತ ವೇತನಕ್ಕಿರುವ ಕಡಿಮೆ ವೇತನ ಪಾವತಿಸಿರುವುದರಿಂದ ಉದ್ಭವಿಸುವ ಎಲ್ಲಾ ಹಕ್ಕು ಮಂಡನೆಗಳು, ಅಂತಹ ಹಕ್ಕು ಮಂಡನೆಗಳಿಗೆ ಪ್ರಾಸಂಗಿಕವಾದ ಎಲ್ಲಾ ವಿಷಯಗಳು ಒಳಗೊಂಡು, ಆಲಿಸಲು ಹಾಗೂ ತೀರ್ಪು ಕಲ್ಪಿಸಲಿಕ್ಕಿರುವ ಪ್ರಾಧಿಕಾರವಾಗಿ ರಾಜ್ಯ ಸರಕಾರದ ಡೆಪ್ಯೂಟಿ ಲೇಬರ್ ಕಮೀಶನರರ ದರ್ಜೆಗಿಂತ ಕೆಳಗಲ್ಲದ ಯಾವುದಾದರು ಅಧಿಕಾರಿಯನ್ನು ಸರಕಾರಕ್ಕೆ ಗಜೇಟ್ ಅಧಿಸೂಚನೆಯ ಮೂಲಕ ನೇಮಿಸಬಹುದಾಗಿದೆ.

(2) (1)ನೇ ಉಪ-ವಿಭಾಗದಲ್ಲಿ ಉಲ್ಲೇಖಿಸಿದಂತಹ ಯಾವುದೇ ಹಕ್ಕು ಮಂಡನೆಯು ಒಬ್ಬ ಮೋಟಾರು ಸಾರಿಗೆ ನೌಕರನಿಗೆ ಇದ್ದಲ್ಲಿ ಆತನಿಗೆ ಅಥವಾ ಯಾವುದಾದರು ಕಾನೂನು ವೃತ್ತಿದಾರನಿಗೆ ಅಂತಹ ನೌಕರನ ಪರವಾಗಿ ಕಾರ್ಯನಿರ್ವಹಿಸಲು ಲಿಖಿತವಾದ ಅಧಿಕಾರ ಹೊಂದಿರುವ ನೋಂದಾಯಿತ ಕಾರ್ಮಿಕ ಸಂಘಟನೆಯು ಅಧಿಕೃತ ಅಧಿಕಾರಿಗೆ ಅಥವಾ ಯಾವುದೇ ಇನ್ಸ್‌ಪೆಕ್ಟರ್‌ರಿಗೆ (1)ನೇ ವಿಭಾಗದ ಪ್ರಕಾರ ರಚಿಸಲ್ಪಟ್ಟ ಪ್ರಾಧಿಕಾರದ ಅನುಮತಿಯೊಂದಿಗೆ ಕಾರ್ಯನಿರ್ವಹಿಸುವ ಯಾವುದೇ ವ್ಯಕ್ತಿಗೆ (3)ನೇ ಉಪ-ವಿಭಾಗದ ಪ್ರಕಾರವಿರುವ ಒಂದು ನಿರ್ದೇಶಕ್ಕಾಗಿ ಅಂತಹ ಪ್ರಾಧಿಕಾರದೊಂದಿಗೆ ಅರ್ಜಿಸಲ್ಲಿಸಬಹುದಾಗಿದೆ:

ಆದರೆ, ಅಂತಹ ಪ್ರತಿಯೊಂದು ಅರ್ಜಿಯನ್ನು ನಿಗದಿಪಡಿಸಿದಂತಹ ನಮೂನೆಯಲ್ಲಿ, ನ್ಯಾಯಯುತ ವೇತನವನ್ನು ಪಾವತಿಸಬೇಕಾದ ದಿನಾಂಕದಿಂದ ಆರು ತಿಂಗಳೊಳಗೆ ಸಲ್ಲಿಸತಕ್ಕದ್ದು:

ಮತ್ತು ಆದರೆ, ಅಂತಹ ಯಾವುದೇ ಕಾಲಾವಧಿಯೊಳಗೆ ಅರ್ಜಿಯನ್ನು ಸಲ್ಲಿಸದಿರಲು ಅರ್ಜಿದಾರನಿಗೆ ತಕ್ಕ ಕಾರಣವಿತ್ತೆಂದು ಪ್ರಾಧಿಕಾರಕ್ಕೆ ಮನವರಿಕೆಯಾದಲ್ಲಿ, ಪ್ರಸ್ತುತ ಆರು ತಿಂಗಳ ಕಾಲಾವಧಿಯ ನಂತರವೂ ಅಂತಹ ಯಾವುದೇ ಅರ್ಜಿಯನ್ನು ಸ್ವೀಕರಿಸಬಹುದಾಗಿದೆ.

(3) (2)ನೇ ಉಪ-ವಿಭಾಗದ ಪ್ರಕಾರದ ಯಾವುದಾದರು ಅರ್ಜಿ ಸ್ವೀಕರಿಸಿದ್ದಲ್ಲಿ, ಪ್ರಾಧಿಕಾರವು, ಅರ್ಜಿದಾರನಿಗೆ ಮತ್ತು 3ನೇ ವಿಭಾಗದ ಪ್ರಕಾರ ನ್ಯಾಯಯುತ ವೇತನವನ್ನು ಪಾವತಿಸಲು ಜವಾಬ್ದಾರನಾದ ಉದ್ಯೋಗದಾತನಿಗೆ ಹೇಳುವುದನ್ನು ಆಲಿಸುವ ಅಥವಾ ಅವರಿಗೆ ಹೇಳಲಿರುವುದನ್ನು ಹೇಳುವ ಒಂದು ಅವಕಾಶವನ್ನು ನೀಡತಕ್ಕದ್ದು ಹಾಗೂ ಅಗತ್ಯವೆಂದು ಕಂಡಲ್ಲಿ ಅಪ್ರಕಾರವಿರುವ ಹೆಚ್ಚು ಯಾವುದೇ ವಿಚಾರಣೆ ಮಾಡಿದ ನಂತರ, ಪ್ರಾಧಿಕಾರಕ್ಕೆ ಈ ಅಧಿನಿಯಮದ ಪ್ರಕಾರ ಉದ್ಯೋಗದಾತನು ಹೊಣೆಗಾರನಾಗಬಹುದಾದ ಇತರ ಯಾವುದೇ ದಂಡಕ್ಕೆ ಭಂಗ ಬರದಂತೆ, ಮೋಟಾರು ಸಾರಿಗೆ ನೌಕರನಿಗೆ ಯುಕ್ತವಾಗಿ ಲಭಿಸಬೇಕಾದ ನ್ಯಾಯಯುತ ವೇತನಕ್ಕಿಂತ ಎಷ್ಟು ಕಡಿಮೆಯಾಗಿದೆಯೋ ಅಷ್ಟು ಮೊತ್ತವನ್ನು ಮತ್ತು ಆರೀತಿ ಕಡಿಮೆಯಾದ ಮೊತ್ತದ ಹತ್ತುಪಟ್ಟಿಗಿಂತ ಮೀರದ ಮೊತ್ತವನ್ನು ಪ್ರಾಧಿಕಾರಕ್ಕೆ ಯುಕ್ತವಾಗಿದೆಯೆಂದು ತೋರುವಂತಹ ನಷ್ಟ ಪರಿಹಾರದೊಂದಿಗೆ ನೀಡಲು ನಿರ್ದೇಶಿಸಬಹುದಾಗಿದೆ.

This is a digitally signed Gazette.
Authenticity may be verified through https://compose.kerala.gov.in/

(4) (3)ನೇ ಉಪ-ವಿಭಾಗದ ಪ್ರಕಾರ ಪಾವತಿಸಲು ನಿರ್ದೇಶಿಸಲಾದ ಯಾವುದೇ ಮೊತ್ತವನ್ನು ಪಾವತಿಸಲು ಹೊಣೆಗಾರನಾಗಿರುವ ವ್ಯಕ್ತಿಯು, ಪ್ರಾಧಿಕಾರವು ಇದಕ್ಕಾಗಿ ನಿರ್ದಿಷ್ಟಪಡಿಸಿದ ಸಮಯದೊಳಗೆ ನೀಡದಿದ್ದಲ್ಲಿ ಪ್ರಾಧಿಕಾರಕ್ಕೆ ಆ ಮೊತ್ತವು ಲಭಿಸಲು ಹಕ್ಕಿರುವ ವ್ಯಕ್ತಿಯು ನೇರವಾಗಿ ಅಥವಾ ಆತನು ಅಧಿಕೃತಗೊಳಿಸಿದ ಯಾವುದೇ ವ್ಯಕ್ತಿಯ ಮುಖಾಂತರ ಲಿಖಿತವಾಗಿ ನೀಡುವ ಅರ್ಜಿಯ ಮೇರೆಗೆ ಆ ಮೊತ್ತದ ಒಂದು ಸರ್ಟಿಫಿಕೇಟನ್ನು ಜಿಲ್ಲಾಧಿಕಾರಿಗೆ ನೀಡತಕ್ಕದ್ದು ಮತ್ತು ಜಿಲ್ಲಾಧಿಕಾರಿಯು ಅದನ್ನು ಭೂ ಕಂದಾಯ ಬಾಕಿ ಎಂಬಂತೆ ವಸೂಲಿ ಮಾಡತಕ್ಕದ್ದು ಮತ್ತು ಅದನ್ನು ಹಕ್ಕಿರುವ ವ್ಯಕ್ತಿಗೆ ನೀಡತಕ್ಕದ್ದು.

(5) (3)ನೇ ಉಪ-ವಿಭಾಗ ಪ್ರಕಾರವಿರುವ ಒಂದು ಆದೇಶದಿಂದ ಸಂಕಟ ಅನುಭವಿಸುವ ಯಾವುದೇ ವ್ಯಕ್ತಿಗೆ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಅರುವತ್ತು ದಿನಗಳೊಳಗೆ ಲೇಬರ್ ಕಮೀಶನರ್‌ಗೆ (ಇನ್ನು ಮುಂದೆ ಅಪೀಲು ಪ್ರಾಧಿಕಾರ ಎಂದು ಉಲ್ಲೇಖಿಸಲ್ಪಡುವುದು) ಒಂದು ಮೇಲ್ಮನವಿಯನ್ನು ಸಲ್ಲಿಸಬಹುದಾಗಿದೆ:

ಆದರೆ, ಅಪೀಲುದಾರನು, (3)ನೇ ಉಪ-ವಿಭಾಗ ಪ್ರಕಾರ ಪಾವತಿಸಲು ಅವಶ್ಯಪಟ್ಟ ಮೊತ್ತಕ್ಕೆ ಸಮಾನವಾದ ಮೊತ್ತವನ್ನು ಆ ಪ್ರಾಧಿಕಾರದಲ್ಲಿ ಠೇವಣಿ ಮಾಡಿರುವನೆಂದು ಆ ಪ್ರಾಧಿಕಾರವು ನೀಡಿದ ಒಂದು ದೃಢೀಕರಣ ಪತ್ರವನ್ನು ಹಾಜರು ಪಡಿಸುವುದೋ ಅಥವಾ ಅಂತಹ ಮೊತ್ತವನ್ನು ಅಪೀಲು ಪ್ರಾಧಿಕಾರದಲ್ಲಿ ಠೇವಣಿ ಮಾಡದಿದ್ದಲ್ಲಿ ಯಾವುದೇ ಅಪೀಲನ್ನು ಸ್ವೀಕರಿಸತಕ್ಕದ್ದಲ್ಲ.

(6) ಅಪೀಲು ಪ್ರಾಧಿಕಾರದ ಅಪೀಲಿನ ಪಕ್ಷದಾರರಿಗೆ ಹೇಳಲಿರುವುದನ್ನು ಹೇಳಲು ಒಂದು ಅವಕಾಶವನ್ನು ನೀಡಿದ ನಂತರ, ಪ್ರಾಧಿಕಾರದ ತೀರ್ಪನ್ನು ಸ್ಥಿರಪಡಿಸುವುದೋ ಮಾರ್ಪಾಟು ಪಡಿಸುವುದೋ ಅಥವಾ ತಿದ್ದುಪಡಿ ಮಾಡುವುದೋ ಮಾಡಬಹುದಾಗಿದೆ.''.

4. 4ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 4ನೇ ವಿಭಾಗದಲ್ಲಿ ''ಐನೂರು ರೂಪಾಯಿ'' ಎಂಬ ಪದಗಳ ಬದಲು ''ಎರಡು ಸಾವಿರ ರೂಪಾಯಿ'' ಎಂಬ ಪದಗಳನ್ನು ಸೇರಿಸತಕ್ಕದ್ದು.

5. 6ನೇ ವಿಭಾಗದ ತಿದ್ದುಪಡಿ.—ಪ್ರಧಾನ ಅಧಿನಿಯಮದ 6ನೇ ವಿಭಾಗದ (1)ನೇ ಉಪ-ವಿಭಾಗದಲ್ಲಿ ''ಪ್ರಾಧಿಕಾರ'' ಎಂಬ ಪದದ ಬದಲು ''ಇನ್ಸ್‌ಪೆಕ್ಟರ್'' ಎಂಬ ಪದವನ್ನು ಸೇರಿಸತಕ್ಕದ್ದು.

This is a digitally signed Gazette.
Authenticity may be verified through https://compose.kerala.gov.in/

ಕೇರಳ ಸರಕಾರ

ಕಾನೂನು (ಶಾಸನ ರಚನೆ-ಎ) ಇಲಾಖೆ

ಅಧಿಸೂಚನೆ

ನಂಬ್ರ 62/ಲೆಗ್. ಎ1/2023/ಕಾನೂನು. ತಿರುವನಂತಪುರಂ, *2023 ಡಿಸೆಂಬರ್ 1, 1199 ವೃಶ್ಚಿಕ 15/ 1945 ಅಗ್ರಹಾಯನ 10.*

ಕೇರಳ ರಾಜ್ಯ ವಿಧಾನಸಭೆಯ ಈ ಕೆಳಗಿನ ಅಧಿನಿಯಮವನ್ನು ಸಾರ್ವಜನಿಕರ ತಿಳುವಳಿಕೆಗಾಗಿ ಈ ಮೂಲಕ ಪ್ರಕಟಿಸಲಾಗಿದೆ. ವಿಧಾನಸಭೆಯು ಮಂಜೂರು ಮಾಡಿದಂತಹ ಮಸೂದೆಗೆ 2023 ನವೆಂಬರ್ 30ನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಲಭಿಸಿತು.

ರಾಜ್ಯಪಾಲರ ಆಜ್ಞಾಪ್ರಕಾರ,

ಕೆ. ಜಿ. ಸನಲ್ ಕುಮಾರ್,

ಕಾನೂನು ಕಾರ್ಯದರ್ಶಿ.

2023ರ 30ನೇ ಅಧಿನಿಯಮ

2023ರ ಕೇರಳ ಧನವಿನಿಯೋಗ (3ನೇ ನಂಬ್ರ) ಅಧಿನಿಯಮ

2023-2024 ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಕೆಲವು ಮೊತ್ತಗಳನ್ನು ಮತ್ತೂ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸುವ

ಒಂದು

ಅಧಿನಿಯಮ

ಪೀಠಿಕೆ.—2023-2024 ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ ಕೆಲವು ಮೊತ್ತಗಳನ್ನು ಮತ್ತೂ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸುವುದು ಅಗತ್ಯವಾದುದರಿಂದ;

ಭಾರತ ಗಣರಾಜ್ಯದ ಎಪ್ಪತ್ತನಾಲ್ಕನೇ ವರ್ಷದಲ್ಲಿ ಈ ಕೆಳಗಿನಂತೆ ಅಧಿನಿಯಮ ಮಾಡಲಾಗುವುದು:—

1. ಸಣ್ಣ ಹೆಸರು.—ಈ ಅಧಿನಿಯಮವನ್ನು 2023ರ ಕೇರಳ ಧನವಿನಿಯೋಗ (3ನೇ ನಂಬ್ರ) ಅಧಿನಿಯಮ ಎಂದು ಕರೆಯಬಹುದು.

2. 2023-2024 ಆರ್ಥಿಕ ವರ್ಷದ ಸೇವೆಗಳಿಗಾಗಿ ಕೇರಳ ರಾಜ್ಯ ಸಂಚಿತ ನಿಧಿಯಿಂದ 44,08,89,000 ರೂಪಾಯಿಗಳ ನೀಡುವಿಕೆ.—2023-2024 ಆರ್ಥಿಕ ವರ್ಷದಲ್ಲಿ ಉಂಟಾಗುವ ವಿವಿಧ ಖರ್ಚುಗಳನ್ನು ಭರಿಸುವುದಕ್ಕಾಗಿ, ಅನುಸೂಚಿಯ (2)ನೇ ಕಾಲಂನಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗೆ ಸಂಬಂಧಿಸಿ ಅನುಸೂಚಿಯ (3)ನೇ ಕಾಲಂನಲ್ಲಿ ಹೇಳಿರುವುದಕ್ಕಿಂತ ಮೀರದ ಹಾಗೂ ಒಟ್ಟು ನಲವತ್ತನಾಲ್ಕು ಕೋಟಿ ಎಂಟು ಲಕ್ಷದ ಎಂಭತ್ತೊಂಭತ್ತು ಸಾವಿರ ರೂಪಾಯಿಗಳಷ್ಟಾಗುವ ಮೊತ್ತಗಳನ್ನು ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡಬಹುದಾಗಿದೆ ಹಾಗೂ ವಿನಿಯೋಗಿಸಬಹುದಾಗಿದೆ.

3. ಧನವಿನಿಯೋಗ.—ಈ ಅಧಿನಿಯಮದ ಪ್ರಕಾರ ಕೇರಳ ರಾಜ್ಯ ಸಂಚಿತ ನಿಧಿಯಿಂದ ನೀಡುವುದಕ್ಕೆ ಹಾಗೂ ವಿನಿಯೋಗಿಸುವುದಕ್ಕೆ ಅಧಿಕೃತಗೊಳಿಸಿರುವ ಮೊತ್ತಗಳನ್ನು 2023-2024 ಆರ್ಥಿಕ ವರ್ಷಕ್ಕೆ ಸಂಬಂಧಿಸಿ ಅನುಸೂಚಿಯಲ್ಲಿ ಹೇಳಿರುವ ಸೇವೆಗಳಿಗೆ ಹಾಗೂ ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

G.7/2024/GPC.

This is a digitally signed Gazette.
Authenticity may be verified through https://compose.kerala.gov.in/

2

ಅನುಸೂಚಿ

(2 ಮತ್ತು 3ನೇ ವಿಭಾಗಗಳನ್ನು ನೋಡಿರಿ)

(1)		(2)		(3)		
ಕ್ರಮ ನಂಬ್ರ	ಧನ ಬೇಡಿಕೆ ನಂಬ್ರ	ಸೇವೆಗಳು ಮತ್ತು ಉದ್ದೇಶಗಳು		ಮೊರಬಾರದ ಮೊತ್ತಗಳು		ಒಟ್ಟು (₹)
				ವಿಧಾನ ಸಭೆ ಮತ ನೀಡಿದ್ದು (₹)	ಸಂಚಿತ ನಿಧಿಯ ಮೇಲೆ ಹೊರಿಸಿದ್ದು (₹)	
1.	II	**ರಾಜ್ಯದ ಆಡಳಿತ ಮುಖ್ಯಸ್ಥರು, ಸಚಿವರುಗಳು ಹಾಗೂ ಪ್ರಧಾನ ಕಛೇರಿ ಸಿಬ್ಬಂದಿಗಳು**	**ಕಂದಾಯ**	**1,000**	..	**1,000**
2.	III	ನ್ಯಾಯಪರಿಪಾಲನೆ	ಕಂದಾಯ	..	2,70,98,000	2,70,98,000
3.	IV	ಚುನಾವಣೆಗಳು	ಕಂದಾಯ	24,00,63,000	..	24,00,63,000
4.		ಸಾಲ ಬಾಧ್ಯತೆಗಳು	ಕಂದಾಯ	..	1000	1,000
5.	XIV	ಸ್ಟೇಷನರಿ, ಮುದ್ರಣ ಹಾಗೂ ಇತರ ಆಡಳಿತ ಸೇವೆಗಳು	ಕಂದಾಯ	..	4,14,000	4,14,000
6.	XVIII	ವೈದ್ಯಕೀಯ ಹಾಗೂ	ಕಂದಾಯ	3,000	..	3,000
		ಸಾರ್ವಜನಿಕ ಆರೋಗ್ಯ	ಬಂಡವಾಳ	..	11,50,06,000	11,50,06,000
7.	XXVII	ಸಹಕಾರ	ಕಂದಾಯ	1,000	..	1,000
8.	XXX	ಆಹಾರ	ಕಂದಾಯ	..	25,17,000	25,17,000
9.	XXXII	ಹೈನುಗಾರಿಕೆ	ಬಂಡವಾಳ	..	1,08,000	1,08,000
10.	XXXIII	ಮೀನುಗಾರಿಕೆ	ಬಂಡವಾಳ	..	2,55,000	2,55,000
11.	XXXVII	ಕೈಗಾರಿಕೆಗಳು	ಕಂದಾಯ	5,00,00,000	15,000	5,00,15,000
12.	XLII	ಪ್ರವಾಸೋದ್ಯಮ	ಬಂಡವಾಳ	1,000	54,06,000	54,07,000
			ಒಟ್ಟು	**29,00,69,000**	**15,08,20,000**	**44,08,89,000**

PUBLISHED BY THE SUPERINTENDENT OF GOVERNMENT PRESSES
AT THE GOVERNMENT CENTRAL PRESS, THIRUVANANTHAPURAM, 2025.

This is a digitally signed Gazette.
Authenticity may be verified through https://compose.kerala.gov.in/

Digitally signed by VEERAN T
Date:2025.10.21 03:06:23 +05:30